ಶೀಲಾ—ಹೌದು ಕಣೋ. Yes. (with addressive term)

ಹರಿ—ನೀವು ಎಷ್ಟನೆಯ ಕ್ಲಾಸು Which class are you ?

ಶೀಲಾ—ನಾನು ಎಂ. ಎ. I am in M.A. class.

ಹರಿ—ಎಂ.ಎ., ಮೊದಲನೆಯ ವರ್ಷಾನೋ ಕೊನೆಯ ವರ್ಷಾನೋ ? Are you in M.A. first year or in final year ?

ಶೀಲಾ—ನನ್ನದು ಮೊದಲನೆಯ ವರ್ಷ. Mine is first year.

ಹರಿ—ಶಾಲಿನಿದೂನೂ ಮೊದಲನೆಯ ವರ್ಷ. Shalini's is also the first year.

ಶೀಲಾ—ಹೌದು ಕಣೋ. ನಾನು ಶಾಲಿನಿ ಒಂದೇ ಕ್ಲಾಸು. Yes. We are in the same class.

DRILLS :

I Repetition Drill :

a) 1) ನೀನು ಎಷ್ಟನೆಯ ಕ್ಲಾಸು ?
   2) ಅವನು ಎಷ್ಟನೆಯ ಕ್ಲಾಸು ?

b) 1) ಅವಳು ಒಂದನೆಯ ಕ್ಲಾಸು.
   2) ರೂಪಾ ಎರಡನೆಯ ಕ್ಲಾಸು.
   3) ಅವನು ಮೂರನೆಯ ಕ್ಲಾಸು.
   4) ಶೈಲಾ ನಾಲ್ಕನೆಯ ಕ್ಲಾಸು.
   5) ಅವಳು ಐದನೆಯ ಕ್ಲಾಸು.
   6) ಸುಶೀಲಾ ಆರನೆಯ ಕ್ಲಾಸು.
   7) ನಾನು ಏಳನೆಯ ಕ್ಲಾಸು.

8) ದಯಾ ಎಂಟನೆಯ ಕ್ಲಾಸು.

9) ಗೀತಾ ಒಂಭತ್ತನೆಯ ಕ್ಲಾಸು.

c) 1) ನಿನ್ನ ತಂಗಿ ಯಾವ ಕ್ಲಾಸು ?

2) ನಿಮ್ಮ ಅಕ್ಕ ಯಾವ ಕ್ಲಾಸು ?

3) ರಮೇಶನ ನಾದಿನಿ ಯಾವ ಕ್ಲಾಸು ?

4) ಶಾಲಿನಿಯ ಅಣ್ಣ ಯಾವ ಕ್ಲಾಸು ?

d) 1) ನಿಮ್ಮದು ಮೊದಲನೆಯ ವರ್ಷಾನೋ ಕೊನೆಯ ವರ್ಷಾನೋ ?

2) ನಿಮ್ಮ ಅಕ್ಕನದು ಎರಡನೆಯ ವರ್ಷಾನೋ ಮೂರನೆಯ ವರ್ಷಾನೋ ?

3) ಅವನು ನಾಲ್ಕನೆಯ ಕ್ಲಾಸೋ ಐದನೆಯ ಕ್ಲಾಸೋ ?

e) 1) ಒಂದೇ ಕ್ಲಾಸು.

2) ಎರಡೇ ಪುಸ್ತಕ.

3) ಮೂರೇ ಹಣ್ಣು.

4) ನಾಲ್ಕೇ ಮನೆ.

II Build up Drill :

Model : ನಾಲ್ಕನೇ ಕ್ಲಾಸು.

ತಮ್ಮನೂ ನಾಲ್ಕನೇ ಕ್ಲಾಸು.

ಶಾಲಿನಿ ತಮ್ಮನೂ ನಾಲ್ಕನೇ ಕ್ಲಾಸು.

ನಾನೂ ಶಾಲಿನಿ ತಮ್ಮನೂ ನಾಲ್ಕನೇ ಕ್ಲಾಸು.

Build up the following making the appropriate changes **wherever necessary**.

1) ಏಳನೇ ಕ್ಲಾಸು.

2) ಒಂದೇ ಕ್ಲಾಸು.

a) Model : T : ಕುಸುಮ ಐದನೆಯ ಕ್ಲಾಸು.

S : ಕುಸುಮ ಎಷ್ಟನೆಯ ಕ್ಲಾಸು ?

1) ಸುಮ ಎಂ. ಎ. ಮೊದಲ ವರ್ಷ.

2) ರವಿ ಎಂಟನೆಯ ಕ್ಲಾಸು.

3) ಶಾಲಿನಿಯ ತಂಗಿ ಮಾಲಿನಿ ಒಂದನೆಯ ಕ್ಲಾಸು.

b) Model : T : ನೀನು ಶಾಲಿನಿಯ ತಮ್ಮ ಹರಿ.

S : ಶಾಲಿನಿಯ ತಮ್ಮ ಹರಿ ನೀನೇನಾ ?

1) ಅವಳು ಕುಸುಮನ ತಂಗಿ ಮಧು.

2) ಅದು ರವಿ ಮನೆಯ ನಾಯಿ.

3) ನೀವು ಮಾಲಿನಿ ತಂದೆ.

IV Substitution Drill :

Model : ನಿನ್ನ ತಂಗಿಯ ಮಗಳು ಯಾವ ಕ್ಲಾಸು ?

ಅಣ್ಣ

ನಿನ್ನ ಅಣ್ಣನ ಮಗಳು ಯಾವ ಕ್ಲಾಸು ?

ಎಷ್ಟು

ನಿನ್ನ ಅಣ್ಣನ ಮಗಳು ಎಷ್ಟನೆಯ ಕ್ಲಾಸು ?

ಅವನ

ಅವನ ಅಣ್ಣನ ಮಗಳು ಎಷ್ಟನೆಯ ಕ್ಲಾಸು ?

ಮಗ

ಅವನ ಅಣ್ಣನ ಮಗ ಎಷ್ಟನೆಯ ಕ್ಲಾಸು ?

Substitute :

1) ನಿಮ್ಮ ನಾದಿನಿಯ ಅಕ್ಕನ ಮಗು ಎಷ್ಟನೆಯ ಕ್ಲಾಸು ?

ತಂದೆ

ಮೊಮ್ಮಗ

ಯಾವ

ಕಮಲಮ್ಮ

ತಾಯಿಯ

V Response Drill :

1) ನೀವು ಎಷ್ಟನೆಯ ಕ್ಲಾಸು ?

2) ಈ ಪುಸ್ತಕ ನಿಮ್ಮದೇನಾ ?

3) ನಿಮ್ಮ ತಮ್ಮ ಯಾವ ಕ್ಲಾಸು ?

4) ನಿಮ್ಮ ರೂಂಮೇಟ್ ಕನ್ನಡ ಕ್ಲಾಸೋ ತಮಿಳು ಕ್ಲಾಸೋ ?

EXERCISES

I Fill in the blanks using the Kannada **equivalents of the** English words given in the brackets :

1) ಇವನು ಶಾಲಿನಿ ———— ಹರಿ. **(younger brother)**

2) ಅವಳು ಬಿ.ಎ. ———— ವರ್ಷ. **(final)**

3) ರಮಾ ನನ್ನ ——— ಮಗಳು. (first)

4) ಇಂದೂ ಚಂದೂ ——— ಕ್ಲಾಸು. (same)

5) ಅವರು ನನ್ನ ——— ಅಣ್ಣ. (second)

II Write the word represented by the formula ;

Model : ಎರಡು—ಎರಡನೆಯ

1) ಮೂರು—

2) ಐದು—

3) ಹತ್ತು—

4) ಇಪ್ಪತ್ತೈದು—

5) ಐವತ್ತು—

6) ನೂರು—

III Fill in the blanks using the correct form of the words given in the brackets.

1) ನಿನ್ನ ತಂಗಿ ——— ಕ್ಲಾಸು ? (ಎಷ್ಟು)

2) ಶೀಲಾ, ಮಾಲಿ ——— ಕ್ಲಾಸು. (ಒಂದು)

3) ಇಗೋ ———ನೋಟು. (ಐದು)

4) ರಂಜನಾ——— ಕ್ಲಾಸು. (ಐದು)

IV Give one interrogative sentence for each of the following statements substituting the under lined word with an interrogative word.

a) 1) ಅವನು ಶೀಲನ ಅಣ್ಣ.

2) ಇಂದಿರೆ ಸುಮನ ನಾದಿನಿ

3) ಶಾಲಿನಿ ರವಿಯ ಸ್ನೇಹಿತೆ.

4) ಹರಿ ಈ ಕ್ಲಾಸಿನ ಹೊಸ ವಿದ್ಯಾರ್ಥಿ.

b) 1) ಚಂಚಲ ಐದನೆಯ ಕ್ಲಾಸು.

2) ಅಜಿತ ಬಿ.ಎ. ಮೊದಲನೆಯ ವರ್ಷ.

3) ಸುಧೀಂದ್ರ ಎಂ.ಬಿ.ಬಿ.ಎಸ್. ಕೊನೆಯ ವರ್ಷ

4) ಸೀಮಾ ಎಂಟನೆಯ ಕ್ಲಾಸು.

V **Answer the following questions :**

1) ಶಾಲಿನಿಯ ತಮ್ಮ ಹರಿ ಯಾವ ಕ್ಲಾಸು?
2) ಹರಿಯ ತಂಗಿ ಎಷ್ಟನೆಯ ಕ್ಲಾಸು?
3) ಶಾಲಿನಿಯ ಸ್ನೇಹಿತೆಯ ಹೆಸರು ಏನು?
4) ಶಾಲಿನಿ ಎಂ.ಎ. ಎಷ್ಟನೆಯ ವರ್ಷ?
5) ಯಾರು ಯಾರು ಒಂದೇ ಕ್ಲಾಸು?

VOCABULARY

ಎಷ್ಟು—how much, how many

ಏಳನೆಯ—seventh

ಐದನೆಯ—fifth

ಒಂದೇ—same

ಕಣೋ—addressive term to friends or inferiors (male)

ಕ್ಲಾಸು—class

ಕೊನೆ—final, last

ಮೊದಲನೆಯ—first

ವರ್ಷ—year

GRAMMAR NOTES

1. By adding –aneya to the cardinal numerals we obtain the ordinal forms.

Ex : ಒಂದು + ಅನೆಯ = ಒಂದನೆಯ

ಒಂದನೆಯ is used only for something which is actually designated by the number one, most commonly with date as in ಒಂದನೆಯ ತಾರೀಖು otherwise ಮೊದಲನೆಯ is used for first.

Ordinal numerals otherwise called as ordinal adjectives always followed by a noun. The corresponding interrogative ಎಷ್ಟನೆಯ is also introduced in this lesson.

2. –o and –e are addressive clitics used to address freinds or inferiors.

Ex : ಕಣೋ for males
ಕಣೆ for females

Largely these clitics are used with verbs.

LESSON 11

ABOUT NAMING CEREMONY

DIALOGUE

ಶ್ವೇತಾ—ಇವತ್ತು ಎಷ್ಟನೆಯ ತಾರೀಕು ?	What date is today ?
ಸ್ಮಿತಾ—ಇವತ್ತು ಮೂವತ್ತನೆಯ ತಾರೀಕು.	Today is 30th.
ಶ್ವೇತಾ—ನಾಳೆ ಸುಮನ ಮಗೂ ನಾಮಕರಣ ಅಲ್ವಾ ?	Tomorrow is Suma's child's naming ceremony, is't it?

ಸ್ಮಿತಾ—ನಾಳೆ ಅಲ್ಲ. ನಾಳಿದ್ದು. ನಾಳೆ ಮಂಗಳವಾರ. ನಾಡಿದ್ದು ಬುಧವಾರ ನಾಮಕರಣ.	Not tomorrow. It is the day after tomorrow. Tomorrow is Tuesday. The Naming ceremony is on Wednesday, day after tomorrow.
ಶ್ವೇತಾ—ಇದು ಸುಮನ ಎಷ್ಟನೆಯ ಮಗು ?	This is which (number) child of Suma's ?
ಸ್ಮಿತಾ—ಇದು ಸುಮನ ಮೂರನೆಯ ಮಗು	This is Suma's third child.
ಶ್ವೇತಾ—ಮೊದಲನೆಯದು ಗಂಡೋ ಹೆಣ್ಣೋ?	Is the first one male or female ?
ಸ್ಮಿತಾ—ಮೊದಲನೆಯದು ಹೆಣ್ಣು ಮಗು.	The first one is a female child.
ಶ್ವೇತಾ—ಗಂಡು ಮಗು ಎಷ್ಟನೆಯದು ?	Which one is the male child ?
ಸ್ಮಿತಾ—ಮೂರನೆಯದೇ ಗಂಡು ಮಗು. ಮೊದಲನೆಯದು ಎರಡನೆಯದು ಎರಡೂ ಹೆಣ್ಣೇ.	The third one is a male child. Both the first and second are female children.
ಶ್ವೇತಾ—ಅದೆಲ್ಲಾ ಸರಿ ಸ್ಮಿತಾ. ನಾಮಕರಣದ ಉಡುಗೊರೆ ಏನು ?	That is allright Smita. What is the gift for the naming ceremony?
ಸ್ಮಿತಾ—ಇನ್ನೇನು ? ಒಂದು ಉಂಗುರ ಅಷ್ಟೆ.	(I know)What else ? A ring, that is all.
ಶ್ವೇತಾ—ಎಂಥದು ? ಹರಳಿಂದೋ, ಸಾದಾದೋ	What type is it ? Is it a plain one or stone set ring ?
ಸ್ಮಿತಾ—ಹರಳಿಂದು.	Stone set one.
ಶ್ವೇತಾ—ಉಂಗುರ ಸುಮಾರು ಎಷ್ಟರದು ?	What would be the approximate cost of the ring ?
ಸ್ಮಿತಾ—ಒಂದು ಎಂಬತ್ತು–ಎಂಬತ್ತೈದು ರೂಪಾಯಿಯದು.	Eighty to eightyfive rupees.
ಶ್ವೇತಾ—ಸರಿ.	Okey.

DRILLS :

I Repetition Drill :

a) 1) ಇವತ್ತು ಎಷ್ಟನೆಯ ತಾರೀಖು ?

2) ನಾಳೆ ಎಷ್ಟನೆಯ ತಾರೀಖು ?

3) ನಾಳಿದ್ದು ಎಷ್ಟನೆಯ ತಾರೀಖು ?

b) 1) ನಿನ್ನೆ ಇಪ್ಪತ್ತೊಂದನೆಯ ತಾರೀಖು.

2) ಇವತ್ತು ಇಪ್ಪತ್ತೆರಡನೆಯ ತಾರೀಖು.

3) ಮೊನ್ನೆ ಇಪ್ಪತ್ತನೆಯ ತಾರೀಖು.

e) 1) ಇವತ್ತು ಸೋಮವಾರ.

2) ನಾಳೆ ಮಂಗಳವಾರ.

3) ನಾಳಿದ್ದು ಬುಧವಾರ.

4) ಆಚೆನಾಳಿದ್ದು ಗುರುವಾರ.

5) ನಿನ್ನೆ ಭಾನುವಾರ.

6) ಮೊನ್ನೆ ಶನಿವಾರ.

7) ಆಚೆ ಮೊನ್ನೆ ಶುಕ್ರವಾರ.

d) 1) ಇದು ಸುಮನ ಎಷ್ಟನೆಯ ಮಗು ?

2) ಇವನು ರಾಜಾರಾವ್ ಅವರ ಎಷ್ಟನೆಯ ಮಗ ?

3) ಅವಳು ಸುಶೀಲಮ್ಮನವರ ಎಷ್ಟನೆಯ ಮಗಳು ?

e) 1) ಮೊದಲನೆಯದು ಹೆಣ್ಣು ಮಗು.

2) ಎರಡನೆಯದು ಗಂಡು ಮಗು.

3) ಮೂರನೆಯದು ಹೆಣ್ಣು ಮಗು.

f) 1) ಗಂಡುಮಗು ಎಷ್ಟನೆಯದು ?

2) ಹೆಣ್ಣುಮಗು ಎಷ್ಟನೆಯದು ?

g) 1) ಇನ್ನೇನು ? ಒಂದು ಉಂಗುರ ಅಷ್ಟೆ.

2) ಇನ್ನೇನು ? ಒಂದು ಪುಸ್ತಕ ಅಷ್ಟೆ.

3) ಇನ್ನೇನು ? ಒಂದು ಹಣ್ಣು ಅಷ್ಟೆ.

h) 1) ಉಂಗುರ ಸುಮಾರು ಎಷ್ಟರದು ?

2) ಲಂಗ ಸುಮಾರು ಎಷ್ಟರದು ?

3) ಸೀರೆ ಸುಮಾರು ಎಷ್ಟರದು ?

i) 1) ಒಂದು ಎಂಬತ್ತು ಎಂಬತ್ತೈದು ರೂಪಾಯಿದು.

2) ಒಂದು ನಲವತ್ತು ನಲವತ್ತೈದು ರೂಪಾಯಿದು.

3) ಒಂದು ಅರವತ್ತು ಅರವತ್ತೈದು ರೂಪಾಯಿದು.

II Transformation Drill :

a) Model : T : ಇದು ಎಷ್ಟನೆಯ ಮಗು ?

S : ಈ ಮಗು ಎಷ್ಟನೆಯದು ?

1) ಇದು ಎಷ್ಟನೆಯ ಪುಸ್ತಕ ?

2) ಅದು ಎಷ್ಟನೆಯ ಮನೆ ?

3) ಇದು ಎಷ್ಟನೆಯ ಕ್ಲಾಸು ?

b) Model : T : ಇದು ಮೊದಲನೆಯ ಮಗು.

S : ಈ ಮಗು ಮೊದಲನೆಯದು.

1) ಇದು ಎರಡನೆಯ ಪುಸ್ತಕ.

2) ಅದು ನಾಲ್ಕನೆಯ ಪಾಠ.

3) ಅದು ಮೂರನೆಯ ಮನೆ.

e) **Model :** T : ಇದು ಎಷ್ಟರನೋಟು ?

S : ಈ ನೋಟು ಎಷ್ಟರದು ?

1) ಇದು ಎಷ್ಟರ ಪೈಸ ?

2) ಅದು ಎಷ್ಟರ ನಾಣ್ಯ ?

d) Model : T : ಇದು ಐದರ ನೋಟು.

S : ಈ ನೋಟು ಐದರದು.

1) ಇದು ನೂರರ ನೋಟು.

2) ಅದು ಹತ್ತರ ಪೈಸ.

III Response Drill :

1) ಮೊನ್ನೆ ಎಷ್ಟನೆಯ ತಾರೀಕು ?

2) ನಿನ್ನೆ ಯಾವ ವಾರ ?

3) ಆಚೆ ನಾಳಿದ್ದು ಯಾವ ವಾರ ?

4) ಈವತ್ತು ಯಾವ ವಾರ ?

EXERCISES

I Fill in the blanks using the suitable words :

1) ಈವತ್ತು ——— ವಾರ ?

2) ನಿನ್ನೆ ——— ತಾರೀಕು ?

3) ಆಚೆ ನಾಳಿದ್ದು ——— ತಾರೀಕು ?

4) ಮೊನ್ನೆ ——— ವಾರ ?

5) ನಾಳಿದ್ದು ——— ತಾರೀಕು.

II Fill in the blanks using the Kannada equivalents of the English words given in the brackets :

1) ಈವತ್ತು ———— (Thursday)
2) ———— ಮಂಗಳವಾರ (Day before yesterday)
3) ನಿನ್ನೆ ——— (Wednesday)
4) ————ಶನಿವಾರ (Day after tomorrow)
5) ನಾಳೆ ——— (Friday)
6) ನಾಳೆ ನಮ್ಮ ಮಗೂ ———— (naming ceremony)
7) ನಾಮಕರಣದ ———— ಉಂಗುರ (gift)
8) ನನ್ನ ಎರಡನೆಯ ಮಗು ———— (male child)

III Give one Interrogative sentence for the following statements substiuting the underlined word with an interrogative word :

1) ಈ ಸೀರೆ ಎಂಬತ್ತು ರೂಪಾಯಿಯದು.
2) ಈ ಮಗು ಮೂರನೆಯದು.
3) ಆ ಉಂಗುರ ನೂರು ರೂಪಾಯಿಯದು.
4) ಈವತ್ತು ಇಪ್ಪತ್ತನೇ ತಾರೀಕು.
5) ನಿನ್ನೆ ಬುಧವಾರ.

IV Fill in the missing number in the order :

1) ಒಂದು, ಎರಡು, ————, ನಾಲ್ಕು, ————, ————, ಏಳು.
————, ————, ಹತ್ತು.

2) ————, ಎರಡನೇ. ————. ನಾಲ್ಕನೇ. ————, ಆರನೇ.
———, ————, ಒಂಬತ್ತನೇ, ————

V Derive the ordinals following the model :

Model :	ಎರಡು	×	ಹತ್ತು	=	ಇಪ್ಪತ್ತು.
	ಮೂರು	×	ಹತ್ತು	=	———
	ನಾಲ್ಕು	×	ಹತ್ತು	=	———
	ಐದು	×	ಹತ್ತು	=	———
	ಆರು	×	ಹತ್ತು	=	———
	ಏಳು	×	ಹತ್ತು	=	———
	ಎಂಟು	×	ಹತ್ತು	=	———
	ಒಂಭತ್ತು	×	ಹತ್ತು	=	———
	ಹತ್ತು	×	ಹತ್ತು	=	———

B) Derive the numerals following the model :

Model :	ಇಪ್ಪತ್ತು	+	ಒಂದು	=	ಇಪ್ಪತ್ತೊಂದು
	ಇಪ್ಪತ್ತು	+	ಎರಡು	=	———
	ಇಪ್ಪತ್ತು	+	ಐದು	=	———
	ಇಪ್ಪತ್ತು	+	ಆರು	=	———
	ಇಪ್ಪತ್ತು	+	ಏಳು	=	———
	ಇಪ್ಪತ್ತು	+	ಎಂಟು	=	———
	ಇಪ್ಪತ್ತು	+	ಒಂಬತ್ತು	=	———
	ಮುವ್ವತ್ತು	+	ಐದು	=	———
	ನಲವತ್ತು	+	ಎಂಟು	=	———
	ಐವತ್ತು	+	ಎರಡು	=	———
	ಅರವತ್ತು	+	ಏಳು	=	———
	ಎಪ್ಪತ್ತು	+	ಒಂಬತ್ತು	=	———
	ಎಂಭತ್ತು	+	ಆರು	=	———
	ತೊಂಭತ್ತು	+	ಒಂಬತ್ತು	=	———

Model : ಇಪ್ಪತ್ತು + ಮೂರು = ಇಪ್ಪತ್ಮೂರು

ಇಪ್ಪತ್ತು + ನಾಲ್ಕು = ______

ಮುವತ್ತು + ಮೂರು = ______

ಅರವತ್ತು + ನಾಲ್ಕು = ______

ಎಂಭತ್ತು + ಮೂರು = ______

ತೊಂಭತ್ತು + ನಾಲ್ಕು = ______

VI Give the appropriate numerals in Kannada words for the Arabic numeral :

Model : 25 = ಇಪ್ಪತ್ತೈದು

29 =

35 =

48 =

77 =

85 =

33 =

66 =

99 =

VII Answer the following questions :

1) ಈವತ್ತು ಎಷ್ಟನೇ ತಾರೀಕು ?
2) ನಾಳೆ ಎಷ್ಟನೇ ತಾರೀಕು ?
3) ನಿನ್ನೆ ಎಷ್ಟನೇ ತಾರೀಕು ?
4) ನಾಳೆ ಯಾವ ವಾರ ?
5) ಸುಮನ ಮೊದಲನೆಯ ಮಗು ಗಂಡೋ ಹೆಣ್ಣೋ ?
6) ಭಾನುವಾರ ಎಷ್ಟನೇ ತಾರೀಕು ?
7) ಸುಮನ ಮಗೂ ನಾಮಕರಣದ ಉಡುಗೊರೆ ಏನು ?

VOCABULARY

ಇವತ್ತು—today

ಉಂಗುರ--ring

ಉಡುಗೊರೆ—presentation, gift

ಎಂಭತ್ತು—eighty

ಎಂಭತ್ತೈದು—eighty five

ಗಂಡು—male

ತಾರೀಖು—date

ನಾಮಕರಣ—naming ceremony

ನಾಳಿದ್ದು / ನಾಡಿದ್ದು } day after tomorrow

ನಾಳೆ—tomorrow

ಮಂಗಳವಾರ—Tuesday

ಮೂವತ್ತು—thirty

ಸಾದಾ—plain

ಸುಮಾರು—approximately, somewhat

ಹರಳು—precious stone

Supplementary Vocabulary

ಅರವತ್ತು—sixty

ಅರವತ್ತೈದು—sixty five

ಇಪ್ಪತ್ತೆಂಟು—twenty eight

ಇಪ್ಪತ್ತೊಂಬತ್ತು—twenty nine

ಎಪ್ಪತ್ತು—seventy

ಎಪ್ಪತ್ತೈದು—seventy five

ಓಲೆ—ear ornament

ಗುರುವಾರ—Thursday

ತೊಂಬತ್ತು—ninety

ತೊಂಬತ್ತೈದು—ninety five

ನಲವತ್ತು—forty

ನಲವತ್ತೈದು—forty five

ನಿನ್ನೆ—yesterday

ಬಳೆ—bangle

ಭಾನುವಾರ—Sunday

ಮೊನ್ನೆ—day before yesterday

ಶುಕ್ರವಾರ—Friday

ಸರ—necklace

ಸುಮಾರು—approximately

ಸೋಮವಾರ—Monday

GRAMMATICAL NOTES :

Note that by adding adu to the ordinal numerals, numeral predicate can be obtained :

Ex : ಎರಡನೆಯ + ಅದು = ಎರಡನೆಯದು

The corresponding interrogative ಎಷ್ಟನೆಯದು is also introduced

LESSON 12

OUR HOSTEL GARDEN

DIALOGUE

ನಾವು ದಕ್ಷಿಣ ಪ್ರಾಂತೀಯ ಭಾಷಾ ಕೇಂದ್ರದ ವಿದ್ಯಾರ್ಥಿಗಳು. ಇದು ನಮ್ಮ ಹಾಸ್ಟೆಲ್. ಇದರ ಹೆಸರು ಕಾವೇರಿ. ಇದರ ಹಿಂದಿನ ತೋಟ ಈ ಹಾಸ್ಟೆಲಿನ ಕೈತೋಟ.	We are students in Southern Regional Language Centre. This is our hostel. Its name is Kaveri. The garden Behind

this is the kitchen garden of this hostel.

ನಮ್ಮ ಹಾಸ್ಟೆಲಿನ ತೋಟದ ಒಟ್ಟು ವಿಸ್ತೀರ್ಣ ಒಂದೂಮುಕ್ಕಾಲು ಎಕರೆ. ಇವನು ಒಬ್ಬ ನಮ್ಮ ಗಾರ್ಡನ್ ಅಸಿಸ್ಟೆಂಟ್. ಇವರು ಇಬ್ಬರು ತೋಟದ ಮಾಲಿಗಳು. ಇವರ ಹೆಸರು ರಾಮು, ಭೀಮು. ಆ ಮೂರು ಜನ ದಿನಗೂಲಿ ಆಳುಗಳು.

The total area of our hostel garden is $1\frac{3}{4}$ acres. He is our garden assistant. Those two are our garden servants. Their name is Rama and Bheema. Those three are daily wage labourers.

ಇದು ಈ ತೋಟದ ಮಧ್ಯದ ದಾರಿ. ಈ ದಾರಿಯ ಬಲ ಪಕ್ಕದ್ದು ಹಣ್ಣಿನ ತೋಟ. ಅವು ನಿಂಬೆ ಹಣ್ಣು, ಕಿತ್ತಳೆ ಹಣ್ಣು ಮತ್ತು ಮಾವಿನ ಹಣ್ಣಿನ ಮರಗಳು. ಇದರ ಎಡ ಪಕ್ಕದ್ದು ಮೂಲಂಗಿ, ಸೊಪ್ಪು, ಕೋಸು, ಆಲೂಗೆಡ್ಡೆ ಇತ್ಯಾದಿ ತರಕಾರಿಯ ತೋಟ. ನಮ್ಮ ತೋಟದ ತೆಂಗಿನ ಗಿಡಗಳು ಇನ್ನೂ ಚಿಕ್ಕ ಗಿಡಗಳು.

This is the central path in the garden. The right side of the path is fruit garden. They are lemon, orange and mango trees. On the left side is raddish, greens, cabage, potato etc. vegetable garden. The co–conut trees in our garden are still small.

ಅದು ನಮ್ಮ ತೋಟದ ಬಾವಿ. ಆ ಬಾವಿಯ ಪಕ್ಕದ ಮನೆ 'ಪಂಪ್ ಹೌಸ್'. ಈ ಬಾವಿಯ ಆಳ ಅರವತ್ತು ಅಡಿ, ಅಗಲ ಹನ್ನೆರಡು ಅಡಿ. ನಮ್ಮದು ಚಿಕ್ಕ ಚೊಕ್ಕ ತೋಟ. ಇದರ ಮೇಲ್ವಿಚಾರಕರು ನಮ್ಮ ವಾರ್ಡನ್.

That is our garden well. The house near the well is the 'Pump House'. The well is sixty ft. deep, width of the well is 12ft. Ours is small and clean garden. The Garden superviser is our hostel Warden.

DRILLS

I Repetition Drill :

a) 1) ನಾವು ಈ ಹಾಸ್ಟೆಲಿನ ವಿದ್ಯಾರ್ಥಿಗಳು.

2) ನಾವು ಈ ತೋಟದ ಮಾಲಿಗಳು.

b) 1) ಇದು ನಮ್ಮ ತೋಟ.
2) ಅದು ನಮ್ಮ ತರಗತಿ.

c) 1) ಅವು ತೆಂಗಿನ ಗಿಡಗಳು.
2) ಅವು ಮಾವಿನ ಗಿಡಗಳು.

d) 1) ಅವು ಮರಗಳು.
2) ಅವರು ಆಳುಗಳು.
3) ಇವರು ವಿದ್ಯಾರ್ಥಿಗಳು.

e) 1) ಅವನು ಒಬ್ಬ ಅಸಿಸ್ಟೆಂಟ್.
2) ಅವರು ಇಬ್ಬರು ಆಳುಗಳು.
3) ಅವರು ಮೂರು ಜನ ಆಳುಗಳು.
4) ಅವರು ನಾಲ್ಕು ಜನ ಆಳುಗಳು.

f) 1) ಅದು ಒಂದು ಪುಸ್ತಕ.
2) ಅವು ಎರಡು ಮನೆಗಳು.
3) ಇವು ಮೂರು ಗಿಡಗಳು.

II Build up Drill :

Model :

ಆಳುಗಳು.
ದಿನಗೂಲಿ ಆಳುಗಳು.
ತೋಟದ ದಿನಗೂಲಿ ಆಳುಗಳು.
ನಮ್ಮ ತೋಟದ ದಿನಗೂಲಿ ಆಳುಗಳು.
ಅವರು ನಮ್ಮ ತೋಟದ ದಿನಗೂಲಿ ಆಳುಗಳು.

Build up the following making the appropriate changes whenever necessary :

1) ಪುಸ್ತಕಗಳು.
2) ವಿದ್ಯಾರ್ಥಿಗಳು.
3) ಸೀರೆಗಳು.
4) ಮನೆಗಳು.

III Transformation Drill :

a) Model : T : ಇದು ನಮ್ಮ ತೋಟ
S : ಈ ತೋಟ ನಮ್ಮದು

1) ಇದು ನಮ್ಮ ಮನೆ.

____

2) ಇದು ನಮ್ಮ ಗದ್ದೆ.

____

3) ಅದು ನಮ್ಮ ಮಗು.

____

b) Model : T : ಅದು ನಿಮ್ಮ ಮನೆ.
S : ಅವು ನಿಮ್ಮ ಮನೆಗಳು.

1) ಅದು ನಮ್ಮ ಪುಸ್ತಕ.

____

2) ಅವನು ಕನ್ನಡ ವಿದ್ಯಾರ್ಥಿ.

____

3) ಅವನು ನಮ್ಮ ಆಳು

____

4) ಅದು ನಾಯಿ.

____

5) ಇದು ಹೀಚಿ ಮರ.

____

c) Model : T : ನಮ್ಮ ಆಳುಗಳು ನಾಲ್ಕು ಜನ.

S : ನಿಮ್ಮ ಆಳುಗಳು ಎಷ್ಟು ಜನ?

1) ನನ್ನ ವಿದ್ಯಾರ್ಥಿಗಳು ಆರು ಜನ.

____

2) ನನ್ನ ಮಕ್ಕಳು ಮೂರು ಜನ.

____

3) ನಮ್ಮ ತಮ್ಮಂದಿರು ನಾಲ್ಕು ಜನ.

____

VI Response Drill :

1) ನೀವು ಯಾರ ಮಕ್ಕಳು?

2) ನಿಮ್ಮ ತಂದೆಯ ಹೆಸರೇನು?

3) ಈ ತೋಟ ಯಾರದು?

4) ಇದು ಯಾವ ಗಿಡ?

5) ನಿಮ್ಮ ಮನೆಯ ಆಳುಗಳು ಎಷ್ಟು ಜನ?

EXCERISES

I Fill in the blanks using the suitable words :

1) ಇದು ನಮ್ಮ ಹಾಸ್ಟೆಲಿನ ________

2) ಇದು ______ ಗಿಡ.

3) ಅವರು ________ ನಮ್ಮ ಮನೆಯ ಆಳುಗಳು.

II Fill in the blanks using the Kannada equivalents of the English words given in the brackets :

1) ————ಪುಸ್ತಕಗಳು. (those. rem.)
2) ಅದು ———— (well)
3) ಇದರ ವಿಸ್ತೀರ್ಣ————ಎಕರೆ. ($1\frac{3}{4}$)
4) ಈ ಹಾಸ್ಟೆಲ್ ——— (ours)
5) ಅವರು ——— ಆಳುಗಳು. (daily wage)
6) ಅದು ——— ತೋಟ. (vegetable)
7) ಇದರ ——— ಇಪ್ಪತ್ತು ಅಡಿ. (depth)
8) ಇವರು ——— ಹಾಸ್ಟೆಲ್ ವಾರ್ಡನ್. (our)

III Substitute the underlined word by the cue given and change the sentence accordingly :

1) ಅದು ಒಂದು ಮರ.

ಹುಡುಗ.

————————

2) ಅವರು ಒಳ್ಳೆಯ ವಿದ್ಯಾರ್ಥಿಗಳು.

ಹಣ್ಣುಗಳು

————————

3) ಇವಳು ನಿಮ್ಮ ಸ್ನೇಹಿತೆ.

ಪುಸ್ತಕ

————————

4 ಅವು ಎರಡು ನಾಯಿಗಳು.

ವಿದ್ಯಾರ್ಥಿಗಳು.

————————

IV Transform the following sentences into singular :

1) ಇವು ನಮ್ಮ ಮನೆಗಳು.
2) ಅವರು ರಾಮರಾಯರ ವಿದ್ಯಾರ್ಥಿಗಳು.
3) ಅವು ಮಾವಿನ ಮರಗಳು.
4) ಇವು ನಾಲ್ಕು ನಮ್ಮ ಮನೆಯ ನಾಯಿಗಳು.

V Transform the following sentences into plural :

1) ಅವನು ನಮ್ಮ ಆಳು.
2) ಇದು ಪುಸ್ತಕ.
3) ಅದು ಕಿತ್ತಳೆ ಗಿಡ.
4) ಅದು ಕೃಷ್ಣಪ್ಪನವರ ತೋಟ.

VI Give the plural forms of the following words :

ಕಾದಂಬರಿ ______

ಕವಿ ______

ಊರು ______

ಕವನ ______

ನೋಟು______

ಕಥೆ ______

VII Give one interrogative sentence for each of the following statements substituting the underlined word with an interrogative word.

1) ಅವರು ನಾಲ್ಕು ಜನ ಆಳುಗಳು.
2) ಈ ತೋಟ ನಮ್ಮದು.
3) ಅವನು ಕೃಷ್ಣಪ್ಪನವರ ಚಿಕ್ಕ ತಮ್ಮ.
4) ಅವಳು ಏಳನೆಯ ಕ್ಲಾಸು.

VIII Combine the following sentences by using 'mattu' :

Model : ಆ ಪುಸ್ತಕ ಚಿಕ್ಕದು.
ಅದು ಒಳ್ಳೆಯದು.

Answer : ಆ ಪುಸ್ತಕ ಚಿಕ್ಕದು ಮತ್ತು ಒಳ್ಳೆಯದು.

1) ಈ ಕಾಲೇಜು ದೊಡ್ಡದು.
ಇದು ಒಳ್ಳೆಯದು.

2) ಇವನು ನನ್ನ ಸ್ನೇಹಿತ.
ಇವನು ನನ್ನ ರೂಂಮೇಟ್

3) ಅದು ಅವರ ಮನೆ.
ಅದು ಅವರ ಆಫೀಸ್.

IX Expand the sentences according to the model using the cues. Make changes in the cues whenever necessary :

Model : ನಮ್ಮ ಆಳುಗಳು.
(ತೋಟ)
ನಮ್ಮ ತೋಟದ ಆಳುಗಳು.
(ದಿನಗೂಲಿ)
ನಮ್ಮ ತೋಟದ ದಿನಗೂಲಿ ಆಳುಗಳು.

Expand :

1) ಅದು ನಾಯಿ.
(ಕೆಟ್ಟ)
____
(ಅವರು)
____
(ಮನೆ)
____

2) ಅದು ಬಾವಿ
(ನಾವು)

____

(ಹಾಸ್ಟೆಲು)

____

3) ಅವನು ಮಗ
(ನಾನು)

____

(ಮಗ)

____

X Answer the folllowing questions :

1) ಕಾವೇರಿ ಹಾಸ್ಟಲಿನ ತೋಟದ ಒಟ್ಟು ವಿಸ್ತೀರ್ಣ ಎಷ್ಟು ?
2) ತೋಟದ ಮಾಲಿಗಳ ಹೆಸರು ಏನು ?
3) ಮಧ್ಯದ ದಾರಿಯ ಬಲಪಕ್ಕದ್ದು ಯಾವ ತೋಟ ? ಎಡಪಕ್ಕದ್ದು ಯಾವ ತೋಟ ?
4) ಬಾವಿಯ ಆಳ, ಅಗಲ ಎಷ್ಟು ?

VOCABULARY :

ಅಂದರೆ—i.e., that means
ಅಗಲ—width
ಅಡಿ—foot of measurement
ಆಲೂಗೆಡ್ಡೆ—potato
ಆಳ—depth
ಆಳು—servant
ಇತ್ಯಾದಿ—etc.
ಇನ್ನೂ—still, some more
ಇಬ್ಬರು—two persons
ಎಕರೆ—acre

ಎಡಪಕ್ಕ—left side
ಒಂದು ಮುಕ್ಕಾಲು—1¾
ಒಟ್ಟು—in total, altogether
ಒಬ್ಬ—one person
ಕಿತ್ತಳೆ—orange
ಕೈತೋಟ—kitchen garden
ಚಿಕ್ಕವು—small one
ಚೊಕ್ಕ—clean
ಜನ—people
ತೆಂಗಿನಗಿಡ—coconut plant
ತೋಟ—garden
ದಕ್ಷಿಣ ಪ್ರಾಂತೀಯ ಭಾಷಾ ಕೇಂದ್ರ—Southern Regional Language Centre
ದಿನಗೂಲಿ—daily wage
ನಮ್ಮ—our
ನಾವು—we
ನಿಂಬೆಹಣ್ಣು—lemon
ಬಾವಿ—well
ಮತ್ತು—and
ಮಧ್ಯದಾರಿ—central path
ಮಾಲಿ—gardener
ಮಾವು }
ಮಾವಿನ ಹಣ್ಣು }—mango
ಮೂಲಂಗಿ—raddish
ಮೇಲ್ವಿಚಾರಕ—supervisor
ವಿಸ್ತೀರ್ಣ—area in square
ಸೊಪ್ಪು—greens, leaf
ಹಿಂದಿನ—back

Supplementary Vocabulary

ತರಗತಿ—class

GRAMMAR NOTES :

1. The corresponding genitive form and pronominal predicate form for I person plural 'ನಾವು' is 'ನಮ್ಮ' and 'ನಮ್ಮದು'

2. All neuter nouns and some masculine nouns such as ವಿದ್ಯಾರ್ಥಿ, ಆಳು etc. take –galu as plural marker. This plural marker mostly dropped after nouns in spoken language.

Example for neuter nouns :

ಗಿಡ + ಗಳು = ಗಿಡಗಳು

ಮರ + ಗಳು = ಮರಗಳು

Example for masculine nouns :

ವಿದ್ಯಾರ್ಥಿ + ಗಳು = ವಿದ್ಯಾರ್ಥಿಗಳು

ಆಳು + ಗಳು = ಆಳುಗಳು

Example for dropping :

ಅವು ಎರಡು ಮನೆ

ಅವು ನಾಲ್ಕು ಗಿಡ

3. The cordinals ಒಂದು. ಎರಡು etc., have the following corresponding forms to refer the persons :

ಒಂದು — ಒಬ್ಬ (Sg. non–hon) ಒಬ್ಬರು (Sg. hon. plu.)

ಎರಡು — ಇಬ್ಬರು

ಮೂರು— { ಮೂವರು / ಮೂರು ಜನ }

ನಾಲ್ಕು— { ನಾಲ್ವರು / ನಾಲ್ಕು ಜನ }

ಐದು— { ಐದ್ವರು / ಐದು ಜನ }

4. In case of third person neuter singular the link morph is -ರ-.

ಅದು + ಅ = ಅದರ

5. Whenever a series of nouns occurs in a sentence it is only the last noun which takes the appropriate case marker.

Ex : ಅವು ನಿಂಬೆ ಹಣ್ಣು, ಕಿತ್ತಳೆ ಹಣ್ಣು ಮತ್ತು ಮಾವಿನ ಹಣ್ಣಿನ ಮರಗಳು.

The following table gives the pronouns and and their corresponding oblique form bases :

Person			Primary pronoun	Oblique form base	Example
I		Singular	ನಾನು	ನನ್	ನನ್ನ ಪುಸ್ತಕ
I		Plural	ನಾವು	ನಮ್	ನಮ್ಮ ಪುಸ್ತಕಗಳು
II		Singular	ನೀನು	ನಿನ್	ನಿನ್ನ ಪುಸ್ತಕ
II		Plural Also Singular Honorafic	ನೀವು	ನಿಮ್	ನಿಮ್ಮ ಪುಸ್ತಕಗಳು
III	Human	Masculine Singular	ಅವನು	ಅವನ್	ಅವನ ಪುಸ್ತಕ
III	Human	Feminine Singular	ಅವಳು	ಅವಳ್	ಅವಳ ಪುಸ್ತಕ
III	Human	Plural Human Singular Honorafic	ಅವರು	ಅವರ್	ಅವರ ಪುಸ್ತಕ
III	Neuter	Singular	ಅದು	ಅದ್	ಅದರ ಹೆಸರು ಪಿಂಕಿ
III	Neuter	Plural	ಅವು	ಅವ್	

LESSON 14

INFORMATION ABOUT COLLEGE

DIALOGUE

ಮೋಹನ್—ಪ್ರಿನ್ಸಿಪಾಲ್ ರೂಮು ಯಾವುದು ?	Excuse me. Which one is Principal's room ?
ಲಿಂಗಯ್ಯ—ಅದೇ ಪ್ರಿನ್ಸಿಪಾಲ್ ರೂಮು. ನೀವು ಯಾರು ? ಹೊಸ ಅಧ್ಯಾಪಕರಾ?	That is the Principal's room. Are you a new lecturer ?
ಮೋಹನ್—ಹೌದು. ನಾನು ಹೊಸ ಅಧ್ಯಾಪಕ. ನನ್ನ ಹೆಸರು ಮೋಹನ್.	Yes. I am a new lecturer. My name is Mohan.

ಲಿಂಗಯ್ಯ—ನಾನು ಲಿಂಗಯ್ಯ. ನಾನು ಇಂಗ್ಲೀಷ್ ಅಧ್ಯಾಪಕ.	I am Lingaiah. I am English lecturer.
ಮೋಹನ್–ಬಹಳ ಸಂತೋಷ. ನಮಸ್ಕಾರ.	Pleased to meet you. Namaskaara
ಲಿಂಗಯ್ಯ—ನಿಮ್ಮ ಸಬ್ಜೆಕ್ಟ್ ಯಾವುದು ?	What is your subject? (What subject do you teach)
ಮೋಹನ್—ನನ್ನದು ಇತಿಹಾಸ. ಈ ಕಾಲೇಜಿನ ಅಧ್ಯಾಪಕರ ಒಟ್ಟು ಸಂಖ್ಯೆ ಎಷ್ಟು ?	Mine is History. By the by what is the total number of the teaching staff?
ಲಿಂಗಯ್ಯ—ಒಟ್ಟು ಇಪ್ಪತ್ತು.	Altogether twenty.
ಮೋಹನ್—ಅಧ್ಯಾಪಕಿಯರು ಎಷ್ಟು ಜನ ?	How many lady lecturers are there ?
ಲಿಂಗಯ್ಯ—ಅಧ್ಯಾಪಕಿಯರು ಹನ್ನೆರಡು ಜನ.	They are twelve lady lecturers.
ಮೋಹನ್—ಹಾಗಾದರೆ ಅವರೇ ಜಾಸ್ತಿ.	Then they are in majority.
ಲಿಂಗಯ್ಯ—ಹೌದು.	Yes.
ಮೋಹನ್–ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?	What is the number of students in this College?
ಲಿಂಗಯ್ಯ—ಒಟ್ಟು ಸಂಖ್ಯೆ 420. 230 ಜನ ಹುಡುಗರು, 190 ಜನ ಹುಡುಗಿಯರು.	The total number is 420. 230 are boys. 190 are girls.
ಮೋಹನ್—ಹಾಗಾದರೆ ಇದು ದೊಡ್ಡ ಕಾಲೇಜೇ !	If so, it is quite a big college
ಲಿಂಗಯ್ಯ—ಹೌದು. ಇದು ಈ ತಾಲ್ಲೂಕಿನ ದೊಡ್ಡ ಕಾಲೇಜು.	Yes. This is the biggest college! in this Taluk.
ಮೋಹನ್, ನಿಮ್ಮದು ಯಾವ ಊರು?	Mohan, which is your native place?
ಮೋಹನ್—ನನ್ನದು ಚಿಕ್ಕಮಗಳೂರು.	Mine is Chikkamagalore.

ಲಿಂಗಯ್ಯ—ಹಾಗಾ! ಕಾಫಿಪುಡಿ ಕೆಂಪಣ್ಣ ಪರಿಚಯನಾ ?	Is it ! Do you konw Mr. Kaafi Puḍi Kempanna ?
ಮೋಹನ್–ಅವರು ನಮ್ಮ ದೊಡ್ಡಪ್ಪಾನೇ. ನಾನು ಅವರ ತಮ್ಮ ರಾಮಣ್ಣೋರ ಮಗ.	He is my father's elder brother. I am his younger brother Ramanna's son.
ಲಿಂಗಯ್ಯ—ಹೌದಾ ! ತುಂಬಾ ಸಂತೋಷ ಮೋಹನ್. ಕೆಂಪಣ್ಣ ಆರೋಗ್ಯಾನಾ?	Really ! I am delighted, Mohan. Is Kempanna doing well ?
ಮೋಹನ್—ಹೌದು	Yes.
ಲಿಂಗಯ್ಯ—ನೀವು ಎಷ್ಟು ಜನ ಮಕ್ಕಳು ಮೋಹನ್ ?	How many brothers and sisters you have Mr. Mohan ?
ಮೋಹನ್—ನಾವು ಐದು ಜನ ಮಕ್ಕಳು. ಇಬ್ಬರು ಅಕ್ಕಂದಿರು, ಇಬ್ಬರು ತಮ್ಮಂದಿರು.	We are five, I have two elder sisters and two younger brothers.
ಲಿಂಗಯ್ಯ—ನಿಮ್ಮ ಅಕ್ಕಂದಿರು ಮತ್ತು ತಮ್ಮಂದಿರ ವಿದ್ಯಾಭ್ಯಾಸ ?	How about the educational qualifications of your brothers and sisters ?
ಮೋಹನ್—ಅಕ್ಕಂದಿರಿಬ್ಬರೂ ಬಿ.ಎ. ಪದವೀಧರರು. ಮೊದಲನೆ ತಮ್ಮ ಈ ವರ್ಷ ಎಂ.ಎ, ಮೊದಲನೆ ವರ್ಷ. ಎರಡನೆಯ ತಮ್ಮ ಪಿ.ಯು.ಸಿ.	My elder sisters are B.A. graduates. My first younger brother is in first year M.A.; My second younger brother is in P.U.C.
ಲಿಂಗಯ್ಯ—ಪರವಾಗಿಲ್ಲ. ನಿಮ್ಮ ಅಕ್ಕಂದಿರು, ತಮ್ಮಂದಿರು ಎಲ್ಲಾ ವಿದ್ಯಾವಂತರೇ.	It is fine. All of your sisters, brothers are educated.

DRILLS

I Repetition Drill :

a) 1) ಅಧ್ಯಾಪಕರ ಸಂಖ್ಯೆ ಎಷ್ಟು ?

2) ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ?

3) ಜವಾನರ ಸಂಖ್ಯೆ ಎಷ್ಟು ?

4) ವಿದ್ಯಾರ್ಥಿನಿಯರ ಸಂಖ್ಯೆ ಎಷ್ಟು ?

b) 1) ವಿದ್ಯಾರ್ಥಿಗಳು ಒಟ್ಟು 420 ಜನ.

2) ಅಧ್ಯಾಪಕಿಯರು ಒಟ್ಟು 12 ಜನ.

3) ಅಧ್ಯಾಪಕರು ಒಟ್ಟು 8 ಜನ.

c) 1) ಇವರು ನನ್ನ ತಮ್ಮಂದಿರು.

2) ಅವರು ಇವನ ಅಣ್ಣಂದಿರು.

3) ಅವರು ನಮ್ಮ ಅಕ್ಕಂದಿರು.

d) 1) ನಿಮ್ಮ ಅಕ್ಕಂದಿರು ಯಾವ ಕ್ಲಾಸು ?

2) ಅವರ ಅಣ್ಣಂದಿರು ಯಾರು ಯಾರು ?

II Build up Drill :

Model :

ಅಧ್ಯಾಪಕಿಯರು.

ಕನ್ನಡ ಅಧ್ಯಾಪಕಿಯರು.

ಕಾಲೇಜಿನ ಕನ್ನಡ ಅಧ್ಯಾಪಕಿಯರು.

ನಮ್ಮ ಕಾಲೇಜಿನ ಕನ್ನಡ ಅಧ್ಯಾಪಕಿಯರು.

ಮೂರು ಜನ ನಮ್ಮ ಕಾಲೇಜಿನ ಕನ್ನಡ ಅಧ್ಯಾಪಕಿಯರು.

ಇವರು ಮೂರು ಜನ ನಮ್ಮ ಕಾಲೇಜಿನ ಕನ್ನಡ ಅಧ್ಯಾಪಕಿಯರು.

Build up the following making the appropriate changes wherever necessary :

1) ಅಧ್ಯಾಪಕರು.

2) ಅಣ್ಣಂದಿರು

3) ಚಿಕ್ಕಪ್ಪಂದಿರು

4) ವಿದ್ಯಾರ್ಥಿನಿಯರು

5) ತಮ್ಮಂದಿರು

III Transformation Drill:

a) Model: T: ಇವನು ಹುಡುಗ.

S: ಇವರು ಹುಡುಗರು.

1) ಅವಳು ಹುಡುಗಿ.

2) ಇವಳು ನನ್ನ ತಂಗಿ.

3) ಅವಳು ಜವಾನಿ.

4) ನಾನು ಆ ಕಾಲೇಜಿನ ಅಧ್ಯಾಪಕ

5) ಅವಳು ನನ್ನ ನಾದಿನಿ.

6) ಅವನು ನಮ್ಮ ಜವಾನ.

7) ಇವನು ಅವರ ಸ್ನೇಹಿತ.

b) Model: T: ಇವಳು ನನ್ನ ಅಕ್ಕ.

S: ಇವರು ನನ್ನ ಅಕ್ಕಂದಿರು.

1) ಅವನು ರವಿಯ ಅಣ್ಣ.

2) ನಾನು ಉಷೆಯ ತಮ್ಮ.

c) Model: T: ಅವರು ಹೊಸ ಅಧ್ಯಾಪಕರು.

S: ಅವರು ಹೊಸ ಅಧ್ಯಾಪಕರಾ ?

1) ಇವರು ಒಳ್ಳೇ ವಿದ್ಯಾರ್ಥಿನಿಯರು.

2) ಅವರು ಕೆಟ್ಟ ಹುಡುಗರು.

3) ಇವರು ಸುಮನ ಅಕ್ಕಂದಿರು.

4) ಅವರು ಕಮಲನ ತಮ್ಮಂದಿರು.

*

IV Substitution Drill :

Model : ಅವರು ಈ ಕಾಲೇಜಿನ ಹೊಸ ಅಧ್ಯಾಪಕರು.

ಜವಾನರು

ಅವರು ಈ ಕಾಲೇಜಿನ ಹೊಸ ಜವಾನರು.

ಹಳೆಯ

ಅವರು ಈ ಕಾಲೇಜಿನ ಹಳೆಯ ಜವಾನರು.

ಮನೆಯ

ಅವರು ಈ ಮನೆಯ ಹಳೆಯ ಜವಾನರು.

ನಮ್ಮ

ಅವರು ನಮ್ಮ ಮನೆಯ ಹಳೆಯ ಜವಾನರು.

ಇವರು

ಇವರು ನಮ್ಮ ಮನೆಯ ಹಳೆಯ ಜವಾನರು.

Substitute :

1) ಇವರು ನಿಮ್ಮ ಸ್ನೇಹಿತ ರವಿಯ ಅಣ್ಣಂದಿರು.

ತಮ್ಮ

____

ನನ್ನ

____

ಅವರು

____

____

ಮಕ್ಕಳು

2) ಅವರು ನಮ್ಮ ಕ್ಲಾಸಿನ ಒಳ್ಳೆಯ ಹುಡುಗಿಯರು.

ಕೆಟ್ಟ

____

ಹುಡುಗರು

____

ಇವರು

____

ಕನ್ನಡ

____

3) ಅವರು ವಿಮಲನ ಅಕ್ಕ ಉಷನ ವಿದ್ಯಾರ್ಥಿನಿಯರು.

ನನ್ನ

____

ತಂಗಿ

____

ಇವರು

____

ಸ್ನೇಹಿತೆಯರು

____

V Response Drill :

1) ನಿಮ್ಮ ಕನ್ನಡ ಅಧ್ಯಾಪಕರು ಎಷ್ಟು ಜನ ?

2) ಕನ್ನಡ ವಿದ್ಯಾರ್ಥಿನಿಯರು ಎಷ್ಟು ಜನ ?

3) ನಿಮ್ಮ ಅಧ್ಯಾಪಕರುಗಳ ಹೆಸರು ಏನು ?

4) ನಿಮ್ಮ ತಮ್ಮಂದಿರ ಹೆಸರು ಏನು ?

EXERCISES

I Fill in the blanks making the appropriate changes in the words given in the brackets :

1) ನಮ್ಮ———ಹೆಸರು ಚಂದ್ರಮೋಹನ್ (ಅಧ್ಯಾಪಕರು)
2) ಶಶಿಧರ———ಅಧ್ಯಾಪಕರು. (ಇತಿಹಾಸ)
3) ಇದು ಈ———ದೊಡ್ಡ ಕಾಲೇಜು. (ತಾಲ್ಲೂಕು)
4) ನನ್ನ———ತಮ್ಮ ನಾಲ್ಕನೆಯ ಕ್ಲಾಸು. (ಮೊದಲು)
5) ನೀವು ಹೊಸ———? (ಅಧ್ಯಾಪಕ)

II Fill in the blanks using the Kannada equivalents of the English words given in the brackets :

1) ಈ ಕಾಲೇಜಿನ ವಿದ್ಯಾರ್ಥಿಗಳ———ಎಷ್ಟು ? (total number)
2) ಇವರು ನಮ್ಮ———(brother–in–law)
3) ಇವರು ನಮ್ಮ ಅಕ್ಕನ———(girl students)
4) ಅವರು ನನ್ನ———(friends)

III Transform the following sentences into plural :

1) ಅವರು ರಾಮರಾಯರ ದೊಡ್ಡಪ್ಪ.
2) ಇವರು ನಮ್ಮ ಚಿಕ್ಕಪ್ಪ.
3) ಇವನು ಕಾವಲುಗಾರ.
4) ಅವಳು ಜವಾನಿ.
5) ಅವಳು ಹುಡುಗಿ.
6) ಅವನು ನನ್ನ ಸ್ನೇಹಿತ.
7) ಇವನು ಕಮಲನ ಅಣ್ಣ.

IV Frame ten sentences from the following table :

ಅವರು	ನಮ್ಮ	ಹೊಸ	ಆಳುಗಳು
ಇವರು	ನಿಮ್ಮ	ಒಳ್ಳೆ	
			ಹುಡುಗರು
			ಜವಾನರು

V Construct two sentences for each word given below :

ಎಲ್ಲರು, ಸ್ವಲ್ಪ, ಬಹಳ, ಒಟ್ಟು

VI Use the singular forms for the plural forms in the text and make appropriate changes in the sentences :

ಇವು ಕಮಲನ ಮನೆಗಳು.

ಅವರು ಕಮಲನ ತಮ್ಮಂದಿರು.

ಇವರು ಕಮಲನ ಅಕ್ಕಂದಿರು.

ಇವು ಕಮಲನ ರೂಮುಗಳು.

ಅವು ಅವಳ ಪುಸ್ತಕಗಳು.

ಇವು ಕಮಲನ ಮನೆಯ ನಾಯಿಗಳು.

ಕಮಲನ ಮನೆಯ ನಾಯಿಗಳ ಬಣ್ಣ ಕಪ್ಪು.

VII Answer the following questions :

1) ಮೋಹನ್ ಯಾವ ಸಬ್ಜೆಕ್ಟ್ ಅಧ್ಯಾಪಕರು ?
2) ಕಾಲೇಜಿನ ಒಟ್ಟು ಅಧ್ಯಾಪಕರುಗಳ ಸಂಖ್ಯೆ ಎಷ್ಟು ?
3) ಕಾಲೇಜಿನ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ?
ವಿದ್ಯಾರ್ಥಿನಿಯರ ಸಂಖ್ಯೆ ಎಷ್ಟು ?
4) ಇದು ಈ ತಾಲ್ಲೂಕಿನ ದೊಡ್ಡ ಕಾಲೇಜಾ ?
5) ಮೋಹನ್ ತಮ್ಮಂದಿರು ಯಾವ ಯಾವ ಕ್ಲಾಸು ?

VOCABULARY:

ಆರೋಗ್ಯ—health
ಇತಿಹಾಸ—history
ಜಾಸ್ತಿ—too much, a great deal, lot
ದೊಡ್ಡಪ್ಪ—father's elder brother/mother's elder sister's husband
ಪದವೀಧರರು—graduates
ಪರವಾಗಿಲ್ಲ—not bad, fine (doesn't matter)
ಪರಿಚಯ—acquaintance
ವಿದ್ಯಾಭ್ಯಾಸ—education
ಸಂಖ್ಯೆ—number
ಸಂತೋಷ—pleasure, pleased
ಹಾಗಾದರೆ—then, in that case
ಹುಡುಗರು—boys
ಹುಡುಗಿಯರು—girls

GRAMMAR NOTES:

1. Human plural markers are –andiru and –aru. All the kinship terms which are ending with –a, will take –andiru as plural marker.

Ex: ಅಕ್ಕ + ಅಂದಿರು = ಅಕ್ಕಂದಿರು
ತಮ್ಮ + ಅಂದಿರು = ತಮ್ಮಂದಿರು

2. All other kinship terms and human nouns will take –aru as plural marker:

Ex: ತಂಗಿ + ಅರು = ತಂಗಿಯರು
ಜವಾನ + ಅರು = ಜವಾನರು
ಹುಡುಗಿ + ಅರು = ಹುಡುಗಿಯರು

UNIT 3

Review
LESSON 3

DIALOGUE

AT RAJANNA'S HOUSE

ರಾಜಣ್ಣ—ಭಾಸ್ಕರನ್, ಇದು ನಮ್ಮ ಮನೆ. ಇದರ ಹೆಸರು 'ಧರಣಿ'.

ಭಾಸ್ಕರನ್—ತುಂಬಾ ಒಳ್ಳೆಯ ಹೆಸರು ರಾಜಣ್ಣ. ಮನೇನೂ ಒಳ್ಳೆಯದೇ. ತುಂಬಾ ದೊಡ್ಡ ಮನೇನಾ ?

ರಾಜಣ್ಣ—ತುಂಬಾ ದೊಡ್ಡ ಮನೆ ಅಲ್ಲ. ಎರಡು ರೂಮುಗಳ ಮನೆ.

ಭಾಸ್ಕರನ್—ರಾಜಣ್ಣ, ಅವೆರಡೂ ತೆಂಗಿನ ಮರಗಳಾ ?

ರಾಜಣ್ಣ—ಹೌದು ಭಾಸ್ಕರನ್. ಅವೆರಡೂ ತೆಂಗಿನ ಮರಗಳು.

ಭಾಸ್ಕರನ್—ಅವರು ಯಾರು ರಾಜಣ್ಣ ?

ರಾಜಣ್ಣ—ಅವರು ನಮ್ಮ ತಂದೆ. ಅಪ್ಪಾ, ಇವರು ನನ್ನ ಸ್ನೇಹಿತ ಭಾಸ್ಕರನ್. ಕನ್ನಡ ವಿದ್ಯಾರ್ಥಿ.

ಭಾಸ್ಕರನ್—ನಮಸ್ತೆ. ನಿಮ್ಮ ಹೆಸರು ?

ಸಂತಾನಪ್ಪ—ನಮಸ್ಕಾರ. ನನ್ನ ಹೆಸರು ಸಂತಾನಪ್ಪ. ನಿಮ್ಮ ಊರು ಯಾವುದು ಭಾಸ್ಕರನ್ ?

ಭಾಸ್ಕರನ್—ನಮ್ಮೂರು ತಿರುವನಂತಪುರ.

ಸಂತಾನಪ್ಪ—ಕೇರಳಾನಾ ?

ಭಾಸ್ಕರನ್—ಹೌದು. ಸಾರ್.

ರಾಜಣ್ಣ—ಭಾಸ್ಕರನ್, ಇವರು ಇಬ್ಬರೂ ನನ್ನ ತಮ್ಮಂದಿರು. ಇವನು ಮೊದಲನೆಯ ತಮ್ಮ. ಇವನ ಹೆಸರು ಹರೀಶ. ಇವನು ಎರಡನೆಯ ತಮ್ಮ. ಇವನ ಹೆಸರು ಸುರೇಶ. ಇವಳು ನನ್ನ ಒಬ್ಬಳೇ ಒಬ್ಬಳು ತಂಗಿ ಸುಮಾ. ನಾವು ಒಟ್ಟು ನಾಲ್ಕು ಜನ ಮಕ್ಕಳು. ನಾನೇ ಹಿರಿಯ ಮಗ.

ಸಂತಾನಪ್ಪ—ಭಾಸ್ಕರನ್ ಅವರು ಇಬ್ಬರೂ ರಾಜಣ್ಣನ ಮಕ್ಕಳು. ಹಿರಿಯ ಮಗನ ಹೆಸರು ಸತೀಶ. ಕಿರಿಯಮಗ ಹೆಸರು ಯತೀಶ.

ಭಾಸ್ಕರನ್—ಏನು ಸತೀಶ, ನೀನು ಎಷ್ಟನೆಯ ಕ್ಲಾಸು ?

ಸತೀಶ—ನಾನು ನಾಲ್ಕನೆಯ ಕ್ಲಾಸು ಅಂಕಲ್.

ಭಾಸ್ಕರನ್—ಹೌದಾ ! ನಿನ್ನದು ಯತೀಶ್ ?

ಯತೀಶ್—ನನ್ನದು. ನನ್ನದು ಒಂದನೇಯ ಕ್ಲಾಸು.

ಭಾಸ್ಕರನ್—ಹುಡುಗರು ತುಂಬಾ ಚುರುಕು.

TEST PAPER

I Write the corresponding ordinal forms of the given numerals:

1) ಒಂದು ________
2) ಎರಡು ________
3) ನಾಲ್ಕು ________
4) ಆರು ________
5) ಹತ್ತು ________
6) ಇಪ್ಪತ್ತು ________

7) ಐವತ್ತು ______

8) ನೂರು ______

9) ನೂರಾ ಒಂದು ______

10) ಇನ್ನೂರು ______

II Write the corresponding ordinals with reference to persons :

1) ಒಂದು ______

2) ಎರಡು ______

3) ಮೂರು ______

4) ನಾಲ್ಕು ______

5) ಐದು ______

6) ಆರು ______

III Write the plural forms of the following nouns :

1) ಹುಡುಗ

2) ಅಣ್ಣತಮ್ಮ

3) ಸೊಸೆ

4) ಮಗ

4) ತಂಗಿ

6) ಮೊಮ್ಮಗ

7) ಮರ

8) ಹುಡುಗಿ

9) ತಂದೆ ತಾಯಿ

10) ವಿದ್ಯಾರ್ಥಿ

IV a) Fill in the blanks selecting the appropriate words from the items given in the bracket :

(ನಾಲ್ಕನೇ, ನಮ್ಮ, ತಮ್ಮಂದಿರ, ಎಷ್ಟರ, ಎಷ್ಟನೇ)

1) ನನ್ನ———ಹೆಸರು ಮಹಾದೇವ, ರಾಮ.
2) ನಾಳೆ———ತಾರೀಕು ?
3) ಇದು———ನೋಟು ?
4) ———ತಾರೀಕು ನಿಮ್ಮ ಮಗೂ ನಾಮಕರಣ ?
5) ———ಅಧ್ಯಾಪಕರು ನಾಲ್ಕು ಜನ

b) Fill in the blanks using the appropriate forms of the words given in the brackets :

1) ಅವರು———(ಎರಡು) ನಮ್ಮ ಮನೆಯ ಆಳುಗಳು.
2) ಅದು———(ಹತ್ತು) ನೋಟು.
3) ಅವತ್ತು———(ಇಪ್ಪತ್ತು) ತಾರೀಕು.
4) ———(ನಾನು) ಹೆಸರು ರಾಮ.
5) ಇವತ್ತು———(ಎಂಟು) ತಾರೀಕು.

V Answer the following questions :

1) ರಾಜಣ್ಣನ ಮನೆಯ ಹೆಸರು ಏನು ?
2) ಭಾಸ್ಕರನ್ ಊರು ಯಾವುದು ?
3) ರಾಜಣ್ಣನ ತಮ್ಮಂದಿರು ಎಷ್ಟು ಜನ ?
4) ಸಂತಾನಪ್ಪನವರ ಮಕ್ಕಳು ಎಷ್ಟು ಜನ ?

VOCABULARY

ಕಿರಿಯಮಗ—youngest son

ಚುರುಕು—smart

ತೆಂಗಿನ ಮರ—coconut tree

ಹಿರಿ ಮಗ—eldest son

UNIT 4

LESSON 14

ABOUT SHAMU'S DAUGHTER'S MARRIAGE

DIALOGUE

ಸೋಮು—ಏನು ಶಾಮು, ನಿನ್ನ ಮಗಳು ವಸಂತನ ಮದುವೆ ಯಾವಾಗ ?	When will your daughter Vasanta's marriage, Shamu ?
ಶಾಮು—ಮದುವೆ ಮಾರ್ಚಿ 20ನೇ ತಾರೀಖು.	It is on March 20th.
ಸೋಮು—ವರ ಯಾರು ?	Who is the bridegroom ?

ಶಾಮು—ಶಿವಮೊಗ್ಗದ ಶಂಕರರಾಯರ ಮಗ.	Son of Shankara Rao of Shimoga.
ಸೋಮು—ಯಾವ ಶಂಕರರಾಯರು ?	Which Shankara Rao ?
ಶಾಮು—ಅದೇ ಅಡಿಕೆಮಂಡಿ ಶಂಕರ ರಾಯರು.	The Arecanut wholesale merchant Shankara Rao.
ಸೋಮು—ಸರಿಸರಿ. ಭಾರಿ ಸಾಹುಕಾರರೇ. ಅವರ ಮಕ್ಕಳು ಮೂರು ಜನ ಅಲ್ವಾ ?	Oh ! He is rich man. He has three children. Doesn't he ?
ಶಾಮು—ಹೌದು. ಮೂರು ಜನ.	Yes. Three.
ಸೋಮು—ಗಂಡು ಎಷ್ಟು, ಹೆಣ್ಣು ಎಷ್ಟು ?	How many sons and how many daughters ?
ಶಾಮು—ಎರಡು ಗಂಡು, ಒಂದು ಹೆಣ್ಣು.	Two sons and one daughter.
ಸೋಮು—ನಿನ್ನ ಭಾವಿ ಅಳಿಯ ಎಷ್ಟನೆಯವನು ?	Is your would-be son-in-law the eldest son ?
ಶಾಮು—ಎರಡನೆಯವನು.	He is the second son.
ಸೋಮು—ಮದುವೆ ನಿನ್ನ ಒಂದ್ನೇ ಮಗಳದೋ ಎರಡ್ನೇ ಮಗಳದೋ ?	Is the marriage for your first daughter or the second daughter ?
ಶಾಮು—ನೀನೊಳ್ಳೆ ಮರಗುಳಿ. ವಸಂತ ಒಬ್ಬಳೇ ಒಬ್ಬಳು ಮಗಳು ಅಲ್ವೇನಯ್ಯಾ ?	You are an absent minded fellow. Vasanta is my only one daughter. Isn't she ?
ಸೋಮು—ಏನೋ ಮರೆವು ! ಅದು ಸರಿ. ನೆಂಟಸ್ತನ ಹೊಸದೋ ಹಳೆಯದೋ ?	Some forgetfulness ? That is alright. Is the relationship new or old ?
ಶಾಮು—ನೆಂಟಸ್ತನವೇನೋ ಹೊಸದೇ. ಆದರೆ ಬೀಗರು ಮಾತ್ರ ಹಳಬರು.	The Relationship is new. But we already know the would-be in -laws.
ಸೋಮು—ಅದು ಹೇಗೆ ?	How is that ?

ಶಾಮು—ಶಂಕರರಾಯರ ಹೆಂಡತಿ ಕಮಲು ನಮ್ಮ ಊರವಳು. ಅಲ್ಲದೆ ನಾವಿಬ್ಬರೂ ಬಾಲ್ಯ ಸ್ನೇಹಿತರು.	Shankara Rao's wife Kamalu is from our native place. Besides we both are friends from childhood.
ಸೋಮು—ನಿಮ್ಮ ಬೀಗರು ಹೇಗೆ ?	How about your would–be in–law ? (would be son-in-law's father)
ಶಾಮು—ಅವರು ದೇವರಂಥ ಮನುಷ್ಯರು.	He is a very good man (like a God).
ತುಂಬಾ ದೊಡ್ಡ ಗುಣ ಅವರದು. ಕಮಲು ಅಂತೂ ತೀರ ಒಳ್ಳೆಯವಳು.	He has very good qualities. Kamalu is also a very good woman.
ಸ್ವಭಾವ ತುಂಬಾ ಮೃದು.	She has very gentle nature.
ಸೋಮು—ತಂದೆ ತಾಯಿ ಇಬ್ಬರೂ ಒಳ್ಳೆಯವರು.	Both the parents are good.
ಆದ್ದರಿಂದ ಹುಡುಗಾನೂ ಒಳ್ಳೆಯವನೇ.	Therefore the boy also must be good.
ಶಾಮು—ಹೌದು. ಚಿನ್ನದಂಥ ಹುಡುಗ. ಬಹಳ ಒಳ್ಳೆಯವನು. ಆದರೆ ಸ್ವಲ್ಪ ಕಪ್ಪು.	Yes. He is a very good boy. But slightly black in complexion.
ಸೋಮು—ಕಪ್ಪೋ ಬಿಳುಪೋ ಒಳ್ಳೆಯತನ ಮುಖ್ಯ ಅಷ್ಟೆ.	It doesn't matter. Whether he is fair or black. Goodness is all that is important.

DRILLS

I Repetition Drill :

a) 1) ನಿನ್ನ ಭಾವಿ ಅಳಿಯ ಎಷ್ಟನೆಯವನು ?

2) ನಿನ್ನ ಭಾವಿ ಸೊಸೆ ಎಷ್ಟನೆಯವಳು ?

b) 1) ನೆಂಟಸ್ತನ ಹೊಸದೋ ಹಳೆಯದೋ ?
   2) ಸ್ನೇಹ ಹೊಸದೋ ಹಳೆಯದೋ ?

c) 1) ಬೀಗರು ಹಳಬರು.
   2) ನೆಂಟರು ಹೊಸಬರು.
   3) ಸ್ನೇಹಿತ ಹೊಸಬ.

d) 1) ತಂದೆ ತಾಯಿ ಇಬ್ಬರೂ ಒಳ್ಳೆಯವರು.
   .2) ಅಕ್ಕ ತಂಗಿ ಇಬ್ಬರೂ ಕೆಟ್ಟವರು.
   3) ಅಣ್ಣ ತಮ್ಮ ಇಬ್ಬರೂ ಒಳ್ಳೆಯವರು.

e) 1) ಕಮಲೂ ತೀರ ಒಳ್ಳೆಯವಳು.
   2) ಸುಶೀಲ ತುಂಬ ಒಳ್ಳೆಯವಳು.
   3) ಸ್ನೇಹ ಬಹಳ ಕೆಟ್ಟವಳು.

f) 1) ಹುಡುಗ ಬಹಳ ಒಳ್ಳೆಯವನು.
   2) ರಾಮರಾಯರ ಮಗ ಒಳ್ಳೆಯವನು.
   3) ನಮ್ಮ ಬೀಗಿತಿ ತುಂಬಾ ಒಳ್ಳೆಯವಳು.

g) 1) ಒಳ್ಳೆಯತನ ಮುಖ್ಯ.
   2) ದೊಡ್ಡತನ ಮುಖ್ಯ.

h) 1) ಕಮಲು ನಮ್ಮ ಊರಿನವಳು.
   2) ರಾಜು ಬೆಂಗಳೂರಿನವನು.

II Build up Drill :

Model :

ಒಳ್ಳೆಯವರು.
ತುಂಬ ಒಳ್ಳೆಯವರು.
ಬೀಗರು ತುಂಬ ಒಳ್ಳೆಯವರು.
ಶಾಮುವಿನ ಬೀಗರು ತುಂಬ ಒಳ್ಳೆಯವರು.
ಅಣ್ಣ ಶಾಮುವಿನ ಬೀಗರು ತುಂಬ ಒಳ್ಳೆಯವರು.
ನಮ್ಮ ಅಣ್ಣ ಶಾಮುವಿನ ಬೀಗರು ತುಂಬ ಒಳ್ಳೆಯವರು.

Build up the following making the appropriate changes :

1) ಒಳ್ಳೆಯವಳು.
2) ಕೆಟ್ಟವನು.

III Transformation Drill :

a) Model : T : ಇವಳು ಮೊದಲನೆಯ ಹುಡುಗಿ
S : ಈ ಹುಡುಗಿ ಮೊದಲನೆಯವಳು.

1) ಅವನು ಎರಡನೆಯ ಹುಡುಗ.
2) ಇವಳು ಮೂರನೆಯ ಸೊಸೆ.
3) ಇವನು ಮೂರನೆಯ ತಮ್ಮ.

b) Model : T : ಇವಳು ಒಳ್ಳೆಯ ಹುಡುಗಿ.
S : ಈ ಹುಡುಗಿ ಒಳ್ಳೆಯವಳು.

1) ಅವನು ಕೆಟ್ಟ ಹುಡುಗ.
2) ಅವಳು ದೊಡ್ಡ ಹುಡುಗಿ.
3) ಇವರು ಸಣ್ಣ ಮಕ್ಕಳು.

c) Model : T : ಅವರು ಹೊಸ ಮೇಷ್ಟ್ರು.
S : ಆ ಮೇಷ್ಟ್ರು ಹೊಸಬರು.

1) ಇವಳು ಹಳೆಯ ವಿದ್ಯಾರ್ಥಿನಿ.
2) ಇವರು ಹಳೆಯ ಡಾಕ್ಟರು.
3) ಅವನು ಹೊಸ ಜವಾನ.

d) Model : T : ಇದು ಅವರ ಊರು.
S : ಅವರು ಈ ಊರಿನವರು.

1) ಇದು ಅವಳ ಮನೆ.
2) ಅದು ಇವಳ ಕಾಲೇಜು.

IV Substitution Drill :

Model : ನಿಮ್ಮ ಮಗ ಒಳ್ಳೆಯವನು.

ಸೊಸೆ

ನಿಮ್ಮ ಸೊಸೆ ಒಳ್ಳೆಯವಳು.

1) ನಿಮ್ಮ ಅಣ್ಣ ಒಳ್ಳೆಯವರು.
ಅತ್ತಿಗೆ

____

ನನ್ನ ಮೈದ ಚಿಕ್ಕವನು.

ತಂಗಿ

____

3) ಆ ಹುಡುಗ ಕೆಟ್ಟವನು.
ರಾಜಾರಾಯರು

____

V Response Drill :

1) ನಿಮ್ಮ ಸ್ನೇಹಿತರ ಮದುವೆ ಯಾವಾಗ ?
2) ನಿಮ್ಮ ಮಕ್ಕಳು ಎಷ್ಟು ಜನ ?
3) ನೀವು ಮರಗುಳಿನಾ ?
4) ನಿಮ್ಮ ಹೆಂಡತಿಯ ಸ್ವಭಾವ ಹೇಗೆ?

EXERCISES

I Fill in the blanks making the appropriate changes in the words given in the brackets :

1) ನಿನ್ನ ತಂಗಿ ________ (ಕೆಟ್ಟ)
2) ಸವಿತ ಈ ________ (ಊರು)

3) ಶೈಲಾ ತುಂಬಾ————(ಚಿಕ್ಕ)

4) ಆ ಮನೆಯವರು ಬಹಳ————(ಒಳ್ಳೆ)

5) ರಾಮು ತುಂಬ————(ದೊಡ್ಡ)

II Fill in the blanks using the Kannada equivalents of the English words given in the brackets :

1) ಇವಳು————ಮಗಳು. (only one)

2) ಅವನು ನಿಮ್ಮ————ಮಗಾನಾ ? (only one)

3) ನಮ್ಮ ಅಕ್ಕ ತುಂಬಾ————(absent minded)

4) ನಿಮ್ಮ————ಅಳಿಯ ಯಾರು ? (would–be)

5) ಅವರ————ನಮಗೆ ಹೊಸದು. (relationship)

6) ಸುಮ ನನ್ನ————ಸ್ನೇಹಿತೆ. (childhood)

7) ರಾಜುವಿನ ಸ್ವಭಾವ ತುಂಬ————(soft)

III Transform the following according to the model :

Model : ಒಳ್ಳೆಯ—ಒಳ್ಳೆಯತನ.

1) ಕೆಟ್ಟ—

2) ಸಣ್ಣ—

3) ದೊಡ್ಡ —

4) ಹೊಸ—

Give one interrogative sentence for each of the following statements substituting the underlined word with that of an interrogative word :

1) ನನ್ನ ಭಾವಿ ಅಳಿಯ ಎರಡನೆಯವನು.

2) ಇವರು ಅವರ ಮೂರು ಜನ ಹೆಣ್ಣು ಮಕ್ಕಳು.

3) ಶಾಮುವಿನ ಬೀಗರು ಒಳ್ಳೆಯವರು.

4) ನೆಂಟಸ್ತನ ಹೊಸದು.

5) ಅವಳ ಸ್ವಭಾವ ತುಂಬ ಮೃದು.

V Answer the following questions :

1) ಶಾಮುವಿನ ಮಗಳ ಮದುವೆ ಯಾವಾಗ ?
2) ಶಂಕರರಾಯರ ಮಕ್ಕಳು ಎಷ್ಟು ಜನ ?
3) ಶಾಮುವಿನ ಮಕ್ಕಳು ಎಷ್ಟು ಜನ ?
4) ಮರಗುಳಿ ಯಾರು ?
5) ಕಮಲು ಸ್ವಭಾವ ಹೇಗೆ ?

VOCABULARY

ಅಡಿಕೆಮಂಡಿ—arecanut wholesale shop
ಅಲ್ಲದೆ—in addition to
ಒಳ್ಳೆಯತನ—goodness
ಕೆಲಸ—job, work
ಚಿನ್ನ—gold
ಗುಣ—character
ಸಂಬಂಧ—relationship
ಬಾಲ್ಯ—childhood
ಬೀಗ—a relative by marriage, in law
ಭಾರಿ—big
ಭಾವಿ—would be
ಮದುವೆ—marriage
ಮನುಷ್ಯ—man
ಮರಗುಳಿ—absent minded
ಮರೆವು—forgetfulness
ಮೃದು—soft
ಯಾವಾಗ—when
ವರ—bridegroom
ಸಾಹುಕಾರ—rich man
ಸ್ವಭಾವ—nature of a person

Supplementary Vocabulary

ಅತ್ತಿಗೆ—elder brother's wife.

ಬೀಗಿತಿ—a relative by marriage, she in law

GRAMMAR NOTES :

1. Note how derived adjectival nouns are formed. By adding third person pronouns to the adjectives adjectival noun can be obtained :

Ex :	ಒಳ್ಳೆಯ	ಒಳ್ಳೆಯವನು
		ಒಳ್ಳೆಯವಳು
		ಒಳ್ಳೆಯವರು
	ಕೆಟ್ಟ	ಕೆಟ್ಟವನು
		ಕೆಟ್ಟವಳು
		ಕೆಟ್ಟವರು
	ಎರಡು	ಎರಡನೆಯವನು
		ಎರಡನೆಯವಳು
		ಎರಡನೆಯವರು

2. Note also that the addition of suffix –tana to some adjectives gives us abstract nouns :

Ex : ಒಳ್ಳೆಯ + ತನ = ಒಳ್ಳೆಯತನ

ಕೆಟ್ಟ + ತನ = ಕೆಟ್ಟತನ

3. ಅಯ್ಯ is like ಅಪ್ಪ, introduced in lesson 3, that is, it is both an addressive term and a name affix. ex : ಲಿಂಗಯ್ಯ.

UNIT 4

LESSON 15

VEGETABLE MARKET

DIALOGUE

ಭಾಗ—1

ಇಂದಿರಮ್ಮ —ಬನ್ನಿ ಕಮಲಮ್ಮ, ತರಕಾರಿ ಮಾರ್ಕೆಟ್ಟಿಗೆ ಹೋಗೋಣ.	Come Kamalamma. Let us go to vegetable market.
ಕಮಲಮ್ಮ —ನಡೀರಿ ಇಂದಿರಮ್ಮ.	All right, let us proceed Indiramma.

ಇಂದಿರಮ್ಮ—ಮಾರ್ಕೆಟ್ಟಿಗೆ ಈ ದಾರಿ ತುಂಬಾ ಹತ್ತಿರ ಬನ್ನಿ.	This way is very near to the market, come.
ಕಮಲಮ್ಮ—ನಡೀರಿ.	Let us proceed
ಇಂದಿರಮ್ಮ—ನಿಮ್ಮ ಮಗಳಿಗೆ ಪರೀಕ್ಷೆ ಯಾವಾಗ ಕಮಲಮ್ಮ ?	When will be your daughter's examination **Kamalamma**?
ಕಮಲಮ್ಮ—ಅವಳಿಗೆ ಮುಂದಿನ ತಿಂಗಳು ಹನ್ನೆರಡನೇ ತಾರೀಕು.	Hers is on the 12th of next month.
ಇಂದಿರಮ್ಮ—ಅವಳು ಈಗ ಎಷ್ಟನೇ ಕ್ಲಾಸು ?	In which class she is now ?
ಕಮಲಮ್ಮ—ಅವಳು ಈ ವರ್ಷ ಐದನೇ ಕ್ಲಾಸು. ನಿಮಗೆ ಯಾವಾಗ ರಜ ಇಂದಿರಮ್ಮ ?	She is in 5th standard this year. When will be your vacation Indiramma?
ಇಂದಿರಮ್ಮ—ನಮಗೆ ಈ ಸಾರಿ ಬೇಸಿಗೆ ರಜ ತಡ. ನಮ್ಮ ಸ್ಕೂಲೇ ಈ ಸಾರಿ ಪಬ್ಲಿಕ್ ಪರೀಕ್ಷೆಗೆ ಸೆಂಟರ್. ಈಗ ನಾನು ಮುಖ್ಯೋಪಾಧ್ಯಾಯಿನಿ ಬೇರೆ.	This time our summer vacation is late. This time our school is the centre for public examination. I am the Headmistress too.
ಕಮಲಮ್ಮ—ಎಸ್.ಎಸ್.ಎಲ್.ಸಿ. ಯವರಿಗೆ ಮಾತ್ರ ಪಬ್ಲಿಕ್ ಪರೀಕ್ಷೇನಾ ?	Is the public examination only for those in S.S.L.C. ?
ಇಂದಿರಮ್ಮ—ಹೌದು. ಎಸ್.ಎಸ್.ಎಲ್.ಸಿ. ಯವರಿಗೆ ಮಾತ್ರ.	Yes. It is only for those in S.S.L.C.
ಕಮಲಮ್ಮ—ನಿಮ್ಮ ಮಕ್ಕಳು ಇಬ್ಬರೂ ಎಸ್.ಎಸ್.ಎಲ್.ಸೀನಾ ?	Are both of your childern in the S.S.L.C.?
ಇಂದಿರಮ್ಮ—ಅಲ್ಲ. ಮಗಳು ಎಸ್. ಎಸ್, ಎಲ್.ಸಿ. ಮಗ ಹೈಸ್ಕೂಲು ಎರಡನೇ ವರ್ಷ.	No. My daughter is in S.S.L.C. My son is in the second year in high school.
ಕಮಲಮ್ಮ—ನಿಮ್ಮ ಮಗ ರಮೇಶನಿಗೆ ಯಾವಾಗ ರಜ ?	When will be your son Ramesh's vacation ?

ಇಂದಿರಮ್ಮ—ಅವನಿಗೆ ಈ ತಿಂಗಳು 30ನೇ ತಾರೀಕು.	His is on the 30th of this month.

ಭಾಗ—2

ಕಮಲಮ್ಮ—ಆ ಅಂಗಡಿಗೆ ಹೋಗೋಣ ಬನ್ನಿ. ಅವನು ನನಗೆ ಗೊತ್ತು.	Come, let us go to that shop. I know him. (Proprietor)
ಇಂದಿರಮ್ಮ—ನಿಮಗೆ ಏನೇನು ತರಕಾರಿ ಬೇಕು ?	What vegetables do you want ?
ಕಮಲಮ್ಮ—ನನಗೆ ಪಡವಲಕಾಯಿ, ಬೆಂಡೆ ಕಾಯಿ, ಟೊಮೆಟೊ, ನಿಂಬೆಹಣ್ಣು ಬೇಕು. ನಿಮಗೆ ?	I want snake gourd, lady's finger, tomato, lemon. How about you ?
ಇಂದಿರಮ್ಮ—ನನಗೆ ಸೊಪ್ಪು, ಹುರುಳಿ ಕಾಯಿ, ಕೋಸು, ಬದನೆಕಾಯಿ, ಗಜರಿ ಬೇಕು.	I want greens, beens, cabbage, brinjal and carrot.
ಕಮಲಮ್ಮ—ಅಷ್ಟೊಂದು ತರಕಾರಿ ಬೇಕಾ ?	Do you want that large amount of vegetables
ಇಂದಿರಮ್ಮ—ಹೌದು, ಎರಡು ದಿನಕ್ಕೆ.	Yes. It is for two days.
ತರಕಾರಿ ವ್ಯಾಪಾರಿ—ಬನ್ನಿ ತಾಯಿ, ಬನ್ನಿ	Come madam, come.
ಇಂದಿರಮ್ಮ—ಆ ಕೋಸಿಗೆ ಬೆಲೆ ಎಷ್ಟಪ್ಪಾ?	What is the price of that cabbage ?
ತರಕಾರಿ ವ್ಯಾಪಾರಿ—ಯಾವುದಕ್ಕೆ ತಾಯಿ ?	For which one Madam ?
ಇಂದಿರಮ್ಮ—ಅದಕ್ಕೆ, ಆ ದೊಡ್ಡದಕ್ಕೆ.	For that, for that big one.
ತರಕಾರಿ ವ್ಯಾಪಾರಿ—ಇದಕ್ಕೆ 50 ಪೈಸೆ ತಾಯಿ.	50 paise for that Madam.
ಇಂದಿರಮ್ಮ—ಚಿಕ್ಕದ್ದಕ್ಕೆ ಎಷ್ಟು ?	How much for the small one ?
ತರಕಾರಿ ವ್ಯಾಪಾರಿ—ಚಿಕ್ಕದಕ್ಕೆ ದೊಡ್ಡದಕ್ಕೆ ಎಲ್ಲಾದಕ್ಕೂ ಒಂದೇ ಬೆಲೆ.	The price is same for both small and big cabbages.

ಇಂದಿರಮ್ಮ—ಬದನೇಕಾಯಿ, ಹುರುಳಿ ಕಾಯಿ ಎಲ್ಲಾ ಹೊಸದೇನಪ್ಪಾ ?	Are the brinjal and beans fresh ?
ತರಕಾರಿ ವ್ಯಾಪಾರಿ—ಹೌದು ತಾಯಿ, ಎಲ್ಲಾ ತಾಜಾ ಮಾಲು.	Yes Madam. They are all fresh.
ಕಮಲಮ್ಮ—ಆ ಚಿಕ್ಕ ಪಡವಲಕಾಯಿಗೆ ಎಷ್ಟಪ್ಪಾ ಬೆಲೆ ?	How much for that small snake gourd ?
ತರಕಾರಿ ವ್ಯಾಪಾರಿ—ಪಡವಲಕಾಯಿ ಯಾವುದೇ ತಗೊಳ್ಳಿ, ಅರವತ್ತು ಪೈಸಕ್ಕೆ ಒಂದು.	You take any Snake gourd, 60 paise only.
ಕಮಲಮ್ಮ—ಏನಪ್ಪಾ ! ಎಲ್ಲದಕ್ಕೂ ಒಂದೇ ಬೆಲೆ. ಎಲ್ಲಾ ತುಟ್ಟಿ.	What is this ! All are of same rate. Everything is costly.
ತರಕಾರಿ ವ್ಯಾಪಾರಿ—ಇದು ಹಬ್ಬದ ಕಾಲ ತಾಯಿ. ಎಲ್ಲಾ ಪದಾರ್ಥಗಳೂ ತುಟ್ಟಿ.	This is festival season, Madam. Everything is costly.
ಇಂದಿರಮ್ಮ—ಸೌತೆಕಾಯಿಗೆ ಬೆಲೆ ಎಷ್ಟು ?	How much for a cucumber ?
ತರಕಾರಿ ವ್ಯಾಪಾರಿ—ಸೌತೆಕಾಯಿ ಒಂದಕ್ಕೆ 40 ಪೈಸೆ.	40 paisa for each cucumber.
ಇಂದಿರಮ್ಮ—ಇದೂ ದುಬಾರಿ.	This is also costly.
ತರಕಾರಿ ವ್ಯಾಪಾರಿ—ಅಮ್ಮಾವರೆ, ಎಲ್ಲಾ ಅಷ್ಟೆ. ಬೆಂಡೇಕಾಯಿ ಒಂದೇ ಅಗ್ಗ.	Madam, Everything is like that. Only lady's finger is cheap.
ಇಂದಿರಮ್ಮ—ಸರೀನಪ್ಪಾ. ನನಗೆ ಹತ್ತು ಕಂತೆ ಸೊಪ್ಪು. ಒಂದು ಕೆ.ಜಿ. ಹುರುಳಿ ಕಾಯಿ, ಒಂದು ಕೋಸು, ಅರ್ಧ ಕೆ.ಜಿ. ಬದನೆಕಾಯಿ ಕೊಡು.	All right. Give me ten bundles of greens, one kilo of beans, one cabbage, half a kilo of brinjal.
ತರಕಾರಿ ವ್ಯಾಪಾರಿ—ನಿಮಗೆ ಅಮ್ಮಾವರೆ ?	How about you, Madam ?
ಕಮಲಮ್ಮ—ನನಗೆ ಒಂದು ಪಡವಲಕಾಯಿ, ಒಂದು ಕೆ.ಜಿ. ಟೊಮೆಟೊ, ಎರಡು ನಿಂಬೆ ಹಣ್ಣು. ಎರಡು ತೆಂಗಿನಕಾಯಿ ಕೊಡು.	Give me one snake gourd, one kilo of tomatoes, two lemons, two coconuts.

DRILLS

1 Repetition Drill :

a) 1) ನನಗೆ ಪಡವಲಕಾಯಿ ಬೇಕು.
   2) ನನಗೆ ರಜಾ ಮುಂದಿನ ತಿಂಗಳು.

b) 1) ನಮಗೆ ಈ ಸಾರಿ ಬೇಸಿಗೆ ರಜಾ ತಡ.
   2) ನಮಗೆ ಪರೀಕ್ಷೆ ಮುಂದಿನ ತಿಂಗಳು.

c) 1) ನಿನಗೆ ಎಷ್ಟು ಜನ ಮಕ್ಕಳು ?
   2) ನಿನಗೆ ಯಾವಾಗ ಪರೀಕ್ಷೆ ?

d) 1) ನಿಮಗೆ ಏನು ತರಕಾರಿ ಬೇಕು ?
   2) ನಿಮಗೆ ಯಾವಾಗ ರಜಾ ?

e) 1) ಅವನಿಗೆ ಮುಪತ್ತನೇ ತಾರೀಕು ರಜ.
   2) ಅವನಿಗೆ ಇಬ್ಬರು ಮಕ್ಕಳು.

f) 1) ಅವಳಿಗೆ ಪರೀಕ್ಷೆ ಮುಂದಿನ ತಿಂಗಳು.
   2) ಅವಳಿಗೆ ನಾಳೆ ರಜಾ.

g) 1) ಅವರಿಗೆ ನಾಳಿದ್ದು ಸ್ಕೂಲು.
   2) ಇವರಿಗೆ ಹತ್ತು ರೂಪಾಯಿ ಬೇಕು.

h) 1) ಅದಕ್ಕೆ ಇಪ್ಪತ್ತು ಪೈಸೆ.
   2) ಇದಕ್ಕೆ ಬೆಲೆ ತುಂಬಾ ಜಾಸ್ತಿ.

i) 1) ಅವಕ್ಕೆ ಏನು ಬೇಕು ?
   2) ಇವಕ್ಕೆ ಚಾಕೊಲೇಟ್ ಬೇಕು.

j) 1) ನಿಮ್ಮ ಮಗನಿಗೆ ಯಾವಾಗ ರಜಾ ?
   2) ನಿಮ್ಮ ಮಗಳಿಗೆ ಯಾವಾಗ ಪರೀಕ್ಷೆ ?

5) ನೀನು ಹೋಗು.

(ಇವತ್ತು)

____

(ಮಧ್ಯಾಹ್ನ 12 ಗಂಟೆ)

____

(ಮನೆ)

____

(ಅವರ)

____

III Transformation Drill :

a) Model: T : ನೀವು ಮನೆಗೆ ಬನ್ನಿ.

S : ನೀನು ಮನೆಗೆ ಬಾ.

1) ನೀವು ಶಾಲೆಗೆ ಹೋಗಿ.
2) ನೀವು ಊರಿಗೆ ಹೊರಡಿ.
3) ನೀವು ತಿಂಡಿ ತಿನ್ನಿ.
4) ನೀವು ಕಾಫಿ ಕುಡಿಯಿರಿ.
5) ನೀವು ನನ್ನ ಹತ್ತಿರ ಇರಿ.

b) Model: T : ನಾನು ನೀನು ಸ್ಕೂಲಿಗೆ ಹೋಗೋಣ.

S : ನಾನು ನೀನು ಸ್ಕೂಲಿಗೆ ಹೋಗೋಣವಾ ?

1) ನಾನು ನೀನು ಕಾಫಿ ಕುಡಿಯೋಣ.
2) ನಾವು ಕಥೆ ಹೇಳೋಣ.
3) ನಾವು ಇವತ್ತು ಒಂದು ಸಿನಿಮಾ ನೋಡೋಣ.

c) Model : T : ನೀವು ನಮ್ಮ ಮನೆಗೆ ಬನ್ನಿ.
ಅವನು

S : ಅವನು ನಮ್ಮ ಮನೆಗೆ ಬರಲಿ.

1) ನೀವು ತಿಂಡಿ ತಿನ್ನಿ.
ಅವಳು

____

2) ನಾವು ಕಥೆ ಹೇಳೋಣ.
ಅವರು

____

3) ನೀವು ಹಾಲು ಕುಡಿಯಿರಿ.
ಅದು

____

4) ನೀನು ಹಣ್ಣು ತಿನ್ನು.
ಅವು

____

5) ನಾನು ನೀನು ಸಿನಿಮಾ ನೋಡೋಣ.
ಅಮಿತ, ಅನಿತ

____

V Response Drill :

1) ನಾನು ಕೋಡುಬಳೆ ತರಲಾ ?
2) ನಾವು ಆಗ್ರಾಕ್ಕೆ ಹೋಗೋಣವಾ ?
3) ನಾನು ಯಾವ ಕೆಲಸ ಮಾಡಲಿ ?
4) ನಾವು ಯಾವ ತಿಂಡಿ ತಿನ್ನೋಣ ?
5) ನಾನು ಎಲ್ಲಿಗೆ ಹೋಗಲಿ ?
6) ನಾವು ಎಲ್ಲಿ ಕಾಫಿ ಕುಡಿಯೋಣ ?

EXERCISES

I Fill in the blanks using the suitable words :

1) ನೀನು ಒಂದು ಕಥೆ ———
2) ಅವರು ಈ ಕಾಫಿ ———
3) ನಾವು ಮನೆಗೆ ———
4) ನೀವು ನಾಳೆ ನಮ್ಮ ಮನೆಗೆ ———
5) ನಾನು ಈಗ ಸಿನಿಮಾಕ್ಕೆ ———
6) ಅದು ಹಾಲು
7) ನಾನು ಎಲ್ಲಿಗೆ ——— ?
8) ನಾವು ಶ್ರೀರಂಗಪಟ್ಟಣಕ್ಕೆ ——— ?
9) ನೀನು ಕಾಫಿ ———
10) ಅವಳು ಬೇಗ ಮನೆಗೆ ———

II Fill in the blanks using the Kannada epuivalents of the English words given in the brackets ?

1) ನಾನು ನಿಮ್ಮ ತೋಟದ ——— ಇರಲಾ (near)
2) ನಾವು ಏನು ——— ತರೋಣ ? (eatables)
3) ಬಾಬು ——— (come here)
4) ನಾವು ——— ಕಾಫಿ ಕುಡಿಯೋಣ ? (where)
5) ನೀವು ——— ತನ್ನಿ (something)
6) ರಜದ ದಿನ ——— ಹೋಗೋಣ. (somewhere)
7) ಕಚೇರಿಗೆ ——— ಬನ್ನಿ. (early)
8) ನೀನು ನಮ್ಮ ಮನೆಗೆ ——— (come)
9) ನೀವು ಹಣ್ಣು ——— (bring)
10) ನೀವು ತಿಂಡಿ ——— (eat)

III Fill in the blanks making the appropriate changes **in the** words **given in** the brackets :

1) ಅವಳು ಮನೆಗೆ ________ (ಹೋಗು)
2) ನೀವು ಕಾಫಿ ________ (ಕುಡಿ)
3) ನಾನು ________ ? (ಬಾ)
4) ರವಿ ಕೋಡುಬಳೆ ________ (ತಿನ್ನು)
5) ನಾವು ಸಿನೀಮಾ ________ (ನೋಡು)
6) ನಾನು ಏನು ________ ? (ಮಾಡು)

IV Frame 25 sentences from the following table :

ಅವರು	ಬೆಳಿಗ್ಗೆ	ಸ್ಕೂಲಿಗೆ	ಬನ್ನಿ
ನಾನು	ನಾಳೆ	ಮನೆಗೆ	ಬರಲಿ
ನೀವು	ಬೇಗ	ಹಾಸ್ಟೆಲಿಗೆ	ಹೋಗೋಣ
ನಾವು	ಇವತ್ತು	ತಿಂಡಿ	ಹೋಗಲಾ ?
ಸುನಿತ	ಮಧ್ಯಾಹ್ನ	ಪುಸ್ತಕ	ಹೊರಡೋಣವಾ
			ತಿನ್ನಲಿ
			ತಿನ್ನಿ

V Match the following :

A	B
ಅವಳು	ಸಿನಿಮಾಕ್ಕೆ ಹೋಗೋಣ.
ನಾನು	ಕಾಫಿ ಕುಡಿ
ನೀವು	ಹಾಡು ಹೇಳಲಿ
ನಾವು	ನಿಮ್ಮ ಮನೆಗೆ ಬರಲಾ ?
ನೀನು	ಕೆಲಸ ಮಾಡಿ

VI Use the following verbs in your own sentences :

1)	ಹೋಗಿ	2)	ತರೋಣ
3)	ನೋಡಲಿ	4)	ಕುಡಿಯಲಾ ?
5)	ಬನ್ನಿ	6)	ಹೊರಡು
7)	ತಿನ್ನೋಣ	8)	ಬರಲಿ
9)	ಹೋಗೋಣವಾ ?	10)	ಮಾಡು

VII Write about arrangements for a picnic to Krishnarajasagar based on the model of the lesson.

VOCABULARY :

ಅರೆ—half

ಆಗು—to become

ಆಗಲಿ—all right, let it be

ಆಮೇಲೆ—afterwards

ಇರು—to be, to wait

ಎಲ್ಲಿ- -where

ಏನಾದರೂ—anything

ಕುಡಿ—drink

ಕೋಡುಬಳೆ—a crisp eatable of bangle shape

ಗಂಟೆ—the hour, only use in the expression of time telling.

ತೆಗೊಂಬಾ—bring

ತಾ—bring

ತಿನ್ನು—to eat

ತಿಂಡಿ—eatables, snacks

ನಾಳೆ—tomorrow

ನೋಡು—see, look

ಪುಳಿಯೋಗರೆ—tamarind rice

ಬಾ—come

ಬೆಳಗ್ಗೆ—morning

ಬೇಗ—early, soon, quick

ಬೇರೆಯವರು—others

ಮಾಡು—do

ಮುಕ್ಕಾಲು—$\frac{3}{4}$

ಸಂಗಮ—confluence

ಶ್ರೀರಂಗಪಟ್ಟಣ—a historical place, twelve miles from Mysore on Bangalore–Mysore road.

ಹಾಡು—song, sing

ಹತ್ತಿರ—near

ಹೇಳು—tell, say

ಹೊರಡು—start the journey

ಹೋಗು—go

GRAMMAR NOTES :

1. Imperative, permissive and hortative forms of verbs are introduced in this lesson. Verb root itself is used as imperative second person singular.

Ex : ನೀನು ಬಾ

ನೀನು ಹೋಗು

The imperative plural form is obtained by

1. dropping the verb final–u and adding –i ;

Ex : ಹೋಗು + ಇ = ಹೋಗಿ

ನೋಡು + ಇ = ನೋಡಿ

2. by adding –iri if the root ends in –i or –e.

Ex : ಕುಡಿ + ಇರಿ = ಕುಡಿಯಿರಿ

ಕರೆ + ಇರಿ = ಕರೆಯಿರಿ

The addition of –y– before adding –iri is governed by the rule given in the lesson 5.

2. Permissive is formed by adding –ali to the verb. The subject may be either in third person or in first person singular. For the latter the sentence is always be an interrogative one.

Ex : ಹೋಗು + ಅಲಿ = ಅವನು ಹೋಗಲಿ

ಕುಡಿ + ಅಲಿ = ಅವರು ಕುಡಿಯಲಿ

Ex : For First person :

ನಾನು ಏನು ಮಾಡಲಿ ?

ನಾನು ಏನು ಕುಡಿಯಲಿ ?

In order to make entreatise giving 'may I ....' we add first the suffix **–al** to the verb root. Which will then be followed by the interrogative marker –aa. Note that addition of **–al** and –aa is permissable only when the subject is in first person singular.

Ex : ನಾನು + ಮಾಡು + ಅಲ್ + ಆ ?

ನಾನು ಮಾಡಲಾ ?

Compare the following sentences :

ನಾನು ಏನು ಮಾಡಲಿ ?	'What do I do ?'
ನಾನು ಮಾಡಲಾ ?	'May I do'

3. Hortative form is obtained by adding –oona to the verb : The subject is always in first person plural.

Ex : ಹೋಗು + ಓಣ = ನಾವು ಹೋಗೋಣ.

ಕುಡಿ + ಓಣ = ನಾವು ಕುಡಿಯೋಣ.

When the interrogative suffix –aa is added to hortative form it takes –V– as increment.

Ex : ಹೋಗೋಣವಾ ? shall we go ?

4. Note the addressive tern –oo in baaroo. This is used to address familiar persons, youngsters and inferiors. - oo is for males and –ee for females.

Ex : ರಾಮು ಬಾರೋ. ಸೀತಾ ಬಾರೇ

5. ಹತ್ತಿರ with 'Person or Place' in genitive has the sense 'to'.

Ex : ನನ್ನ ಮನೆಯ ಹತ್ತಿರ ಬಾ, 'Come to my house'

ಹತ್ತಿರ also used for having something in ones Possession

Ex : ನನ್ನ ಹತ್ತಿರ ಪುಸ್ತಕ ಇದೆ 'I have book with me'

6. Time telling :

The question ಎಷ್ಟು ಗಂಟೆಗೆ ?

In Kannada the designated hour is given by the number plus the word ಗಂಟೆ in dative

Ex : ಎಂಟು ಗಂಟೆಗೆ......at 8'o clock.

The fractions ಕಾಲು quarter ಅರೆ 'half' and ಮುಕ್ಕಾಲು 'three forths' are used to designate 15, 30 and 45 minutes past the hour respectively.

Ex : ಮೂರು + ಕಾಲು = ಮೂರುಕ್ಕಾಲು

ಮೂರು + ಅರೆ = ಮೂರೂವರೆ

ಮೂರು + ಮುಕ್ಕಾಲು = ಮೂರುಮುಕ್ಕಾಲು

Note the Sandhi changes in the above examples.

The following table gives the imperative, permissive and hortative forms:

	Person	Inperative	Permissive	Horative
First	Singular		ಅಲಾ ? ಮಾಡಲಾ ಅಲಿ. ಏನು ಮಾಡಲಿ ?	
	Plural			ಮಾಡೋಣ
Second	Singular	verb root ಮಾಡು		
	Plural	–ಇ ಇರಿ ಮಾಡಿ. ಕುಡಿಯಿರಿ		
Third			ಅಲಿ ಮಾಡಲಿ	

UNIT 4

Review LESSON 4

CONVERSATION BETWEEN FREINDS

DIALOGUE

ಭಾಸ್ಕರನ್—ರಾಜಣ್ಣ, ಇವತ್ತು ಸಾಯಂಕಾಲ ನಾವು ರೈಲ್ವೆ ಸ್ಟೇಷನ್‌ಗೆ ಹೋಗೋಣವಾ ?

ರಾಜಣ್ಣ—ಆಗಲಿ, ಹೋಗೋಣ.

ಭಾಸ್ಕರನ್—ಸಾಯಂಕಾಲ ಎಷ್ಟು ಹೊತ್ತಿಗೆ ಹೋಗೋಣ ?

ರಾಜಣ್ಣ—ಸುಮಾರು ನಾಲ್ಕೂಕಾಲು ಗಂಟೆಗೆ ಹೋಗೋಣ ಭಾಸ್ಕರನ್.

ಭಾಸ್ಕರನ್—ನಾನು ನಾಲ್ಕು ಗಂಟೆಗೆ ಎಲ್ಲಿಗೆ ಬರಲಿ ? ನಿಮ್ಮ ಮನೆಯ ಹತ್ತಿರ ಬರಲೋ ಹದಿನಾಲ್ಕನೇ ಮೆಯಿನ್ ಬಸ್ ಸ್ಟಾಪ್ ಹತ್ತಿರ ಬರಲೋ ?

ರಾಜಣ್ಣ—ನೀವು ನಮ್ಮ ಮನೆ ಹತ್ತಿರಾನೇ ಬನ್ನಿ.

ಭಾಸ್ಕರನ್—ನಿಮ್ಮ ಮನೆಗೆ ಎಷ್ಟು ಹೊತ್ತಿಗೆ ಬರಲಿ ? ಮೂರುಮುಕ್ಕಾಲು ಗಂಟೆಗೆ ಬರಲಾ ?

ರಾಜಣ್ಣ—ಮೂರು ಮುಕ್ಕಾಲು ಗಂಟೆಗಿಂತ ಮೊದಲೇ ಬನ್ನಿ, ಮೂರುವರೆಗೆ ಮನೆ ಬಿಡೋಣ.

ಭಾಸ್ಕರನ್—ನಿಮ್ಮ ಸ್ನೇಹಿತ ಮಾಧೂಗೆ ಎಷ್ಟು ಹೊತ್ತಿನವರೆಗೆ ಆಫೀಸು ?

ರಾಜಣ್ಣ—ಅವನಿಗೆ ಐದು ಗಂಟೆ ತನಕ. ನಾವು ಮೊದಲು ಮಾಧು ನೋಡೋಣ. ಆಮೇಲೆ ನಿಮ್ಮ ಊರಿಗೆ ಟಿಕೆಟ್ ಬುಕ್ ಮಾಡೋಣ.

ಭಾಸ್ಕರನ್—ಹಾಗೇ ಆಗಲಿ.

TEST PAPER

I Write the corresponding case marker :

ಅವಳು + ——— = ———

ನಾವು + ——— = ———

ಗಂಡು + ——— = ———

ಹೊಸದು + ——— = ———

ನಾಲ್ಕು + ——— = ———

ತೋಟ + ——— = ———

ಹೂವು + ——— = ———

ಕೋಡುಬಳೆ + ——— = ———

ಮಗು + ——— = ———

ಅದು + ——— = ———

II Combine the following sentences using the comparative marker.

1) ನನಗೆ ಹತ್ತು ವರ್ಷ.
ರಾಮುನಿಗೆ ಹನ್ನೆರಡು ವರ್ಷ.

2) ಬೆಂಗಳೂರು ದೊಡ್ಡ ಪಟ್ಟಣ.
ಮೈಸೂರು ಚಿಕ್ಕ ಪಟ್ಟಣ.

3) ವೆಂಕಟರಾಘವನ್ ಒಳ್ಳೆಯ ಬೌಲರ್.
ಪ್ರಸನ್ನ ಇನ್ನೂ ಒಳ್ಳೆಯ ಬೌಲರ್.

4) ನಮ್ಮ ಊರಿನ ಇಂಜಿನಿಯರಿಂಗ್ ಕಾಲೇಜು ಚಿಕ್ಕದು.
ಈ ಊರಿನ ಇಂಜಿನಿಯರಿಂಗ್ ಕಾಲೇಜು ದೊಡ್ಡದು.

5) ಬದನೆಕಾಯಿಗೆ ಬೆಲೆ ಹೆಚ್ಚು.
ಹುರುಳೀಕಾಯಿಗೆ ಬೆಲೆ ಕಡಿಮೆ.

III Write the Imperative plural, Permissive, Hortative **forms** of the verbs and use them in your own sentences.

1) ಹೋಗು
2) ಬಾ
3) ತಿನ್ನು
4) ಮಾಡು
5) ನೋಡು

IV Fill in the blanks using the appropriate **Imperative,** Permissive and Hortative forms :

1) ನಾನು ಸಾಯಂಕಾಲ ನಿಮ್ಮ ಮನೆಗೆ ——— ?
2) ಅವರು ಈಗ ಊಟ ———
3) ನೀವು ದಯವಿಟ್ಟು ಆಚೆ ———
4) ನಾವು ಈಗ ಲೈಬ್ರರಿಗೆ ———
5) ಅವನು ಸಾಯಂಕಾಲ ಈ ಕೆಲಸ ———

V Choose the appropriate word given in the bracket **and fill** in the blank.

(ಒಳ್ಳೆಯವರು, ಓದೋಣ, ಅವರಿಗೆ, ನಾನು, ಹೋಗಲಿ)

1) ———ನಾಲ್ಕು ಜನ ಹೆಣ್ಣು ಮಕ್ಕಳು
2) ನನ್ನ ಅಳಿಯ ತುಂಬಾ ———

3) ——— ನಿಮ್ಮ ರೂಮಿಗೆ ಬರಲಾ?

4) ನಾವು ಸಾಯಂಕಾಲ ನಾಕ———

5) ಅವರು ಈಗ ಊರಿಗೆ ———

VOCABULARY :

ಕಾಲು—quarter, leg

ತನಕ
ವರೆಗೆ } —till, upto

ಬಿಡು—to leave

ಸಾಯಂಕಾಲ—evening

ಹೊತ್ತು—time

UNIT 5

LESSON 18

FRIEND'S MEET

DIALOGUE

ರಾಜು—ನಮಸ್ಕಾರ ರಾಮು	Namaskara Ramu.
ರಾಮು—ನಮಸ್ಕಾರ, ಯಾರು ರಾಜೂನಾ ? ಏನು ಸಮಾಚಾರ? ಹೇಗೆ ಇದ್ದೀಯಾ?	Namaskara, Isn't it Raju ? What is the news ? How are you ?

ರಾಜು—ಸಮಾಚಾರ ಎಲ್ಲಾ ಆಮೇಲೆ. ಇದೇನು ನೀನು ಇಲ್ಲಿ?	I will tell you the news later. How is it that you are here.?
ರಾಮು—ಈಗ ನಾನು ಇದೇ ಊರಿನಲ್ಲಿ ಇದ್ದೀನಿ.	Now I am staying here in Mysore only.
ರಾಜು—ಹಾಗಾ? ನಿಮ್ಮ ಮನೆ ಎಲ್ಲಿ ಇದೆ?	Is it so? Where is your house?
ರಾಮು—ನಮ್ಮ ಮನೆ ಸರಸ್ವತಿಪುರಂನಲ್ಲಿ ಇದೆ.	My house is in Saraswatipuram.
ರಾಜು—ಮಕ್ಕಳೆಲ್ಲಾ ಎಲ್ಲೆಲ್ಲಿ ಇದ್ದಾರೆ?	Where (in what places) are your children?
ರಾಮು—ಮೊದಲನೆಯವನು ಬೊಂಬಾಯಿನಲ್ಲಿ ಇದ್ದಾನೆ. ಎರಡನೆಯವಳು ಮಗಳು. ಅವಳು ದೆಹಲಿಯಲ್ಲಿ ಇದ್ದಾಳೆ. ಇನ್ನೊಬ್ಬ ಇಲ್ಲೀ ನನ್ನ ಜೊತೇನೇ ಇದ್ದಾನೆ.	The first son is in Bombay. The Second one is daughter. She is in Delhi. Another son is with me.
ರಾಜು—ನಿನ್ನ ಜೊತೆ ಇದ್ದಾನಲ್ಲಾ ಆ ಮಗ ಏನು ಕೆಲಸದಲ್ಲಿ ಇದ್ದಾನೆ?	The son who is staying with you, what work is he doing?
ರಾಮು—ಅವನು ಇಂಜಿನಿಯರ್. ನಿನಗೆ ಎಷ್ಟು ಜನ ಮಕ್ಕಳು ಇದ್ದಾರೆ?	He is an engineer. How many children do you have?
ರಾಜು—ನನಗೆ ಇಬ್ಬರು. ಒಂದು ಗಂಡು ಒಂದು ಹೆಣ್ಣು.	I have two. One is a boy. Another is a girl.
ರಾಮು—ಅದೇ ಮನೇಲಿ ಇದ್ದೀರಿ ತಾನೆ?	Are you still in the same house?
ರಾಜು—ಇಲ್ಲ. ಈಗ ಆ ಮನೇಲಿ ಇಲ್ಲ. ಅಲ್ಲೇ ಐದನೇ ಮೇಯಿನ್‌ನಲ್ಲಿ ಬೇರೆ ಮನೆಯಲ್ಲಿ ಇದ್ದೀವಿ.	No. Now we are not in that house We are in the another house. In the same place : 5th main.
ರಾಮು—ಮನೆ ಸ್ವಂತಾನಾ?	Is it your own house?
ರಾಜು—ಹೌದು. ಸ್ವಂತದ್ದು.	Yes. Own house.
ರಾಮು—ಮನೆ ದೊಡ್ಡದಾಗಿ ಇದೆಯಾ?	**Is it a big house?**

ರಾಜು—ಸುಮಾರು ದೊಡ್ಡದಾಗಿ ಇದೆ. ಮೂರು ದೊಡ್ಡ ರೂಮುಗಳು ಇವೆ. ಒಂದು ವರಾಂಡ ಇದೆ. ಹಾಲು, ಅಡಿಗೆಮನೆ, ಬಚ್ಚಲು ಮನೆ ಮತ್ತು ಊಟದ ಮನೆ ಎಲ್ಲಾ ಇವೆ. ಒಂದು ಸಲ ಮನೆಗೆ ಬಾ.	Quite big. There are three big bed rooms; there is one veranda, hall. kitchen, bathroom and dining hall. come some time to my house.
ರಾಮು—ಆಗಲಿ ನಿನ್ನ ಮನೆಗೆ ಗುರುತು ಏನು ? ಮನೆ ಹಿಂದೆ ಮುಂದೆ ಮರಗಳು ಏನಾದರೂ ಇದೆಯಾ ?	O.K. What distinginshing feature has your house ? Are there any trees in front or behind of your house.
ರಾಜು—ನಮ್ಮದು ಮೂಲೆ ಮನೆ. ಎಡಗಡೆ ಒಂದು ಅಂಗಡಿ ಇದೆ. ಹಿಂದೆ ಹಿತ್ತಿಲಲ್ಲಿ ಎರಡು ದೊಡ್ಡ ಮಾವಿನ ಮರಗಳು ಇವೆ. ಮುಂದೆ ನಾಲ್ಕು ತೆಂಗಿನ ಮರ ಇದೆ. ಮುಂದುಗಡೆ ಒಂದು ಪಕ್ಕಕ್ಕೆ ದಾಸವಾಳದ ಗಿಡ ಇದೆ.	Ours is a corner house. There is a shop on the left side. There are two big mango trees in the backyard. There are four coconut trees in front. There is a hibiscus plant to one side of the front.
ರಾಮು—ಮನೆ ಒಳ್ಳೆ ಜಾಗದಲ್ಲಿ ಇದೆಯಾ ?	Is the house in a good location ?
ರಾಜು—ಹೌದು. ಒಳ್ಳೆಯ ಜಾಗದಲ್ಲಿ ಇದೆ.	Yes. It is in a good location.
ರಾಮು—ಒಳ್ಳೆಯದು. ಮತ್ತೆ ಯಾವಾಗ ನಮ್ಮ ಭೇಟಿ ?	Fine. When shall we meet again ?
ರಾಜು—ಇನ್ನ ನಿನ್ನ ಭೇಟಿ ನಮ್ಮ ಮನೆಯಲ್ಲೇ. ನಾಳೇನೇ.	We will meet in my house tomorrow it sef.
ರಾಮು—ಈಗೇನಯ್ಯಾ ಗೃಹಪ್ರವೇಶದ ಊಟ ?	What ! Now you are giving the the meal for house warming ceremony ?
ರಾಜು—ಯಾವುದೋ ಒಂದು. ಒಟ್ಟಿನಲ್ಲಿ ನಾಳೆ ನಿನ್ನ ಊಟ ನಮ್ಮ ಮನೆಯಲ್ಲೇ.	Something like that. Tomorrow you will have food in my house.
ರಾಮು—ಸರಿ.	Atright.

DRILLS :

I Repetition Drill :

a) 1) ಸಮಾಚಾರ ಎಲ್ಲಾ ಆಮೇಲೆ
2) ಕೆಲಸ ಎಲ್ಲಾ ಆಮೇಲೆ.
3) ಊಟ ಎಲ್ಲಾ ಆಮೇಲೆ.

b) 1) ನಾನು ಎಲ್ಲಿ ಇದೀನಿ ?
2) ನಾವು ಎಲ್ಲಿ ಇದೀವಿ ?
3) ನೀನು ಎಲ್ಲಿ ಇದೀಯೆ ?
4) ನೀವು ಎಲ್ಲಿ ಇದೀರಿ ?
5) ಅವನು ಎಲ್ಲಿ ಇದಾನೆ ?
6) ಅವಳು ಎಲ್ಲಿ ಇದಾಳೆ ?
7) ಅವರು ಎಲ್ಲಿ ಇದಾರೆ ?
8) ಅದು ಎಲ್ಲಿ ಇದೆ ?
9) ಅವು ಎಲ್ಲಿ ಇವೆ ?

c) 1) ನಾನು ಇಲ್ಲಿ ಇದೀನಿ.
2) ನಾವು ಇಲ್ಲಿ ಇದೀವಿ.
3) ನೀನು ಅಲ್ಲಿ ಇದೀಯೆ.
4) ನೀವು ಅಲ್ಲಿ ಇದೀರಿ.
5) ಅವನು ಅಲ್ಲಿ ಇದಾನೆ.
6) ಅವಳು ಅಲ್ಲಿ ಇದಾಳೆ.
7) ಅವರು ಅಲ್ಲಿ ಇದಾರೆ.
8) ಅದು ಅಲ್ಲಿ ಇದೆ.
9) ಅವು ಅಲ್ಲಿ ಇವೆ.

d) 1) ಸೀತಮ್ಮ ಎಲ್ಲಿ ಇದಾರೆ ?
2) ರಾಜಾರಾಯರು ಎಲ್ಲಿ ಇದಾರೆ ?

4) ಶಾಲಿನಿಗಿಂತ ಮಾಲಿನಿ ——— (tall)

5) ರಾಜು ತುಂಬಾ ——— (dwarf)

6) ಉಷನೇ ಬೇರೆ ——— (type)

7) ಸೀತೆ ತೀರಾ ——— (black)

8) ಕಮಲ ——— ಹುಡುಗಿ. (beautiful)

IV Combine the following using comparative form :

1) ಈ ಕವನ ದೊಡ್ಡದು.
ಆ ಕವನ ಚಿಕ್ಕದು.

2) ಸವಿತ ಎತ್ತರ,
ಕವಿತ ಕುಳ್ಳ.

3) 'ವಂಶವೃಕ್ಷ' ದೊಡ್ಡ ಕಾದಂಬರಿ.
'ದಾಟು' ಇನ್ನೂ ದೊಡ್ಡ ಕಾದಂಬರಿ.

4) ಸುಶೀಲೆಗೆ ಹದಿನಾರು ವರ್ಷ.
ಶಾಮಲೆಗೆ ಹನ್ನೆರಡು ವರ್ಷ.

5) ನನ್ನದು ನಾಲ್ಕನೆಯ ಕ್ಲಾಸು.
ಅವನದು ಐದನೆಯ ಕ್ಲಾಸು.

V Write sentences following the model to compare prices of the items given in the table :

Quantity	Item	Price
ಒಂದು ಕೆ. ಜಿ.	ಟೊಮೊಟೊ	ಒಂದು ರೂಪಾಯಿ ಇಪ್ಪತ್ತು ಪೈಸೆ.
ಎರಡು	ಫ್ರಾಕ್	ಇಪ್ಪತ್ತು ರೂಪಾಯಿ.
ಮೂರು	ತೆಂಗಿನಕಾಯಿ	ಮೂರು ರೂಪಾಯಿ.
ಒಂದು ಕೆ. ಜಿ.	ಬದನೆಕಾಯಿ	ಒಂದು ರೂಪಾಯಿ.
ಒಂದು	ಶರ್ಟು	ಹದಿನೈದು ರೂಪಾಯಿ.
ಒಂದು	ಸೀರೆ	ನಲವತ್ತೈದು ರೂಪಾಯಿ.
ಒಂದು	ಪಂಚೆ	ಮೂವತ್ತು ರೂಪಾಯಿ.

GRAMMAR NOTES :

1. Comparative marker –inta is introduced in this lesson to compare the nouns. By adding –inta to the dative form of the noun comparative construction can be obtained.

ನನಗೆ + ಇಂತ = ನನಗಿಂತ

ನನಗಿಂತ ಅವನು ಕೆಟ್ಟವನು—

ಆ ಮರಕ್ಕಿಂತ ಈ ಮರ ಚಿಕ್ಕದು

2. Adjectives derived from the nouns are introduced in this lesson. By adding –aada to the adjectives these can be obtained.

ಸುಂದರ + ಆದ = ಸುಂದರವಾದ

ಕಮಲ ನನಗಿಂತ ಸುಂದರವಾದ ಹುಡುಗಿ

Note, in the above sentence the quality which is being compared takes no Comparative marker, as in English 'more' or suffix '–er' if it is given as an adjective. If it is given as a noun it will of course require a qualififying ಹೆಚ್ಚು or ಕಡಿಮೆ.

Ex : ಕಮಲಳ ಸೌಂದರ್ಯ ನನಗಿಂತ ಹೆಚ್ಚು.

LESSON 17

PLAN TO GO ON A PICNIC

DIALOGUE

ರವಿ—ಸರ್, ನಾಳೆ ನಾವೆಲ್ಲ ಶ್ರೀರಂಗಪಟ್ಟಣಕ್ಕೆ ಪಿಕ್‌ನಿಕ್ ಹೋಗೋಣವಾ ?	Sir, shall we all go for a picnic tomorrow to Srirangapattana ?
ಅಧ್ಯಾಪಕ—ಆಗಲಿ, ಹೋಗೋಣ.	O.K. Let us go.
ರವಿ—ಎಷ್ಟು ಗಂಟೆಗೆ ಹೊರಡೋಣ ಸರ್ ?	What time shall we start, sir ?

ಅಧ್ಯಾಪಕ—ಬೆಳಿಗ್ಗೆ ಎಂಟು ಗಂಟೆಗೆ ಹೊರಡೋಣ.	Let us start at 8.00 clock in the morning.
ರವಿ—ನಾವು ಬೆಳಿಗ್ಗೆ ನಿಮ್ಮ ಮನೆ ಹತ್ತಿರ ಬರೋಣವೋ ಬಸ್ ಸ್ಟ್ಯಾಂಡಿಗೆ ಬರೋಣವೋ ?	Shall we come to your house in the morning or to the bus stand ?
ಅಧ್ಯಾಪಕ—ರವಿ, ನೀನೊಬ್ಬ ಮಾತ್ರ ಏಳೂವರೆಗೆ ಮನೇ ಹತ್ತಿರ ಬಾ. ಬೇರೆಯವರು ಏಳೂ ಮುಕ್ಕಾಲು ಗಂಟೆಗೆ ಬಸ್‌ಸ್ಟ್ಯಾಂಡ್ ಹತ್ತಿರ ಬರಲಿ.	Ravi, just you alone come to my house at 7–30 a.m. Let others come to bus stand at 7.45 a.m.
ರವಿ—ನಾವೆಲ್ಲಾ ಏನು ತಿಂಡಿ ತರೋಣ ಸರ್?	What food shall we all brin g Sir ?
ಅಧ್ಯಾಪಕ—ತಿಂಡೀನಾ ? ಸ್ವಲ್ಪ ಇರು. ಏ ವರದರಾಜ ಬಾರೋ ಇಲ್ಲಿ.	Eatables ? Wait a minute ! Hey, Varadaraja come here.
ವರದರಾಜ—ಏನು ಸಾರ್ ?	What sir ?
ಅಧ್ಯಾಪಕ—ನೋಡು. ನಾಳೆ ನೀನು ಪುಳಿಯೋಗರೆ ತಗೊಂಬಾ. ಸುಮಾನ ಪೇಡ ತರಲಿ. ಮೃದುಲಾ ಮೈಸೂರು ಪಾಕ್ ತರಲಿ.	See, you bring tamarind rice tomorrow. Let Suma bring Peda and Mrudula bring Mysorepack.
ರವಿ—ನಾನು ಏನು ತರಲಿ ಸಾರ್ ?	What shall I bring sir ?
ಅಧ್ಯಾಪಕ—ನೀನೇ ಹೇಳು.	You yourself say.
ರವಿ—ಕೋಡುಬಳೆ ತರಲಾ ಸಾರ್ ?	Shall I bring kodubale sir ?
ಅಧ್ಯಾಪಕ—ಓಹೋ ತೊಗೊಂಬಾ. ನೀವೆಲ್ಲಾ ಏನಾದರೂ ತನ್ನಿ.	Oh, yes, bring it. You all bring somethin else.
ರವಿ—ಎಲ್ಲಿ ಎಲ್ಲಿ ತಿಂಡಿ ತಿನ್ನೋಣ ಸಾರ್ ?	Where shall we eat them sir ?
ಅಧ್ಯಾಪಕ—ಸಂಗಮದ ಹತ್ತಿರ ತಿನ್ನೋಣ.	Let us eat at the Confluence (Sangam).
ರವಿ—ಕಾಫಿಗೆ ಏನು ಮಾಡೋಣ ?	What shall we do for coffee ?

ಅಧ್ಯಾಪಕ—ಅಲ್ಲೇ ಎಲ್ಲಾದರೂ ಕುಡಿಯೋಣ. — Let us drink it somewhere theres.

ರವಿ—ಈಗ ಎಷ್ಟು ಗಂಟೆ ಸಾರ್ ? — What time is it Sir ?

ಅಧ್ಯಾಪಕ—ಈಗ ಮೂರು ಗಂಟೆ — Now, it is three o'clock.

ರವಿ—ನಾವಿನ್ನು ಬರೋಣವಾ ಸಾರ್. ? — Shall we take leave of you Sir ?

ಅಧ್ಯಾಪಕ—ಇರಿ. ಈ ಕಾಫಿ ಕುಡೀರಿ. ಆಮೇಲೆ ಹೋಗಿ. — Wait. Drink this Coffee, then go.

DRILLS :

I Repetition Drill :

a)
1) ನಾವೆಲ್ಲ ಶ್ರೀರಂಗಪಟ್ಟಣಕ್ಕೆ ಹೋಗೋಣವಾ ?
2) ನಾವು ಬೆಳಗ್ಗೆ ಎಂಟು ಗಂಟೆಗೆ ಹೊರಡೋಣವಾ ?
3) ನಾವು ನಿಮ್ಮ ಮನೆಗೆ ಬರೋಣವಾ ?
4) ನಾವು ಬಸ್ ಸ್ಟ್ಯಾಂಡ್ ಹತ್ತಿರ ಇರೋಣವಾ ?
5) ನಾವು ತಿಂಡಿ ತರೋಣವಾ ?
6) ನಾವು ಶ್ರೀರಂಗಪಟ್ಟಣ ನೋಡೋಣವಾ ?
7) ನಾವು ತಿಂಡಿ ತಗೊಂಡು ಬರೋಣವಾ ?
8) ನಾವು ಸಂಗಮದ ಹತ್ತಿರ ತಿಂಡಿ ತಿನ್ನೋಣವಾ ?
9) ನಾವು ಕಾಫಿ ಮಾಡೋಣವಾ ?
10) ನಾವು ಕ್ಯಾಂಟೀನಿನಲ್ಲಿ ಕಾಫಿ ಕುಡಿಯೋಣವಾ ?
11) ನಾವು ಕಥೆ ಹೇಳೋಣವಾ ?

b)
1) ಆಗಲಿ ಹೋಗೋಣ.
2) ನಾವು ಬೆಳಗ್ಗೆ ಹೊರಡೋಣ.
3) ನಾವು ಬಸ್‌ಸ್ಟ್ಯಾಂಡಿಗೆ ಬರೋಣ.
4) ನಾವು ಬಸ್ ಸ್ಟ್ಯಾಂಡಿನ ಹತ್ತಿರ ಇರೋಣ.
5) ನಾವು ತಿಂಡಿ ತಿನ್ನೋಣ.

6) ನಾವು ದರಿಯಾದೌಲತ್ ನೋಡೋಣ.

7) ನಾವು ತುಂಬ ತಿಂಡಿ ತಿನ್ನೋಣ.

8) ನಾವು ಹಣ್ಣು ತಗೊಂಡು ಬರೋಣ.

9) ನಾವು ಕೆಲಸ ಮಾಡೋಣ.

10) ನಾವು ಕಾಫಿ ಕುಡಿಯೋಣ.

c) 1) ನೀನು ಮನೆಗೆ ಬಾ.

2) ನೀನು ಕ್ಲಾಸಿಗೆ ಹೋಗು.

3) ನೀನು ಊರಿಗೆ ಹೊರಡು.

4) ನೀನು ಸ್ವಲ್ಪ ಇರು.

5) ನೀನು ತಿಂಡಿ ತಾ.

6) ನೀನು ಸಿನಿಮಾ ನೋಡು.

7) ನೀನು ಹಣ್ಣು ತಿನ್ನು.

8) ನೀನು ಕೆಲಸ ಮಾಡು.

9) ನೀನು ಕೋಡುಬಳೆ ತೊಗೊಂಡು ಬಾ.

10) ನೀನು ಕಾಫಿ ಕುಡಿ.

11) ನೀನು ಕಥೆ ಹೇಳು.

d) 1) ನೀವು ಬನ್ನಿ.

2) ನೀವು ಮನೆಗೆ ಹೋಗಿ.

3) ನೀವು ಊರಿಗೆ ಹೊರಡಿ.

4) ನೀವು ತಿಂಡಿ ತಿನ್ನಿ.

5) ನೀವು ಇಲ್ಲೇ ಇರಿ.

6) ನೀವು ಹಣ್ಣು ತಿನ್ನಿ.

7) ನೀವು ಕಾಫಿ ಕುಡಿಯಿರಿ.

e 1) ಅವರು ಬಸ್ ಸ್ಟ್ಯಾಂಡಿಗೆ ಹೋಗಲಿ.

2) ಅವರು ಬೆಳಿಗ್ಗೆ ಹೊರಡಲಿ.

3) ಅವಳು ಮನೆಗೆ ಬರಲಿ.

4) ಇವರು ಸ್ಕೂಲ್ ಹತ್ತಿರ ಇರಲಿ.
5) ಅವನು ತಿಂಡಿ ತರಲಿ.
6) ಇವಳು ಸಿನಿಮಾ ನೋಡಲಿ.
7) ಇವನು ಕಾಫಿ ತಗೊಂಡು ಬರಲಿ.
8) ಇವರು ಕೆಲಸ ಮಾಡಲಿ.
9) ನಾಯಿ ಕಾಫಿ ಕುಡಿಯಲಿ.
10) ಮಗು ಹಣ್ಣು ತಿನ್ನಲಿ.
11) ಅವಳು ಕಥೆ ಹೇಳಲಿ.

f) 1) ವರದರಾಜ, ಬಾರೋ.
2) ರವೀ, ಮನೆಗೆ ಹೋಗೋ,
3) ರಾಜೇಶ, ಊರಿಗೆ ಹೊರಡೋ.
4) ಸತೀಶ, ಸ್ಕೂಲ್ ಹತ್ತಿರ ಇರೋ.
5) ಚಂದ್ರೂ, ಆ ಸಿನಿಮಾ ನೋಡೋ.
6) ರಮೇಶ, ಬೇಗ ತಿಂಡಿ ತಿನ್ನೋ.
7) ಹೇಮಂತ, ಕಾಫಿ ಕುಡಿಯೋ.
8) ಲೋ ಬಾಬು, ಕಾಫಿ ಮಾಡೋ.
9) ಅವಿನಾಶ್, ಕಥೆ ಹೇಳೋ.

g) 1) ನಾನು ಏನು ತರಲಿ ಸಾರ್ ?
2) ನಾನು ಹೇಗೆ ಇರಲಿ ?
3) ನಾನು ಏನು ತಿನ್ನಲಿ ?
4) ನಾನು ಏನು ಮಾಡಲಿ ?

h) 1) ನಾನು ಮನೆಗೆ ಹೋಗಲಾ ?
2) ನಾನು ಊರಿಗೆ ಹೊರಡಲಾ ?
3) ನಾನು ನಿಮ್ಮ ಕ್ಲಾಸಿಗೆ ಬರಲಾ ?
4) ನಾನು ತಿಂಡಿ ತರಲಾ ?

*

5) ನಾನು ಇಲ್ಲೇ ಇರಲಾ ?

6) ನಾನು ಸಿನಿಮಾ ನೋಡಲಾ ?

7) ನಾನು ಕಾಫಿ ಕುಡಿಯಲಾ ?

8) ನಾನು ತಿಂಡಿ ತಿನ್ನಲಾ ?

i) 1) ನಾವು ಎಲ್ಲಿ ಕಾಫಿ ಕುಡಿಯೋಣ ?

2) ನಾನು ಎಲ್ಲಿ ದುಡ್ಡು ತರಲಿ ?

3) ನಾವು ಎಲ್ಲಿ ಕೆಲಸ ಮಾಡೋಣ ?

j) 1) ಎಲ್ಲಾದರೂ ಕಾಫಿ ಕುಡಿಯೋಣ.

2) ಎಲ್ಲಾದರೂ ಕೆಲಸ ಮಾಡೋಣ.

3) ಎಲ್ಲಾದರೂ ಹಣ ತರೋಣ ?

Expansion Drill :

Model : ನೀವು ಹೋಗಿ.

(ಮನೆ)

ನೀವು ಮನೆಗೆ ಹೋಗಿ.

(ಅವರು)

ನೀವು ಅವರ ಮನೆಗೆ ಹೋಗಿ

(ಈಗ)

ನೀವು ಈಗ ಅವರ ಮನೆಗೆ ಹೋಗಿ.

Expand :

1) ನೀವು ಬನ್ನಿ.

(ಮನೆ)

____

(ನಾವು)

____

(ನಾಳೆ ಬೆಳಿಗ್ಗೆ)

____

2) ನಾವು ಹೋಗೋಣ.

(ಮಧ್ಯಾಹ್ನ)

____

(ಭಾನುವಾರ)

____

(ಮುಂದಿನ)

____

3) ನಾನು ಬರಲಾ ?

(ಮಂಗಳವಾರ)

____

(ಮನೆ)

____

(ನೀನು)

____

4) ಅವಳು ತರಲಿ.

(ಹುಡುಗ)

____

(ಮಾವ)

____

(ಮಗು)

____

(ನಾವು)

____

5) ನೀನು ಹೋಗು.

(ಇವತ್ತು)

____

(ಮಧ್ಯಾಹ್ನ 12 ಗಂಟೆ)

____

(ಮನೆ)

____

(ಅವರ)

____

III Transformation Drill :

a) Model : T : ನೀವು ಮನೆಗೆ ಬನ್ನಿ.

S : ನೀನು ಮನೆಗೆ ಬಾ.

1) ನೀವು ಶಾಲೆಗೆ ಹೋಗಿ.
2) ನೀವು ಊರಿಗೆ ಹೊರಡಿ.
3) ನೀವು ತಿಂಡಿ ತಿನ್ನಿ.
4) ನೀವು ಕಾಫಿ ಕುಡಿಯಿರಿ.
5) ನೀವು ನನ್ನ ಹತ್ತಿರ ಇರಿ.

b) Model : T : ನಾನು ನೀನು ಸ್ಕೂಲಿಗೆ ಹೋಗೋಣ.

S : ನಾನು ನೀನು ಸ್ಕೂಲಿಗೆ ಹೋಗೋಣವಾ ?

1) ನಾನು ನೀನು ಕಾಫಿ ಕುಡಿಯೋಣ.
2) ನಾವು ಕಥೆ ಹೇಳೋಣ.
3) ನಾವು ಇವತ್ತು ಒಂದು ಸಿನಿಮಾ ನೋಡೋಣ.

c) **Model :** T : ನೀವು ನಮ್ಮ ಮನೆಗೆ ಬನ್ನಿ.
ಅವನು

S : ಅವನು ನಮ್ಮ ಮನೆಗೆ ಬರಲಿ.

1) ನೀವು ತಿಂಡಿ ತಿನ್ನಿ.
ಅವಳು
____

2) ನಾವು ಕಥೆ ಹೇಳೋಣ.
ಅವರು
____

3) ನೀವು ಹಾಲು ಕುಡಿಯಿರಿ.
ಅದು
____

4) ನೀನು ಹಣ್ಣು ತಿನ್ನು.
ಅವು
____

5) ನಾನು ನೀನು ಸಿನಿಮಾ ನೋಡೋಣ.
ಅಮಿತ, ಅನಿತ
____

V Response Drill :

1) ನಾನು ಕೋಡುಬಳೆ ತರಲಾ ?
2) ನಾವು ಆಗ್ರಾಕ್ಕೆ ಹೋಗೋಣವಾ ?
3) ನಾನು ಯಾವ ಕೆಲಸ ಮಾಡಲಿ ?
4) ನಾವು ಯಾವ ತಿಂಡಿ ತಿನ್ನೋಣ ?
5) ನಾನು ಎಲ್ಲಿಗೆ ಹೋಗಲಿ ?
6) ನಾವು ಎಲ್ಲಿ ಕಾಫಿ ಕುಡಿಯೋಣ ?

EXERCISES

I Fill in the blanks using the suitable words :

1) ನೀನು ಒಂದು ಕಥೆ ——
2) ಅವರು ಈ ಕಾಫಿ ——
3) ನಾವು ಮನೆಗೆ——
4) ನೀವು ನಾಳೆ ನಮ್ಮ ಮನೆಗೆ ——
5) ನಾನು ಈಗ ಸಿನಿಮಾಕ್ಕೆ ——
6) ಅದು ಹಾಲು
7) ನಾನು ಹಳ್ಳಿಗೆ —— ?
8) ನಾವು ಶ್ರೀರಂಗಪಟ್ಟಣಕ್ಕೆ —— ?
9) ನೀನು ಕಾಫಿ——
10) ಅವಳು ಬೇಗ ಮನೆಗೆ ——

II Fill in the blanks using the Kannada epuivalents of the English words given in the brackets ?

1) ನಾನು ನಿಮ್ಮ ತೋಟದ ——ಇರಲಾ (near)
2) ನಾವು ಏನು —— - ತರೋಣ ? (eatables)
3) ಬೇಗ —— (come here)
4) ನಾವು —— ಕಾಫಿ ಕುಡಿಯೋಣ ? (where)
5) ನೀವು —— ತಿನ್ನಿ (something)
6) ರಜದ ದಿನ —— ಹೋಗೋಣ. (somewhere)
7) ಕಚೇರಿಗೆ —— ಬನ್ನಿ. (early)
8) ನೀನು ನಮ್ಮ ಮನೆಗೆ —— (come)
9) ನೀವು ಹಣ್ಣು —— (bring)
10) ನೀವು ತಿಂಡಿ —— (eat)

III Fill in the blanks making the appropriate changes **in the** words **given** in the brackets :

1) ಅವಳು ಮನೆಗೆ ———— (ಹೋಗು)
2) ನೀವು ಕಾಫಿ ———— (ಕುಡಿ)
3) ನಾನು ———— ? (ಬಾ)
4) ರವಿ ಕೋಡುಬಳೆ ———— (ತಿನ್ನು)
5) ನಾವು ಸಿನಿಮಾ ———— (ನೋಡು)
6) ನಾನು ಏನು ———— ? (ಮಾಡು)

IV Frame 25 sentences from the following table :

ಅವರು	ಬೆಳಿಗ್ಗೆ	ಸ್ಕೂಲಿಗೆ	ಬನ್ನಿ
ನಾನು	ನಾಳೆ	ಮನೆಗೆ	ಬರಲಿ
ನೀವು	ಬೇಗ	ಹಾಸ್ಟೆಲಿಗೆ	ಹೋಗೋಣ
ನಾವು	ಇವತ್ತು	ತಿಂಡಿ	ಹೋಗಲಾ ?
ಸುನಿತ	ಮಧ್ಯಾಹ್ನ	ಪುಸ್ತಕ	ಹೊರಡೋಣವಾ
			ತಿನ್ನಲಿ
			ತಿನ್ನಿ

V Match the following :

A	B
ಅವಳು	ಸಿನಿಮಾಕ್ಕೆ ಹೋಗೋಣ.
ನಾನು	ಕಾಫಿ ಕುಡಿ
ನೀವು	ಹಾಡು ಹೇಳಲಿ
ನಾವು	ನಿಮ್ಮ ಮನೆಗೆ ಬರಲಾ ?
ನೀನು	ಕೆಲಸ ಮಾಡಿ

VI Use the following verbs in your own sentences :

1)	ಹೋಗಿ	2)	ತರೋಣ
3)	ನೋಡಲಿ	4)	ಕುಡಿಯಲಾ ?
5)	ಬನ್ನಿ	6)	ಹೊರಡು
7)	ತಿನ್ನೋಣ	8)	ಬರಲಿ
9)	ಹೋಗೋಣವಾ ?	10)	ಮಾಡು

VII Write about arrangements for a picnic to Krishnarajasagar based on the model of the lesson.

VOCABULARY :

ಅರೆ—half

ಆಗು—to become

ಆಗಲಿ—all right, let it be

ಆಮೇಲೆ—afterwards

ಇರು—to be, to wait

ಎಲ್ಲಿ—where

ಏನಾದರೂ—anything

ಕುಡಿ—drink

ಕೋಡುಬಳೆ—a crisp eatable of bangle shape

ಗಂಟೆ—the hour, only use in the expression of time telling.

ತಗೊಂಬಾ—bring

ತಾ—bring

ತಿನ್ನು—to eat

ತಿಂಡಿ—eatables, snacks

ನಾಳೆ—tomorrow

ನೋಡು—see, look

ಪುಳಿಯೋಗರೆ—tamarind rice

ಬಾ—come

ಬೆಳಿಗ್ಗೆ—morning

ಬೇಗ—early, soon, quick

ಬೇರೆಯವರು—others

ಮಾಡು—do

ಮುಕ್ಕಾಲು—$\frac{3}{4}$

ಸಂಗಮ—confluence

ಶ್ರೀರಂಗಪಟ್ಟಣ—a historical place, twelve miles from Mysore on Bangalore–Mysore road.

ಹಾಡು—song, sing

ಹತ್ತಿರ—near

ಹೇಳು—tell, say

ಹೊರಡು—start the journey

ಹೋಗು—go

GRAMMAR NOTES :

1. Imperative, permissive and hortative forms of verbs are introduced in this lesson. Verb root itself is used as imperative second person singular.

Ex : ನೀನು ಬಾ

ನೀನು ಹೋಗು

The imperative plural form is obtained by

1. dropping the verb final–u and adding –i ;

Ex : ಹೋಗು + ಇ = ಹೋಗಿ

ನೋಡು + ಇ = ನೋಡಿ

2. by adding –iri if the root ends in –i or –e.

Ex : ಕುಡಿ + ಇರಿ = ಕುಡಿಯಿರಿ

ಕರೆ + ಇರಿ = ಕರೆಯಿರಿ

The addition of –y– before adding –iri is governed by the rule given in the lesson 5.

2. Permissive is formed by adding –ali to the verb. The subject may be either in third person or in first person singular. For the latter the sentence is always be an interrogative one.

Ex : ಹೋಗು + ಅಲಿ = ಅವನು ಹೋಗಲಿ

ಕುಡಿ + ಅಲಿ = ಅವರು ಕುಡಿಯಲಿ

Ex : For First person :

ನಾನು ಏನು ಮಾಡಲಿ ?

ನಾನು ಏನು ಕುಡಿಯಲಿ ?

In order to make entreatise giving 'may I ....' we add first the suffix **–al** to the verb root. Which will then be followed by the interrogative marker –aa. Note that addition of **–al** and –aa is permissable only when the subject is in first person singular.

Ex : ನಾನು + ಮಾಡು + ಅಲ್ + ಆ ?

ನಾನು ಮಾಡಲಾ ?

Compare the following sentences :

ನಾನು ಏನು ಮಾಡಲಿ ?	'What do I do ?'
ನಾನು ಮಾಡಲಾ ?	'May I do'

3. Hortative form is obtained by adding –oona to the verb : The subject is always in first person plural.

Ex : ಹೋಗು + ಓಣ = ನಾವು ಹೋಗೋಣ.

ಕುಡಿ + ಓಣ = ನಾವು ಕುಡಿಯೋಣ.

When the interrogative suffix –aa is added to hortative form it takes –V– as increment.

Ex : ಹೋಗೋಣವಾ ? shall we go ?

4. Note the addressive tern –oo in baaroo. This is used to address familiar persons, youngsters and inferiors. -oo is for males and –ee for females.

Ex : ರಾಮು ಬಾರೋ. ಸೀತಾ ಬಾರೇ

5. ಹತ್ತಿರ with 'Person or Place' in genitive has the sense 'to'.

Ex : ನನ್ನ ಮನೆಯ ಹತ್ತಿರ ಬಾ, 'Come to my house'

ಹತ್ತಿರ also used for having something in ones Possession

Ex : ನನ್ನ ಹತ್ತಿರ ಪುಸ್ತಕ ಇದೆ 'I have book with me'

6. Time telling :

The question ಎಷ್ಟು ಗಂಟೆಗೆ ?

In Kannada the designated hour is given by the number plus the word ಗಂಟೆ in dative

Ex : ಎಂಟು ಗಂಟೆಗೆ......at 8'o clock.

The fractions ಕಾಲು quarter ಅರೆ 'half' and ಮುಕ್ಕಾಲು 'three forths' are used to designate 15, 30 and 45 minutes past the hour respectively.

Ex : ಮೂರು + ಕಾಲು = ಮೂರುಕ್ಕಾಲು

ಮೂರು + ಅರೆ = ಮೂರೂವರೆ

ಮೂರು + ಮುಕ್ಕಾಲು = ಮೂರುಮುಕ್ಕಾಲು

Note the Sandhi changes in the above examples.

The following table gives the imperative, permissive and hortative forms:

	Person	Inperative	Permissive	Horative
First	Singular		ಅಲಾ ? ಮಾಡಲಾ ಅಲಿ. ಏನು ಮಾಡಲಿ ?	
	Plural			ಮಾಡೋಣ
Second	Singular	verb root ಮಾಡು		
	Plural	–ಇ ಇರಿ ಮಾಡಿ. ಕುಡಿಯಿರಿ		
Third			ಅಲಿ ಮಾಡಲಿ	

UNIT 4

Review
LESSON 4

CONVERSATION BETWEEN FREINDS

DIALOGUE

ಭಾಸ್ಕರನ್—ರಾಜಣ್ಣ, ಇವತ್ತು ಸಾಯಂಕಾಲ ನಾವು ರೈಲ್ವೆ ಸ್ಟೇಷನ್‌ಗೆ ಹೋಗೋಣವಾ ?

ರಾಜಣ್ಣ—ಆಗಲಿ, ಹೋಗೋಣ.

ಭಾಸ್ಕರನ್—ಸಾಯಂಕಾಲ ಎಷ್ಟು ಹೊತ್ತಿಗೆ ಹೋಗೋಣ ?

ರಾಜಣ್ಣ—ಸುಮಾರು ನಾಲ್ಕೂಕಾಲು ಗಂಟೆಗೆ ಹೋಗೋಣ ಭಾಸ್ಕರನ್.

ಭಾಸ್ಕರನ್—ನಾನು ನಾಲ್ಕು ಗಂಟೆಗೆ ಎಲ್ಲಿಗೆ ಬರಲಿ ? ನಿಮ್ಮ ಮನೆಯ ಹತ್ತಿರ ಬರಲೋ ಹದಿನಾಲ್ಕನೇ ಮೇಯಿನ್ ಬಸ್ ಸ್ಟಾಪ್ ಹತ್ತಿರ ಬರಲೋ ?

ರಾಜಣ್ಣ—ನೀವು ನಮ್ಮ ಮನೆ ಹತ್ತಿರಾನೇ ಬನ್ನಿ.

ಭಾಸ್ಕರನ್—ನಿಮ್ಮ ಮನೆಗೆ ಎಷ್ಟು ಹೊತ್ತಿಗೆ ಬರಲಿ ? ಮೂರುಮುಕ್ಕಾಲು ಗಂಟೆಗೆ ಬರಲಾ ?

ರಾಜಣ್ಣ—ಮೂರು ಮುಕ್ಕಾಲು ಗಂಟೆಗಿಂತ ಮೊದಲೇ ಬನ್ನಿ. ಮೂರುವರೆಗೆ ಮನೆ ಬಿಡೋಣ.

ಭಾಸ್ಕರನ್—ನಿಮ್ಮ ಸ್ನೇಹಿತ ಮಾಧೂಗೆ ಎಷ್ಟು ಹೊತ್ತಿನವರೆಗೆ ಆಫೀಸು ?

ರಾಜಣ್ಣ—ಅವನಿಗೆ ಐದು ಗಂಟೆ ತನಕ. ನಾವು ಮೊದಲು ಮಾಧು ನೋಡೋಣ. ಆಮೇಲೆ ನಿಮ್ಮ ಊರಿಗೆ ಟಿಕೆಟ್ ಬುಕ್ ಮಾಡೋಣ.

ಭಾಸ್ಕರನ್—ಹಾಗೇ ಆಗಲಿ.

TEST PAPER

I Write the corresponding case marker :

ಅವಳು + ——— = ———
ನಾವು + ——— = ———
ಗಂಡು + ——— = ———
ಹೊಸದು + ——— = ———
ನಾಲ್ಕು + ——— = ———
ತೋಟ + ——— = ———
ಹೂವು + ——— = ———
ಕೋಡುಬಳೆ + ——— = ———
ಮಗು + ——— = ———
ಅದು + ——— = ———

II Combine the following sentences using the comparative marker.

1) ನನಗೆ ಹತ್ತು ವರ್ಷ.
ರಾಮುನಿಗೆ ಹನ್ನೆರಡು ವರ್ಷ.

2) ಬೆಂಗಳೂರು ದೊಡ್ಡ ಪಟ್ಟಣ.
ಮೈಸೂರು ಚಿಕ್ಕ ಪಟ್ಟಣ.

3) ವೆಂಕಟರಾಘವನ್ ಒಳ್ಳೆಯ ಬೌಲರ್.
ಪ್ರಸನ್ನ ಇನ್ನೂ ಒಳ್ಳೆಯ ಬೌಲರ್.

4) ನಮ್ಮ ಊರಿನ ಇಂಜಿನಿಯರಿಂಗ್ ಕಾಲೇಜು ಚಿಕ್ಕದು.
ಈ ಊರಿನ ಇಂಜಿನಿಯರಿಂಗ್ ಕಾಲೇಜು ದೊಡ್ಡದು.

5) ಬದನೆಕಾಯಿಗೆ ಬೆಲೆ ಹೆಚ್ಚು.
ಹುರುಳಿಕಾಯಿಗೆ ಬೆಲೆ ಕಡಿಮೆ.

III Write the Imperative plural, Permissive, Hortative **forms of the verbs** and use them in your own sentences.

1) ಹೋಗು
2) ಬಾ
3) ತಿನ್ನು
4) ಮಾಡು
5) ನೋಡು

IV Fill in the blanks using the appropriate **Imperative, Permissive** and Hortative forms :

1) ನಾನು ಸಾಯಂಕಾಲ ನಿಮ್ಮ ಮನೆಗೆ ——— ?
2) ಅವರು ಈಗ ಊಟ ———
3) ನೀವು ದಯವಿಟ್ಟು ಆಚೆ ———
4) ನಾವು ಈಗ ಲೈಬ್ರರಿಗೆ ———
5) ಅವನು ಸಾಯಂಕಾಲ ಈ ಕೆಲಸ ———

V Choose the appropriate word given in the **bracket and fill in the blank.**

(ಒಳ್ಳೆಯವರು, ಓದೋಣ, ಅವರಿಗೆ, ನಾನು, ಹೋಗಲಿ)

1) ———ನಾಲ್ಕು ಜನ ಹೆಣ್ಣುಮಕ್ಕಳು
2) ನನ್ನ ಅಳಿಯ ತುಂಬಾ ———

3) ——— ನಿಮ್ಮ ರೂಮಿಗೆ ಬರಲಾ?

4) ನಾವು ಸಾಯಂಕಾಲ ಆರ———

5) ಅವರು ಈಗ ಊರಿಗೆ ———

VOCABULARY :

ಕಾಲು—quarter, leg

ತನಕ / ವರೆಗೆ }—till, upto

ಬಿಡು—to leave

ಸಾಯಂಕಾಲ—evening

ಹೊತ್ತು—time

UNIT 5

LESSON 18

FRIEND'S MEET

DIALOGUE

ರಾಜು—ನಮಸ್ಕಾರ ರಾಮು	Namaskara Ramu.
ರಾಮು—ನಮಸ್ಕಾರ, ಯಾರು ರಾಜೂನಾ ? ಏನು ಸಮಾಚಾರ? ಹೇಗೆ ಇದ್ದೀಯಾ?	Namaskara, Isn't it Raju ? What is the news ? How are you ?

ರಾಜು—ಸಮಾಚಾರ ಎಲ್ಲಾ ಆಮೇಲೆ. ಇದೇನು ನೀನು ಇಲ್ಲಿ?	I will tell you the news later. How is it that you are here.?
ರಾಮು—ಈಗ ನಾನು ಇದೇ ಊರಿನಲ್ಲಿ ಇದ್ದೀನಿ.	Now I am staying here in Mysore only.
ರಾಜು—ಹಾಗಾ? ನಿಮ್ಮ ಮನೆ ಎಲ್ಲಿ ಇದೆ?	Is it so? Where is your house?
ರಾಮು—ನಮ್ಮ ಮನೆ ಸರಸ್ವತಿಪುರಂನಲ್ಲಿ ಇದೆ.	My house is in Saraswatipuram.
ರಾಜು—ಮಕ್ಕಳೆಲ್ಲಾ ಎಲ್ಲೆಲ್ಲಿ ಇದ್ದಾರೆ?	Where (in what places) are your children?
ರಾಮು—ಮೊದಲನೆಯವನು ಬೊಂಬಾಯಿನಲ್ಲಿ ಇದ್ದಾನೆ. ಎರಡನೆಯವಳು ಮಗಳು, ಅವಳು ದೆಹಲಿಯಲ್ಲಿ ಇದ್ದಾಳೆ. ಇನ್ನೊಬ್ಬ ಇಲ್ಲೇ ನನ್ನ ಜೊತೇನೇ ಇದ್ದಾನೆ.	The first son is in Bombay. The Second one is daughter. She is in Delhi. Another son is with me.
ರಾಜು—ನಿನ್ನ ಜೊತೆ ಇದ್ದಾನಲ್ಲಾ ಆ ಮಗ ಏನು ಕೆಲಸದಲ್ಲಿ ಇದ್ದಾನೆ?	The son who is staying with you, what work is he doing?
ರಾಮು—ಅವನು ಇಂಜಿನಿಯರ್. ನಿನಗೆ ಎಷ್ಟು ಜನ ಮಕ್ಕಳು ಇದ್ದಾರೆ?	He is an engineer. How many children do you have?
ರಾಜು—ನನಗೆ ಇಬ್ಬರು. ಒಂದು ಗಂಡು ಒಂದು ಹೆಣ್ಣು.	I have two. One is a boy. Another is a girl.
ರಾಮು—ಅದೇ ಮನೇಲಿ ಇದ್ದೀರಿ ತಾನೆ?	Are you still in the same house?
ರಾಜು—ಇಲ್ಲ. ಈಗ ಆ ಮನೇಲಿ ಇಲ್ಲ. ಅಲ್ಲೇ ಐದನೇ ಮೇಯಿನ್‌ನಲ್ಲಿ ಬೇರೆ ಮನೆಯಲ್ಲಿ ಇದ್ದೀವಿ.	No. Now we are not in that house We are in the another house. In the same place: 5th main.
ರಾಮು—ಮನೆ ಸ್ವಂತಾನಾ?	Is it your own house?
ರಾಜು—ಹೌದು. ಸ್ವಂತದ್ದು.	Yes. Own house.
ರಾಮು—ಮನೆ ದೊಡ್ಡದಾಗಿ ಇದೆಯಾ?	Is it a big house?

ರಾಜು—ಸುಮಾರು ದೊಡ್ಡದಾಗಿ ಇದೆ. ಮೂರು ದೊಡ್ಡ ರೂಮುಗಳು ಇವೆ. ಒಂದು ವರಾಂಡ ಇದೆ. ಹಾಲು, ಅಡಿಗೆಮನೆ, ಬಚ್ಚಲು ಮನೆ ಮತ್ತು ಊಟದ ಮನೆ ಎಲ್ಲಾ ಇವೆ. ಒಂದು ಸಲ ಮನೆಗೆ ಬಾ.	Quite big. There are three big bed rooms; there is one veranda, hall, kitchen, bathroom and dining hall. come some time to my house.
ರಾಮು—ಆಗಲಿ ನಿನ್ನ ಮನೆಗೆ ಗುರುತು ಏನು ? ಮನೆ ಹಿಂದೆ ಮುಂದೆ ಮರಗಳು ಏನಾದರೂ ಇವೆಯಾ ?	O.K. What distinginshing feature has your house ? Are there any trees in front or behind of your house.
ರಾಜು—ನಮ್ಮದು ಮೂಲೆ ಮನೆ. ಎಡಗಡೆ ಒಂದು ಅಂಗಡಿ ಇದೆ. ಹಿಂದೆ ಹಿತ್ತಿಲಲ್ಲಿ ಎರಡು ದೊಡ್ಡ ಮಾವಿನ ಮರಗಳು ಇವೆ. ಮುಂದೆ ನಾಲ್ಕು ತೆಂಗಿನ ಮರ ಇವೆ. ಮುಂದುಗಡೆ ಒಂದು ಪಕ್ಕಕ್ಕೆ ದಾಸವಾಳದ ಗಿಡ ಇದೆ.	Ours is a corner house. There is a shop on the left side. There are two big mango trees in the backyard. There are four coconut trees in front. There is a hibiscus plant to one side of the front.
ರಾಮು—ಮನೆ ಒಳ್ಳೆ ಜಾಗದಲ್ಲಿ ಇದೆಯಾ ?	Is the house in a good location ?
ರಾಜು—ಹೌದು. ಒಳ್ಳೆಯ ಜಾಗದಲ್ಲಿ ಇದೆ.	Yes. It is in a good location.
ರಾಮು—ಒಳ್ಳೆಯದು. ಮತ್ತೆ ಯಾವಾಗ ನಮ್ಮ ಭೇಟಿ ?	Fine. When shall we meet again ?
ರಾಜು—ಇನ್ನು ನಿನ್ನ ಭೇಟಿ ನಮ್ಮ ಮನೆಯಲ್ಲೇ. ನಾಳೇನೇ.	We will meet in my house tomorrow it sef.
ರಾಮು—ಈಗೇನಯ್ಯಾ ಗೃಹಪ್ರವೇಶದ ಊಟ ?	What ! Now you are giving the the meal for house warming ceremony ?
ರಾಜು—ಯಾವುದೋ ಒಂದು. ಒಟ್ಟಿನಲ್ಲಿ ನಾಳೆ ನಿನ್ನ ಊಟ ನಮ್ಮ ಮನೆಯಲ್ಲೇ.	Something like that. Tomorrow you will have food in my house.
ರಾಮು—ಸರಿ.	Alright.

DRILLS :

I Repetition Drill :

a) 1) ಸಮಾಚಾರ ಎಲ್ಲಾ ಆಮೇಲೆ
2) ಕೆಲಸ ಎಲ್ಲಾ ಆಮೇಲೆ.
3) ಊಟ ಎಲ್ಲಾ ಆಮೇಲೆ.

b) 1) ನಾನು ಎಲ್ಲಿ ಇದೀನಿ ?
2) ನಾವು ಎಲ್ಲಿ ಇದೀವಿ ?
3) ನೀನು ಎಲ್ಲಿ ಇದೀಯಾ ?
4) ನೀವು ಎಲ್ಲಿ ಇದೀರಿ ?
5) ಅವನು ಎಲ್ಲಿ ಇದಾನೆ ?
6) ಅವಳು ಎಲ್ಲಿ ಇದಾಳೆ ?
7) ಅವರು ಎಲ್ಲಿ ಇದಾರೆ ?
8) ಅದು ಎಲ್ಲಿ ಇದೆ ?
9) ಅವು ಎಲ್ಲಿ ಇವೆ ?

c) 1) ನಾನು ಇಲ್ಲಿ ಇದೀನಿ.
2) ನಾವು ಇಲ್ಲಿ ಇದೀವಿ.
3) ನೀನು ಅಲ್ಲಿ ಇದೀಯಾ.
4) ನೀವು ಅಲ್ಲಿ ಇದೀರಿ.
5) ಅವನು ಅಲ್ಲಿ ಇದಾನೆ.
6) ಅವಳು ಅಲ್ಲಿ ಇದಾಳೆ.
7) ಅವರು ಅಲ್ಲಿ ಇದಾರೆ.
8) ಅದು ಅಲ್ಲಿ ಇದೆ.
9) ಅವು ಅಲ್ಲಿ ಇವೆ.

d) 1) ಸೀತಮ್ಮ ಎಲ್ಲಿ ಇದಾರೆ ?
2) ರಾಜಾರಾಯರು ಎಲ್ಲಿ ಇದಾರೆ ?

3) ರಾಮನ ಚಿಕ್ಕಪ್ಪ ಎಲ್ಲಿ ಇದಾರೆ ?

4) ನಿಮ್ಮ ಮಕ್ಕಳು ಎಲ್ಲಿ ಇದಾರೆ ?

e) 1) ನಿನ್ನ ಮಗು ಎಲ್ಲಿ ಇದೆ ?

2) ನಿಮ್ಮ ಮನೆ ಎಲ್ಲಿ ಇದೆ ?

3) ಅವರ ನಾಯಿ ಎಲ್ಲಿ ಇದೆ ?

4) ಅದೇ ಮನೆಯಲ್ಲಿ ಇದೀರಿ ತಾನೆ ?

5) ಅದೇ ಊರಿನಲ್ಲಿ ಇದೀರಿ ತಾನೆ ?

6) ಅದೇ ರೂಮಿನಲ್ಲಿ ಇದೀರಿ ತಾನೆ ?

f) 1) ಹೌದು. ಆ ಮನೆಯಲ್ಲಿ ಇದೀನಿ.

2) ಇಲ್ಲ. ಆ ಮನೆಯಲ್ಲಿ ಇಲ್ಲ.

3) ಹೌದು. ಆ ಊರಿನಲ್ಲಿ ಇದೀನಿ.

4) ಇಲ್ಲ. ಆ ಊರಿನಲ್ಲಿ ಇಲ್ಲ.

g) 1) ಮತ್ತೆ ನಮ್ಮ ಭೇಟಿ ಯಾವಾಗ ?

2) ಮತ್ತೆ ನಾವು ಭೇಟಿ ಯಾವಾಗ ಮಾಡೋಣ ?

II Build up Drill :

Model : ಇದಾನೆ.

ಮೈಸೂರಿನಲ್ಲಿ ಇದಾನೆ.

ಮಗ ಮೈಸೂರಿನಲ್ಲಿ ಇದಾನೆ.

ತಂಗಿಯ ಮಗ ಮೈಸೂರಿನಲ್ಲಿ ಇದಾನೆ.

ನನ್ನ ತಂಗಿಯ ಮಗ ಮೈಸೂರಿನಲ್ಲಿ ಇದಾನೆ.

3) ಉಮ ಡೆಲ್ಲೀಲಿ ಇದಾಳೆ.
ವಿಮಲಮ್ಮನವರು

____

4) ಅವನು ಕೆಲಸದಲ್ಲಿ ಇದಾನೆ.
ನಾವು

____

5) ನಾಯಿ ಮನೆಯ ಮುಂದೆ ಇದೆ.
ಬೆಕ್ಕುಗಳು

____

6) ಶಿಲ್ಪಾ ಮನೆಯಲ್ಲಿ ಇದಾರೆ.
ನೀವು

____

7) ಮಗು ಮರದ ಪಕ್ಕದಲ್ಲಿ ಇದೆ.
ನಾನು

____

8) ಆ ತೆಲುಗು ವಿದ್ಯಾರ್ಥಿನಿ ಚೆನ್ನಾಗಿ ಇದಾರೆ.
ಅವಳು

____

VI Transformation Drill :

a) Model : T : ನಾನು ಈಗ ಈ ಊರಿನಲ್ಲಿ ಇದೀನಿ.
S : ನಾನು ಈಗ ಈ ಊರಿನಲ್ಲಿ ಇಲ್ಲ.

1) ಅವಳು ಮನೆಯಲ್ಲಿ ಇದಾಳೆ.
2) ರಾಜು ಕೆಲಸದಲ್ಲಿ ಇದಾನೆ.
3) ರಮಾ ಮನೆಯಲ್ಲಿ ಎರಡು ತೆಂಗಿನ ಮರಗಳು ಇವೆ.

4) ಕಮಲಮ್ಮನಿಗೆ ನಾಲ್ಕು ಜನ ಮಕ್ಕಳು ಇದಾರೆ.
5) ಅವರಿಬ್ಬರೂ ಒಂದೇ ಶಾಲೆಯಲ್ಲಿ ಇದಾರೆ.

b) **Model :** T : ಅವನು ಈಗ ಈ ಊರಿನಲ್ಲಿ ಇಲ್ಲ.

S : ಅವನು ಈಗ ಈ ಊರಿನಲ್ಲಿ ಇಲ್ಲವಾ ?

1) ಈ ಮರದಲ್ಲಿ ಹಣ್ಣು ಇಲ್ಲ.
2) ನಮ್ಮ ಮನೆಯಲ್ಲಿ ಪುಸ್ತಕ ಇಲ್ಲ.
3) ಅವರಿಗೆ ಮಕ್ಕಳು ಇಲ್ಲ.

c) **Model :** T : ರಾಮು ತೋಟದಲ್ಲಿ ಇದಾನೆ.

S : ರಾಮು ತೋಟದಲ್ಲಿ ಇದಾನಾ ?

1) ಕವಿತ ಶಾಲೆಯಲ್ಲಿ ಇದಾಳೆ.
2) ನಮ್ಮ ತಂದೆ ಅಂಗಡಿಯಲ್ಲಿ ಇದಾರೆ.
3) ಮನೆ ಹಿಂದೆ ಮರಗಳು ಇವೆ.
4) ಅವನ ಮನೆ ಸರಸ್ವತಿಪುರಂನಲ್ಲಿ ಇದೆ.
5) ನೀನು ಕೆಲಸದಲ್ಲಿ ಇದೀಯ.
6) ನೀವು ಬೆಂಗಳೂರಿನಲ್ಲಿ ಇದೀರಿ.

V Response Drill :

1) ನೀವು ಯಾವ ಊರಿನಲ್ಲಿ ಇದೀರಿ ?
2) ನಿಮ್ಮ ಮನೆ ಎಲ್ಲಿ ಇದೆ ?
3) ನಿಮ್ಮ ಮಕ್ಕಳು ಎಲ್ಲಿ ಇದಾರೆ ?
4) ನಿಮ್ಮ ರೂಂಮೇಟ್‌ಗೆ ಎಷ್ಟು ಮಕ್ಕಳು ಇದಾರೆ ?
5) ನಿಮ್ಮ ಮನೆಯಲ್ಲಿ ಏನೇನು ಇದೆ ?
6) ನಿಮ್ಮ ಪಕ್ಕದ ಮನೆಯ ಮುಂದೆ ಏನು ಇದೆ ?
7) ನಿಮ್ಮ ಶಾಲೆಯ ಪಕ್ಕದಲ್ಲಿ ಏನು ಇದೆ ?
8) ನಿಮ್ಮ ಬಲಗಡೆ ಯಾರು ಇದಾರೆ ?

9) ನನ್ನ ಎಡಗಡೆ ಯಾರು ಇದಾರೆ ?

10) ನಿಮ್ಮ ಮುಂದುಗಡೆ ಏನು ಇದೆ ?

11) ನಿಮ್ಮ ಹಿಂದುಗಡೆ ಯಾರು ಇದಾರೆ ?

EXERCISES

I Fill in the blanks using the definite form of the verb **given in the brackets**.

a) 1) ರಾಮು ಮನೆಯಲ್ಲಿ ——— (ಇರು)

2) ಕಮಲ ತೋಟದಲ್ಲಿ ——— (ಇರು)

3) ನೀನು ಯಾವ ಊರಿನಲ್ಲಿ ——— ? (ಇರು)

4) ನಾವು ಐದು ಜನ ಚೆನ್ನಾಗಿ ——— (ಇರು)

5) ನೀವು ಎಲ್ಲಿ ——— ? (ಇರು)

6) ನೀನು ಯಾವ ಕೆಲಸದಲ್ಲಿ ——— (ಇರು)

7) ನಾನು ಬೆಂಗಳೂರಿನಲ್ಲಿ ——— (ಇರು)

8) ನಾಯಿಗಳು ಮರದ ಕೆಳಗೆ ——— (ಇರು)

9) ನಿಮ್ಮ ಬೀಗರು ಎಲ್ಲಿ ——— ? (ಇರು)

II Fill in the blanks making the appropriate changes in **the words given** in the brackets.

a) 1) ನಮ್ಮ ——— ಮುಂದೆ ಒಂದು ಮರ ಇದೆ. (ಮನೆ)

2) ನಿಮ್ಮ ——— ಎಡಗಡೆ ಏನು ಇದೆ? (ಕಾಲೇಜು)

3) ——— ಬಲಗಡೆ ಯಾರು ಇದ್ದಾರೆ? (ರಾಮು)

4) ——— ಮುಂದುಗಡೆ ಮೇಜು ಇದೆ. (ನೀನು)

5) ಚಿತ್ರದಲ್ಲಿ ——— ಪಕ್ಕ ಸುಮಿತ್ರೆ ಇದಾಳೆ. (ಶಾಲಿನಿ)

6) ನಮ್ಮ ——— ಹಿಂದೆ ಒಂದು ತೋಟ ಇದೆ. (ಶಾಲೆ)

III Fill in the blanks using the correct, locative case forms of the words given in the brackets.

a) 1) ನಮ್ಮ ——— ಒಳ್ಳೆಯ ಮಾವಿನ ಮರಗಳು ಇವೆ. (ತೋಟ)

2) ———ಎಂಟು ಸೀಬೆಹಣ್ಣುಗಳು ಇವೆ. (ರಾಮು)

3) ರಾಮುನ ತಂದೆ ——— ಇದಾರೆ. (ಬೆಂಗಳೂರು)

4) ———ನಿಮ್ಮ ಅಕ್ಕ ಇದಾರಾ ? (ಡೆಲ್ಲಿ)

5) ——— ಎಷ್ಟು ರೂಪಾಯಿ ಇವೆ. (ನೀನು)

6) ——— ಒಳ್ಳೆಯತನ ಇದೆ. (ಅವನು)

IV Fill in the blanks using the Kannada equivalents of the English words given in the brackets :

1) ನಿಮ್ಮ ಮನೆ ——— ಇದೆ ? (where)

2) ರಾಮುನ ಮನೆಯಲ್ಲಿ ——— ಇದೆ. (dining hall)

3) ——— ಯಾವುದು ? (bath room)

4) ——— ಹೇಗೆ ಇದೆ ? (kitchen)

5) ನಿಮ್ಮ ಸ್ಕೂಲಿನ ——— ಏನು ಇದೆ ? front)

6) ನನ್ನ ——— ನೀನು ಇದೀಯ. (back)

7) ಮನೆಯ ———ರಸ್ತೆ ಇದೆ. (right side)

8) ರಾಮುನ ——— ರಾಮು ಇದಾನೆ. (by the side of)

9) ನಿನ್ನ ——— ಯಾರು ಇದಾರೆ ? (left side)

10) ನನ್ನ ——— ನಿಮ್ಮ ಮನೆಯಲ್ಲಿ. (meal)

V Transform into negative :

1) ಮರದಲ್ಲಿ ಹಣ್ಣುಗಳು ಇವೆ.

2) ನಮ್ಮ ತಂದೆ ಅಂಗಡಿಯಲ್ಲಿ ಇದಾರೆ.

3) ರಾಮುನ ತೋಟದಲ್ಲಿ ಮಲ್ಲಿಗೆ ಗಿಡ ಇದೆ.

4) ಅವರಿಗೆ ಒಬ್ಬ ತಂಗಿ ಇದಾಳೆ.

5) ಪ್ರಿನ್ಸಿಪಾಲರು ಈಗ ಕ್ಲಾಸಿನಲ್ಲಿ ಇದಾರೆ.

VI Give one interrogative sentence each for the **following statements** substituting the underlined word with **that of an interrogative word.**

1) ರಾಜೂ ತಮ್ಮ ಕಾಲೇಜಿನಲ್ಲಿ ಇದಾನೆ.
2) ಅವರ ಮನೆಯಲ್ಲಿ ಮಕ್ಕಳು ಇದಾರೆ.
3) ಮನೆಯ ಮುಂದೆ ದಾಸವಾಳದ ಗಿಡ ಇದೆ.
4) ಅವರು ಗಂಗೋತ್ರಿಯಲ್ಲಿ ಇದಾರೆ.
5) ನೀವು ಚೆನ್ನಾಗಿ ಇದೀರಿ.

VII Write the word represented by the formula :

a) Model : ಮರ + ಅಲ್ಲಿ = ಮರದಲ್ಲಿ

1) ಸರಸ್ವತಿಪುರ + ಅಲ್ಲಿ = ______
2) ಗಿಡ + ಅಲ್ಲಿ = ______
3) ಗೃಹ + ಅಲ್ಲಿ = ______
4) ಕೆಲಸ + ಅಲ್ಲಿ = ______
5) ತೋಟ + ಅಲ್ಲಿ = ______

d) Model : ಊರು + ಅಲ್ಲಿ = ಊರಿನಲ್ಲಿ

1) ಮೈಸೂರು + ಅಲ್ಲಿ = ______
2) ರೂಮು + ಅಲ್ಲಿ = ______
3) ಕ್ಲಾಸು + ಅಲ್ಲಿ = ______

c) Model : ದೆಹಲಿ + ಅಲ್ಲಿ = ದೆಹಲಿಯಲ್ಲಿ

1) ಮನೆ + ಅಲ್ಲಿ = ______
2) ಅಂಗಡಿ + ಅಲ್ಲಿ = ______
3) ಶಾಲೆ + ಅಲ್ಲಿ = ______

VIII Match the following :

	A	B
1)	ನಮ್ಮ ಅಧ್ಯಾಪಕರು ಆ ಮನೆಯಲ್ಲಿ	ಇದಾಳೆ
2)	ಅವರ ಮಗ ಅಮೆರಿಕಾದಲ್ಲಿ	ಇವೆ
3)	ನೀವು ಯಾವ ಆಫೀಸಿನಲ್ಲಿ	ಇದೇನೆ
4)	ಶೀಲಾ ಗಂಡನ ಮನೆಯಲ್ಲಿ	ಇದೀವಿ
5)	ನಾನು ಸರಸ್ವತಿಪುರಂನಲ್ಲಿ	ಇದೀಯೊ
6)	ನೀನು ಯಾಕೆ ಇಲ್ಲಿ	ಇದೀವಿ
7)	ನಾವು ಕ್ಲಾಸಿನಲ್ಲಿ	ಇದೆ
8)	ಆ ಮನೆಯಲ್ಲಿ ನಾಲ್ಕು ರೂಮು	ಇದಾನೆ
9)	ಈ ತೋಟದಲ್ಲಿ ಒಂದು ಮಾವಿನ ಮರ	ಇದಾರೆ

IX Answer the following questions :

1) ರಾಮೂ ಮನೆ ಎಲ್ಲಿ ಇದೆ ?
2) ರಾಮೂ ಮಕ್ಕಳು ಎಲ್ಲಿ ಎಲ್ಲಿ ಇದಾರೆ ?
3) ರಾಜೂ ಮನೆ ದೊಡ್ಡದಾಗಿ ಇದೆಯಾ ?
4) ರಾಜೂ ಮನೆಗೆ ಗುರುತು ಏನು ?

VOCABULARY :

ಅಡಿಗೆಮನೆ—kitchen

ಇಲ್ಲ—no

ಈಗ—now

ಊಟದ ಮನೆ—dining hall

ಎಡಗಡೆ—left side

ಗುರುತು—identification

ಗೃಹಪ್ರವೇಶ—house warming ceremony

ಜಾಗ—place, location

ಜೊತೆ—with, when both parties are **animate**

ತಾನೆ—empty, morph

ದಾಸವಾಳ—hibiscus

ಪಕ್ಕ—side

ಬಚ್ಚಲು ಮನೆ—**bath room**

ಬೇರೆ – another

ಭೇಟಿ—meeting

ಮತ್ತೆ—again and then

ಮುಂದೆ—front, in front

ಮೂಲೆ—corner

ಸಮಾಚಾರ—news

ಸುಮಾರು—approximately

ಸ್ವಂತ—own

ಹಾಲು—hall

ಹಿತ್ತಿಲು—backyard

ಹಿಂದೆ—back, behind

Supplemeantary Vocabulary :

ಕೆಲಸ—work

ಬೆಕ್ಕು—cat

GRAMMAR NOTES :

1. The verb iru 'to be' has two bases –id and **–ir. The** paradigm '–id' used to denote the definiteness. **In this lesson it is** used as the present tense base

Ex : ನಾನು ಕ್ಲಾಸಿನಲ್ಲಿ ಇದೀನಿ.

ಅವರು ರೂಮಿನಲ್ಲಿ ಇದಾರೆ.

5. Post positions ಹಿಂದೆ, ಮುಂದೆ, ಎಡಗಡೆ, ಮೊದಲು takes nouns in the genitive. But in spoken form genitive case marker is dropped in –i, –e, and –u ending nouns.

Ex : ಮನೆಯ ಹಿಂದೆ (written)
ಮನೆ ಹಿಂದೆ (spoken)

Example for –a ending nouns and –u ending pronouns where it doesn't drop.

ಮರದ ಹಿಂದೆ
ಅದರ ಮುಂದೆ

–**aagi** is the adverbial ending. In this lesson it is used for adjectives which do not precede nouns. Rather they precede verbs or employs verb as in ದೊಡ್ಡದಾಗಿ ಇದೆ.

LESSON 19

ENQUIRY ABOUT ANAND'S BROTHER IN-LAW

DIALOGUE

ಆನಂದ—ಏನು ರವಿ, ಸಮಾಚಾರ ?	Hello Ravi, What is the news ?
ರವಿ—ಏನಿಲ್ಲ, ಆನಂದ್.	Nothing to tell, Anand.
ಆನಂದ—ನಿಮ್ಮ ತಂದೆ ಹೇಗಿದ್ದಾರೆ ?	How is your father ?
ರವಿ—ಚೆನ್ನಾಗಿದ್ದಾರೆ.	He is fine.

ಆನಂದ—ಈಗ ನಿಮ್ಮ ಭಾವ ಇದೇ ಊರಲ್ಲಿ ಇದಾರೆ ಅಲ್ವಾ ?	Now your brother-in-law is in this town, isn't he ?
ರವಿ—ಹೌದು. ಇಲ್ಲೇ ಇದಾರೆ. ಅವರ ಮನೆ ಜಯಲಕ್ಷ್ಮೀಪುರಂನಲ್ಲಿ ಇದೆ.	Yes. He is here. His house is in Jayalakshmipuram.
ಆನಂದ—ಇಷ್ಟು ಹೊತ್ತಿನಲ್ಲಿ ಅವರು ಮನೆ ಮನೆಯಲ್ಲಿ ಇರ್ತಾರಾ ?	Will he be there in his house by this time ?
ರವಿ—ಇಲ್ಲ. ಅವರು ಇಷ್ಟು ಹೊತ್ತಿನಲ್ಲಿ ಮನೆಯಲ್ಲಿ ಇರಲ್ಲ.	No. He will not be there in the house at the moment.
ಆನಂದ—ಮತ್ತೆ ಎಲ್ಲಿ ಇರ್ತಾರೆ ?	Then where will he be at the moment ?
ರವಿ—ಅವರು ಇಷ್ಟು ಹೊತ್ತಿನಲ್ಲಿ ತೋಟದಲ್ಲಿ ಇರ್ತಾರೆ.	At the moment he will be in the garden.
ಆನಂದ—ಹಾಗಾದರೆ ಮನೆಯಲ್ಲಿ ಎಷ್ಟು ಹೊತ್ತಲ್ಲಿ ಇರ್ತಾರೆ ?	Then, what time will he be there at home ?
ರವಿ—ಸಾಯಂಕಾಲದ ಹೊತ್ತು ಮನೆಯಲ್ಲಿ ಇರ್ತಾರೆ. ಆದರೆ ಅವರಿಗೆ ತೋಟದಲ್ಲೂ ಒಂದು ಮನೆ ಇದೆ. ಕೆಲಸದ ದಿನಗಳಲ್ಲಿ ಅವರು ಅಲ್ಲೇ ಇರ್ತಾರೆ.	Usually he will be at home in the evening. But he has a house in the garden also. During working days he will be there only.
ಆನಂದ—ಹಾಗಾದರೆ ಈ ಮನೆಯಲ್ಲಿ ಯಾರು ಇರ್ತಾರೆ ?	Then, who will be here in this house ?
ರವಿ—ಇಲ್ಲಿ ನಮ್ಮ ಅಕ್ಕ ಇರ್ತಾಳೆ. ರಜಾ ದಿನಗಳಲ್ಲಿ ನಮ್ಮ ಅಕ್ಕನ ಮಗನೂ ಇರ್ತಾನೆ.	My sister will be here. During the holiday's my nephew also will stay here.
ಆನಂದ—ಯಾಕೆ, ಅವನು ಸದಾ ಇಲ್ಲೇ ಇರಲ್ಲವಾ ?	Why ? Is he not here always ?
ರವಿ—ಊಹೂ, ಅವನು ಇಲ್ಲಿ ಇರಲ್ಲ. ಅವನು ಊಟಿಯಲ್ಲಿ ಬೋರ್ಡಿಂಗ್ ಸ್ಕೂಲಿನಲ್ಲಿ ಇರ್ತಾನೆ.	No. He will not be here. He is in Ooty boarding school.

*

ಆನಂದ—ಪಾಪ ! ನಿಮ್ಮ ಅಕ್ಕ ಒಬ್ಬರಿಗೇ ಬೇಜಾರು.	How sad ! It is boring for your sister to be alone .
ರವಿ—ಹೌದು. ಆದ್ದರಿಂದಾನೇ ನಮ್ಮ ಮನೇ ಮಕ್ಕಳೆಲ್ಲಾ ಅಲ್ಲೇ ಇರತ್ವೆ. ನನಗೂ ಶನಿವಾರ, ಭಾನುವಾರ ರಜಾ ಇರುತ್ತೆ. ಆಗ ನಾನೂ ಅಲ್ಲೇ ಇರ್ತೀನಿ. ಹಬ್ಬ ಹರಿದಿನಗಳಲ್ಲಿ ಮನೆಯವರೆಲ್ಲ ಅಲ್ಲೇ ಇರ್ತೀವಿ.	Yes. That is why mostly our children will be there only. Saturdays and Sundays are holidays for me. Then I will also be there. During festival days all our household will be there only.
ಆನಂದ—ಪರವಾಗಿಲ್ಲ. ವಾರದಲ್ಲಿ ಎರಡು ದಿನ ನೀನು ಅಲ್ಲೇ ಇರ್ತೀಯೆ. ಇದರಿಂದ ನಿಮ್ಮ ಅಕ್ಕನಿಗೆ ಎಷ್ಟೋ ಅನುಕೂಲ.	Not bad. you will be there two days a week. So that will be convenient for your sister also.
ರವಿ—ಹೌದು. ನೀವು ಇನ್ನು ಎಷ್ಟು ದಿವಸ ಇಲ್ಲಿ ಇರ್ತೀರಿ.	Yes. How many more days will you be here ?
ಆನಂದ— ಇನ್ನು ಒಂದೆರಡು ದಿವಸ ಇರ್ತೀನಿ.	I will be here for one or two days more.

DRILLS :

I Repetition Drill :

a) 1) ಇಷ್ಟು ಹೊತ್ತಲ್ಲಿ ಅವರು ಮನೆಯಲ್ಲಿ ಇರ್ತಾರಾ ?

2) ಇಷ್ಟು ಹೊತ್ತಲ್ಲಿ ನಿಮ್ಮ ತಂದೆ ಅಂಗಡಿಯಲ್ಲಿ ಇರ್ತಾರಾ ?

3) ಇಷ್ಟು ಹೊತ್ತಲ್ಲಿ ನಿಮ್ಮ ಮೇಷ್ಟ್ರು ಕಾಲೇಜಲ್ಲಿ ಇರ್ತಾರಾ ?

b) 1) ಇಷ್ಟು ಹೊತ್ತಲ್ಲಿ ಅವರು ಮನೆಯಲ್ಲಿ ಇರಲ್ಲ.

2) ಇಷ್ಟು ಹೊತ್ತಲ್ಲಿ ನಮ್ಮ ತಂದೆ ಅಂಗಡಿಯಲ್ಲಿ ಇರಲ್ಲ.

3) ಇಷ್ಟು ಹೊತ್ತಲ್ಲಿ ನಮ್ಮ ಮೇಷ್ಟ್ರು ಕಾಲೇಜಲ್ಲಿ ಇರಲ್ಲ.

c) 1) ಅವರು ತೋಟದಲ್ಲಿ ಇರ್ತಾರೆ.

2) ರಾಮರಾಯರು ಮನೆಯಲ್ಲಿ ಇರ್ತಾರೆ.

3) ಮೇಷ್ಟ್ರು ಶಾಲೆಯಲ್ಲಿ ಇರ್ತಾರೆ.

d) 1) ಸಾಯಂಕಾಲದ ಹೊತ್ತು ಮನೆಯಲ್ಲೇ ಇರ್ತಾರೆ.
2) ಸಾಯಂಕಾಲದ ಹೊತ್ತು ಅಂಗಡಿಯಲ್ಲೇ ಇರ್ತಾರೆ.
3) ಸಾಯಂಕಾಲದ ಹೊತ್ತು ತೋಟದಲ್ಲೇ ಇರ್ತಾರೆ.

e) 1) ಅಲ್ಲಿ ನಮ್ಮ ಅಕ್ಕ ಇರ್ತಾಳೆ.
2) ಅಲ್ಲಿ ನಮ್ಮ ತಂಗಿ ಇರ್ತಾಳೆ.

f) 1) ರಜಾದಿನಗಳಲ್ಲಿ ನನ್ನ ಅಕ್ಕನ ಮಗಾನೂ ಇರ್ತಾನೆ.
2) ರಜಾದಿನಗಳಲ್ಲಿ ನನ್ನ ಸ್ನೇಹಿತನೂ ಇರ್ತಾನೆ.

g) 1) ಅವನು ಸದಾ ಇಲ್ಲೇ ಇರಲ್ಲವಾ ?
2) ಅವಳು ಸದಾ ತೋಟದಲ್ಲೇ ಇರಲ್ಲವಾ ?
3) ರಮಾ ಸದಾ ಮನೆಯಲ್ಲೇ ಇರಲ್ಲವಾ ?

h) 1) ಪಾಪ ನಿಮ್ಮ ಅಕ್ಕ ಒಬ್ಬರಿಗೆ ಬೇಜಾರು.
2) ಪಾಪ ನಿಮ್ಮ ತಂದೆ ಒಬ್ಬರಿಗೆ ಬೇಜಾರು.

i) 1) ಮನೇ ಮಕ್ಕಳೆಲ್ಲ ಅಲ್ಲೇ ಇರತ್ವೆ.
2) ರಸ್ತೆ ನಾಯಿಗಳೆಲ್ಲಾ ಇಲ್ಲೇ ಇರತ್ವೆ.
3) ನಿನ್ನ ಪುಸ್ತಕಗಳೆಲ್ಲಾ ಅಲ್ಲೇ ಇರತ್ವೆ.

j) 1) ಭಾನುವಾರ ರಜ ಇರತ್ತೆ.
2) ಸೋಮವಾರ ಕಾಲೇಜು ಇರತ್ತೆ.
3) ಅಂಗಡಿಯಲ್ಲಿ ಪುಸ್ತಕ ಇರತ್ತೆ.
4) ತೋಟದಲ್ಲಿ ನಾಯಿ ಇರತ್ತೆ.

k) 1) ನಾನು ಅವರ ಮನೆಯಲ್ಲೇ ಇರ್ತೀನಿ.
2) ನಾನು ಅಲ್ಲೇ ಇರ್ತೀನಿ.
3) ನಾನು ಕಾಲೇಜಿನಲ್ಲೇ ಇರ್ತೀನಿ.

l) 1) ಹಬ್ಬ ಹರಿದಿನಗಳಲ್ಲಿ ಮನೆಯವರೆಲ್ಲಾ ಅಲ್ಲೇ ಇರ್ತೀವಿ.
2) ರಜಾದಿನಗಳಲ್ಲಿ ನಾವೆಲ್ಲ ಅಲ್ಲೇ ಇರ್ತೀವಿ.

m) 1) ನೀವು ಇನ್ನು ಎಷ್ಟು ದಿವಸ ಇಲ್ಲೇ ಇರ್ತೀರಿ ?

2) ನೀವು ಎಷ್ಟು ವಾರ ಬೆಂಗಳೂರಿನಲ್ಲಿ ಇರ್ತೀರಿ ?

3) ನೀನು ಎಷ್ಟು ಹೊತ್ತು ತೋಟದಲ್ಲಿ ಇರ್ತೀಯಾ ?

Build up Drill :

a) Model :

ಇರ್ತಾರೆ.

ತೋಟದಲ್ಲಿ ಇರ್ತಾರೆ.

ಇಷ್ಟು ಹೊತ್ತಲ್ಲಿ ತೋಟದಲ್ಲಿ ಇರ್ತಾರೆ.

ದಿನಾ ಇಷ್ಟು ಹೊತ್ತಲ್ಲಿ ತೋಟದಲ್ಲಿ ಇರ್ತಾರೆ.

ಭಾವ ದಿನಾ ಇಷ್ಟು ಹೊತ್ತಲ್ಲಿ ತೋಟದಲ್ಲಿ ಇರ್ತಾರೆ.

ರಮೇಶನ ಭಾವ ದಿನಾ ಇಷ್ಟು ಹೊತ್ತಲ್ಲಿ ತೋಟದಲ್ಲಿ ಇರ್ತಾರೆ.

Build up the following changing the subject wherever necessary :

1) ಇರ್ತಾನೆ

2) ಇರ್ತಾಳೆ

3) ಇರ್ತೀನಿ

4) ಇರ್ತೀವಿ

5) ಇರ್ತಾರೆ

b) Model :

ಇರ್ತೀಯೊ.

ಮನೆಯಲ್ಲಿ ಇರ್ತೀಯೊ.

ಎಷ್ಟುಗಂಟೆಗೆ ಮನೆಯಲ್ಲಿ ಇರ್ತೀಯೊ.

ನಾಳೆ ಎಷ್ಟುಗಂಟೆಗೆ ಮನೆಯಲ್ಲಿ ಇರ್ತೀಯೊ.

ನೀನು ನಾಳೆ ಎಷ್ಟುಗಂಟೆಗೆ ಮನೆಯಲ್ಲಿ ಇರ್ತೀಯೊ.

Build up the following changing the subject wherever necessary :

1) ಇರ್ತೀಯೊ.

2) ಇರ್ತೀರಿ.

III Substitution Drill :

Model : T : ವಿಮಲ ಮನೆಯಲ್ಲೇ ಇರ್ತಾಳೆ.
ರಾಜು

S : ರಾಜು ಮನೆಯಲ್ಲೇ ಇರ್ತಾನೆ.

1) ಅವರು ತೋಟದಲ್ಲಿ ಇರ್ತಾರೆ.
ಮಗು

____

2) ನೀನು ಕ್ಲಾಸಿನಲ್ಲಿ ಇರ್ತೀಯಾ.
ನಾನು

____

3) ಅವನು ಮನೆಯಲ್ಲಿ ಇರ್ತಾನೆ.
ಕಮಲ

____

4) ನೀವು ಎಲ್ಲಿ ಇರ್ತೀರಿ ?
ನಾವು

____

5) ಅವನು ಎಲ್ಲಿ ಇರ್ತಾನೆ ?
ಅವು

____

IV Transformation Drill :

a) Model : T : ಅವನು ಮನೆಯಲ್ಲಿ ಇರ್ತಾನೆ.
S : ಅವನು ಮನೆಯಲ್ಲಿ ಇರಲ್ಲ.

1) ರಮಾ ತೋಟದಲ್ಲಿ ಇರ್ತಾಳೆ.

2) ಚಂದ್ರೂ ಯಾಕೆ ಅಲ್ಲೀ ಇರ್ತಾನೆ.

3) ನನಗೆ ರಜ ಇರತ್ತೆ.

4) ನಾಯಿಗಳು ರಸ್ತೆಯಲ್ಲಿ ಇರತ್ವೆ.

5) ನಾನು ಹತ್ತು ದಿನ ಬೆಂಗಳೂರಲ್ಲಿ ಇರ್ತೀನಿ.

b) Model : T : ರಾಜು ಮನೆಯಲ್ಲಿ ಇರಲ್ಲ.

S : ರಾಜು ಮನೆಯಲ್ಲಿ ಇರಲ್ಲವಾ ?

1) ಇಲ್ಲಿ ನಿಮ್ಮ ಅಕ್ಕ ಇರಲ್ಲ.

2) ರಾಮು ಮದ್ರಾಸಲ್ಲಿ ಎರಡು ತಿಂಗಳು ಇರಲ್ಲ.

3) ರಾಮು ಶಾಲೆಯಲ್ಲಿ ಇರಲ್ಲ.

4) ಚಂದು ರಜದಲ್ಲಿ ಇಲ್ಲಿ ಇರಲ್ಲ.

c) Model : T : ಅವರು ಮನೆಯಲ್ಲಿ ಇರ್ತಾರೆ.

S : ಅವರು ಮನೆಯಲ್ಲಿ ಇರ್ತಾರಾ ?

1) ಚಂದು ಬೋರ್ಡಿಂಗ್ ಸ್ಕೂಲಲ್ಲಿ ಇರ್ತಾನೆ.

2) ನೀವು ಹತ್ತನೆಯ ತಾರೀಕು ಕಲ್ಕತ್ತಾದಲ್ಲಿ ಇರ್ತೀರಿ.

3) ಅವನು ಇಲ್ಲಿ ಒಂದೆರಡು ದಿನ ಇರ್ತಾನೆ.

4) ರಾಮಣ್ಣನವರ ಮಗಳು ಅಲ್ಲೇ ಇರ್ತಾಳೆ.

5) ನಾಯಿಗಳು ರಸ್ತೆಯಲ್ಲೇ ಇರತ್ವೆ.

V Response Drill :

1) ಇಷ್ಟು ಹೊತ್ತಿನಲ್ಲಿ ನಿಮ್ಮ ತಂದೆ ಮನೆಯಲ್ಲಿ ಇರ್ತಾರಾ ?

2) ದಿನಾ ಮೂರು ಗಂಟೆಗೆ ನೀವು ಎಲ್ಲಿ ಇರ್ತೀರಿ ?

3) ನಿಮ್ಮ ತಂಗಿ ಸದಾ ತೋಟದಲ್ಲೇ ಇರ್ತಾಳಾ ?

4) ನಿಮ್ಮ ಅಕ್ಕನ ಮಗ ರಜಾದಿನಗಳಲ್ಲಿ ಎಲ್ಲಿ ಇರ್ತಾನೆ ?

5) ನಿಮಗೆ ಯಾವ ವಾರ ರಜ ಇರತ್ತೆ ?

6) ಹಬ್ಬಹರಿದಿನಗಳಲ್ಲಿ ನಿಮ್ಮ ಮನೆಯವರೆಲ್ಲ ಎಲ್ಲಿ ಇರ್ತೀರಿ ?

7) ನೀವು ಎಷ್ಟು ತಿಂಗಳು ಮೈಸೂರಿನಲ್ಲಿ ಇರ್ತೀರಿ ?

8) ಶಾಲಾದಿನಗಳಲ್ಲಿ ನಿಮ್ಮ ಮಗ ಎಲ್ಲಿ ಇರ್ತಾನೆ ?

EXERCISES

I Fill in the gaps using the Kannada equivalents of the English words given in the brackets :

1) ಅವನು ಇಲ್ಲೇ ——— ಇರುತ್ತಾನೆ. (always)
2) ನನ್ನ ಅಕ್ಕ ಬುದ್ಧಿಗೆ ——— (boredom)
3) ಇವತ್ತು ದಸರಾ ——— (festival)
4) ಇದರಿಂದ ಅವರಿಗೆ ಬಹಳ ———. (convenience)
5) ರಾಮು ಈ ಊರಿನಲ್ಲಿ ನನ್ನ ——— ದಿನ ಇರುತ್ತಾನೆ. (a few)

II Fill in the gaps using the habitual forms of the verb given in the brackets :

1) ನೀವು ನಾಳೆ ಬೆಂಗಳೂರಿನಲ್ಲಿ ಎಲ್ಲಿ ——— ? (ಇರು)
2) ರಾಘು ಸದಾ ಮನೆಯಲ್ಲೀ ——— (ಇರು)
3) ನಿನಗೆ ದಿನಾಗ ಏಕೆ ——— ? (ಇರು)
4) ನೀನು ಯಾವಾಗ ಮನೆಯಲ್ಲಿ ——— ? (ಇರು)
5) ಅವರು ಸಾಯಂಕಾಲ ಮನೆಯಲ್ಲಿ ——— (ಇರು)
6) ನಾನು ತೋಟದಲ್ಲಿ ——— (ಇರು)
7) ನೀವು ಎಲ್ಲಿ ——— ? (ಇರು)
8) ನಾವು ದಿನಾ ರಾತ್ರಿ ಅಂಗಡಿಯಲ್ಲೀ ——— (ಇರು)
9) ನಾವು ತೋಟದಲ್ಲಿ ——— (ಇರು)
10) ಹಬ್ಬದದಿನಗಳಲ್ಲಿ ಮಕ್ಕಳೆಲ್ಲ ನಮ್ಮ ಅಕ್ಕನ ಮನೆಯಲ್ಲೀ ——— (ಇರು)

III Fill in the gaps choosing the correct word given in the bracket :

1) ರಾಮು ಈಗ ಮನೆಯಲ್ಲಿ ——— (ಇದ್ದಾನೆ, ಇರುತ್ತಾನೆ)
2) ಜೀಜಾರು. ಯಾರು ಮನೆಯಲ್ಲಿ ——— ? (ಇದ್ದಾರೆ, ಇರುತ್ತಾರೆ)
3) ಕವಿತಾ ಸದಾ ಯೋಚನೆಗಳಲ್ಲೀ ——— (ಇರುತ್ತಾಳೆ, ಇದ್ದಾಳೆ)

4) ಸಾಯಂಕಾಲದ ಹೊತ್ತು ನಮ್ಮ ನಾಯಿ ತೋಟದಲ್ಲಿ ——— (ಇದೆ, ಇರತ್ತೆ)

5) ರಜದಲ್ಲಿ ಬೆಂಗಳೂರಿನಲ್ಲಿ ಎಲ್ಲಿ ——— ? (ಇರ್ತೀರಿ, ಇದೀರಿ)

6) ನಾನು ಈಗ ಕ್ಲಾಸಲ್ಲಿ ———. (ಇದೀನಿ, ಇರ್ತೀನಿ)

IV Transform the following sentences into interrogative sentences by using interrogative marker :

1) ಮಗಳು ಒಬ್ಬಳೇ ಮನೆಯಲ್ಲಿ ಇರ್ತಾಳೆ.
2) ನಾಯಿ ತೋಟದಲ್ಲಿ ಇರತ್ತೆ.
3) ನೀವು ಸಾಯಂಕಾಲ ಬೆಂಗಳೂರಿನಲ್ಲಿ ಇರ್ತೀರಿ.
4) ಮಕ್ಕಳು ನಮ್ಮ ತಂದೆ ಮನೆಯಲ್ಲೇ ಇರತ್ವೆ.
5) ನೀನು ನಾಲ್ಕು ಗಂಟೆಗೆ ರೂಮಿನಲ್ಲಿ ಇರ್ತೀಯ.
6) ಅವರು ಆಫೀಸಿನಲ್ಲಿ ಇರ್ತಾರೆ.

V Transform into negative :

1) ನನಗೆ ಸೋಮವಾರ ರಜ ಇದೆ.
2) ಅವರಿಗೆ ನಾಳೆ ಕ್ಲಾಸು ಇರತ್ತೆ.
3) ನೀವು ಸದಾ ಆಫೀಸಿನಲ್ಲೇ ಇರ್ತೀರಿ.
4) ಅವನು ಈಗ ರೂಮಿನಲ್ಲಿ ಇದ್ದಾನೆ.
5) ಇಷ್ಟು ಹೊತ್ತಲ್ಲಿ ಮಕ್ಕಳು ತೋಟದಲ್ಲಿ ಇರತ್ವೆ.

VI Write the lesson in a narrative form follwing the model :

Model : ಈಗ ರವಿಯ ಭಾವ ಇದೇ ಊರಿನಲ್ಲಿ ಇದಾರೆ. ಅವರ ಮನೆ ಜಯಲಕ್ಷ್ಮಿಪುರಂನಲ್ಲಿ ಇದೆ ....

VII Answer the following questions :

1) ರವಿಯವರ ಭಾವನ ಮನೆ ಎಲ್ಲಿ ಇದೆ ?
2) ಇಷ್ಟು ಹೊತ್ತಿನಲ್ಲಿ ಅವರು ಮನೆಯಲ್ಲಿ ಇರ್ತಾರಾ ?
3) ಕೆಲಸದ ದಿನಗಳಲ್ಲಿ ಅವರು ಎಲ್ಲಿ ಇರ್ತಾರೆ ?

LESSON 20

ENQUIRING ABOUT A ROOM IN THE HOTEL

DIALOGUE

ಗೋಪಾಲ್—ನಿಮ್ಮ ಹೋಟೆಲಲ್ಲಿ ರೂಮು ಬಾಡಿಗೆಗೆ ಇದೆಯಾ ?	Do you have rooms to let in your hotel ?
ಮ್ಯಾನೇಜರ್—ಇದೆ ಸಾರ್. ನಿಮ್ಮಗೆ ಎಂಥ ರೂಮು ಬೇಕು ? ಸಿಂಗಲ್	We have Sir. What kind of room you want ? Single room or

ರೂಮು ಬೇಕೋ, ಡಬ್ಬಲ್ ರೂಮು ಬೇಕೋ ?

double room ?

ಗೋಪಾಲ್—ನಾವು ಇಬ್ಬರು ಇದೀವಿ. ಅದರಿಂದ ನಮಗೆ ಡಬ್ಬಲ್ ರೂಮು ಬೇಕು. ಡಬಲ್ ರೂಮಿಗೆ ಒಂದು ದಿನಕ್ಕೆ ಬಾಡಿಗೆ ಎಷ್ಟು ?

There are two of us. Hence we need a double room. How much is the daily charge for a double room. ?

ಮ್ಯಾನೇಜರ್—ಡಬ್ಬಲ್ ರೂಮಿಗೆ ಬಾಡಿಗೆ ಇಪ್ಪತ್ತೈದು ರೂಪಾಯಿ.

Rent for double room is twenty five rupees.

ಗೋಪಾಲ್—ಕಡಿಮೆಯದು ಇಲ್ವಾ ?

Don't you have a cheaper room ?

ಮ್ಯಾನೇಜರ್—ಇಲ್ಲ ಸಾರ್. ಇದೇ ಕಡಿಮೆಯದು. ಬೇರೆ ಎಲ್ಲಾ ಇನ್ನೂ ಜಾಸ್ತಿ.

No sir, This is the cheapest. Others are still more expensive.

ಗೋಪಾಲ್—ಇಪ್ಪತ್ತೈದು ರೂಪಾಯಿನ ರೂಮು ಒಂದು ಕೊಡಿ.

Give me a room at rupees twenty five.

ಮ್ಯಾನೇಜರ್—ಏಯ್ ಹುಡುಗ ಇಲ್ಲಿ ಬಾ, ಇವರಿಗೆ 35ನೇ ನಂಬರ್ ರೂಮು ತೋರು.

Eh boy, com here. show them room number thirtyfive.

ಗೋಪಾಲ್—ಇಲ್ಲಿ ಮದ್ರಾಸ್ ಊಟ ಇದೆಯಾ ?

Do you serve Madras meals here ?

ಮ್ಯಾನೇಜರ್—ಇಲ್ಲ ಸಾರ್. ನಮ್ಮಲ್ಲಿ ಬಾಂಬೆ ಊಟ ಮಾತ್ರ ಇದೆ.

No sir, we serve only Bombay meals.

ಗೋಪಾಲ್—ನನಗೇನೋ ಬಾಂಬೆ ಊಟಾನೇ ಇಷ್ಟ. ಆದರೆ ನನ್ನ ಹೆಂಡತಿಗೆ ಅದು ಬೇಡ. ಅವಳಿಗೆ ಚಪಾತಿ ಇಷ್ಟ ಇಲ್ಲ. ಹತ್ತಿರದಲ್ಲಿ ಎಲ್ಲಾದರೂ ಬೇರೆ ಹೋಟೆಲ್ ಇದೆಯಾ ?

As far as I am concerned I like Bombay meals. But my wife doesn't want that. She doesn't like Chapati. Is there any other Hotel near by ?

ಮ್ಯಾನೇಜರ್—ಹತ್ತಿರದಲ್ಲೇ ಒಂದು ಹೋಟೆಲ್ ಇದೆ. ಅದರ ಹೆಸರು

There is a hotel just near by called Raghavendra Bhavan,

ರಾಘವೇಂದ್ರ ಭವನ್. ನಿಮಗೆ ಅದು ಗೊತ್ತಿಲ್ವಾ?	don't you know that?
ಗೋಪಾಲ್—ಇಲ್ಲ, ಗೊತ್ತಿಲ್ಲ. ಅದು ಎಲ್ಲಿದೆ ಸ್ವಲ್ಪ ಹೇಳಿ?	No. I don't know. Tell me briefly where it is?
ಮ್ಯಾನೇಜರ್—ನಿಮಗೆ ಪ್ರಭಾ ಟಾಕೀಸ್ ಗೊತ್ತಾ?	Do you know Prabha Talkies?
ಗೋಪಾಲ್—ಗೊತ್ತು.	Yes. I know.
ಮ್ಯಾನೇಜರ್—ಆ ಟಾಕೀಸ್ ಪಕ್ಕದ ಓಣಿಯಲ್ಲಿ ರಾಘವೇಂದ್ರ ಭವನ್ ಇದೆ. ಅಲ್ಲಿ ಮದ್ರಾಸ್ ಊಟ ಇದೆ.	Raghavendra Bhavan is in the side lane near the Prabha Theater. Madras meal is available there.
ಗೋಪಾಲ್—ನಿಮ್ಮ ಹೋಟೆಲಲ್ಲಿ ಬೆಳಿಗ್ಗೆ ತಿಂಡಿಗೆ ಏನೇನು ಇರುತ್ತೆ?	What do you serve for breakfast in your hotel?
ಮ್ಯಾನೇಜರ್—ನಮ್ಮಲ್ಲಿ ಇಡ್ಲಿ ವಡೆ ಸಾಂಬಾರ್, ಮಸಾಲೆದೋಸೆ, ರವೆ ದೋಸೆ, ಪೂರಿ ಎಲ್ಲಾ ಇರುತ್ತೆ.	We serve Idli Vade sambaar, masale dose, rave dose, puri etc.
ಗೋಪಾಲ್—ನಮಗೆ ಇಡ್ಲಿ ವಡೆ ಸಾಂಬಾರ್ ಸಾಕು.	Idli Vade sambaar is enough for us
ಮ್ಯಾನೇಜರ್—ಎಷ್ಟೆಷ್ಟು ಕಳಿಸಲಿ? ಎಲ್ಲಾ ಎರಡೆರಡು ಕಳಿಸಲಾ?	How many of each item should I send? Shall I send two of each item?
ಗೋಪಾಲ್—ವಡೆ ಸಾಂಬಾರ್ ಎರಡೇ ಪ್ಲೇಟು ಸಾಕು. ಆದರೆ ಇಡ್ಲಿ ಎರಡು ಪ್ಲೇಟು ಸಾಲಲ್ಲ. ಇಡ್ಲಿ ಮೂರು ಪ್ಲೇಟು ಕಳಿಸಿ.	Two plates of Vade sambaar, are enough. But two plate of Idlis will not be sufficient. Send three plates.
ಮ್ಯಾನೇಜರ್—ಏನೂ ಸಿಹಿತಿಂಡಿ ಬೇಡ್ವಾ ಸಾರ್?	Don't you want any sweet dish Sir?
ಗೋಪಾಲ್—ಬೇಡ.	No. we do not want.

DRILLS :

I Repetition Drill :

a) ನಿಮಗೆ ಎಂಥ ರೂಮು ಬೇಕು ?
ನಿನಗೆ ಎಂಥ ಸೀರೆ ಬೇಕು ?
ನಿಮಗೆ ಎಂಥ ಪೆನ್ನು ಬೇಕು ?

b) ನಿಮಗೆ ಸಿಂಗಲ್ ರೂಮು ಬೇಕೋ, ಡಬ್ಬಲ್ ರೂಮುಬೇಕೋ?
ಅವರಿಗೆ ಬಿಳಿ ಸೀರೆ ಬೇಕೋ, ನೀಲಿ ಸೀರೆ ಬೇಕೋ ?
ನಿಮ್ಮ ನಾಯಿಗೆ ಮಾಂಸ ಬೇಕೋ, ಬಿಸ್ಕತ್ ಬೇಕೋ ?

c) ನಮಗೆ ಡಬಲ್ ರೂಮು ಬೇಕು.
ನನಗೆ ಎರಡು ದಿನ ರಜ ಬೇಕು.
ಅವನಿಗೆ ಬಾಡಿಗೆಗೆ ಮನೆ ಬೇಕು.
ಅವಳಿಗೆ ತಿಂಡಿಗೆ ಹಣ ಬೇಕು.
ಅದಕ್ಕೆ ಹಾಲು ಬೇಕು.

d) ನನಗೆ ಬಾಂಬೆ ಊಟ ಇಷ್ಟ.
ನಮಗೆ ಚಿಕ್ಕ ಮಗು ಇಷ್ಟ.
ಅವರಿಗೆ ಜಾಮೂನ್ ಇಷ್ಟ.

e) ನನ್ನ ಹೆಂಡತಿಗೆ ಬಾಂಬೆ ಊಟ ಬೇಡ.
ಅವಳಿಗೆ ಬಿಳೀ ಲಂಗ ಬೇಡ.
ನನಗೆ ಕಾಫಿ ಬೇಡ.

f) ನನ್ನ ಹೆಂಡತಿಗೆ ಚಪಾತಿ ಇಷ್ಟ ಇಲ್ಲ.
ನಮಗೆ ಈ ಮನೆ ಇಷ್ಟ ಇಲ್ಲ.

g) ನಿಮಗೆ ಪ್ರಭಾ ಟಾಕೀಸ್ ಗೊತ್ತಾ ?
ನಿನಗೆ ನಮ್ಮ ಮನೆ ಗೊತ್ತಾ ?

h) ನನಗೆ ಪ್ರಭಾ ಟಾಕೀಸ್ ಗೊತ್ತು.
ಅವರಿಗೆ ತಮಿಳು ಗೊತ್ತು.
ಅವಳಿಗೆ ಆನಂದ್ ಗೊತ್ತು.

i) ನನಗೆ ನಿಮ್ಮ ಮನೆ ಗೊತ್ತಿಲ್ಲ.
ಅವರಿಗೆ ತಮಿಳು ಗೊತ್ತಿಲ್ಲ.

j) ವಡೆ ಸಾಂಬಾರ್ ಎರಡು ಪ್ಲೇಟು ಸಾಕು.
ನನಗೆ ಎರಡು ಚಪಾತಿ ಸಾಕು.
ಅವರಿಗೆ ತಿಂಗಳಿಗೆ ಮುನ್ನೂರು ರೂಪಾಯಿ ಸಾಕು.

k) ಇಡ್ಲಿ ಎರಡು ಪ್ಲೇಟು ಸಾಲಲ್ಲ.
ಅವಳಿಗೆ ಐದು ಚಪಾತಿ ಸಾಲಲ್ಲ.
ದೀಪಾವಳಿ ಹಬ್ಬಕ್ಕೆ ನೂರು ರೂಪಾಯಿ ಸಾಲಲ್ಲ.

l) ನಿಮಗೆ ಏನೂ ಸಿಹಿತಿಂಡಿ ಬೇಡ್ವಾ ?
ಅವರಿಗೆ ಮಧ್ಯಾಹ್ನ ಊಟ ಬೇಡ್ವಾ ?
ನಿನಗೆ ಹೊಸ ಸೀರೆ ಬೇಡ್ವಾ ?

II Build up Drill :

Model :

ಬೇಕು.
ಲಂಗ ಬೇಕು.
ಬಿಳಿ ಲಂಗ ಬೇಕು.
ಹೊಸ ಬಿಳಿ ಲಂಗ ಬೇಕು.
ಹಬ್ಬಕ್ಕೆ ಹೊಸ ಬಿಳಿ ಲಂಗ ಬೇಕು.
ದೀಪಾವಳಿ ಹಬ್ಬಕ್ಕೆ ಹೊಸ ಬಿಳಿ ಲಂಗ ಬೇಕು.
ನನಗೆ ದೀಪಾವಳಿ ಹಬ್ಬಕ್ಕೆ ಹೊಸ ಬಿಳಿ ಲಂಗ ಬೇಕು.

Build up the following making the changes wherever necessary:

1) ಸಾಕು
2) ಸಾಲಲ್ಲ
3) ಬೇಕು
4) ಬೇಡ
5) ಇಷ್ಟ
6) ಇಷ್ಟ ಇಲ್ಲ
7) ಗೊತ್ತು
8) ಗೊತ್ತಿಲ್ಲ

III Transformation Drill:

a) Model: T: ಅವರಿಗೆ ಕಥೆ ಗೊತ್ತು.
S: ಅವರಿಗೆ ಕಥೆ ಗೊತ್ತಿಲ್ಲ.

1) ನನಗೆ ತಮಿಳು ಅಧ್ಯಾಪಕರು ಗೊತ್ತು.
2) ಅವಳಿಗೆ ಶಾಲಿಮಾರ್ ಟಾಕೀಸ್ ಗೊತ್ತು.
3) ಅವರಿಗೆ ಬೆಂಗಳೂರಿನಲ್ಲಿ ವಿಧಾನಸೌಧ ಗೊತ್ತು.

b) Model: T: ನನಗೆ ಹಾಲು ಬೇಕು.
S: ನನಗೆ ಹಾಲು ಬೇಡ.

1) ಅವರಿಗೆ ಬೆಳಿಗ್ಗೆ ಕಾಫಿ ಬೇಕು.
2) ನನಗೆ ಭೈರಪ್ಪನವರ ಕಾದಂಬರಿ ಬೇಕು.
3) ನಮಗೆ ಮೂರು ಮಕ್ಕಳು ಬೇಕು.

c) Model: T: ನನಗೆ ಕಿತ್ತಳೆ ಹಣ್ಣು ಇಷ್ಟ.
S: ನನಗೆ ಕಿತ್ತಳೆ ಹಣ್ಣು ಇಷ್ಟ ಇಲ್ಲ.

1) ನನಗೆ ಟೆರಿವುಲ್ ಪ್ಯಾಂಟ್ ಇಷ್ಟ.

2) ನಮಗೆ ದಿನಕ್ಕೆ ಐದು ಗಂಟೆ ಕ್ಲಾಸು ಇಷ್ಟ.

3) ಅವಳಿಗೆ ಕೋಳಿ ಮೊಟ್ಟೆ ಇಷ್ಟ.

d) Model : T : ನನಗೆ ನೂರು ರೂಪಾಯಿ ಸಾಕು.

S : ನನಗೆ ನೂರು ರೂಪಾಯಿ ಸಾಲಲ್ಲ.

1) ನನಗೆ ಎರಡು ಮಕ್ಕಳು ಸಾಕು.

2) ಅವಳಿಗೆ ನಾಲ್ಕು ಸೀರೆ ಸಾಕು.

3) ನನಗೆ ಈ ಸಣ್ಣ ಮನೆ ಸಾಕು.

4) ಅವರಿಗೆ ಐನೂರು ರೂಪಾಯಿ ಸಂಬಳ ಸಾಕು.

e) Model : T : ಅವನಿಗೆ ಈಗ ಕಾಫಿ ಬೇಕು.

S : ಅವನಿಗೆ ಈಗ ಕಾಫಿ ಬೇಕಾ ?

1) ಅವಳಿಗೆ ಹತ್ತು ರೂಪಾಯಿ ಬೇಕು.

2) ನಾಯಿಗೆ ಮೂಳೆ ಬೇಕು.

3) ಲೀಲನಿಗೆ ಹೊಸ ಸೀರೆ ಬೇಕು.

f) Model : T : ಅವರಿಗೆ ಈ ಪುಸ್ತಕ ಬೇಡ.

S : ಅವರಿಗೆ ಈ ಪುಸ್ತಕ ಬೇಡ್ವಾ ?

1) ಅವರಿಗೆ ಈ ಹಣ್ಣು ಬೇಡ.

2) ಅರ್ಪಿತಾಗೆ ಆ ಮ್ಯಾಕ್ಸಿ ಬೇಡ.

3) ನಿಮಗೆ ಈ ಮನೆ ಬೇಡ.

g) Model : T : ನಿನಗೆ ನೂರು ರೂಪಾಯಿ ಸಾಕು.

S : ನಿನಗೆ ನೂರು ರೂಪಾಯಿ ಸಾಕಾ?

1) ನಿನಗೆ ನಾಲ್ಕು ಚಪಾತಿ ಸಾಕು.

2) ಅವಳಿಗೆ ಎರಡು ಬಿಳಿ ಸೀರೆ ಸಾಕು.

3) ನನಗೆ ಬೆಳಿಗ್ಗೆ ತಿಂಡಿಗೆ ಎರಡು ಇಡ್ಲಿ ಸಾಕು.

h) Model : T : ನಿಮಗೆ ಐನೂರು ರೂಪಾಯಿ ಸಾಲಲ್ಲ.

S : ನಿಮಗೆ ಐನೂರು ರೂಪಾಯಿ ಸಾಲಲ್ಲವಾ?

1) ನಿಮಗೆ ಎರಡು ದಿನ ರಜ ಸಾಲಲ್ಲ.

2) ಅವರಿಗೆ ಆ ಮನೆ ಸಾಲಲ್ಲ.

3) ಅದಕ್ಕೆ ಅಷ್ಟು ಮಾಂಸ ಸಾಲಲ್ಲ.

i) Model : T : ಅವರಿಗೆ ಮಲ್ಲಿಕಾರ್ಜುನ್ ಗೊತ್ತು.

S : ಅವರಿಗೆ ಮಲ್ಲಿಕಾರ್ಜುನ್ ಗೊತ್ತಾ ?

1) ಅವರಿಗೆ ನನ್ನ ಸ್ನೇಹಿತ ರವಿ ಗೊತ್ತು.

2) ನಿಮಗೆ ಶಾಲಿನಗರ್ ಟಾಕೀಸ್ ಗೊತ್ತು.

3) ಅವನಿಗೆ ಎಸ್.ಆರ್.ಎಲ್.ಸಿ. ಪ್ರಿನ್ಸಿಪಾಲ್ ಗೊತ್ತು

j) Model : T : ನಿನಗೆ ಶಾಲಿನಿ ಗೊತ್ತಿಲ್ಲ.

S : ನಿನಗೆ ಶಾಲಿನಿ ಗೊತ್ತಿಲ್ವಾ ?

1) ನಿನಗೆ ನಮ್ಮ ಮನೆ ಗೊತ್ತಿಲ್ಲ.

2) ನನಗೆ ಪಟ್ನಾಯಕ್ ಗೊತ್ತಿಲ್ಲ.

3) ನಮ್ಮ ನಾಯಿಗೆ ನೀವು ಗೊತ್ತಿಲ್ಲ.

k) Model : T : ಅವರಿಗೆ ಈ ಸೀರೆ ಇಷ್ಟ.

S : ಅವರಿಗೆ ಈ ಸೀರೆ ಇಷ್ಟಾನಾ ?

1) ಅವರಿಗೆ ಈ ಪುಸ್ತಕ ಇಷ್ಟ.
2) ಅವಳಿಗೆ ಮಲ್ಲಿಗೆ ಹೂ ಇಷ್ಟ.
3) ನಿಮಗೆ ಕನ್ನಡ ಸಿನಿಮಾ ಇಷ್ಟ.

IV Substitution Drill :

Model : ಅವರಿಗೆ ಚಿಕ್ಕ ಮನೆ ಬೇಕು.

ಇಷ್ಟ.

ಅವರಿಗೆ ಚಿಕ್ಕ ಮನೆ ಇಷ್ಟ

ಅವನಿಗೆ

ಅವನಿಗೆ ಚಿಕ್ಕ ಮನೆ ಇಷ್ಟ.

ಬೇಡ

ಅವನಿಗೆ ಚಿಕ್ಕ ಮನೆ ಬೇಡ.

ಅವಳಿಗೆ

ಅವಳಿಗೆ ಚಿಕ್ಕ ಮನೆ ಬೇಡ.

ಇಷ್ಟ ಇಲ್ಲ.

ಅವಳಿಗೆ ಚಿಕ್ಕ ಮನೆ ಇಷ್ಟ ಇಲ್ಲ.

ನಮಗೆ

ನಮಗೆ ಚಿಕ್ಕ ಮನೆ ಇಷ್ಟ ಇಲ್ಲ.

ಸಾಕು.

ನಮಗೆ ಚಿಕ್ಕ ಮನೆ ಸಾಕು.

ನನಗೆ

ನನಗೆ ಚಿಕ್ಕ ಮನೆ ಸಾಕು.

ಸಾಲಲ್ಲ.

ನನಗೆ ಚಿಕ್ಕ ಮನೆ ಸಾಲಲ್ಲ.

Substitute :

1) ನನಗೆ ಒಂದು ಚಪಾತಿ ಸಾಕು.

ನಿನಗೆ

____

ದೋಸೆ

____

ಎರಡು

____

ಸಾಲಲ್ಲ.

____

ಅವನಿಗೆ

____

ಬೇಕು.

____

ಇಡ್ಲಿ

____

ಕಮಲನಿಗೆ

____

ಚಿಕ್ಕ

____

ಕಿತ್ತಳೆಹಣ್ಣು

____

2) ಅವರಿಗೆ ನಿಮ್ಮ ತಂದೆ ಗೊತ್ತು.

ನನಗೆ

____

ತಾಯಿ

____

ನನ್ನ

____

ಸೀತಮ್ಮನಿಗೆ

____

ಅಕ್ಕ

____

ಗೊತ್ತಿಲ್ಲ

____

ಮೋಹನನ

____

ಅಧ್ಯಾಪಕರು.

____

V Response Drill :

1) ನಿಮಗೆ ಹಾಸ್ಟಲ್‌ನಲ್ಲಿ ಸಿಂಗಲ್ ರೂಮು ಬೇಕೋ ಡಬಲ್ ರೂಮು ಬೇಕೋ ?
2) ನಿಮಗ ಚಪಾತಿ ಇಷ್ಟಾನೋ ಪೂರಿ ಇಷ್ಟಾನೋ ?
3) ನಿಮಗೆ ಡಾ. ಪಟ್ನಾಯಕ್ ಗೊತ್ತಿಲ್ವಾ ?
4) ನಿಮಗೆ ತಿಂಗಳಿಗೆ ನೂರಿಪ್ಪತ್ತೈದು ರೂಪಾಯಿ ಸಾಲಲ್ವಾ ?

EXERCISE

I Fill in the blanks using the suitable words :

1) ಇವತ್ತು ರಾತ್ರಿ ನನಗೆ ಊಟ———
2) ರಾಜುವಿಗೆ ಸೇಬಿನಹಣ್ಣು ———
3) ರವಿಗೆ ಊಟಕ್ಕೆ ಎರಡು ಚಪಾತಿ———
4) ಸಿಂಧುವಿಗೆ ಸಂಗೀತ———

5) ನನಗೆ ನಿಮ್ಮ ಅಣ್ಣ ಚೆನ್ನಾಗಿ ———
6) ನಿಮಗೆ ಸೀಬೇಹಣ್ಣು ——— ?
7) ನನಗೆ ನಿಮ್ಮ ಮನೆಯಲ್ಲಿ ಯಾರೂ ———
8) ನಿಮಗೆ ಆ ಕಥೆ ——— ?

II Fill in the blanks making the appropriate changes in the words given in the brackets :

1) ——— ಈಗ ಒಂದು ಕಪ್ಪು ಕಾಫಿ ಬೇಕು. (ರಾಜು)
2) ನಿಮಗೂ ಕಾಫಿ ——— ? (ಬೇಕು)
3) ——— ಒಂದು ಪುಸ್ತಕ ಸಾಕು. (ನಾನು)
4) ರವಿಗೆ ನಿಮ್ಮ ಅಣ್ಣ ——— ? (ಗೊತ್ತಿಲ್ಲ)
5) ನಿಮ್ಮ ಅಕ್ಕನಿಗೆ ಇಷ್ಟು ಸೀರೆ ——— ? (ಸಾಲಲ್ಲ)

III Transform into negative :

1) ನನಗೆ ಕುರ್ಚಿ ಬೇಕು.
2) ರವಿಗೆ ನಿಮ್ಮ ಮನೆ ಗೊತ್ತು.
3) ನಿಮ್ಮ ಅಣ್ಣನಿಗೆ ಒಂದು ಪುಸ್ತಕ ಸಾಕಾ?
4) ಅವಳಿಗೆ ಚಪಾತಿ ಇಷ್ಟ.
5) ನನಗೆ ಒಂದು ಕೋಳಿಮೊಟ್ಟೆ ಸಾಕು.

IV Frame three interrogative sentences to each of the following statements :

1) ರಾಜುವಿಗೆ ಒಂದು ಹೊಸ ಪೆನ್ನು ಬೇಕು.
2) ಸ್ನೇಹನಿಗೆ ಆ ಹಳೆ ಕಥೆ ಗೊತ್ತು.
3) ರಾಜಾರಾಂಗೆ ಮಸಾಲೆದೋಸೆ ಇಷ್ಟ.

V Read the following Passage and answer the given questions.

ಮಾಘು ಮತ್ತು ಅವರ ಹೆಂಡತಿಗೆ ಚಪಾತಿ ಇಷ್ಟ. ಮಾಘುವಿನ ಮಕ್ಕಳಿಗೆ ಚಪಾತಿ ಇಷ್ಟ ಇಲ್ಲ. ಮಾಘುವಿನ ಮಗಳಿಗೆ ಪೂರಿ ಬೇಕು. ಮಾಘುವಿನ

ಮಗನಿಗೆ ಪೂರಿ ಬೇಡ. ಅವನಿಗೆ ಮತ್ತು ಸಾಧುವಿನ ತಮ್ಮನಿಗೆ ಮಸಾಲೆ ದೋಸೆ ಇಷ್ಟ. ಅವರಿಗೆ ತಿಂಡಿಗೆ ನಾಲ್ಕು ದೋಸೆ ಸಾಲಲ್ಲ. ಆರೇಳು ದೋಸೆ ಬೇಕು.

1) ಸಾಧು ಮತ್ತು ಅವರ ಹೆಂಡತಿಗೆ ಯಾವ ತಿಂಡಿ ಇಷ್ಟ ?
2) ಚಪಾತಿ ಯಾರಿಗೆ ಇಷ್ಟ ಇಲ್ಲ?
3) ಮಗನಿಗೆ ಏನು ಬೇಕು ?
4) ಮಗನಿಗೆ ಏನು ಬೇಡ ?
5) ಯಾರು ಯಾರಿಗೆ ಮಸಾಲೆ ದೋಸೆ ಇಷ್ಟ ?

VI Write a conversation with a vegetable vender :

a) Enquire the prices of three vegetables and three kinds of fruits.

b) Purchase half a K. G. of brinzal and one K.G. of cabbage.

c) Refuse to buy apples but buy bananas.

VIII Answer the following questions :

1) ಗೋಪಾಲ್‌ಗೆ ಎಂಥ ರೂಮು ಬೇಕು ?
2) ಆ ಹೋಟೆಲ್‌ನಲ್ಲಿ ಯಾವ ಊಟ ಇದೆ ?
3) ರಾಘವೇಂದ್ರ ಭವನ ಎಲ್ಲಿ ಇದೆ ?
4) ಹೋಟೆಲ್‌ನಲ್ಲಿ ಬೆಳಿಗ್ಗೆ ತಿಂಡಿಗೆ ಏನೇನು ಇರುತ್ತೆ ?

VOCABULARY :

ಇಷ್ಟ—like
ಉಂಟು—is, are, there (South Canara dialect)
ಓಣಿ—lane
ಕಳಿಸು—send

ಕೊಡು—give

ಗೊತ್ತು—know

ತೋರಿಸು—show

ಬಾಡಿಗೆ—rent

ಬೇಕು—want

ಬೇಡ—not wanted

ಮಾಣಿ—server, room boy

ಸಾಕು—enough

ಸಾಲಲ್ಲ—not enough

ಸಿಹಿತಿಂಡಿ—sweet dish

ಹಣ—money

Supplementary Vocabulary

ಕೋಳಿಮೊಟ್ಟೆ—hen egg

ಮಾಂಸ—meat

ಮೂಳೆ—bone

ಸಂಬಳ—salary

ದುಡ್ಡು—money

GRAMMAR NOTES

1. Consider the following defective verbs used in this lesson.

ಬೇಕು, ಸಾಕು, ಇಷ್ಟ, ಗೊತ್ತು, and their negatives ಬೇಡ, ಸಾಲಲ್ಲ, ಇಷ್ಟಇಲ್ಲ and ಗೊತ್ತಿಲ್ಲ, respectively.

These verbs do not take suffixes for tense, number and gender. These are called defective verbs, as oppose to regular verb which take suffixes for tense, number and gender in a finite sentence. Also note that whenever these defective verbs occur the subject of these defective verbs must be in dative case.

Ex : ನನಗೆ ಕಾಫಿ ಬೇಕು.
ಅವನಿಗೆ ದೋಸೆ ಸಾಕು.

2. The word ಆದರೂ is affixed to interrogative Pronouns to obtain the indefinite construction like.

ಎಲ್ಲಿ + ಆದರೂ = ಎಲ್ಲಾದರೂ 'any where' 'some where'
ಯಾಕೆ + ಆದರೂ = ಯಾಕಾದರೂ 'for some reason'
ಯಾರು + ಆದರೂ = ಯಾರಾದರೂ 'some one'
ಏನು + ಆದರೂ = ಏನಾದರೂ 'some thing'

UNIT 5

Review LESSON 5

IN THE CLOTH SHOP

DIALOGUE

ವ್ಯಾಪಾರಿ—ಬನ್ನಿ ಸಾರ್ ಬನ್ನಿ. ಕೂತ್ಕೊಳ್ಳಿ. ಏನು ಬಟ್ಟೆ ಬೇಕು ಸಾರ್.

ರಾಜಣ್ಣ—ನಮಗೆ ಶರ್ಟ್ ಮತ್ತು ಪ್ಯಾಂಟ್ ಬಟ್ಟೆ ಬೇಕು. ಎಲ್ಲಿ ಸುರೇಶ್ ಕಾಣಲ್ಲ. ಅಂಗಡಿಯಲ್ಲಿ ಇಲ್ವಾ ?

ವ್ಯಾಪಾರಿ—ಅವರು ಇಷ್ಟು ಹೊತ್ತಿನಲ್ಲಿ ಇರಲ್ಲ. ಸಾಯಂಕಾಲ ಐದು ಗಂಟೆಗೆ ಇಲ್ಲಿ ಇರ್ತಾರೆ. ಈಗ ಅವರು ಮನೆಯಲ್ಲಿ ಇದಾರೆ.

ರಾಜಣ್ಣ—ನೋಡಿ ಭಾಸ್ಕರನ್ ಯಾವ ಬಟ್ಟೆ ಬೇಕು ?

ವ್ಯಾಪಾರಿ—ನಿಮಗೆ ಪ್ಯಾಂಟ್ ಬಟ್ಟೆ ಯಾವುದರಲ್ಲಿ ಇರಲಿ ಸಾರ್? ಟೆರಿವುಲ್‌ನಲ್ಲಿ ಇರಲೋ ಟೆರಿಕಾಟ್‌ನಲ್ಲಿ ಇರಲೋ ?

ಭಾಸ್ಕರನ್—ಪ್ಯಾಂಟ್ ಬಟ್ಟೆ ಟೆರಿವುಲ್ ಕೊಡಿ. ಶರ್ಟಿಂಗ್ ಟೆರಿಕಾಟ್ ಸಾಕು.

ವ್ಯಾಪಾರಿ—ನಮ್ಮಲ್ಲಿ ಒಳ್ಳೆಯ ಪಾಲಿಯೆಸ್ಟರ್ ಶರ್ಟಿಂಗ್ ಇದೆ ಸಾರ್. ಒಂದು ಸಾರಿ ನೋಡಿ.

ಭಾಸ್ಕರನ್—ಬೇಡಪ್ಪ, ನನಗೆ ಅದು ಇಷ್ಟ ಇಲ್ಲ.

ವ್ಯಾಪಾರಿ—ನೋಡಿ ಸಾರ್, ಇದು ಒಳ್ಳೆಯ ಬಣ್ಣ ಕೂಡ.

ಭಾಸ್ಕರನ್—ಈ ಬಣ್ಣದ ಬಟ್ಟೆ ನನಗೆ ಬೇಡ. ನೋಡು ರಾಜಣ್ಣ ಆ ಬಟ್ಟೆ ಹೇಗೆ ?

ರಾಜಣ್ಣ—ಭಾಸ್ಕರನ್ ಅದಕ್ಕಿಂತ ಈ ತಿಳಿನೀಲಿ ಬಣ್ಣದ ಬಟ್ಟೆ ಉತ್ತಮ ಅಲ್ವಾ ?

ಭಾಸ್ಕರನ್—ನೋಡಿ ಆ ತಿಳಿ ಬಣ್ಣದ ಪ್ಯಾಂಟ್ ಬಟ್ಟೆ ಈ ಕಡೆ ಕೊಡಿ.

ವ್ಯಾಪಾರಿ—ತಗೊಳ್ಳಿ ಸಾರ್. ರೇಮಂಡ್ಸ್ ಸೂಟಿಂಗ್. ಇದರ ಬೆಲೆ ಜಾಸ್ತಿ.

ರಾಜಣ್ಣ—ಮೀಟರ್ ?

ವ್ಯಾಪಾರಿ—ನೂರ ಹದಿನೇಳು ರೂಪಾಯಿ ಸಾರ್.

ಭಾಸ್ಕರನ್—ಅಬ್ಬಾ. ಸ್ವಲ್ಪ ಕಡಿಮೆ ಕೊಡಿ.

ವ್ಯಾಪಾರಿ—ಇಲ್ಲ ಸಾರ್. ಅದರಿಂದ ಏನೂ ಗಿಟ್ಟಲ್ಲ.

ರಾಜಣ್ಣ—ಬಟ್ಟೆ ಚೆನ್ನಾಗಿದೆ. ತಗೊಳಿ ಭಾಸ್ಕರನ್

ಭಾಸ್ಕರನ್—ಸರಿ ಕೊಡಿ. ಶರ್ಟಿಂಗ್ ಆ ಬಿಳಿಯದು ಕೊಡಿ ಸಾಕು. ಅದರ ಬೆಲೆ ಎಷ್ಟು ?

ವ್ಯಾಪಾರಿ—ಅದರ ಬೆಲೆ ಇಪ್ಪತ್ತೆಂಟು ರೂಪಾಯಿ ಸಾರ್.

ರಾಜಣ್ಣ—ಆಗಲಿ ಕೊಡಿ.

TEST PAPER

I Transform the following sentences into negative :

1) ನಮ್ಮ ಅಣ್ಣ ಸಾಯಂಕಾಲ ಮನೆಯಲ್ಲಿ ಇರ್ತಾರೆ.
2) ಸುನೀತಳಿಗೆ ದಿನಕ್ಕೆ ಎರಡು ಚಪಾತಿ ಸಾಕು.
3) ನನಗೆ ಆ ಪುಸ್ತಕ ಬೇಕು.

4) ನನ್ನ ತಂಗಿಗೆ ಮೈಸೂರು ಪಾಕ್ ಇಷ್ಟ.
5) ಜಿ. ಆರ್. ವಿಶ್ವನಾಥ್ ನನಗೆ ಗೊತ್ತು.
6) ನಮಗೆ ಹನ್ನೆರಡು ಗಂಟೆಗೆ ಕ್ಲಾಸು ಇದೆ.
7) ನಮ್ಮ ಪ್ರಿನ್ಸಿಪಾಲ್ ರೂಮಿನಲ್ಲಿ ಇದಾರೆ.

II Transform the following sentences into interrogative sentences by using interrogative marker.

1) ಅವರಿಗೆ ಸಣ್ಣ ಕಥೆ ಇಷ್ಟ.
2) ಅವಳಿಗೆ ಹತ್ತು ರೂಪಾಯಿ ಸಾಕು.
3) ರಾಜಣ್ಣ ಮಧ್ಯಾಹ್ನ ಮನೆಯಲ್ಲಿ ಇರ್ತಾರೆ.
4) ಅವಳಿಗೆ ಅಷ್ಟು ಜಾಸ್ತಿ ಬೆಲೆ ಸೀರೆ ಬೇಡ
5) ಅವಳಿಗೆ ಬಿ. ಎಸ್. ಚಂದ್ರಶೇಖರ್ ಗೊತ್ತಿಲ್ಲ.

III Encircle the word which doesn't belong to the group :

1) ಹಳೆಯದು	2) ಮನೆ
ಕೆಂಪದು	ಪುಸ್ತಕ
ರಾಮನದು	ಭಾಷೆ
ಹೊಸದು	ದೊಡ್ಡ
ಬಿಳಿಯದು	ಹೆಸರು
3) ಮರಗಳು	4) ಬೇಕು
ಅಣ್ಣಂದಿರು	ಸಾಕು
ಮಗಳು	ಹೋಗು
ಸೊಸೆಯಂದಿರು	ಇಷ್ಟ
ಮಕ್ಕಳು	ಗೊತ್ತು.

IV Split the following words and write in the right hand side :

1) ಅವರಲ್ಲಿ : ____________________
2) ಮನೆಗೆ : ____________________

3) ಊರಿನಲ್ಲಿ : __________

4) ಮೂರಕ್ಕೆ : __________

5) ಮಾತೃಭಾಷೆಯು : __________

6) ಅದಕ್ಕಿಂತ : __________

V. Fill in the blanks using the appropriate words :

1) ನನ್ನ ಸ್ನೇಹಿತ ಈಗ ಮನೆಯಲ್ಲಿ __________

2) ನಮಗೆ ಊರಿನಲ್ಲಿ ಎರಡು ಮನೆ __________

3) ಅವರು ಸಾಯಂಕಾಲ ಲೈಬರಿಯಲ್ಲಿ __________

4) ನನ್ನ ತಂಗಿಗೆ ಹಿಂದಿ ಸಿನಿಮಾ __________

5) ಪೆನ್ನು ಮೇಜಿನ ಮೇಲೆ __________

Answer the following questions :

1) ಭಾಸ್ಕರನ್‌ಗೆ ಎಂಥ ಬಟ್ಟೆ ಬೇಕು ?

2) ರೇಮಾಂಡ್ಸ್ ಸೂಟಿಂಗ್ ಮೀಟರ್‌ಗೆ ಎಷ್ಟು ?

3) ಬಿಳಿಯ ಶರ್ಟಿಂಗ್ ಬೆಲೆ ಎಷ್ಟು ?

4) ಭಾಸ್ಕರನ್‌ಗೆ ಪಾಲಿಯಸ್ಟರ್ ಶರ್ಟಿಂಗ್ ಇಷ್ಟಾನಾ ?

VOCABULARY :

ಉತ್ತಮ—better

ಕಾಣು—to be seen

ಕೂತ್ಕೊಳು—sit

ಗಿಟ್ಟು—profitable

ತಿಳಿ ನೀಲಿ—light blue

UNIT 6

LESSON 21

PLAN TO GO TO A MOVIE

DIALOGUE

ಕಾಮಾಕ್ಷಿ—ಇವತ್ತು ನಾನು ಸಿನಿಮಾಕ್ಕೆ ಹೋಗ್ತೀನಿ. ನೀನು ಬರ್ತೀಯಾ ?	I am going to a movie today. Are you coming ?
ಮೀನಾಕ್ಷಿ—ಯಾವ ಸಿನಿಮಾಕ್ಕೆ ಹೋಗ್ತೀಯ ?	Which movie are you going to ?

ಕಾಮಾಕ್ಷಿ—"ವಂಶವೃಕ್ಷಕ್ಕೆ" ಹೋಗ್ತೀನಿ.	I am going to 'Vamsavruksha'
ಮೀನಾಕ್ಷಿ—ಆಗಲಿ. ನಾನು ಬರ್ತೀನಿ. ಆ ಸಿನಿಮಾಕ್ಕೆ ತುಂಬ ರಷ್ ಇದೆ. ಮೊದಲೇ ಹೋಗೋಣ.	Allright. I will come. There will be quite a rush for that Movie. Let us go early.
ಕಾಮಾಕ್ಷಿ—ನಮ್ಮ ಯಜಮಾನರು ಫೋನ್ ಮಾಡ್ತಾರೆ. ಟಿಕೆಟ್ ಸಿಗುತ್ತೆ. ನಾಲ್ಕು ಗಂಟೆಗೇ ನಮ್ಮ ಆಳು ಹೋಗ್ತಾನೆ. ಅವನು ಮುಂಚೇನೆ ಟಿಕೆಟ್ ತೆಗೋತಾನೆ.	My husband will Phone up. tickets will be available (reserved). Our servant will go at 4O' clock. He will get the tickets in advance.
ಮೀನಾಕ್ಷಿ—ಸರಿ. ಹಾಗಾದರೆ ಎಷ್ಟು ಗಂಟೆಗೆ ಮನೆಯಿಂದ ಹೊರಡೋಣ ?	Allright. Then when shall we start from home ?
ಕಾಮಾಕ್ಷಿ—ಐದೂವರೆಗೆ ಮನೆಯಿಂದ ಹೊರಡೋಣ.	Let us start from home at 5.30 p.m.
ಮೀನಾಕ್ಷಿ—ತಡ ಆಗಲ್ಲವಾ ?	Will it not be late ?
ಕಾಮಾಕ್ಷಿ—ಇಲ್ಲ. 5–40ಕ್ಕೆ ಮಾರ್ಕೆಟ್ ಬಸ್ ಬರುತ್ತೆ. ಅದರಲ್ಲಿ ಹೋಗೋಣ. ಆರು ಗಂಟೆಗೆಲ್ಲಾ ಮಾರ್ಕೆಟ್ ಸೇರ್ತೀವಿ. ಅಲ್ಲಿಂದ ಟಾಕೀಸ್ ಬಹಳ ಹತ್ತಿರ.	No. The bus going to the market comes at 5–40. Let us go by that. We will reach market by 6O' clock. Talkies is near there.
ಮೀನಾಕ್ಷಿ—ಅದು ಸರಿ, ಆಟೋನೂ ಸಿಗತ್ತೆ ಅನ್ನಿ.	This is allright. Any way autos will be available too.
ಕಾಮಾಕ್ಷಿ—ನಿಮ್ಮ ಮನೆಯಿಂದ ಯಾರು ಯಾರು ಬರ್ತಾರೆ ?	Who are all coming from your home ?
ಮೀನಾಕ್ಷಿ—ನನ್ನ ಮಗ ಬರ್ತಾನೆ. ನನ್ನ ನಾದಿನಿ ಬರ್ತಾಳೆ. ನಿಮ್ಮ ಮನೆಯಿಂದ ನೀವು ಬರ್ತೀರಿ ಸರಿ. ನಿಮ್ಮ	My son will come. My husband's sister will come. You are coming from your house. Is anybody

19

ಜೊತೆಗೆ ಇನ್ನು ಯಾರಾದರೂ ಬರ್ತಾರಾ ?	coming with you ?
ಕಾಮಾಕ್ಷಿ—ನಾನೂ ನನ್ನ ಮಗ ಇಬ್ಬರೂ ಬರ್ತೀವಿ. ಈಗ ನಾನು ಮನೆಗೆ ಹೋಗ್ತೀನಿ, ಐದೂವರೆಗೆ ಒಂದು ಸಲ ಜೋರಾಗಿ ಕರೀರಿ.	Both I and my son will come. Now, I will go home. Call me loudly at 5–30 p.m.
ಮೀನಾಕ್ಷಿ—ಸರಿ ಹಾಗೇ ಆಗಲಿ.	Allright. Let it be so.
ಕಾಮಾಕ್ಷಿ—ನಾನಿನ್ನು ಬರ್ಲಾ ?	Shall I take leave of you ?
ಮಿನಾಕ್ಷಿ—ಸ್ವಲ್ಪ ತಡೀರಿ. ಕುಂಕುಮ ಕೊಡ್ತೀನಿ.	Wait a minute. I will give you some saffron powder.

DRILLS :

I Build up Drill :

Model: ಹೋಗ್ತೀನಿ.
ಸಿನಿಮಾಕ್ಕೆ ಹೋಗ್ತಿನಿ.
ಸಾಯಂಕಾಲ ಸಿನಿಮಾಕ್ಕೆ ಹೋಗ್ತೀನಿ.
ಇವತ್ತು ಸಾಯಂಕಾಲ ಸಿನಿಮಾಕ್ಕೆ ಹೋಗ್ತೀನಿ.
ನಾನು ಇವತ್ತು ಸಾಯಂಕಾಲ ಸಿನಿಮಾಕ್ಕೆ ಹೋಗ್ತೀನಿ.

Build up the following changing the subject wherever necessary :

1) ಮಾಡ್ತಾರೆ
2) ಬರ್ತಾಳೆ
3) ಕುಡೀತೀನಿ
4) ಹೋಗ್ತೀವಿ
5) ಸಿಗತ್ತೆ

II Substitution Drill :

Model : ನಾನು ಮನೆಗೆ ಹೋಗ್ತೀನಿ.

ಅವನು

ಅವನು ಮನೆಗೆ ಹೋಗ್ತಾನೆ.

Substitute :

1) ಕಮಲ ಇವತ್ತು ಸಿನಿಮಾಕ್ಕೆ ಹೋಗ್ತಾಳೆ.
   ಅವರು

2) ನೀವು ಎಲ್ಲಿ ನೋಡ್ತೀರಿ ?
   ರಾಜು

3) ರಾಮಣ್ಣನವರು ಏನು ಕೆಲಸ ಮಾಡ್ತಾರೆ ?
   ನೀನು

4) ಅವರು ಮನೆಯಿಂದ ಬರ್ತಾರಾ ?
   ನಾಯಿ

5) ನಾವು ಹಣ್ಣು ತಿನ್ತೀವಿ.
   ನೀವು

6) ಮಗು ಊಟ ಮಾಡತ್ತೆ.
   ರಾಜಾರಾಯರು

III Transformation Drill :

Model : T : ನೀನು ಮನೆಗೆ ಹೋಗ್ತೀಯೆ.

S : ನೀನು ಮನೆಗೆ ಹೋಗ್ತೀಯಾ ?

Transform :

1) ಅವನು ಊಟ ಮಾಡ್ತಾನೆ.
2) ಚಂದ್ರಪ್ಪನವರು ಹಣ್ಣು ತಿನ್ತಾರೆ.
3) ನೀವು ಪುಸ್ತಕ ತೆಗೋತೀರಿ.
4) ಅವಳು ಸಿನಿಮಾಕ್ಕೆ ಹೋಗ್ತಾಳೆ.
5) ನೀನು ತಾತನಿಗೆ ಚಕ್ಕುಲಿ ಕೊಡ್ತೀಯೆ.

IV Response Drill :

1) ನೀವು ಒಂದೂವರೆ ಗಂಟೆಗೆ ಎಲ್ಲಿಗೆ ಹೋಗ್ತೀರಿ ?
2) ನೀವು ಎಲ್ಲಿಂದ ಕಾಲೇಜಿಗೆ ಬರ್ತೀರಿ ?
3) ನೀವು ಎಷ್ಟು ಗಂಟೆಗೆ ಕಾಲೆಗೆ ಬರ್ತೀರಿ ?
4) ನೀವು ಹಾಸ್ಟೆಲಿಂದ ಎಷ್ಟು ಗಂಟೆಗೆ ಸಿಟಿಗೆ ಹೊರಡ್ತೀರಿ ?
5) ನೀವು ಇವತ್ತು ಸಾಯಂಕಾಲ ಎಲ್ಲಿಗೆ ಹೋಗ್ತೀರಿ ?

EXERCISES

I Write the word represented by the formula :

Model :	ರಾಮ	+	ಇಂದ	=	ರಾಮನಿಂದ
	ಅಣ್ಣ	+	ಇಂದ	=	———
	ಅಕ್ಕ	+	ಇಂದ	=	———
	ಲಕ್ಷ್ಮಣ	+	ಇಂದ	=	———
	ತಮ್ಮ	+	ಇಂದ	=	———
	ಕಮಲ	+	ಇಂದ	=	———

Model :	ಮರ	+	ಇಂದ	=	ಮರದಿಂದ
	ಗಿಡ	+	ಇಂದ	=	———
	ರಜ	+	ಇಂದ	=	———
	ವಾರ	+	ಇಂದ	=	———
Model :	ಉಡುಗೊರೆ	+	ಇಂದ	=	ಉಡುಗೊರೆಯಿಂದ
	ಕಾಫಿ	+	ಇಂದ	=	———
	ಮನೆ	+	ಇಂದ	=	———
	ಗಂಟೆ	+	ಇಂದ	=	———
	ಊರು	+	ಇಂದ	=	ಊರಿನಿಂದ
	ಕಾಲೇಜು	+	ಇಂದ	=	———
	ಕಾಲು	+	ಇಂದ	=	———
	ಶರ್ಟು	+	ಇಂದ	=	———
	ನಾವು	+	ಇಂದ	=	ನಮ್ಮಿಂದ
	ನೀವು	+	ಇಂದ	=	———
	ನಾನು	+	ಇಂದ	=	———
	ನೀನು	+	ಇಂದ	=	———

II Fill in the blanks using the Kannada equivalents of the English words given in the brackets :

1) ನಾನು ಇವತ್ತು ——— ನೋಡ್ತೀನಿ. (movie)
2) ನಿಮ್ಮ ——— ಎಲ್ಲಿ ಕೆಲಸ ಮಾಡ್ತಾರೆ ? (husband)
3) ಕಮಲೆಯು ——— ಯಾರು ? (wife's younger sister)
4) ಒಂದು ಸಲ ——— ಕರೀರಿ. (loudly)
5) ತಡೀರಿ ——— ಕೊಡ್ತೀನಿ. (saffron)

III Fill in the blanks making the appropriate changes in the words given in the brackets :

1) ನಾನು ——— ಬರ್ತೀನಿ. (ಮನೆ)
2) ಅವಳು ——— ಹೋಗ್ತಾಳೆ. (ಕಾಲೇಜು)
3) ——— ಐದು ರೂಪಾಯಿ ತೆಗೊ. (ಅವರು)
4) ——— ಕೆಟ್ಟದ್ದು ಆಗುತ್ತೆ. (ನಾನು)
5) ——— ಯಾರಿಗೆ ಸಂತೋಷ ? (ನೀವು)
6) ನಾಳೆ ——— ಬಾ. (ಊರು)
7) ——— ನನಗೆ ಕಷ್ಟ. (ರಾಮು)
8) ಈ ——— ಯಾವ ಪಾಠ ಮಾಡೋಣ ? (ಪುಸ್ತಕ)
9) ——— ಬಹಳ ಅನುಕೂಲ ಇದೆ. (ನಾಯಿ)

IV Fill in the blanks using the present forms of the verbs given in the brackets :

1) ರಮೇಶ ಸಿನಿಮಾಕ್ಕೆ ——— (ಹೋಗು)
2) ನಿಮ್ಮ ಮನೆಗೆ ಸರೋಜ ——— ? (ಬರು)
3) ಆ ಹುಡುಗಿ ಏನು ——— ? (ಮಾಡು)
4) ನಾವು ಪುಸ್ತಕ ——— (ತೆಗೋ)
5) ನೀನು ಯಾವಾಗ ಟೀ ——— ? (ಕುಡಿ)
6) ನಾನು ನಾಲ್ಕು ಗಂಟೆಯ ಬಸ್ಸಿಗೆ ——— (ಹೊರಡು)
7) ಇವ್ರು ಯಾಕೆ ನನ್ನ ಹಿಂದೆ ——— ? (ಬರು)
8) ನೀವು ಯಾಕೆ ನನ್ನನ್ನು ಹೀಗೆ ——— ? (ನೋಡು)

V Give one interrogative sentence for each of the following statements substituting the underlined word with that of an interrogative word.

1) ರಾಜು ಮನೆಯಲ್ಲಿ ಕಾಫಿ ಕುಡೀತಾನೆ.

2) ನಾನು ಸಿನಿಮಾಕ್ಕೆ ಹೋಗ್ತೀನಿ.

3) ರವಿ ಶಾಲೆಯಿಂದ ಬರ್ತಾನೆ.

4) ಕುಸುಮ ಈಗ ಕುಂಕುಮ ಕೊಡ್ತಾಳೆ.

5) ನಿಮ್ಮಿಂದ ಒಂದು ಕೆಲಸ ಆಗಬೇಕು.

6) ರಮೇಶ ಕಾಫಿ ಕುಡೀತಾನೆ.

VI Answer the following questions :

1) ಕಾಮಾಕ್ಷಿ, ಮೀನಾಕ್ಷಿ ಯಾವ ಸಿನಿಮಾಕ್ಕೆ ಹೋಗ್ತಾರೆ ?

2) ಕಾಮಾಕ್ಷಿಯ ಮನೆಯಿಂದ ಯಾರು ಯಾರು ಹೋಗ್ತಾರೆ ?

3) ಕಾಮಾಕ್ಷಿ ಮತ್ತು ಮೀನಾಕ್ಷಿ ಎಷ್ಟು ಗಂಟೆಗೆ ಹೊರಡುತ್ತಾರೆ ?

VOCABULARY :

ಆಗು—to become, to happen

ಅನ್ನು—to say

ಒಂದು ಸಲ—once

ಕರಿ / ಕರೆ } to call, invite

ಕೊಡು—to give

ಜೋರಾಗಿ—loudly, intensly, quickly

ತಗೊಳು—to take

ತಡ—late

ಮುಂಚೆ—early

ಯಜಮಾನ— husband, master

ಸಿಗು—to be available

ಸೇರು—to reach a place, to join

Supplementary Vocabulary :

ಕಲ್ಲು—stone

ಚಕ್ಕುಲಿ—round shaped crisp eatabls

ಹೊಡೆ—to beat

GRAMMATICAL NOTES :

1. In this lesson additional verbs in the present tense are introduced with following structure. Verb root + non past tense marker + pronominal termination. The non past tense marker is –t–

Eg : ಮಾಡು + ತ್ + ಏನೆ = ಮಾಡುತ್ತೇನೆ

2. The case marker –inda can be used **in the** instrumental as well as ablative sense.

Eg. 1. ನಾನು ಪೆನ್ನಿಂದ ಬರೆಯುತ್ತೇನೆ.
2. ನಾನು ಮನೆಯಿಂದ ಬರುತ್ತೇನೆ.

The case marker when added to the noun takes the same increments taken by the genetive case.

LESSON 22

CONVERSATION WITH PAPER BOY

DIALOGUE

ಹರೀತ—ಏನಪ್ಪಾ, ನೀನು ಈ ಮೊಹಲ್ಲಾಕ್ಕೆ ಪೇಪರ್ ಕೊಡ್ತೀಯಾ ?	Hey, Do you supply news paper to **this** extension ?
ಪೇಪರ್ ಹುಡುಗ—ಹೌದು ಸಾರ್.	Yes sir.
ಹರೀತ—ಯಾವ ಯಾವ ಪೇಪರುಗಳನ್ನು ತರ್ತೀಯೆ ?	What are the newspapers that you bring ?

ಪೇ. ಹು.—ಪ್ರಜಾವಾಣಿ, ಕನ್ನಡ ಪ್ರಭ ಮತ್ತು ಸಂಯುಕ್ತ ಕರ್ನಾಟಕ ತರ್‍ತೀನಿ.	I bring Prajavani, Kannada Prabha and Samyukta Karnataka.
ಹರೀಶ—ಇಂಗ್ಲೀಷ್ ಪೇಪರ್ ಯಾವುದು ತರ್‍ತೀಯ ?	Which English paper do you bring ?
ಪೇ. ಹು.—ಇಲ್ಲ ಸಾರ್. ನಾನು ಇಂಗ್ಲೀಷ್ ಪೇಪರ್ ತರಲ್ಲ. ನನ್ನ ಸ್ನೇಹಿತ ಮಾರ್‍ತಾನೆ. ಅವನನ್ನು ಕೇಳ್ತೀನಿ ನಿಮಗೆ ಯಾವುದು ಬೇಕು ಹೇಳಿ. ?	None sir. I do not bring any English paper. My friend sells them. I will ask him. Tell me which one do you want ?
ಹರೀಶ—ಹೋಗಲಿ ಬಿಡು. ನೀನು ವಾರ ಪತ್ರಿಕೆ, ಮಾಸಪತ್ರಿಕೆ ಯಾವು ದನ್ನೂ ಮಾರಲ್ಲವಾ ?	Nevermind. Don't you sell any weekly or monthly magazines ?
ಪೇ. ಹು.—ವಾರಪತ್ರಿಕೆ, ಮಾಸಪತ್ರಿಕೆ ಎಲ್ಲಾ ಮಾರ್‍ತೀನಿ ಸಾರ್. ಆದರೆ ಈ ಏರಿಯಾಕ್ಕೆ ತರಲ್ಲ. ಇಲ್ಲಿ ಅವು ಹೋಗಲ್ಲ ಸಾರ್.	I sell all kinds of weekly and monthly magazines Sir. But I don't bring them to this area. They have no market here.
ಹರೀಶ—ಹಾಗಾದರೆ ಈ ಏರಿಯಾದಲ್ಲಿ ಇಲ್‍ಸ್ಟ್ರೇಟೆಡ್ ವೀಕ್ಲೀನೂ ಖರ್ಚು ಆಗಲ್ಲವಾ ?	So even the Illustrated weekly also doesn't have a market in this area ?
ಪೇ. ಹು.—ಇಲ್ಲ. ಆಗಲ್ಲ ಸಾರ್. ಯಾರೂ ಅದನ್ನು ಓದಲ್ಲ. ಈ ಏರಿಯಾದಲ್ಲಿ ವಿದ್ಯಾವಂತರು ಕಡಿಮೆ. ನಿಮಗೆ ಬೇಕಾ ಹೇಳಿ. ಪೇಪರ್ ಜೊತೆ ಅದನ್ನೂ ತಂದುಕೊಡ್ತೀನಿ.	No sir. No one will read it. Educated persons are few in this area. If you want tell me I will bring that along with the news paper.
ಹರೀಶ—ಬೇಕು.	I want that.
ಪೇ. ಹು.—ಪೇಪರ್ ಯಾವತ್ತಿಂದ ಕೊಡಲಿ ಸಾರ್. ?	From when shall I start supplying the news paper sir ?

ಹರೀಶ—ಅದಕ್ಕೇನಂತೆ ಇವತ್ತಿಂದಾನೇ ಕೊಡು.

It doesn't really matter. Give it from today onwards.

ಪೇ. ಹು.—ದಯವಿಟ್ಟು ಏನೂ ತಿಳಿದುಕೊ ಬೇಡಿ ಸಾರ್. ಪೇಪರ್ ಕಡಿಮೆ ಇದೆ. ಇವತ್ತು ಕೊಡಲ್ಲ. ನಾಳೆ ಯಿಂದ ಕೊಡ್ತೀನಿ.

Please don't mistake me sir. I have few copies. I don't supply it to day. I will supply from tomorrow.

ಹರೀಶ—ಹಾಗೇ ಆಗಲಿ. ನಾಳೆಯಿಂದಾನೆ ಕೊಡು.

Let it be so. Give it from tomorrow.

ಪೇ. ಹು.—ತಮ್ಮ ಮನೆ ಯಾವುದು ಸಾರ್ ?

Which is your house sir ?

ಹರೀಶ—ಇಲ್ಲಿಂದ ಮೂರನೇ ಮನೇನೇ ನಮ್ಮದು. ಮುಂಗಡ ಹಣ ಎಷ್ಟು ಕೊಡಬೇಕು ?

Ours is the third house from here. How much advance should I give ?

ಪೇ. ಹು.—ಅದು ವರ್ತಮಾನ ಪತ್ರಿಕೆ ಮೇಲೆ ಹೋಗತ್ತೆ ಸಾರ್. ತಮಗೆ ಯಾವ ಪತ್ರಿಕೆ ಬೇಕು ?

That depends upon the news paper sir. Which news paper do you want sir ?

ಹರೀಶ—ಪ್ರಜಾವಾಣಿ ಇರಲಿ.

Let it be Prajavani.

ಪೇ. ಹು.—ಪ್ರಜಾವಾಣಿಗೆ ತಿಂಗಳಿಗೆ ಒಂಬತ್ತು ರೂಪಾಯಿ.

For Prajavani nine rupees per month.

ಹರೀಶ—ಆಗಲಿ ತಗೊ. ನಾಳೆಯಿಂದ ಕೊಡು.

O. K. Take it. Supply it from tomorrow.

ಪೇ. ಹು.—ಬೆಳಿಗ್ಗೆ ಎಂಟು ಗಂಟೆಗೆ ಮನೇಲೇ ಇರ್ತೀರಾ ಸಾರ್ ?

Will you be at home at 8 O' clock in the morning sir ?

ಹರೀಶ—ಇಲ್ಲ. ನಾನು ಬೆಳಿಗ್ಗೆ ಮನೆಯಲ್ಲಿ ಇರಲ್ಲ. ಆಳು ಇರ್ತಾನೆ. ಅವನ ಕೈಲಿ ಕೊಡು.

No. I will not be at home in the morning. The servant will be there. Give it to him.

ಪೇ. ಹು.—ಆಗಲಿ. ಬರ್ತೀನಿ ಸಾರ್.

Allright sir. I am going.

DRILLS :

I Build up Drill :

a) Model : ಹೋಗಲ್ಲ.

ಮನೆಗೆ ಹೋಗಲ್ಲ.

ಸಾಯಂಕಾಲ ಮನೆಗೆ ಹೋಗಲ್ಲ.

ಇವತ್ತು ಸಾಯಂಕಾಲ ಮನೆಗೆ ಹೋಗಲ್ಲ.

ನಾನು ಇವತ್ತು ಸಾಯಂಕಾಲ ಮನೆಗೆ ಹೋಗಲ್ಲ.

Build up the following making the changes wherever necessary :

1) ಕುಡಿಯಲ್ಲ
2) ಮಾಡಲ್ಲ
3) ಓದಲ್ಲ
4) ತರಲ್ಲ
5) ಬರಲ್ಲ

b) Model : ನೋಡಲ್ಲವಾ ?

ಸಿನಿಮಾ ನೋಡಲ್ಲವಾ ?

ಮಲಯಾಳಂ ಸಿನಿಮಾ ನೋಡಲ್ಲವಾ ?

ಜಾನಕಿ ಮಲಯಾಳಂ ಸಿನಿಮಾ ನೋಡಲ್ಲವಾ ?

ನಿನ್ನ ಸ್ನೇಹಿತೆ ಜಾನಕಿ ಮಲಯಾಳಂ ಸಿನಿಮಾ ನೋಡಲ್ಲವಾ ?

Build up the following making the changes wherever necessary:

1) ಕೊಡಲ್ಲವಾ ?
2) ತಿನ್ನಲ್ಲವಾ ?
3) ಇರಲ್ಲವಾ ?
4) ತೆಗೊಳ್ಳಲ್ಲವಾ ?
5) ಸಿಗಲ್ಲವಾ ?

II Transformation Drill :

a) Model : T: ನಾನು ಮನೆಗೆ ಹೋಗ್ತೀನಿ.

S: ನಾನು ಮನೆಗೆ ಹೋಗಲ್ಲ.

1) ರವಿ ಪುಸ್ತಕ ಬರೀತಾನೆ.
2) ಪಲ್ಲವಿ ಸಾಯಂಕಾಲ ಸಿಗ್ತಾಳೆ.
3) ಮಾಧವಿ ಅಲ್ಲಿ ಕೂತ್ಕೋತಾಳೆ.
4) ರಾಜು ನನಗೆ ಪೇಪರ್ ಕೊಡ್ತಾರೆ.

b) Model : T : ನಿಮ್ಮ ಸ್ನೇಹಿತ ಪೇಪರ್ ಮಾರಲ್ಲ.

S : ನಿಮ್ಮ ಸ್ನೇಹಿತ ಪೇಪರ್ ಮಾರಲ್ಲವಾ ?

1) ಅವರು ಅಂಗಡಿಯಲ್ಲಿ ಇರಲ್ಲ.
2) ಶಾಂತಿ ಮನೆಗೆ ಬರಲ್ಲ.
3) ನೀವು ಸಿನಿಮಾಕ್ಕೆ ಹೋಗಲ್ಲ.
4) ಅವನು ಕೆಲಸ ಮಾಡಲ್ಲ.

d) **Model** : T : ನೀವು ಸಿನಿಮಾ ನೋಡ್ತೀರಾ ?

S : ನೀವು ಸಿನಿಮಾ ನೋಡಲ್ಲವಾ ?

1) ನಮ್ಮ ಮನೆಗೆ ನಿಮ್ಮ ತಂಗಿ ಕಳಿಸ್ತೀರಾ ?
2) ನೀವು ತುಂಬ ಯೋಚನೆ ಮಾಡ್ತೀರಾ ?
3) ಈ ಏರಿಯಾದಲ್ಲಿ ಇಂಗ್ಲಿಷ್ ಪತ್ರಿಕೆ ಖರ್ಚು ಆಗತ್ತಾ ?
4) ನೀವು ಹಣ್ಣು ತಿನ್ತೀರಾ ?

III Response Drill :

Model : Q : ವಾರಪತ್ರಿಕೆ, ಮಾಸಪತ್ರಿಕೆ ಮಾರ್ತೀರಾ ?

A : ಇಲ್ಲ. ವಾರಪತ್ರಿಕೆ, ಮಾಸಪತ್ರಿಕೆ ಮಾರಲ್ಲ.

1) ಈ ಏರಿಯಾಕ್ಕೆ ಇಲ್‌ಸ್ಟ್ರೇಟೆಡ್ ವೀಕ್ಲಿ ತರ್ತೀರಾ ?
2) ಈಗಲೇ ಮುಂಗಡ ಹಣ ಕೊಡ್ತೀರಾ ?
3) ಇವತ್ತಿಂದಾನೇ ಪೇಪರ್ ಕೊಡ್ತೀಯಾ ?

EXCERISES

I Fill in gaps using the Kannda equivalents of the English words given in the brackets :

1) ನೀನು ಯಾವ ——— ಮಾರ್ತೀಯೆ ? (weekly magazine)
2) ನಿಮ್ಮ ಅಂಗಡೀಲಿ ಯಾವ ——— ಇದೆ. (newspaper)
3) ಕನ್ನಡ ಪ್ರಭಕ್ಕೆ ಎಷ್ಟು ——— ಕೊಡಬೇಕು. (advance)
4) ——— ನಮ್ಮ ಆಳು ಇರ್ತಾನೆ. (outside)
5) ನಿನ್ನ ಸ್ನೇಹಿತ ——— ತರ್ತಾನಾ ? (monthly magazine)

II Transform in the negative :

1) ಕಮಲ ಕಾಫಿ ಕುಡೀತಾಳೆ.
2) ರಾಜು ಪತ್ರಿಕೆ ಮಾರುತ್ತಾನೆ.
3) ರವಿ ಮಾರ್ಕೆಟ್ಟಿಂದ ಹಣ್ಣು ತರ್ತಾನೆ.
4) ಸಿಂಧು ಸೀಬೇ ಹಣ್ಣು ತಿಂತಾಳೆ.

III Write the text in affirmative :

ರಾಮು ಒಬ್ಬ ವಿದ್ಯಾರ್ಥಿ. ರಾಮು ದಿನಾ ಶಾಲೆಗೆ ಹೋಗಲ್ಲ. ರಾಮುವಿನ ತಂಗಿ ಗೀತಾ. ಅವಳೂ ದಿನಾ ಶಾಲೆಗೆ ಹೊಗಲ್ಲ. ಇಬ್ಬರೂ ಪಾಠ ಓದಲ್ಲ. ಇಬ್ಬರೂ ಮಧ್ಯಾಹ್ನ ತಿಂಡಿ ತಿನ್ನಲ್ಲ. ಐದು ಗಂಟೆಗೆ ರಾಮು ಮನೆಗೆ ಬರಲ್ಲ. ರಾಮು ಮತ್ತು ಗೀತ ಕಾಫಿ ಕುಡಿಯಲ್ಲ. ಗೀತನ ನಾಯಿ ಹಾಲು ಕುಡಿಯಲ್ಲ. ಗೀತೆ ರಾಮು ರಾತ್ರಿ ಪಾಠ ಓದಲ್ಲ. ರಾಮು ಪಾಠಾನೂ ಚೆನ್ನಾಗಿ ಕಲಿಯಲ್ಲ. ಊಟಾನೂ ಚೆನ್ನಾಗಿ ಮಾಡಲ್ಲ.

IV Fill in the blanks using the cues given in the bracket :

ರಾಮು ತುಂಬಾ ಒಳ್ಳೆಯ ಹುಡುಗ. ಅವರ ತಂದೆ ——— (in the garden) ಕೆಲಸ ——— (does). ರಾಮು ಮತ್ತು ಶಾಮು ——— (brothers) ಶಾಮು ರಾಮುವಿಗಿಂತ ನಾಲ್ಕು ವರ್ಷ ——— (younger). ರಾಮು ಹೈಸ್ಕೂಲಿನಲ್ಲಿ ——— (reads). ಶಾಮು ಅವನಷ್ಟು ಚೆನ್ನಾಗಿ ——— (doesn't read) ರಾಮು ದಿನಾ ಬೆಳಿಗ್ಗೆ ಪೇಪರ್ ——— (sells). ಅವನು ಹಣವನ್ನು ತನ್ನ ತಂದೆಗೆ ——— (gives) ಆಮೇಲೆ ——— (both brothers) ಸ್ಕೂಲಿಗೆ ——— (go).

V Change the following sentences into questions following the model :

Model : T : ನೀನಾ ನನ್ನ ಜೊತೆ ಸಿನಿಮಾಕ್ಕೆ ಬನ್ನಿ.
S : ನೀನಾ ನನ್ನ ಜೊತೆ ಸಿನಿಮಾಕ್ಕೆ ಬರ್ತೀರಾ ?

1) ನೀವು ನಾಳೆ ನಮ್ಮ ಜೊತೆ ಪಿಕ್‌ನಿಕ್‌ಗೆ ಬನ್ನಿ.
2) ಸುಲೋಚನ ನಮ್ಮ ಮನೆಗೆ ಬರಲ್ಲ.
3) ನಾಳೆಯಿಂದ ನೀನು ನಮಗೆ ಪೇಪರ್ ಕೊಡು.
4) ಲೀಲಾ ಹದಿನೈದನೇ ಪಾಠ ಓದಿ.
5) ರಾಜು ನಾಳೆ ನನಗೆ ನೂರು ರೂಪಾಯಿ ಕೊಡಿ.

VI You are the teacher and ask the questions. Begin with

ಏನು, ಹೇಗೆ, ಎಲ್ಲಿ, ಯಾವಾಗ, ಯಾಕೆ

VII Answer the following questions :

1) ಪೇಪರ್ ಹುಡುಗ ಯಾವ ಯಾವ ಪೇಪರ್ ತರ್ತಾನೆ ?
2) ವಾರ ಪತ್ರಿಕೆ, ಮಾಸ ಪತ್ರಿಕೆ ಎಲ್ಲಾ ಈ ಏರಿಯಾಕ್ಕೆ ತರ್ತಾನಾ ?
3) ಈ ಏರಿಯಾದಲ್ಲಿ ಇಲ್‌ಸ್ಟ್ರೇಟೆಡ್ ವೀಕ್ಲಿ ಖರ್ಚು ಆಗುತ್ತಾ ?
4) ಪ್ರಜಾವಾಣಿ ಪತ್ರಿಕೆಗೆ ತಿಂಗಳಿಗೆ ಎಷ್ಟು ?

VOCABULARY :

ಓದು—read, study

ಕೇಳು—to listen, to ask

ಖರ್ಚು—expense

ಖರ್ಚು ಆಗು—to get sold, expended

ದಯವಿಟ್ಟು—please

ಬಿಡು—to leave, let go

ಮಾರು—to sell

ಮಾಸ ಪತ್ರಿಕೆ—monthly magazine

ಮುಂಗಡ—advance

ಮೊಹಲ್ಲ—extension, (area)

ವರ್ತಮಾನಪತ್ರಿಕೆ—newspaper

ವಾರಪತ್ರಿಕೆ—weekly magazine

ವಿದ್ಯಾವಂತ—educated person

ಹಣ—money

Supplementary Vocabulary :

ಕಳಿಸು—to send

ಬೊಗಳು—bark

ಯೋಚನೆಮಾಡು—to think, worry, consider

GRAMMAR NOTES

1. Additional verbs are introduced in this lesson with present tense and present negative forms. The present negative forms of verbs are obtained by adding 'alla' to the verb roots.

Example : ಮಾಡು + ಅಲ್ಲ = ಮಾಡಲ್ಲ

Note that there is no person distion in negative construction.

2. –annu is the accusative case marker which is used obligatorily with human nouns, pronouns and with plural nouns both human and non–human. With other types of noun the use of –annu is optional.

Ex : 1) ಹುಡುಗ + ಅನ್ನು = ಹುಡುಗನನ್ನು

2) ಅವಳು + ಅನ್ನು = ಅವಳನ್ನು

3) ಮನುಷ್ಯರು + ಅನ್ನು = ಮನುಷ್ಯರನ್ನು

4) ಮರಗಳು + ಅನ್ನು = ಮರಗಳನ್ನು

3. The extra honorific form is 'taavu' means 'you' (hon. Sg./Plu) This pronoun is used to address religous heads, kings, masters and strangers with respectabl appearance. Sometimes it is used to address parents.

Example : ತಮ್ಮ ಹೆಸರು ಏನು ?

4. The word ಕೈ 'hand' is used idiomatically in many expressions.

The following table gives all the case markers along with examples :

Sl. No.	Case	Marker	Example
1.	Accusative case	—ಅನ್ನು	ನಿಮ್ಮ ಅಣ್ಣನನ್ನು ಕರೆ
2.	Instrumental case	—ಇಂದ	ಪೆನ್ನಿನಿಂದ ಪಾಠ ಬರೆ
3.	Dative case	—ಅಕ್ಕೆ	ಆ ಪುಸ್ತಕಕ್ಕೆ ಬೆಲೆ ಎಷ್ಟು ?
			ಅದಕ್ಕೆ ಎಷ್ಟು ರೂಪಾಯಿ ?
		—ಗೆ —ಅಗೆ	ನಮ್ಮ ಮನೆಗೆ ಬನ್ನಿ.
			ನಮಗೆ ಎರಡು ಚಪಾತಿ ಸಾಕು.
		—ಇಗೆ	ಆ ಊರಿಗೆ ಎಷ್ಟು ಮೈಲಿ ?
			ರಾಮನಿಗೆ ಇಬ್ಬರು ಮಕ್ಕಳು ಇದ್ದಾರೆ
4.	Ablative ease	--ಇಂದ	ನಮ್ಮ ತಂದೆ ಊರಿನಿಂದ ಬರುತ್ತಾರೆ.
5.	Genitive case	—ಅ	ಈ ಊರಿನ ಹೆಸರು ಮೈಸೂರು.
6.	Locative case	—ಅಲ್ಲಿ	ನಮ್ಮ ತಂದೆ ಮನೆಯಲ್ಲಿ ಇದ್ದಾರೆ.

LESSON 23

GIFT FOR RAVI'S MARRIAGE

DIALOGUE

Conversation A : ಮನೆಯಲ್ಲಿ

ಮಾಧು—ಶೀಲಾ, ಬಾ ಇಲ್ಲಿ.	Sheela, come here.
ಶೀಲಾ—ಏನ್ರೀ ?	What is the matter ?
ಮಾಧು—ಮುಂದಿನವಾರ ನಮ್ಮ ರವಿ	Next week is our Ravi's

ಮದುವೆ ನಿನಗೆ ಜ್ಞಾಪಕ ಇದೆಯಾ ?	wedding. Don't you remember it ?
ಶೀಲಾ—ಇದೆ.	Yes.
ಮಾಧು—ಉಡುಗೊರೆ ಏನಾದರೂ ಕೊಡ ಬೇಡವಾ ?	Are we not expected to give any gift ?
ಶೀಲಾ—ಏನಾದರೂ ಕೊಡಲೇಬೇಕು. ಏನು ಕೊಡೋಣ ?	We have to give something. What shall we give ?
ಮಾಧು—ನೀನೇ ಏನಾದರೂ ಯೋಚನೆ ಮಾಡು.	You think of some thing.
ಶೀಲಾ—ಯೋಚನೆ ಏನು ಮಾಡಲಿ ? ಹುಡುಗನಿಗೆ ಒಂದು ಟೈ ಕೊಡಬಹುದು. ಹುಡುಗಿಗೆ ಒಂದು ಜ್ಯೂಸ್ ಸೆಟ್ ಕೊಡಬಹುದು.	What is there to think ? we can give a Tie to the boy. We can give a Juice set to the girl.
ಮಾಧು—ಸರಿ. ನನಗೆ ಒಪ್ಪಿಗೆ ಇದೆ. ನಡಿ. ಈಗಲೇ ಅಂಗಡಿಗೆ ಹೋಗೋಣ.	O.K. I agree. Come Let us go to the shop now.
ಶೀಲಾ—ಯಾವ ಅಂಗಡಿಗೆ ಹೋಗೋಣ ?	To which shop shall we go ?
ಮಾಧು—ಕೃಷ್ಣ ಡಿಪಾರ್ಟ್‌ಮೆಂಟಲ್ ಸ್ಟೋರ್ಸ್‌ಗೆ ಹೋಗೋಣ.	Let us go to 'Krishna Departmental Stores'.
ಶೀಲಾ—ಅಲ್ಲಿ ಒಳ್ಳೆ ವಸ್ತು ದೊರಲ್ಲ. ಮೋಹನ್ ಭಂಡಾರಕ್ಕೆ ಹೋಗೋಣ. ಅಲ್ಲಿ ಬೇಕಾದ್ದು ಸಿಗುತ್ತೆ.	There are no good quality articles. Let us go to Mohan Bhandar. Whatever we want, will be available there.
ಮಾಧು—ಮೋಹನ್ ಭಂಡಾರಕ್ಕೆ ಬೇಡ. ಬೆಲೆ ತುಂಬಾ ಜಾಸ್ತಿ. ಇಲ್ಲಿಗೇ ಹೋಗೋಣ.	Let us not go to Mohan Bhandar Things are too costly there. Let us go here only.

Conversation B : ಅಂಗಡಿಯಲ್ಲಿ

ಮಾಧು—ಈ ಟೈ ನೋಡು ಶೀಲಾ.	Sheela, look at this Tie.
ಶೀಲಾ—ಅದು ತಗೋಬೇಡಿ. ಅದರ ಬಣ್ಣನೂ ಚೆನ್ನಾಗಿಲ್ಲ. ಡಿಸೈನೂ ಚೆನ್ನಾಗಿಲ್ಲ. ಇದರ ಬಣ್ಣ ಚೆನ್ನಾಗಿದೆ. ಇದೇ ಇರಲಿ.	Let us not take that one. Its colour is not good. Design is also not good. This colour is fine, let us take this.
ಮಾಧು—ಅದರ ಚುಕ್ಕೆ ನನಗೆ ಇಷ್ಟ ಇಲ್ಲ. ಆದರೆ ರವಿ ಬಣ್ಣಕ್ಕೆ ಅದು ಹೊಂದುತ್ತೆ ತಗೋಬಹುದು. ನೋಡು ಈ ಟೀ ಸೆಟ್ ಚೆನ್ನಾಗಿದೆ. ಹುಡುಗಿಗೆ ಜ್ಯೂಸ್ ಸೆಟ್ ಬದಲು ಈ ಟೀ ಸೆಟ್ ಯಾಕೆ ಕೊಡಬಾರದು ?	I don't like the dots on it. But it suits Ravi's colour. We can buy it. Look, this tea set is nice. Why don't we give this tea set in stead of this Juice set to the girl.
ಶೀಲಾ—ಅದಕ್ಕೇನು ಕೊಡಬಹುದು.	We can give it to her.
ಮಾಧು—ನೀನೇನಾದರೂ ತೆಗೋಬೇಕಾ ಶೀಲಾ ?	Do you want to buy anything Sheela ?
ಶೀಲಾ—ಬೇಡಿ. ನನಗೇನೂ ಬೇಡ. ನೋಡಿ, ಆ ರೂಮಲ್ಲಿ ಏನೇನೋ ಒಳ್ಳೊಳ್ಳೆ ಸಾಮಾನು ಇದೆ. ನಾವು ಒಳಗೆ ಹೋಗಬಾರದಾ ?	No. I don't want any thing Look in that room there are so many nice things. Shouldn't we go in ?
ಮಾಧು—ಹೋಗಬಹುದು. ಬಾ ನೋಡೋಣ.	We can go. Come on let us look.
ಶೀಲಾ—ನೋಡಿ ಆ ಜಪಾನಿ ಬೊಂಬೆ ಚೆನ್ನಾಗಿದೆ. ಅದರ ಬೆಲೆ ಹತ್ತು ರೂಪಾಯಿ. ಅಷ್ಟು ಕೊಡಬಹುದಾ ?	Look that Japanese doll is beautiful. Its price is ten rupees. Is it worth that much ?
ಮಾಧು—ಬೆಲೆ ಮುಖ ನೋಡಬೇಡ. ನಿನಗೆ ಆ ಬೊಂಬೆ ಇಷ್ಟಾನಾ ?	Pay no attention to the price. Do you like that doll ?
ಶೀಲಾ—ಹೌದು.	Yes.

ಮಾಧು—ಹಾಗಾದರೆ, ತೆಗೊ. ಇನ್ನೇನಾದರೂ ಬೇಕಾ ?	In that case you take it. Do you want anything else ?
ಶೀಲಾ—ಅರ್ಪಿತಾ ಒಂದು ಮ್ಯಾಕ್ಸಿ ಬೇಕು ಅಂತಾಳೆ. ಒಂದು ತಗೊಳ್ಳಲಾ ?	Arpita says that she wants a maxi. Shall we buy one ?
ಮಾಧು—ಬೇಡ. ಅವಳ ಹತ್ತಿರ ಬೇಕಾದಷ್ಟು ಇವೆ. ಹಾಗೆಲ್ಲ ಮಕ್ಕಳಿಗೆ ಸದರ ಕೊಡಕೂಡದು.	No. she has as many as she needs. We shouldn't be so indulgent to the children.
ಶೀಲಾ—ಒಂದೇ ಒಂದು ಕೊಳ್ಳೋಣ. ಪಾಪ ಮಗು ಬೇಕು ಅನ್ನುತ್ತೆ.	Let us buy just one. Poor child she insists.
ಮಾಧು—ಹೋಗಲಿ. ಈ ಸಾರಿ ಒಂದು ತಗೊ.	All right. Buy it. Just this once.

DRILLS :

Build up Drill :

a) Model :

ಕೊಡಬಹುದು.

ಪುಸ್ತಕ ಕೊಡಬಹುದು.

ಒಂದು ಒಳ್ಳೆಯ ಪುಸ್ತಕ ಕೊಡಬಹುದು.

ಹುಡುಗನಿಗೆ ಒಂದು ಒಳ್ಳೆಯ ಪುಸ್ತಕ ಕೊಡಬಹುದು.

ಮನೆ ಹುಡುಗನಿಗೆ ಒಂದು ಒಳ್ಳೆಯ ಪುಸ್ತಕ ಕೊಡಬಹುದು.

Build up the following making the appropriate changes wherver necessary.

1) ತರಬಹುದು.
2) ಬರಬಹುದು.

b) Model : ಮಾಡಬೇಕು.

ಕೆಲಸ ಮಾಡಬೇಕು.

ಆ ಕೆಲಸ ಮಾಡಬೇಕು.

ಈಗ ಆ ಕೆಲಸ ಮಾಡಬೇಕು.

ನಾನು ಈಗ ಆ ಕೆಲಸ ಮಾಡಬೇಕು.

Build up the following making the appropriate changes wherver necessary :

1) ಕುಡಿಯಬೇಕು.
2) ಹೋಗಬೇಕು.

c) Model : ಬರಬಾರದು.

ಮನೆಗೆ ಬರಬಾರದು.

ಮಧ್ಯಾಹ್ನ ನಮ್ಮ ಮನೆಗೆ ಬರಬಾರದು.

ದಿನ ಮಧ್ಯಾಹ್ನ ನಮ್ಮ ಮನೆಗೆ ಬರಬಾರದು.

ನೀವು ದಿನ ಮಧ್ಯಾಹ್ನ ನಮ್ಮ ಮನೆಗೆ ಬರಬಾರದು.

Build up the following making the changes wherever necessary :

1) ಹೇಳಬಾರದು.
2) ತಗೋಬಾರದು.

d) Model : ನೋಡಬಾರದಾ ?

ಸಿನಿಮಾ ನೋಡಬಾರದಾ ?

ವಿದ್ಯಾರ್ಥಿಗಳು ಸಿನಿಮಾ ನೋಡಬಾರದಾ ?

Build up the following making the changes wherever necessary :

1) ಹೋಗಬಾರದಾ ?
2) ತಿನ್ನಬಾರದಾ ?

e) Model : ಬರಬೇಡ.

ಕ್ಲಾಸಿಗೆ ಬರಬೇಡ.

ನನ್ನ ಕ್ಲಾಸಿಗೆ ಬರಬೇಡ.

ನೀನು ನನ್ನ ಕ್ಲಾಸಿಗೆ ಬರಬೇಡ.

Build up the following making the changes wherever necessary :

1) ಮಾಡಬೇಡ.
2) ನೋಡಬೇಡ.

f) Model : ಹೋಗಬೇಕಾ ?

ಮನೆಗೆ ಹೋಗಬೇಕಾ ?

ಈಗ ಮನೆಗೆ ಹೋಗಬೇಕಾ ?

ನಾನು ಈಗ ಮನೆಗೆ ಹೋಗಬೇಕಾ ?

Build up the following making the changes wherever necessary ;

1) ಹೇಳಬೇಕಾ ?
2) ತೆಗೋಬೇಕಾ ?

g) Model : ಹೋಗಕೂಡದು.

ಅಂಗಡಿಗೆ ಹೋಗಕೂಡದು.

ರಾಮಪ್ಪನ ಅಂಗಡಿಗೆ ಹೋಗಕೂಡದು.

ಯಾರೂ ರಾಮಪ್ಪನ ಅಂಗಡಿಗೆ ಹೋಗಕೂಡದು.

ನಾವು ಯಾರೂ ರಾಮಪ್ಪನ ಅಂಗಡಿಗೆ ಹೋಗಕೂಡದು.

Build up the following making the changes wherever necessary :

1) ತಿನ್ನ ಕೂಡದು.
2) ಹೇಳಕೂಡದು.

3) ಮಾಡಕೂಡದು.

4) ಬರಕೂಡದು.

II Transformation Drill :

a) **Model :** T : ನಾನು ಈ ಪುಸ್ತಕ ತೆಗೋಬೇಕು

S : ನಾನು ಈ ಪುಸ್ತಕ ತೆಗೋಬೇಕಾ ?

1) ರಾಮು ಮನೆಗೆ ಹೋಗಬೇಕು.

2) ನಾವು ನಿಮ್ಮ ಮನೆಗೆ ಬರಬೇಕು.

3) ಕವಿತ ಹಾಲು ಕುಡಿಯಬೇಕು.

c) **Model :** T : ನೀನು ನಮ್ಮ ಮನೆಗೆ ಬರಬಾರದು.

S : ನೀನು ನಮ್ಮ ಮನೆಗೆ ಬರಬಾರದಾ ?

1) ಅವನು ಕ್ಲಾಸಿಗೆ ಹೋಗಬಾರದು.

2) ನೀವು ಕಾಫಿ ಕುಡಿಯಬಾರದು.

3) ಶಾನುಬಿಗೆ ದುಡ್ಡು ಕೊಡಬಾರದು.

4) ನೀನು ಅವಳ ಮುಖ ನೋಡಬಾರದು.

d) **Model :** T : ನೀನು ಪುಸ್ತಕ ತೆಗೋಬೇಕು.

S : ನೀನು ಪುಸ್ತಕ ತೆಗೋಬೇಡ.

1) ನೀನು ಮನೆಗೆ ಹೋಗಬೇಕು.

2) ನೀನು ಕಾಫಿ ಕುಡಿಯಬೇಕು.

3) ನೀನು ತಿಂಡಿ ತಿನ್ನಬೇಕು.

4) ನೀನು ಇಲ್ಲಿ ಕೂತ್ಕೋಬೇಕು.

e) Model : T : ನೀನು ಮನೆಗೆ ಹೋಗಬಹುದು.

S : ನೀನು ಮನೆಗೆ ಹೋಗಬಾರದು.

1) ರಮಾ ಶಾಲೆಗೆ ಹೋಗಬಹುದು.

2) ವಿನಯಾ ಸಿನ್ಮನ್ನು ನೋಡಬಹುದು.

3) ಚಂದ್ರಿಕಾ ಇಲ್ಲಿಗೆ ಬರಬಹುದು.

f) Model : T : ಸುಮಾ ಕಾಫಿ ಕುಡಿಯಬಹುದು.

S : ಸುಮಾ ಕಾಫಿ ಕುಡಿಯಕೂಡದು.

1) ಆ ಪುಸ್ತಕ ಅವನಿಗೆ ಕೊಡಬಹುದು.

2) ಈ ಸಿನಿಮಾ ನೀನು ನೋಡಬಹುದು.

3) ನೀನು ನನ್ನ ಕ್ಲಾಸಿಗೆ ಬರಬಹುದು.

IV Response Drill :

1) ಇವತ್ತು ಸಾಯಂಕಾಲ ನೀವು ಮಾರ್ಕೆಟ್ಟಿಗೆ ಹೋಗಬೇಕಾ ?

2) ನಿಮಗೆ ತಿಂಗಳಿಗೆ ಹಾಸ್ಟೆಲ್ ಫೀಸ್ ಎಷ್ಟು ಬರಬಹುದು ?

3) ನಿಮ್ಮ ರೂಂಮೇಟ್ ನಿಮಗೆ ದುಡ್ಡು ಕೊಡಬೇಕಾ ?

4) ನೀವು ಯಾಕೆ ಇವತ್ತು ಸಿನಿಮಾಕ್ಕೆ ಹೋಗಬಾರದು ?

EXERCISE :

I Fill in the gaps using the Kannada equivalents of the English words given in the brackets :

1) ರಾಜೂಗೆ ——— ಏನು ಕೊಡೋಣ ? (gift)

2) ನಿನ್ನ ಅಭಿಪ್ರಾಯ ——— ಇದೆ. (consent)

3) ಜ್ಯೂಸ್ ಸೆಟ್ ——— ಟೀ ಸೆಟ್ ಕೊಡೋಣ. (instead of)

4) ಈ ——— ಯಾರದು ? (doll)

5) ನಿನಗೆ ——— ಇದೆಯಾ ? (rememberance)

6) ನಡಿ ——— ಹೋಗೋಣ. (now itself)

II Write the text in II person plural (Hon. sg.)

ರಮೇಶ, ನೀನು ಯಾವಾಗಲೂ ಸಿನಿಮಾ ನೋಡಬೇಡ. ನೀನು ದಿನಾ ಕುರ್ಕು ತಿಂಡಿ ತಿನ್ನಬೇಡ. ರಾತ್ರಿ ಹೊತ್ತು ಹೊರಗೆ ಹೋಗಬೇಡ. ಆ ಪುಸ್ತಕ ತೆಗೋಬೇಡ. ನೀನು ಸುಳ್ಳು ಹೇಳಬೇಡ. ನೀನು ಕೆಟ್ಟ ಕೆಲಸ ಮಾಡಬೇಡ. ನೀನು ಸದಾ ಕಾಫಿ ಕುಡಿಯಬೇಡ.

III Change the sentences following the model :

a) Model T : ನೀನು ಆ ಕೆಲಸ ಮಾಡಬೇಕು.

S : ನೀನು ಆ ಕೆಲಸ ಮಾಡಬಾರದು.

1) ಅವನು ಆ ಸಿನಿಮಾ ನೋಡಬೇಕು.

2) ನೀವು ಈಗ ಮನೆಗೆ ಹೋಗಬಹುದು.

3) ಅವರು ಈ ಪುಸ್ತಕ ತಗೋಬೇಕು.

4) ಕಮಲ ಕಥೆ ಹೇಳಬೇಕು.

5) ನೀನು ಈ ಹಣ್ಣು ತಿನ್ನಬಹುದು.

b) Model : T; ಅವನು ನಮ್ಮ ಮನೆಗೆ ಬರಬಹುದು.

S : ಅವನು ನಮ್ಮ ಮನೆಗೆ ಬರಕೂಡದು.

1) ನೀನು ಪೇಟೆಗೆ ಹೋಗಬಹುದು.

2) ಅವಳು ಕಾಫಿ ಕುಡಿಯಬಹುದು.

3) ನೀನು ನಮ್ಮ ಜೊತೆ ಬರಬಹುದು.

c) Model : T : ನಾವು ಪಿಕ್‌ನಿಕ್‌ಗೆ ಹೋಗಬಾರದು.

S : ನಾವು ಪಿಕ್‌ನಿಕ್‌ಗೆ ಹೋಗಬಹುದು.

1) ಅವರು ಈ ಕಡೆ ನೋಡಕೂಡದು.

2) ನೀವು ಹೆಚ್ಚು ಊಟ ಮಾಡಬಾರದು.

3) ನಾವು ಅಲ್ಲಿಗೆ ಹೋಗಬಾರದು.

IV Answer the following questions :

1) ನಾಳೆ ಯಾರ ಮದುವೆ ?

2) ಮದುವೆ ಹುಡುಗನಿಗೆ ಉಡುಗೊರೆ ಏನು ?

3) ಮದುವೆ ಹುಡುಗಿಗೆ ಏನನ್ನು ಉಡುಗೊರೆ ಕೊಡಬಹುದು ?

4) ಜಪಾನಿ ಬೊಂಬೆಯ ಬೆಲೆ ಎಷ್ಟು ?

VOCABULARY :

ಒಪ್ಪಿಗೆ—consent, agrement

ಒಳಗೆ—inside

ಕೊಳ್ಳು—buy

ಚುಕ್ಕೆ—dot

ಜ್ಞಾಪಕ—memory

ತೆಗೊ—take

ಧಾರಾಳ—generous, much

ನಡಿ / ನಡೆ }—come, walk, to be going on

ನೋಡು—look, see

ಬದಲು—instead of (Post positton with genitive)

ಬೊಂಬೆ—doll

ಯೋಚನೆ—thinking, Consideration, worry.

ರೀ—honorafic addressive term

ವಸ್ತು—material

ಸದರ—indulgent

ಸಾಮಾನು—things

ಹೊಂದು— to suit, to have

GRAMMAR NOTES

1. This lesson introduces definitive imperative and prohibitive forms.

1. a. Definitive imperative foms are obtained by adding ಬೇಕು and ಬೇಡ to the verbs and they give the meaning 'must / have to' and 'must not / don't' respectively.

1. b. Prohibitive forms are obtained by adding ಬಾರದು, ಕೂಡದು and ಬಹುದು to the verbs and they give the meaning 'shouldn't' and 'may......respectively.

Ex : 1. a. ಮಾಡಬೇಕು 'must do'

ಮಾಡಬೇಡ 'don't do'

ಮಾಡಬಾರದು / ಮಾಡಕೂಡದು } 'shouldn't do'

ಮಾಡಬಹುದು 'may do'

The above defective verbs are affixed to the infinitive forms of verbs. Infinitive form can be obtained in two ways.

1. by dropping –u in colloquial form.
2. by adding –a in written from

Ex : ತಿನ್ಬೇಕು — ತಿನ್ + ಬೇಕು
ತಿನ್ನಬೇಕು — ತಿನ್ನು + ಅ + ಬೇಕು

Note that there is also an honorafic expression for negative imperative, ಮಾಡಬೇಡಿ 'please don't do'.

Between ಮಾಡಬಾರದು and ಮಾಡಕೂಡದು the later is stronger.

LESSON 24

ENQUIRY ABOUT THE PROGRESS OF KANNADA LEARNERS

DIALOGUE

ಶುಭಕರ—ನೋಡಿ ಸಾರ್. ಇದು ಕನ್ನಡ ತರಗತಿಯ ವಾರ ಪರೀಕ್ಷೆಯ ಅಂಕ ಪತ್ರಿಕೆ.	Look sir, this is the weekly test marks list of the Kannada class
ಪ್ರಿನ್ಸಿಪಾಲ್—(ನೋಡುತ್ತಾರೆ) ಯಾಕೆ	(The Principal look at the marks

ಈ ಮೂವರಿಗೆ ಮಾರ್ಕ್ಸ್ ಬಹಳ ಕಡಿಮೆ. ಅವರು ಚೆನ್ನಾಗಿ ಓದಲ್ಲವಾ?	list) Why do these three have much low marks ? Are they not studying well ?
ಶುಭಕರ—ತುಂಬಾ ಚೆನ್ನಾಗಿ ಓದಲ್ಲ ಸಾರ್ ಸುಮಾರಾಗಿ ಓದ್ತಾರೆ.	They are not studying very well sir. They study an average amount.
ಪ್ರಿನ್ಸಿಪಾಲ್—ಅವರು ಯಾವ್ಯಾವ ರಾಜ್ಯದವರು ?	To which states do they belong?
ಶುಭಕರ—ಈ ಮಾಧವನ್ ಕೇರಳದವರು. ಆ ಹೆಂಗಸು ಮಧ್ಯಪ್ರದೇಶದವರು. ರಣಜಿತ್ ಬಿಹಾರದವರು.	This Madavan is from Kerala. That lady is from Madhyapradesh Ranjit is from Bihar.
ಪ್ರಿನ್ಸಿಪಾಲ್—ಹಾಗೆ ಹೇಳಿ. ಅದಕ್ಕೇ ಅವರಿಗೆ ಕಷ್ಟ. ಇವರಲ್ಯಾರೂ ಬೇಸಿಕ್ ಕೋರ್ಸ್ ಪರೀಕ್ಷೆಯಲ್ಲಿ ಪಾಸ್ ಮಾಡಬಾರದಾ ?	Say like that. That is why it is difficult for them. Can none of them get through the Basic Course examination ?
ಶುಭಕರ—ಹೇಗೆ ಹೇಳಲಿ ಸಾರ್. ಆ ಹೆಂಗಸು ಬೇಸಿಕ್ ಕೋರ್ಸ್ ಪರೀಕ್ಷೆಯಲ್ಲಿ ಪಾಸು ಮಾಡಲಾರಳು ಅನ್ನಿಸುತ್ತೆ. ಆದರೆ ಆಕೆ ಈಗಿಂದಾನೇ ಚೆನ್ನಾಗಿ ಓದಬೇಕು. ಇಬ್ಬರಲ್ಲಿ ಕೇರಳದವನು ಉತ್ತಮ. ಅವನು ಬೇಸಿಕ್ ಕೋರ್ಸ್ ಪರೀಕ್ಷೇನೇ ಪಾಸ್ ಮಾಡಬಲ್ಲ. ಆದರೆ ಬಿಹಾರದವನದೇ ಕಷ್ಟ.	How can I say sir ? I feel that lady may not get through in the Basic course examiuation. But by the end of the year she may be able to learn Kannada well. But she has to study well from right now. Of these two (students) the Kerala man is better. He can get through the Basic course examination, But the difficulty is with the Bihari.
ಪ್ರಿನ್ಸಿಪಾಲ್—ಯಾಕೆ ಅಷ್ಟು ವೀಕ್ ಇದಾನಾ ? ಟ್ಯುಟೋರಿಯಲ್ ಕ್ಲಾಸ್ ತಗೋಬೇಕಾ ?	Why is he so weak ? Is it necessary to give him tutorial class ?

ಶುಭಕರ—ವರ್ಷದ ಕಡೆಗೂ ಅವನು ಕನ್ನಡ ಕಲಿಯಲಾರ ಸಾರ್. ಬಹಳ ಕಷ್ಟ. ಆಗಲೇ ಎರಡೂವರೆ ತಿಂಗಳಾಯ್ತು. ಇನ್ನೂ ಒಂದು ವಾಕ್ಯ ಮಾತಾಡಲಾರ. ಒಂದು ಅಕ್ಷರ ಬರೆಯಲಾರ. ಅವನು ಯಾವ ಪ್ರಯತ್ನನೂ ಮಾಡಲ್ಲ.

He won't be able to learn Kannada even by the end of the year Sir. It is very difficult. It is already two and a half months. He cannot even say a single sentence. He can not write a single letter. He doesn't make any effort.

ಪ್ರಿನ್ಸಿಪಾಲ್—ನೋಡಿ, ಅಷ್ಟು ನಿರಾಶೆ ಪಡಬಾರದು. ಅವರಿಗೆ ದಿನಾ ಮಧ್ಯಾಹ್ನ ಅಥವಾ ಸಾಯಂಕಾಲ ಟ್ಯುಟೋರಿಯಲ್ ಕ್ಲಾಸ್ ಏರ್ಪಾಡು ಮಾಡೋಣ.

Look, Don't be so pessimist. Let us arrange tutorial classes for them daily in the afternoon or evening.

ಶುಭಕರ—ನಾವು ತಾನೆ ಎಷ್ಟು ಹೇಳಲಿ ಸಾರ್ ?

How much can we also teach Sir ?

ಪ್ರಿನ್ಸಿಪಾಲ್—ಹಾಗೆಲ್ಲಾ ಹೇಳಬಾರದು. ನಾನು ಬೇರೆ ಅಧ್ಯಾಪಕರನ್ನೂ ಕೇಳ್ತೀನಿ. ಒಬ್ಬೊಬ್ಬರಿಗೆ ವಾರಕ್ಕೆ ಎರಡು ದಿನ ಬರುತ್ತೆ.

You must not talk like that. I will ask other teachers also. It comes two days teaching per week.

ಶುಭಕರ—ಏನೋ ಸಾರ್, ಅದನ್ನೂ ಪ್ರಯತ್ನ ಮಾಡೋಣ. ಆಮೇಲೆ ಏನಾಗುತ್ತೋ ನೋಡೋಣ.

Allright Sir, let us make this effort too. Let us see what will happen afterwords ?

ಪ್ರಿನ್ಸಿಪಾಲ್—ಏನೂ ಆಗಲ್ಲ. ಎಲ್ಲಾ ಸರೀನೇ ಆಗುತ್ತೆ. ನೀವು ಸಾಯಂ

Nothing will happen. Everything will be allright. Can you take

ಕಾಲ ಐದು ಗಂಟೆ ಮೇಲೆ ಕ್ಲಾಸು ತಗೋಬಲ್ಲಿರಾ ?	classes after five O' clock in the evening ?
ಶುಭಕರ—ಇಲ್ಲ ಸಾರ್. ನಾನು ಸಾಯಂಕಾಲ ಮಾಡಲಾರೆ. ಮಧ್ಯಾಹ್ನ ಮಾಡಬಲ್ಲೆ ಅದೂ ಬುಧವಾರ ಮತ್ತು ಶುಕ್ರವಾರ.	No Sir. I can't teach in the evening: I can teach in the afternoon. That is only Wednesday and Fridays.
ಪ್ರಿನ್ಸಿಪಾಲ್—ಅಗಲಿ, ಅವತ್ತೇ ಮಾಡಿ. ರಾಮಗೋಪಾಲ್ ಮತ್ತು ಮಂಜುನಾಥ ಯಾವಾಗ ಮಾಡಬಲ್ಲರು ?	Allright, you teach on those days only. When can Mr. Ramgopal and Mr. Manjunath teach ?
ಶುಭಕರ—ಗೊತ್ತಿಲ್ಲ ಸಾರ್. ಬಹುಶಃ ರಾಮಗೋಪಾಲ್ ಮಧ್ಯಾಹ್ನ ಮಾಡಲಾರರು. ಮಧ್ಯಾಹ್ನ ಅವರು ಮನೆಗೆ ಊಟಕ್ಕೆ ಹೋಗ್ತಾರೆ. ಅವರು ಸಾಯಂಕಾಲ ಮಾಡಬಹುದು. ಮಂಜುನಾಥ್ ಯಾವಾಗ ಮಾಡ್ತಾರೋ ಗೊತ್ತಿಲ್ಲ.	I don't know Sir. Most probably Mr. Ramgopal may not teach in the afternoon. In the afternoon he goes home for lunch. He may teach in the evening. I don't know when will Mr. Manjunath teach ?
ಪ್ರಿನ್ಸಿಪಾಲ್—ಅವರನ್ನು ನಾನೇ ಕೇಳ್ತೀನಿ. ನೀವು ಮುಂದಿನ ವಾರದಿಂದ ಆರಂಭ ಮಾಡಿ.	I myself will ask them. You start from next week.
ಶುಭಕರ—ಆಗಲಿ ಸಾರ್ ಬರ್ತೀನಿ.	Allright Sir. I take leave of you.

DRILLS

I Build up Drill :

a) Model : ಹಾಡಬಲ್ಲೆ.

ಹಾಡು ಹಾಡಬಲ್ಲೆ.

ಹಿಂದಿ ಹಾಡು ಹಾಡಬಲ್ಲೆ.

ಚೆನ್ನಾಗಿ ಹಿಂದಿ ಹಾಡು ಹಾಡಬಲ್ಲೆ.

ನಾನು ಚೆನ್ನಾಗಿ ಹಿಂದಿ ಹಾಡು ಹಾಡಬಲ್ಲೆ.

Build up the following making the appropriate changes wherever necessary :

1) ಕಲಿಯಬಲ್ಲೆ.
2) ಮಾತಾಡಬಲ್ಲ.
3) ಕಾಫಿ ಮಾಡಬಲ್ಲಳು.
4) ಓಡಬಲ್ಲದು.

b) Model : ಬರಲಾರೆ.

ಬೆಳಿಗ್ಗೆ ಬರಲಾರೆ.

ನಾಳೆ ಬೆಳಿಗ್ಗೆ ಬರಲಾರೆ.

ಕಾಲೇಜಿಗೆ ನಾಳೆ ಬೆಳಿಗ್ಗೆ ಬರಲಾರೆ.

ನಾನು ಕಾಲೇಜಿಗೆ ನಾಳೆ ಬೆಳಿಗ್ಗೆ ಬರಲಾರೆ.

Build up the following making the appropriate changes wherever necessary:

1) ತಿನ್ನಲಾರಳು.
2) ಹೋಗಲಾರೆವು.
3) ಓದಲಾರದು.

*

II Substitution Drill :

Model : T : ಅವರು ಚೆನ್ನಾಗಿ ಹಾಡಬಲ್ಲರು.
ಅವಳು
S: ಅವಳು ಚೆನ್ನಾಗಿ ಹಾಡಬಲ್ಲಳು.

1) ನಾನು ಈ ನಾಲ್ಕು ಕೋಳಿ ಮೊಟ್ಟೆ ತಿನ್ನಬಲ್ಲೆ.
ನಾವು

____

2) ಅವನು ಇಷ್ಟು ಪುಸ್ತಕ ಓದಲಾರ.
ಅವಳು

____

3) ನೀವು ಮಧ್ಯಾಹ್ನ ಪಾಠ ಮಾಡಬಲ್ಲಿರಾ ?
ನೀನು

____

4) ಆ ಪೆನ್ನು ಚೆನ್ನಾಗಿ ಬರೆಯಬಲ್ಲದಾ ?
ಪೆನ್ನುಗಳು

____

5) ನಾನು ದಿನಕ್ಕೆ ಹತ್ತು ಕಪ್ ಕಾಫಿ ಕುಡಿಯಬಲ್ಲೆ.
ಅವರು

____

III Transformation Drill :

Model : T : ಅವನು ಆ ಹಣ್ಣುಗಳನ್ನು ತಿನ್ನಬಲ್ಲ.
S : ಅವನು ಆ ಹಣ್ಣುಗಳನ್ನು ತಿನ್ನಲಾರ.

1) ಮಗು ತಾನೇ ಹಾಲು ಕುಡಿಯಬಲ್ಲದು.

2) ಲೀಲಾ ಚೆನ್ನಾಗಿ ಮಾತನಾಡಬಲ್ಲಳು.

3) ಮಾಧು ಬ್ಯಾಂಕಿನಿಂದ ಹಣ ತರಬಲ್ಲ.

4) ನಾವು ನಿಮಗಿಂತ ಚೆನ್ನಾಗಿ ಹಾಡಬಲ್ಲೆವು.

5) ಅವರು ಹತ್ತು ಚಪಾತಿ ತಿನ್ನಬಲ್ಲರು.

IV Response Drill :

Model : T : ನೀವು ಚೆನ್ನಾಗಿ ಕನ್ನಡ ಓದಬಲ್ಲಿರಾ ?

S : 1) ಹೌದು. ನಾವು ಚೆನ್ನಾಗಿ ಕನ್ನಡ ಓದಬಲ್ಲೆವು.

2) ಇಲ್ಲ. ನಾವು ಚೆನ್ನಾಗಿ ಕನ್ನಡ ಓದಲಾರೆವು.

1) ನೀವು ಕನ್ನಡ ಬರೆಯಬಲ್ಲಿರಾ ?

2) ನೀವು ಕನ್ನಡದಲ್ಲಿ ಮಾತಾಡಬಲ್ಲಿರಾ ?

3) ನೀವು ನಾಳೆಯಿಂದ ಒಂಬತ್ತು ಗಂಟೆಗೆ ಕ್ಲಾಸಿಗೆ ಬರಬಲ್ಲಿರಾ ?

4) ನೀವು ಟೆಸ್ಟ್‌ನಲ್ಲಿ ಹೆಚ್ಚು ಅಂಕಗಳನ್ನು ತಗೋಬಲ್ಲಿರಾ ?

5) ನೀವು ಕನ್ನಡದಲ್ಲಿ ಒಂದು ಕಥೆ ಬರೆಯಬಲ್ಲಿರಾ ?

EXERCISES

I a) Transform the following sentences into their positive form :

1) ನಾನು ನಿನ್ನ ನೋಡಲಾರೆ.

2) ನಾವು ನಿನ್ನ ಅಕ್ಷರ ಓದಲಾರೆವು.

3) ಅವರು ಇಷ್ಟು ಗಂಟೆಯಲ್ಲಿ ನಿಮ್ಮ ಮನೆಗೆ ಬರಲಾರರು.

4) ಅವಳು ನಿನಗೆ ಹತ್ತು ರೂಪಾಯಿ ಕೊಡಲಾರಳು.

5) ನೀವು ಕನ್ನಡ ಕಲಿಯಲಾರಿರಿ.

b) Transform the following sentences into interrogative sentences using the interrogative marker :

1) ಅವರು ಪರೀಕ್ಷೆಯಲ್ಲಿ ಪಾಸು ಮಾಡಲಾರರು.

2) ಅವಳು ಮೊದಲನೇ ವರ್ಷ ಪಾಸು ಮಾಡಬಲ್ಲಳು.

3) ಅವನು ಒಂದು ಅಕ್ಷರ ಬರಿಯಲಾರ.

4) ಅವರು ಸಾಯಂಕಾಲ ಬರಬಹುದು.

5) ಈ ಸಾರಿ ಪರೀಕ್ಷೆಯಲ್ಲಿ ಯಾರೂ ಫೇಲಾಗಕೂಡದು.

II Match the following :

ನಾಯಿಮರಿ	ಕನ್ನಡ ಭಾವಗೀತೆ ಹಾಡಲಾರಳು.
ನಾವು	ದಿನಕ್ಕೆ ಮೂರು ಸಿನಿಮಾ ನೋಡಬಲ್ಲ.
ರಮೇಶ	ನಾಳೆ ಎಷ್ಟು ಪಾಠ ಬರೆಯಬಲ್ಲಿರಿ.
ನೀವು	ಇನ್ನೂ ಚೆನ್ನಾಗಿ ಪೇಪರ್ ಓದಬಲ್ಲರು.
ರಾಮರಾಯರು	ಹಾಲು ಕುಡಿಯಬಲ್ಲದು.
ಲೀಲಾ	ಬೆಳಗ್ಗೆ ಊಟ ಮಾಡಲಾರೆವು.

III Answer the following questions :

1) ಆ ಹೆಂಗಸು ಬೇಸಿಕ್ ಕೋರ್ಸ್‌ನ ಪರೀಕ್ಷೆಯಲ್ಲಿ ಪಾಸು ಮಾಡಬಲ್ಲಳಾ ?

2) ಬಿಹಾರದವರು ವರ್ಷದ ಕಡೇಗೂ ಕನ್ನಡ ಕಲಿಯಲಾರರಾ ? ಏಕೆ ?

3) ಶುಭಕರ ಟ್ಯುಟೋರಿಯಲ್ ಕ್ಲಾಸ್ ತಗೋತಾರಾ ? ಯಾವಾಗ ತಗೋತಾರೆ ?

4) ರಾಮಗೋಪಾಲ್ ಯಾವಾಗ ಪಾಠ ಮಾಡಬಲ್ಲರು ?

VOCABULARY :

ಅನ್ನಿಸು—to feel, to think

ಅಕ್ಷರ—letter of the alphabet

ಅಥವಾ—or

ಅಂಕ ಪತ್ರಿಕೆ—marks card

ಆಕೆ—she

ಆಗಲೇ—already

ಆರಂಭಮಾಡು—to start

ಇಡು—to keep

ಉತ್ತಮ—better

ಏರ್ಪಾಡು—arrangement

ಕಡಿಮೆ—less

ಕಲಿ—to learn

ತರಗತಿ—class

ನಿರಾಶೆ—disappointment

ನಿರಾಶೆ ಪಡು—to be disappointed

ಪರೀಕ್ಷೆ—examination

ಪ್ರಯತ್ನ—effort

ಪಾಸುಮಾಡು
ಪಾಸಾಗು } —to pass examination

ಬರಿ
ಬರೆ } —to write

ಬಹುಶಃ—probably

ಯಾಕೆ—why

ವಾಕ್ಯ—sentence

ವಾರಪರೀಕ್ಷೆ—weekly test

ಸುಮಾರಾಗಿ—not so well

Supplementary Vocabulary

ಒದೆ—to kick

ಓಡು—to run

ಕರು—calf

ಕುದುರೆ—horse

ಬೊಗಳು—to bark

ಮರಿ—young one of the animals

GRAMMAR NOTES :

1. This lesson introduces positive and negative potential construction. bal– and aar– are the positive and the negative potential markers respectively. After inflecting the potential markers to the pronominal termination, they are used in the compound construction with the infinitive form of the main verb.

Positive potential :

The structure is,

main verb + infinitive suffix + potential marker + pronominal ending

ಬರೆ + ಅ + ಬಲ್ + ಎ = ಬರೆಯಬಲ್ಲೆ 'I can write'

1) ನಾನು ಕನ್ನಡ ಬರೆಯಬಲ್ಲೆ.

2) ಅವಳು ತಮಿಳು ಓದಬಲ್ಲಳು.

Negative potential :

main verb + infinitive suffix + potential marker + pronominal ending

ಬರೆ + ಅಲ್ + ಆರೆ + ಎ = ಬರೆಯಲಾರೆ 'I can't write'

1) ನಾನು ಕನ್ನಡ ಬರೆಯಲಾರೆ.

2) ಅವರು ತಮಿಳು ಓದಲಾರರು.

Note that there is a main verb –balle means 'I know'. Whenever it is used as main verb it occurs in isolation. Whenever it occur as potential marker it occurs in combination with the main verb.

2. ಅನ್ನಿಸು in the sense of 'to think or feel' is always used as an impersonal verb in the third person neuter singular with subject in the dative.

Ex · ನನಗೆ ಅವನು ಪಾಸಾಗಲ್ಲ ಅನಿಸುತ್ತೆ.

The positive and negative potential paradigm is given below :

Person		Singular	Plural
		—ಎ, ಬಲ್ಲೆ, ಆರೆ	—ಎವು, ಬಲ್ಲೆವು, ಆರೆವು
First		ಮಾಡಬಲ್ಲೆ	ಮಾಡಬಲ್ಲೆವು
		ಮಾಡಲಾರೆ	ಮಾಡಲಾರೆವು
		—ಎ ಬಲ್ಲೆ, ಆರೆ	—ಇರಿ, ಬಲ್ಲಿರಿ, ಆರಿರಿ
Second		ಮಾಡಬಲ್ಲೆ	ಮಾಡಬಲ್ಲಿರಿ
		ಮಾಡಲಾರೆ	ಮಾಡಲಾರಿರಿ
		—ಅ, ಬಲ್ಲ, ಆರ	
	Masculine	ಮಾಡಬಲ್ಲ	—ಅರು. ಬಲ್ಲರು
Third		ಮಾಡಲಾರ	ಆರರು
	Human Feminine	—ಅಳು, ಬಲ್ಲಳು, ಆರಳು	ಮಾಡಬಲ್ಲರು
		ಮಾಡಬಲ್ಲಳು	ಮಾಡಲಾರರು
		ಮಾಡಲಾರಳು	
		—ಅದು ಬಲ್ಲದು	—ಅವು ಬಲ್ಲವು, ಆರವು
	Neuter	ಆರದು	ಮಾಡಬಲ್ಲವು
		ಮಾಡಬಲ್ಲದು	ಮಾಡಲಾರವು
		ಮಾಡಲಾರದು	

UNIT 6

Review LESSON 6

ENQUIRY ABOUT PLACES AROUND MYSORE

DIALOGUE

ಭಾಸ್ಕರನ್—ರಾಜಣ್ಣ, ಮೈಸೂರಿನಿಂದ ಬೆಂಗಳೂರಿಗೆ ಎಷ್ಟು ದೂರ ಆಗುತ್ತೆ ?

ರಾಜಣ್ಣ—ಮೈಸೂರಿನಿಂದ ಬೆಂಗಳೂರಿಗೆ ಹೆಚ್ಚು ಕಡಿಮೆ ಎಂಭತ್ತು ಮೈಲಿ ಆಗುತ್ತೆ.

ಭಾಸ್ಕರನ್—ಬೆಂಗಳೂರು ಮೈಸೂರಿಗೆ ಯಾವ ದಿಕ್ಕಿನಲ್ಲಿದೆ ?

ರಾಜಣ್ಣ—ಬೆಂಗಳೂರು ಮೈಸೂರಿಗೆ ಈಶಾನ್ಯ ದಿಕ್ಕಿನಲ್ಲಿ ಇದೆ. ಯಾಕೆ ನೀವು ಬೆಂಗಳೂರಿಗೆ ಹೋಗಬೇಕಾ ?

ಭಾಸ್ಕರನ್—ಈಗ ಹೋಗಲ್ಲ. ಮುಂದೆ ಯಾವತ್ತಾದರೂ ಹೋಗ್ತೀನಿ. ಅದು ತುಂಬಾ ದೊಡ್ಡ ಪಟ್ಟಣಾನಾ ?

ರಾಜಣ್ಣ—ಹೌದು. ಬಹಳ ದೊಡ್ಡ ಪಟ್ಟಣ.

ಭಾಸ್ಕರನ್—ರಾಜಣ್ಣ ಮೈಸೂರಿನ ಸುತ್ತಮುತ್ತಲಿನ ಪ್ರೇಕ್ಷಣೀಯ ಸ್ಥಳಗಳು ಯಾವ್ಯಾವು ನನಗೆ ಸ್ವಲ್ಪ ಹೇಳ್ತೀರಾ ?

ರಾಜಣ್ಣ—ಓಹೋ ಅದಕ್ಕೇನು ಹೇಳ್ತೀನಿ. ಮೈಸೂರಿನ ವಾಯುವ್ಯ ದಿಕ್ಕಿಗೆ ಹಳೇಬೀಡು, ಬೇಲೂರು ಮತ್ತು ಶ್ರವಣಬೆಳಗೊಳಗಳು ಇವೆ. ಇಲ್ಲಿ ಹೊಯ್ಸಳರ ಶಿಲ್ಪ ಕಲೆಯನ್ನು ನೋಡಬಹುದು. ಮೈಸೂರಿನ ಉತ್ತರಕ್ಕೆ ಕೃಷ್ಣರಾಜಸಾಗರ ಇದೆ. ಅದು ಮೈಸೂರಿನಿಂದ ಹನ್ನೆರಡು ಮೈಲಿ ದೂರದಲ್ಲಿ ಇದೆ.

ಭಾಸ್ಕರನ್—ರಾಜಣ್ಣ ಮುಂದಿನ ಭಾನುವಾರ ನಾವು ಅಲ್ಲಿಗೆ ಹೋಗಬೇಕು ಅಂತ ಇದೀವಿ ನೀವೂ ಬರ್ತೀರಾ ?

ರಾಜಣ್ಣ—ಇಲ್ಲ ಭಾಸ್ಕರನ್. ನಾನು ಬರಲಾರೆ. ನನಗೆ ಬೇರೆ ಕೆಲಸ ಇದೆ. ನೀವು ಯಾರ್ಯಾರು ಹೋಗ್ತೀರಿ ?

ಭಾಸ್ಕರನ್—ನಾನು, ರಾಜನ್, ಅಣ್ಣಾಮಲೈ ಹೋಗ್ತೀವಿ.

ರಾಜಣ್ಣ—ಯಾಕೆ ಶೇಷಪ್ಪ ಬರಲ್ಲವಾ ? ಅವರು ಬರಬಲ್ಲರು. ಕರೆಯಿರಿ.

ಭಾಸ್ಕರನ್—ಬೇಡಪ್ಪ. ಅವರು ಒಂಥರಾ ಮನುಷ್ಯ. ಅವರಿಗೂ ನಮಗೂ ಸರಿಹೋಗಲ್ಲ.

ರಾಜಣ್ಣ—ಹೋಗಲಿ, ಕೇಳಿ. ಮೈಸೂರಿನಿಂದ ಪೂರ್ವಕ್ಕೆ ತಲಕಾಡು ಇದೆ. ಒಂದು ಕಾಲದಲ್ಲಿ ಅದು ಗಂಗರ ರಾಜಧಾನಿ. ಮತ್ತೆ ಪಶ್ಚಿಮಕ್ಕೆ ನಾಗರಹೊಳೆ ಇದೆ. ಅದು ವನ್ಯ ಮೃಗಗಳ ಸ್ಥಳ.

ಭಾಸ್ಕರನ್—ನಾವು ಅಲ್ಲಿ ವನ್ಯಮೃಗಗಳನ್ನು ನೋಡಬಹುದಾ ?

ರಾಜಣ್ಣ—ಓಹೋ. ಆದರೆ ಅಲ್ಲಿ ಕಾಡಿನ ಒಳಗೆ ವಾಹನದಲ್ಲಿ ಹೋಗಬೇಕು. ಮೈಸೂರಿನ ದಕ್ಷಿಣಕ್ಕೆ ನಂಜನಗೂಡು ಇದೆ.

ಭಾಸ್ಕರನ್—ನಂಜನಗೂಡಿನಲ್ಲಿ ನಂಜುಂಡೇಶ್ವರನ ದೇವಸ್ಥಾನ ಇದೆ ಅಲ್ವಾ ?

ರಾಜಣ್ಣ—ಹೌದು. ಅದು ಶೈವ ಭಕ್ತರಿಗೆ ಪುಣ್ಯಸ್ಥಳ.

ಭಾಸ್ಕರನ್—ನಾನು ಇವುಗಳನ್ನೆಲ್ಲಾ ನೋಡಬೇಕು. ಯಾವಾಗಲಾದರೂ ಹೋಗೋಣ.

ರಾಜಣ್ಣ—ಆಗಲಿ ಹೋಗೋಣ.

TEST PAPER

I Fill in the blanks using the appropriate words :

1) ಹಿಮಾಲಯ ಪರ್ವತ ಭಾರತದ—————— ದಿಕ್ಕಿನಲ್ಲಿ ಇದೆ.
2) ಕನ್ಯಾಕುಮಾರಿ ಭಾರತದ —————— ದಿಕ್ಕಿನಲ್ಲಿ ಇದೆ.
3) ಅರಬ್ಬೀ ಸಮುದ್ರ ಭಾರತದ —————— ದಿಕ್ಕಿನಲ್ಲಿ ಇದೆ.
4) ಬಂಗಾಳ ಕೊಲ್ಲಿ ಭಾರತದ —————— ದಿಕ್ಕಿನಲ್ಲಿ ಇದೆ.
5) ಪಾಕಿಸ್ತಾನ ಭಾರತದ —————— ದಿಕ್ಕಿನಲ್ಲಿ ಇದೆ.

II Fill in the blanks using the Kannada equivalents of the **English** words given in the brackets :

1) ಪುಸ್ತಕ —————— ಇದೆ. (on the table)
2) ಯಾವಾಗಲೂ ರಸ್ತೆಯ —————— ನಡೆಯಬೇಕು. (Left hand Side)
3) ಮೈಸೂರಿನ —————— ಮಂಗಳೂರು ಇದೆ. (towards West)
4) ನನ್ನ'—————— ನನ್ನ ಗೆಳತಿ ಬರುತ್ತಾಳೆ. (with me)
5) ರಾಮರಾವ್ ಮನೆಯ —————— ಶಾಮರಾವ್ ಮನೆ ಇದೆ. (behind)
6) ಜಗನ್ಮೋಹನ ಅರಮನೆಯ —————— ಗಾಯಿತ್ರಿ ಭವನ ಇದೆ. (before)
7) ಮಹರಾಜ ಕಾಲೇಜ್ —————— ಯುವರಾಜ ಕಾಲೇಜ್ ಇದೆ. (besides)

8) ಮೈಸೂರಿನ ______________ ಬೆಂಗಳೂರು ಇದೆ. (towards North–East)

9) ಮರದ __________ ಹಣ್ಣು ಇದೆ. (under)

10) ನನ್ನ ______________ ರಮಾ ಇದ್ದಾಳೆ. (right hand side)

III Coujngate the following verbs in non past tense with all the persons :

1) ತಾ

2) ಕೊಡು.

3) ಓದು.

4) ಸಿಗು.

5) ಕೇಳು

IV Transform the following sentences into their negative forms :

1) ನಾನು ಸಾಯಂಕಾಲ ಮನೆಗೆ ಹೋಗ್ತೀನಿ.

2) ಸೀತಾ ದಿನಕ್ಕೆ ಮೂರು ಪಾಠ ಬರೆಯಬಲ್ಲಳು.

3) ನೀವು ಈಗ ಕ್ಲಾಸಿನಿಂದ ಆಚೆ ಹೋಗಬಹುದು.

4) ನೀವು ಹೀಗೆ ಅಕ್ಷರ ಬರೆಯಬೇಕು.

5) ನಾನು ನಿಮಗಿಂತ ಚೆನ್ನಾಗಿ ತಮಿಳು ಬರೆಯಬಲ್ಲೆ.

6) ನೀವು ನನ್ನನ್ನು ಒಂದು ಪ್ರಶ್ನೆ ಕೇಳಿ.

7) ನನಗೆ ರಾಮರಾವ್ ಚೆನ್ನಾಗಿ ಗೊತ್ತು.

8) ಅವರು ಇವತ್ತು ಸಾಯಂಕಾಲ ಪುಸ್ತಕ ಕೊಡುತ್ತಾರೆ.

9) ಮಕ್ಕಳು ಸಿಗರೇಟ್ ಸೇದಬಹುದು.

10) ದಿನಾ ಮೂರು ಸಲ ಊಟ ಮಾಡಬೇಕು.

V Substitute the given words in the following and write the full sentnece :

1) ನಾನು ಹತ್ತನೇ ಪಾಠ ಬರೆಯುತ್ತೇನೆ.
ನಾವು ______________________

2) ಅವರು ದಿನಾ ಸಾಯಂಕಾಲ ಪೇಪರ್ ಓದುತ್ತಾರೆ.
ಅವಳು ______________________
ಅವನು ______________________

3) ನೀನು ನನ್ನ ಜೊತೆ ಶ್ರೀರಂಗಪಟ್ಟಣಕ್ಕೆ ಬರ್ತೀಯಾ ?
ನೀವು ______________________

4) ಆ ನಾಯಿ ದಿನಾ ನಮ್ಮ ಮನೆಗೆ ಬರುತ್ತೆ.
ಆ ನಾಯಿಗಳು ______________________

5) ನೀನು ಗಲಾಟೆ ಮಾಡಬೇಡ
ನೀವು ______________________

6) ಅವನು ಇಷ್ಟು ದೊಡ್ಡ ಪುಸ್ತಕ ಓದಲಾರ
ಅವಳು ______________________

7) ನಾನು ದಿನಾ ಅವಳಿಗೆ ಕಾಗದ ಬರೆಯಲಾರೆ.
ನಾವು ______________________

8) ರಾಮು ಈ ಕೆಲಸ ಮಾಡಬಲ್ಲ.
ಸೀತೆ ______________________

VI Combine the following words and write them in the right hand side :

1) ಊರು + ಇಂದ = ______________
2) ಅದು + ಇಂದ = ______________

3) ಇದು + ಅನ್ನು = ——————

4) ಮೂರು + ಇಂದ = ——————

5) ಹತ್ತು + ಅನ್ನು = ——————

6) ಮರ + ಅನ್ನು = ——————

7) ವರ + ಇಂದ = ——————

8) ಮಗು + ಅನ್ನು = ——————

9) ಅವು + ಇಂದ = ——————

10) ನಾನು + ಅನ್ನು = ——————

VII Fill in the blanks using the appropriate form of the words given in the bracket

1) ನಾನು ———— (ಮೈಸೂರು) ಬೆಂಗಳೂರಿಗೆ ಹೋಗ್ತೀನಿ.
2) ಅವಳು ದಿನಾ ———— (ನಾನು) ನೋಡುತ್ತಾಳೆ.
3) ರಾಮು ಸಿಟಿಯಿಂದ ಕಾಲೇಜಿಗೆ ———— (ಬಸ್ಸು) ಬರುತ್ತಾನೆ.
4) ರಾಜು ———— (ಊರು) ಹೊರಡುತ್ತಾರೆ.
5) ರಾಮು ಮತ್ತು ರಾವಣ ———— (ಹಾಸ್ಟೆಲ್) ಊಟ ಮಾಡುತ್ತಾರೆ.

VIII Answer the following questions :

1) ಬೆಂಗಳೂರು ಮೈಸೂರಿಗೆ ಯಾವ ದಿಕ್ಕಿನಲ್ಲಿ ಇದೆ ?
2) ಮೈಸೂರಿನ ಸುತ್ತಮುತ್ತಲ ಪ್ರೇಕ್ಷಣೀಯ ಸ್ಥಳಗಳು ಯಾವ್ಯಾವು ? ಅವು ಯಾವ ದಿಕ್ಕಿನಲ್ಲಿ ಇವೆ ?

VOCABULARY :

ಆಚೆ—outside

ಈಶಾನ್ಯ ದಿಕ್ಕು—North West

ಉತ್ತರ—North

ಒಂಥರಾ—one type of, Peculiar as idiom

ಕೆಳಗೆ—below

ಗಂಗ—an ancient dynasty of Karnataka

ದಕ್ಷಿಣ—South

ಗೆಳೆಯ—friend

ದಿಕ್ಕು—direction

ಪಟ್ಟಣ—town

ಪಶ್ಚಿಮ—West

ಪುಣ್ಯಸ್ಥಳ—holy place

ಪೂರ್ವ—East

ಪ್ರೇಕ್ಷಣೀಯಸ್ಥಳ—sight seeing place

ಭಕ್ತ—devotee

ಮೈಲಿ—mile

ಮುಂಚೆ—before

ರಾಜಧಾನಿ—Capital

ವನ್ಯಮೃಗ—wild animal

ವಾಯುವ್ಯ—North west

ಶಿಲ್ಪಕಲೆ—architecture

ಸುತ್ತಮುತ್ತಲೂ—surrounding

LESSON 25

A VISIT TO THE TEMPLE

DIALOGUE

ಅಪರ್ಣಾ—ಅಮ್ಮಾ ದೇವಸ್ಥಾನಕ್ಕೆ ಹೋಗೋಣ ಬರ್ತೀಯಾ ?	Mummy, let us go to the temple. Will you come ?
ಶಾರದಮ್ಮ—ಆಗಲಿ. ಹೋಗೋಣ ನಡಿ.	O.K. Let us go.
ಅಪರ್ಣಾ—ಪಕ್ಕದ ಕರೀಲಾ ?	Shall I call our neighbour Vimala also ?

ಶಾರದಮ್ಮ—ಅದಕ್ಕೇನಂತೆ ಕರಿ.	**By all means. Call her.**
ಅಪರ್ಣಾ—ಅಮ್ಮಾ, ವಿಮಲ ಬರ್‍ತಾ ಇದಾಳೆ.	Mummy, Vimala is coming.
ಶಾರದಮ್ಮ—ಬಾಮ್ಮಾ, ನೀವಿಬ್ಬರೂ ನಿಧಾನವಾಗಿ ಹೋಗ್ತಾ ಇರಿ. ಅನ್ನ ಮಾಡ್ತಾ ಇದೀನಿ. ಇನ್ನು ಐದು ನಿಮಿಷದಲ್ಲಿ ಬರ್‍ತೀನಿ.	Come Vimala. You two be going slowly. I am cooking rice. I will come in another five minutes.
ಅಪರ್ಣಾ—ನಾವು ಅಂಗಡೀಲಿ ಕಾಯಿ ಕರ್ಪೂರ ತಗೊಳ್ತಾ ಇರ್‍ತೀವಿ. ನೀನು ಬಾಮ್ಮ.	You come, while we are buying-coconut and camphor in the shop.
ಶಾರದಮ್ಮ—ಹಾಗೇ ಮಾಡು. ಜೊತೆಗೆ ಹೂವು, ವಿಳ್ಳೇದೆಲೆ, ಅಡಿಕೇನೂ ತಗೊ.	Do so. Buy flowers, betel leaves and betel nut also.
ಅಪರ್ಣಾ—ನೋಡು ವಿಮಲಾ, ದೇವಸ್ಥಾನದ ಹತ್ತಿರ ಬರ್‍ತಾ ಇದೀವಿ. ಇನ್ನೂ ಅಮ್ಮನ ಸುಳಿವೇ ಇಲ್ಲವಲ್ಲ?	Look Vimala. We are nearing the temple. No sign of my Mummy yet?
ವಿಮಲ—ಅದೋ ನೋಡು, ಅಲ್ಲಿ ಬರ್‍ತಾ ಇದಾರೆ. ಜೊತೇಲಿ ಇನ್ನೊಬ್ಬರು ಯಾರೋ ಬರ್‍ತಾ ಇದಾರೆ.	Look over there. She is coming. Somebody is coming with her.
ಅಪರ್ಣಾ—ಇನ್ನು ಯಾರು ನನ್ನ ತಮ್ಮಾನೇ ನೋಡು, ಎಷ್ಟು ಒಡ್ಡೊಡ್ಡಾಗಿ ಬರ್‍ತಾ ಇದಾನೆ. ನಡಿಗೇನೇ ಹೇಳುತ್ತೆ ಅವನು ಅಂತ.	Who else? Only my brother Look how awckward he is walking. The very way he walks shows it is my brother.
ಶಾರದಮ್ಮ—ಇದ್ಯಾಕೆ ಹೀಗೆ ನೋಡ್ತಾ ಇದೀರಿ? ನಡೀರಿ, ಆಗಲೆ ಗಂಟೆ ಶಬ್ದ ಆಗ್ತಾ ಇದೆ.	Why are you looking like this? Come. The temple bell is already ringing

*

ಅಪರ್ಣಾ—ನೋಡಮ್ಮಾ ಬಾಬೂನಾ ? ಹೇಗೆ ಓಡ್ತಾನೆ ?	Mummy, look at Babu, how he is running ?
ಶಾರದಮ್ಮ—ಲೋ ಬಾಬು, ಇದ್ಯಾಕೋ ಹೀಗೆ ಓಡ್ತಾ ಇದೀಯೊ. ಸ್ವಲ್ಪ ನಿಲ್ಲೊ.	Eh, Babu, why are you running like that ? Wait a bit.
ಬಾಬು—ಇಲ್ಲಮ್ಮಾ ನಾನು ಓಡ್ತಾ ಇಲ್ಲ. ಬೇಗ ಬೇಗ ನಡೀತಾ ಇದೀನಿ ಅಷ್ಟೆ. ಅಕ್ಕ ಸುಳ್ಳು ಹೇಳ್ತಾ ಇದಾಳೆ.	No, Mummy, I am not running. I am just walking very fast. Elder Sister is telling lie.
ಶಾರದಮ್ಮ—ಅಪರ್ಣಾ, ವಿಮಲಾ, ಬೇಗ ಬೇಗ ಬನ್ನಿ. ಆಗಲೆ ಮಂಗಳಾರತಿ ಮಾಡ್ತಾ ಇದ್ದಾರೆ.	Aparna, Vimala come quickly. They are already doing puuja.
ಅಪರ್ಣಾ—ಅಮ್ಮಾ, ಒಳಗೆ ತುಂಬಾ ಸೆಖೆ. ಹೊರಗೆ ಬನ್ನೀಮ್ಮಾ ಸ್ವಲ್ಪ ಕೂರೋಣ. ನೋಡೋ ಬಾಬು, ಈ ಪುಟಾಣಿ ಮಕ್ಕಳನ್ನ ಹೇಗೆ ಭಜನೆ ಮಾಡ್ತಾ ಇವೆ. ನೀನೂ ಇದೀಯ. [illegible] [illegible] ಅಂತ ನಾನು ಹೇಳ್ತಾನೇ ಇದೀನಿ. ನನ್ನ ಮಾತು ಒಂದು ಚೂರೂ ಕೇಳ್ತಾ ಇಲ್ಲ.	Mummy, it is too sultry inside. Let us go out and sit down for sometime. Eh, Babu, look at these small children, how nicely they are doing the bhajan. You useless fellow. I keep on telling you to do bhajan, but you are not listening to me at all.
ಬಾಬು—ನಾಳೆಯಿಂದ ನಾನೂ ಮಾಡ್ತೀನೀ ಅಕ್ಕ.	Elder Sister, I will also do it from tomorrow.
ಶಾರದಮ್ಮ—ಅಪರ್ಣಾ, ವಿಮಲ ನಡೀರಿ. ಕತ್ತಲೆ ಆಗ್ತಾ ಇದೆ.	Aparna, Vimala, let us go. It is getting dark.
ಅಪರ್ಣಾ—ಅಮ್ಮಾ, ಈ ದೇವಸ್ಥಾನ ಚೆನ್ನಾಗಿದೆ. ದಿನಾ ಸಾಯಂಕಾಲ ಬರೋಣವಮ್ಮಾ ?	Mummy, this temple is nice. Shall we come everyday in the evening ?

ಶಾರದಮ್ಮ—ಅದಕ್ಕೆ ಏನಂತೆ ಬರೋಣ ನಡೀರಿ. All right. Let us go.

DRILLS

Build up Drill :

a) Model : ಹೋಗ್ತಾ ಇದೀನಿ.

ಮನೆಗೆ ಹೋಗ್ತಾ ಇದೀನಿ.

ರಾಮುವಿನ ಮನೆಗೆ ಹೋಗ್ತಾ ಇದೀನಿ.

ಈಗ ರಾಮುವಿನ ಮನೆಗೆ ಹೋಗ್ತಾ ಇದೀನಿ.

ನಾನು ಈಗ ರಾಮುವಿನ ಮನೆಗೆ ಹೋಗ್ತಾ ಇದೀನಿ.

Build up the following making the changes wherever necessary :

1) ಬರ್ತಾ ಇದಾರೆ.
2) ಆಗ್ತಾ ಇದೆ.
3) ಹೇಳ್ತಾ ಇದಾಳೆ.

b) Model ಮಾಡ್ತಾ ಇದಾನಾ ?

ಊಟ ಮಾಡ್ತಾ ಇದಾನಾ ?

ಈಗ ಊಟ ಮಾಡ್ತಾ ಇದಾನಾ ?

ಅಣ್ಣಾ ಈಗ ಊಟ ಮಾಡ್ತಾ ಇದಾನಾ ?

ನಿಮ್ಮ ಅಣ್ಣ ಈಗ ಊಟ ಮಾಡ್ತಾ ಇದಾನಾ ?

Build up the following making the changes wherever necessary :

1) ನೋಡ್ತಾ ಇದೀರಾ ?
2) ಹೇಳ್ತಾ ಇದಾಳಾ ?
3) ತಿನ್ನುತಾ ಇವೆಯಾ ?

c) **Model**: ಓದ್ತಾ ಇಲ್ಲ.

ಚೆನ್ನಾಗಿ ಓದ್ತಾ ಇಲ್ಲ.

ನಿನ್ನ ತಮ್ಮ ಚೆನ್ನಾಗಿ ಓದ್ತಾ ಇಲ್ಲ.

ಈಗ ನಿನ್ನ ತಮ್ಮ ಚೆನ್ನಾಗಿ ಓದ್ತಾ ಇಲ್ಲ.

Build up the following making the changes wherever necessary:

1) ಕುಡೀತಾ ಇಲ್ಲ.
2) ಬರೀತಾ ಇಲ್ಲ.
3) ತರ್ತಾ ಇಲ್ಲ.

d) **Model**: ಬರ್ತಾ ಇಲ್ಲವಾ ?

ಮೇಷ್ಟ್ರು ಬರ್ತಾ ಇಲ್ಲವಾ ?

ಪಾಠದ ಮೇಷ್ಟ್ರು ಬರ್ತಾ ಇಲ್ಲವಾ ?

ಮನೆಗೆ ಪಾಠದ ಮೇಷ್ಟ್ರು ಬರ್ತಾ ಇಲ್ಲವಾ ?

ನಿಮ್ಮ ಮನೆಗೆ ಪಾಠದ ಮೇಷ್ಟ್ರು ಬರ್ತಾ ಇಲ್ಲವಾ ?

ಈಗ ನಿಮ್ಮ ಮನೆಗೆ ಪಾಠದ ಮೇಷ್ಟ್ರು ಬರ್ತಾ ಇಲ್ಲವಾ ?

Build up the following making the changes wherever necessary:

1) ಹೋಗ್ತಾ ಇಲ್ಲವಾ ?
2) ಮಾಡ್ತಾ ಇಲ್ಲವಾ ?
3) ಕೊಡ್ತಾ ಇಲ್ಲವಾ ?

e) Model: ಹೋಗ್ತಾ ಇರ್ತೀವಿ.

ದೇವಸ್ಥಾನಕ್ಕೆ ಹೋಗ್ತಾ ಇರ್ತೀವಿ.

ಸಾಯಂಕಾಲ ದೇವಸ್ಥಾನಕ್ಕೆ ಹೋಗ್ತಾ ಇರ್ತೀವಿ.

ದಿನಾ ಸಾಯಂಕಾಲ ದೇವಸ್ಥಾನಕ್ಕೆ ಹೋಗ್ತಾ ಇರ್ತೀವಿ.

ನಾವು ದಿನಾ ಸಾಯಂಕಾಲ ದೇವಸ್ಥಾನಕ್ಕೆ ಹೋಗ್ತಾ ಇರ್ತೀವಿ.

Build up the following making the changes wherever necessary:

1) ಮಾಡ್ತಾ ಇರ್ತೀವಿ.
2) ಮಾರ್ತಾ ಇರ್ತಾಳೆ.
3) ಕೇಳ್ತಾ ಇರ್ತಾಳೆ.

f) Model: ಓದ್ತಾ ಇರಲ್ಲ.

ಪಾಠ ಓದ್ತಾ ಇರಲ್ಲ.

ವಿದ್ಯಾರ್ಥಿಗಳು ಪಾಠ ಓದ್ತಾ ಇರಲ್ಲ.

ಕ್ಲಾಸಿನಲ್ಲಿ ವಿದ್ಯಾರ್ಥಿಗಳು ಪಾಠ ಓದ್ತಾ ಇರಲ್ಲ.

ಕನ್ನಡ ಕ್ಲಾಸಿನಲ್ಲಿ ವಿದ್ಯಾರ್ಥಿಗಳು ಪಾಠ ಓದ್ತಾ ಇರಲ್ಲ.

ಈಗ ಕನ್ನಡ ಕ್ಲಾಸಿನಲ್ಲಿ ವಿದ್ಯಾರ್ಥಿಗಳು ಪಾಠ ಓದ್ತಾ ಇರಲ್ಲ.

Build up the following making the changes wherever necessary:

1) ಮಾಡ್ತಾ ಇರಲ್ಲ.
2) ಹೇಳ್ತಾ ಇರಲ್ಲ.
3) ಬರೀತಾ ಇರಲ್ಲ.

g) **Model:** ಆಗ್ತಾ ಇರಲ್ಲವಾ ?

ಮಂಗಳಾರತಿ ಆಗ್ತಾ ಇರಲ್ಲವಾ ?

ದೇವಸ್ಥಾನದಲ್ಲಿ ಮಂಗಳಾರತಿ ಆಗ್ತಾ ಇರಲ್ಲವಾ ?

ಇಷ್ಟು ಹೊತ್ತಿಗೆ ದೇವಸ್ಥಾನದಲ್ಲಿ ಮಂಗಳಾರತಿ ಆಗ್ತಾ ಇರಲ್ಲವಾ ?

Build up the following making the changes wherever **necessary**;

1) ಬರೀತಾ ಇರಲ್ಲವಾ ?
2) ಕೇಳ್ತಾ ಇರಲ್ಲವಾ ?
3) ಹೋಗ್ತಾ ಇರಲ್ಲವಾ ?

II Transformation Drill :

a) Model : T: ನಾನು ಮನೆಗೆ ಹೋಗ್ತೀನಿ.

S: ನಾನು ಮನೆಗೆ ಹೋಗ್ತಾ ಇದೀನಿ.

1) ಅವನು ಕಾಫಿ ಕುಡೀತಾನೆ.
2) ಸುಮತಿ ಪಾಠ ಬರೀತಾಳೆ.
3) ನಾಯಿ ಓಡತ್ತೆ.

b) Model : T: ನೀವು ಕಥೆ ಕೇಳ್ತೀರಿ.

S: ನೀವು ಕಥೆ ಕೇಳ್ತಾ ಇರ್ತೀರಿ.

1) ರವಿ ಸಿನಿಮಾ ನೋಡ್ತಾರೆ.
2) ನಾಯಿಗಳು ದೋಸೆ ತಿನ್ನತ್ವೆ.
3) ನಾವು ಅಂಗಡಿಯಲ್ಲಿ ಕಾಯಿ ಕರ್ಪೂರ ತಗೊಳ್ತೀವಿ.

c) **Model :** T : ನಾನು ಮನೆಗೆ ಹೋಗಲ್ಲ.

S : ನಾನು ಮನೆಗೆ ಹೋಗ್ತಾ ಇಲ್ಲ.

1) ಅವಳು ಹಾಡು ಹೇಳ್ತಾಳೆ.
2) ಅಮ್ಮ ಅಡಿಗೆ ಮಾಡ್ತಾರೆ.
3) ಮಕ್ಕಳು ಹಾಲು ಕುಡಿಯತ್ವೆ.

d) **Model :** T : ನೀನು ಮನೆಗೆ ಹೋಗ್ತೀಯಾ ?

S : ನೀನು ಮನೆಗೆ ಹೋಗ್ತಾ ಇದೀಯಾ ?

1) ನೀನು ಪೇಪರ್ ತರ್ತೀಯಾ ?
2) ನೀವು ಕಾಫಿ ಕುಡೀತೀರಾ ?
3) ಅದು ಮನೆಯಿಂದ ಬರತ್ತಾ ?

e) **Model :** T : ನೀನು ಮನೆಗೆ ಹೋಗ್ತಾ ಇದೀಯಾ ?

S : ನೀನು ಮನೆಗೆ ಹೋಗ್ತಾ ಇಲ್ಲವಾ ?

1) ರಮಾ ಕಾಫಿ ಕುಡಿತಾ ಇದಾಳಾ ?
2) ನೀನು ಆಟ ಆಡ್ತಾ ಇದೀಯಾ ?
3) ಮಂಗಳಾರತಿ ಆಗ್ತಾ ಇದೆಯಾ ?

f) **Model :** T : ನನ್ನ ಮಗಳು ಕಾಲೇಜಿನಲ್ಲಿ ಓದುತ್ತಾ ಇದಾಳೆ.

S : ನನ್ನ ಮಗಳು ಕಾಲೇಜಿನಲ್ಲಿ ಓದುತ್ತಾ ಇಲ್ಲ.

1) ಕವಿತಾ ಪಾಠ ಬರೀತಾ ಇದಾಳೆ.
2) ಯಾರು ಕೆಲಸ ಮಾಡುತ್ತಾ ಇದಾರೆ ?
3) ನೀವು ಮನೆಗೆ ಹೋಗ್ತಾ ಇದೀರಿ.

EXERCISES

I Fill in the blanks using present continuous tense form of the verbs given in the brackets :

1) ಅಕ್ಕ ನಿಜ ———— (ಹೇಳು)
2) ನಾವು ಮನೆಯ ಹತ್ತಿರ ——— (ಬರು)
3) ಸುರೇಶ ಸಿನಿಮಾ ——— (ನೋಡು)
4) ನೋಡು ನಿಮ್ಮ ಅಣ್ಣ ಹೇಗೆ ——— ? (ಓದು)
5) ನೀನು ಯಾಕೆ ಬಿಸಿ ಕಾಫಿ ———— ? (ಕುಡಿ)
6) ಮಕ್ಕಳು ಚೆನ್ನಾಗಿ ಭಜನೆ ——— (ಮಾಡು)
7) ನೀವು ಕನ್ನಡ ಪಾಠ ——— ? (ಬರೆ)
8) ಮಗು ಆಟ ——— (ಆಡು)

II Transform into negative :

1) ಅವಳು ಪಾಠ ಓದುತ್ತಾ ಇದಾಳೆ.
2) ರಾಮರಾಯರು ಆಫೀಸಿನಲ್ಲಿ ನಿದ್ರೆ ಮಾಡ್ತಾ ಇರುತ್ತಾರೆ.
3) ನಿಮ್ಮ ಮನೆ ಬೆಕ್ಕು ಸದಾ ಹಾಲು ಕುಡೀತಾ ಇರತ್ತೆ.
4) ನಿಮ್ಮ ಮಗ ಸ್ಕೂಲಿಗೆ ಹೋಗ್ತಾ ಇದಾನಾ ?
5) ನೀನು ಯಾಕೆ ಸರಿಯಾಗಿ ಓದುತ್ತಾ ಇದೀಯೆ ?

III Change the text into present continuous :

ಇದು ಕಮಲೆಯ ಮನೆ. ಇವಳು ಕಮಲೆ. ಕಮಲೆ ಚೆನ್ನಾಗಿ ಪಾಠ ಓದುತ್ತಾಳೆ. ಇವನು ಕಮಲೆಯ ತಮ್ಮ. ಇವನು ಎರಡನೇ ಕ್ಲಾಸಿನಲ್ಲಿ ಓದುತ್ತಾನೆ. ಅವಳು ಕಮಲೆಯ ತಂಗಿ ಸುಮ. ಸುಮ ಹಾಡು ಹಾಡುತ್ತಾಳೆ. ಕಮಲೆಯ ತಾಯಿ ಅಡಿಗೆ ಮಾಡುತ್ತಾರೆ. ಕಮಲೆಯ ತಂದೆ ರೂಮಿನಲ್ಲಿ ರೇಡಿಯೋ ಕೇಳುತ್ತಾರೆ. ಈಗ ಕಮಲೆಯ ಅಣ್ಣ ನನ್ನ ಅಣ್ಣನ ಜೊತೆ ಮಾತಾಡುತ್ತಾರೆ. ಅವರಿಬ್ಬರೂ ಜೋರಾಗಿ ನಗುತ್ತಾರೆ. ನಾನು ಅವರನ್ನು ನೋಡುತ್ತೇನೆ.

IV Frame three interrogative sentences to each of the following sentences :

1) ಸವಿತನ ಅತ್ತಿಗೆ ಅವರ ತಾಯಿಯ ಮನೆಗೆ ಹೋಗುತ್ತಾ ಇದಾರೆ.
2) ರವಿಯ ತಂದೆ ವಿದ್ಯಾರ್ಥಿಗಳಿಗೆ ಪಾಠ ಹೇಳುತ್ತಾ ಇದಾರೆ.
3) ಕುಸುಮ ಒಂದು ಲೋಟ ಬಿಸಿಹಾಲು ಕುಡಿಯುತ್ತಾ ಇದಾಳೆ.

V Describe the current activities of your class

VI Answer the following questions :

1) ಅಮ್ಮನ ಜೊತೆ ಯಾರು ಬರ್ತಾ ಇದಾರೆ ?
2) ಬಾಬು ಹೇಗೆ ನಡೀತಾನೆ ?
3) ದೇವಸ್ಥಾನದಲ್ಲಿ ಏನು ಆಗುತ್ತಾ ಇದೆ ?
4) ಎಲ್ಲಿ ತುಂಬ ಸೆಖೆ ?
5) ದೇವಸ್ಥಾನದಲ್ಲಿ ಮಕ್ಕಳು ಏನು ಮಾಡ್ತಾ ಇದಾರೆ ?
6) ದೇವಸ್ಥಾನ ಹೇಗಿದೆ ?

VOCABULARY :

ಅಡಿಕೆ—betel nut
ಅನ್ನ—cooked rice
ಆಟ—game
ಆಡು—to play, to behave
ಒಡ್ಡೊಡ್ಡಾಗಿ—awckwardly
ಓಡು—run
ಕತ್ತಲೆ—darkness
ಕರ್ಪೂರ—camphor
ಕಾಯಿ—coconut

ಗಂಟೆ—temple bell

ಗರ್ಭಗುಡಿ—sanctum

ಚೂರು—bit, piece

ದೇವಸ್ಥಾನ—temple

ನಗು—to laugh

ನಡಿಗೆ—walking style

ನಿಲ್ಲು—stop, stand

ನಿಧಾನವಾಗಿ—slowly

ಪುಟಾಣಿ—small

ಬೇಗ—fast

ಭಜನೆ—prayer

ಮಂಗಳಾರತಿ—a ceremony of waving of burning camphor (clock wise)

ಮಾತು—word, speech

ವೀಳ್ಯದೆಲೆ—betel leaf

ಶಬ್ದ—sound

ಸುಳಿವು—sign

ಸುಳ್ಳು—lie

ಸೆಖೆ—sultry

GRAMMAR NOTES

1. This Unit introduces Present Continuous Participle form of Verbs. Continuous participle form of the verb is obtained by adding –taa to the verb root. Further the present continuons participle is formed by adding the present tense forms of auxillary root –iru 'to be' to the continuonus form of the main verb.

Ex : ಬರ್ + ತಾ + ಇದ್ + ಆನೆ = ಬರ್ತಾ ಇದಾನೆ.

ಅವನು ಬರ್ತಾ ಇದಾನೆ.

The literay form is ಬರುತ್ತಾ ಇದ್ದಾನೆ.

2. By adding the habitual form of root iru 'to be' (indefinite) to the continuous participle form of the verb, habitual continuous participle forms are obtained.

Ex : ಬರ್ತಾ ಇರ್ತೀನಿ

ಬರುತ್ತಾ ಇರುತ್ತೇನೆ (literay form)

3. The corresponding negative forms are obtained by adding 'illa' and 'iralla' respectively to the continuous participle forms of the verbs.

Ex : ಅವನು ಬರ್ತಾ ಇಲ್ಲ.

ಅವನು ಬರ್ತಾ ಇರಲ್ಲ.

4. ಲೋ and ಲೇ are the addressive terms for male and female respectively for equals or inferiors.

LESSON 26

IT IS NOT DIFFICULT TO LEARN KANNADA

DIALOGUE

ಯಾದವ್—ಬನ್ನಿ. ಕೂತ್ಕೊಳ್ಳಿ. ಏನು ವಿಶೇಷ.	Please Come. Sit down, what is the matter ?
ರಾಜು—ಏನೂ ವಿಶೇಷ ಇಲ್ಲ.	Nothing in particular.
ಯಾದವ್—ತುಂಬಾ ಅಪರೂಪ. ಬಹಳ ಓದ್ತಾ ಇರಬೇಕು.	You are rearly about. You must be studying seriously.

ರಾಜು—ಅಂಥಾ ಜೋರಾಗಿ ಏನೂ ಓದ್ತಾ ಇಲ್ಲ. ಇನ್ನು ಹದಿನೈದು ದಿನದ ಒಳಗೆ ಪ್ರವಾಸದ ವರದಿ ಕೊಡಬೇಕು. ಅದನ್ನು ಬರೀತಾ ಇದೀನಿ.	I am not studying that really. With in fifteen days a tour report has to be submitted. I am writing that.
ಯಾದವ್—ನಾನೂ ಬರೆಯಬೇಕು. ಆದರೆ ನನಗೆ ಕನ್ನಡ ನಿಮ್ಮಷ್ಟು ಚೆನ್ನಾಗಿ ಬರಲ್ಲ.	I too have one to write. But I don't know Kannada as well as you do.
ರಾಜು—ಅದೇನು ಮಹಾ ! ಪ್ರಯತ್ನ ಮಾಡಿ. ತಾನೇ ಬರುತ್ತೆ.	What is the great problem! Make an effort. It will come.
ಯಾದವ್—ಮುಗಿಯೋದಕ್ಕೆ ಇನ್ನೂ ಎಷ್ಟು ದಿನ ಬೇಕು ?	How many more days are needed to complete it ?
ರಾಜು—ನಾಳೆ, ನಾಡಿದ್ದರಲ್ಲಿ ಮುಗಿಯೋದಲ್ಲ ಅದು. ಇನ್ನೂ ಒಂದು ವಾರ ಆಗಬಹುದು.	It can't be completed tomorrow or day after. It may take a week more.
ಯಾದವ್—ನೀವು ಬರೀತಾ ಇರೋದು ದೊಡ್ಡ ವರದೀನಾ ?	Is the report that you are writ-ing a big one ?
ರಾಜು—ನಾನು ಬರೀತಾ ಇರೋದು ತುಂಬಾ ದೊಡ್ಡ ವರದಿ ಏನೂ ಅಲ್ಲ. ಆದರೆ ಎಲ್ಲಾ ವಿಷಯಾನೂ ಬರೀಬೇಕು. ಅದರಿಂದಾನೇ ಹೆಚ್ಚು ಸಮಯ ತಗಳೋದು. ಎಲ್ಲಾ ವಿವರಣೇನೂ ಬರೀಬೇಕು. ಅದು ಸರಿ ನೀವು ಹೇಗೆ ಬರೀತಾ ಇದೀರಿ?	The one I am writing is not a very big report. But we have to write a full description. That is why it takes so much time. I have to write all the details. That is all right. How are you writing it ?
ಯಾದವ್—ನೀವು ಬರೆಯೋದರ ಮುಂದೆ ನನ್ನದೇನು ? ಅವೆಲ್ಲಾ ನೀವು ನೋಡೋದಲ್ಲ. ನಮಗೆ ಉತ್ತರದವರಿಗೆ ಕನ್ನಡ ಕಲಿಯೋದು ತುಂಬಾ ಕಷ್ಟ.	What is mine before your writ-ing ? That is not fit to be seen by you. For us northeners learn-ing Kannada is very difficult.
ರಾಜು—ಯಾಕೆ, ನೀವೂ ಚೆನ್ನಾಗಿ ಕಲಿಯಬಹುದು. ಭಾರತದ ಭಾಷೆ	Why, you too can learn well There is lot of similarity between

ಗಳಲ್ಲೆಲ್ಲಾ ಸಾಮ್ಯ ಹೆಚ್ಚು. ಬಹಳ ಪದಗಳು ಒಂದೇ ರೀತಿ ಇವೆ. ವಾಕ್ಯ ರಚನೆ ಕೂಡ ಒಂದೇ ರೀತಿ ಇದೆ. ನೀವು ಸ್ವಲ್ಪ ಆಸಕ್ತಿ ಕೊಡಿ. ಬರುತ್ತೆ.	Indian languages. Many words are similar. Even the sentence structure is the same. Take a little interest in it and you will learn.
ಯಾದವ್—ನೀವು ಹೇಳೋದು ನಿಜ. ನಾವು ಪ್ರಯತ್ನ ಮಾಡೋದು ಮುಖ್ಯ.	What you say is true. The most important thing is for us to make an effort
ರಾಜು—ನಾನಿನ್ನು ಬರ್ಲಾ ?	Shall I take leave of you ?
ಯಾದವ್—ಯಾಕಿಷ್ಟು ಅವಸರ? ಇರಿ ಸ್ವಲ್ಪ ಕಾಫಿ ಕೊಡ್ತೀನಿ.	Why such a hurry? Wait I will give you a cup of coffee.
ರಾಜು—ಕಾಫಿ ಈಗೇನೂ ಬೇಡಿ. ನಾನು ಬೆಳಿಗ್ಗೆ ಒಂದೇ ಸಲ ಕಾಫಿ ಕುಡಿಯೋದು.	No need for coffee now. I drink coffee only once in the morning.
ಯಾದವ್—ಪರವಾಗಿಲ್ಲ. ಒಂದು ಗುಟುಕು ತಗೊಳಿ. ಇಷ್ಟು ಕುಡಿಯೋದರಿಂದ ಏನೂ ಆಗಲ್ಲ.	Doesn't matter, have a sip. Drinking that much doesn't affect you.
ರಾಜು—ನನಗೇನೂ ಕಾಫಿ ಕುಡಿಯೋದರಲ್ಲಿ ಆಸಕ್ತಿ ಇಲ್ಲ. ಅದರೂ ಸ್ವಲ್ಪ ಕೊಡಿ. ಇನ್ನೇನು ಮಾಡೋದು ?	I am not interested in drinking coffee. All right give me some. What can be done ?
ಯಾದವ್—ನೋಡಿ ಸ್ವಲ್ಪಾನೇ ಕೊಡ್ತಾ ಇದೀನಿ. ತಗೊಳಿ.	Look I am giving you a little. Please take.
ರಾಜು—ಕಾಫಿ ಚೆನ್ನಾಗಿದೆ ಮಿ. ಯಾದವ್ ನೀವು ತರೋದು ಯಾವ ಕಾಫಿ ಪುಡಿ ?	Coffee is good Mr. Yadav. What coffee powder do you use ?
ಯಾದವ್—ಕಾಫಿ ಪುಡೀಲಿ ಏನಿರುತ್ತೆ ಮಹಾ ! ನಾನು ಕಾಫಿ ಮಾಡೋ	It is nothing to do with the coffee powder ! I am an expert

ದರಲ್ಲಿ ಎಕ್ಸ್‌ಪರ್ಟ್. ನಿಮಗೆ ಗೊತ್ತಿಲ್ವಾ?	in making coffee. Don't you know?
ರಾಜು—ನನಗೂ ಸ್ವಲ್ಪ ಕಾಫಿ ಮಾಡೋದನ್ನ ಕಲಿಸಿ.	Teach me also something about preparing coffee.
ಯಾದವ್—ಆಗಲಿ ಕಲಿಸ್ತೀನಿ ಬನ್ನಿ.	O.K. Come on I will teach.

DRILLS :

I Transformation Drill :

a) Model : T : ನೀನು ಹೇಳೋದು ಏನು ?

S : ನೀನು ಹೇಳುತ್ತಾ ಇರೋದು ಏನು ?

1) ಅವನು ತಿನ್ನೋದು ಏನು ?

2) ರಮೇಶ ಓದೋದು ರಾಜಾರಾಯರ ಕಾದಂಬರಿ.

3) ರವಿ ನೋಡೋದು ನಿನ್ನ ಫೋಟೋನಾ ?

b) Model : T : ಈ ಪುಸ್ತಕ ಮಕ್ಕಳು ಓದೋದು.

S : ಈ ಪುಸ್ತಕ ಮಕ್ಕಳು ಓದೋದಾ ?

1) ಈ ಕತೆ ಹುಡುಗರು ಕೇಳೋದು.

2) ಈ ದೋಸೆ ಅವನು ತಿನ್ನೋದು.

3) ಈ ನೀರು ಕುಡಿಯೋದು.

c) Model : T : ಈ ನೀರು ಕುಡಿಯೋದು.

S : ಈ ನೀರು ಕುಡಿಯೋದಲ್ಲ.

1) ಈ ಪುಸ್ತಕ ಓದೋದು.

2) ಈ ಸಿನಿಮಾ ನೋಡೋದು.

3) ಆ ಹಣ್ಣು ತಿನ್ನೋದು.

4) Model : T : ಈ ಆಟ ಮಕ್ಕಳು ಆಡೋದಾ ?

S : ಈ ಆಟ ಮಕ್ಕಳು ಆಡೋದಲ್ವಾ ?

1) ಆ ಸಿನಿಮಾ ನೋಡೋದಾ ?

2) ಆ ಹಣ್ಣು ಮಾರೋದಾ ?

3) ಈ ಮನೆ ಕೊಡೋದಾ ?

EXERCISES :

I A) Fill in the blanks using the correct gerundial form of the words given in the brackets :

1) ಆ ಪುಸ್ತಕ ನೀವು ---------- (ಓದು)

2) ಆ ವಿಷಯ ನಿನಗೆ ---------- ? (ಹೇಳು)

3) ಈ ಕಥೆ ಮಕ್ಕಳು ---------- (ಬರೆ)

4) ಈ ಪಾಠ ನಿಮ್ಮಪ್ಪನವರು ---------- ? ([illegible])

5) ಆ ಕಥೆ ನೀನು ---------- ? (ಕೇಳು)

B) Fill in the blanks with appropriate case markers using the [illegible]

1) ---------- ನೀನು ಮನೆ ಕಟ್ಟಿಸಬೇಕು ? (ಕಟ್ಟಿಸೋದು)

2) ನಾನು---------- ಮುಂಚೆ [illegible] ನನ್ನ ಮಯಾ ! (ಮಾಡೋದು)

3) ---------- ನನ್ನ ಮಗ ಬಂದ್ಮೇಲಂತೆ, (ಓದೋದು)

4) ನಾನು ——— ನಿನಗೆ ಏನು ಕಷ್ಟ ? (ಹೋಗೋದು)

5) ನೀನು ——— ಯಾರು ಓದುತ್ತಾರೆ ? (ಬರೆಯೋದು)

6) ನಾನು ಸಿನಿಮಾ ——— ನಿನ್ನನ್ನು ಯಾಕೆ ಕೇಳಬೇಕು ? (ನೋಡೋದು)

II Fill in the blanks using the correct form from the given choices :

1) ಅವನು ——— ಯಾರು ನೋಡ್ತಾರೆ ?

ಬರೆಯೋದರಲ್ಲಿ
ಬರೆಯೋದರಿಂದ
ಬರೆಯೋದನ್ನ

2) ನೀನು ——— ನಾನು ಕೇಳಲ್ಲ.

ಹೇಳ್ತೀಯ
ಹೇಳೋದು
ಹೇಳಲ್ಲ

3) ಒಳಗೆ ——— ಟಿಕೆಟ್ ಬೇಕು.

ಹೋಗೋದರ
ಹೋಗೋದರಲ್ಲಿ
ಹೋಗೋದಕ್ಕೆ

4) ನೀನು ——— ನಾನು ಬರ್ತೀನಿ.

ಇರೋದರಿಂದ
ಇರೋದಕ್ಕೆ
ಇರೋದನ್ನ

5) ಆ ಮಾವಿನ ಹಣ್ಣು ——— ?

ತಿನ್ನೋದಲ್ಲ
ತಿನ್ನೋದಕ್ಕೆ
ತಿನ್ನೋದಲ್ಲವಾ

*

III If ಮಾಡು becomes ಮಾಡೋದು what will be the following ?

1) ಕೊಡು 2) ಹೇಳು

3) ತರು 4) ಓದು

5) ನೋಡು 6) ಕಲಿ

7) ಕುಡಿ 8) ಬರೆ

9) ತಿನ್ನು 10) ಹೋಗು

IV Change the following sentences into interrogative sentences and then negate :

1) ಈ ನೀರನ್ನ ಕುಡಿಯೋದು.

2) ಆ ಪುಸ್ತಕ ಓದೋದು.

3) ಈ ಬಸ್ಸು ಈಗ ಹೊರಡೋದು.

4) ಆ ಸೀರೆ ನೀನು ತಗೊಳೋದು.

5) ಈ ಬಸ್ಸು 10 ಗಂಟೆಗೆ ಮೈಸೂರು ಸೇರೋದು.

Write the following according to the model and use them in your own sentences :

Model : ಹೊಸದು + ಆಗಿ = ಹೊಸದಾಗಿ

1) ಕೆಟ್ಟ
2) ಒಳ್ಳೆಯ
3) ಚಿಕ್ಕ
4) ದೊಡ್ಡ
5) ಆಳ

VI Combine the following sentences according to the mode :

Model : T : ಅದು ಹೊಸದು
ಅದನ್ನು ನೋಡು

S : ಹೊಸದನ್ನು ನೋಡು

1) ಅದು ಕೆಟ್ಟದು.
ಅದನ್ನು ನೋಡಬೇಡ.

2) ಅವನು ಒಳ್ಳೆಯವನು.
ಅವನಿಂದ ಉಪಯೋಗ ಇದೆ.

3) ಅದು ಒಳ್ಳೆಯದು.
ಅದಕ್ಕೆ ತುಂಬಾ ಬೆಲೆ.

4) ಅದು ಲೈಬ್ರರಿ.
ಅಲ್ಲಿ ಒಳ್ಳೆಯ ಪುಸ್ತಕ ಇದೆ.

5) ಅಲ್ಲಿ ಅವರ ಪುಸ್ತಕ.
ಅವರ ಹೆಸರು ಪಾಟು.

VII Answer the following questions :

1) ರಾಜು ಬರೆಯುತ್ತಾ ಇರೋದು ಏನು ?
2) ಅದು ಮುಗಿಯೋದಕ್ಕೆ ಇನ್ನೂ ಎಷ್ಟು ದಿನ ಬೇಕು ?
3) ಅವರು ಬರೆಯುತ್ತಾ ಇರೋದು ದೊಡ್ಡ ವರದೀನಾ ?
4) ಕನ್ನಡ ಕಲಿಯೋದು ಕಷ್ಟಾನಾ ?

VOCABULARY :

ಅಪರೂಪ—rare
ಅವಸರ—urgent
ಆಸಕ್ತಿ— interest
ಉತ್ತರದವರು—northerners
ಕಡೆಗೆ—towards, finally
ಕಲಿ—to learn

ಕೂಡ—also

ಗುಟುಕು—sip

ಪದ—word, vocabulary

ಪ್ರಯತ್ನ—effort

ಪ್ರವಾಸದ ವರದಿ—tour report

ಮಹಾ—great

ಮುಂದೆ—before, from

ಮುಖ್ಯ—important

ಮುಗಿ—to be completed

ವಾಕ್ಯರಚನೆ—sentence construction

ವಿವರಣೆ—description, explanation

ವಿಶೇಷ—speciality

ವಿಷಯ—subject, about as post position with genitive

ಸಮಯ—time, period

ಸಾಮ್ಯ—similarity

GRAMMAR NOTES

1. Verbal nouns are introduced in this lesson. These verbal nouns can be inflicted to the case markers. Verbal noun in Kannada is verb root + verbal noun suffix. This will give the meaning of the action of verb. –oodu is the verbal noun suffix in colloquial Kannada, whereas in literary Kannada it is –vudu.

Ex : ಓದು + ಓದು = ಓದೋದು (colloquial)

ಓದು + ವುದು = ಓದುವುದು (literary)

Note that Verbal noun functions as noun as well as adjective.

Ex : for noun :

ಉತ್ತರದವರಿಗೆ ಕನ್ನಡ ಕಲಿಯೋದು ತುಂಬಾ ಕಷ್ಟ.

for adjective :

ನೀನು ಬರೀತಾ ಇರೋದು ದೊಡ್ಡ ಪದವೀನಾ ?

2. The negative verbal noun can be obtained by adding 'alla' to the verbal noun forms. Such negations give the meaning of prohibition.

ಓದೋದು + ಅಲ್ಲ = ಓದೋದಲ್ಲ.

This example can be compared with ಓದೋದಿಲ್ಲ.

1. ಅವನು ಆ ಪುಸ್ತಕ ಓದೋದಿಲ್ಲ. 'He doesn't read that book'
2. ಆ ಪುಸ್ತಕ ಓದೋದಲ್ಲ. 'That book is not to be read'

3. The derived verbal noun does not behave like other nouns in one syntactic aspect. That can be seen from the following example.

1. ಅವನ ಪುಸ್ತಕ ಚೆನ್ನಾಗಿದೆ.
2. ಅವನು ಮಾತಾಡೋದು ಚೆನ್ನಾಗಿದೆ.

In the above sentence the verbal noun is used with the nominative subject. Thus it can be considered as an adjective modifying the subject.

4. While inflicting case markers into verbal noun they behave like Pronoun –adu.

Ex : ಓದೋದು + ಅರ = ಓದೋದರ
ಓದೋದು + ಅಕ್ಕೆ = ಓದೋದಕ್ಕೆ
ಓದೋದು + ಅನ್ನು = ಓದೋದನ್ನು

When dative is inflicted to verbal noun ಓದೋದಕ್ಕೆ will become ಓದೋಕೆ in colloquial form.

5. Note that the verbal noun with comparative marker gives the meaning 'instead 'of' or rather than'

ಆ ಪುಸ್ತಕ ಓದೋದಕ್ಕಿಂತ ಈ ಪುಸ್ತಕ ಓದು

Read this book instead of reading that one.

UNIT 7

LESSON 27

ABOUT RAJYOTSAVA

DIALOGUE

ರಾವ್—ಮುಂದಿನ ವಾರ ಹಂಪೆಯಲ್ಲಿ ರಾಜ್ಯೋತ್ಸವ ನಡೆಯುತ್ತೆ. ಗೊತ್ತಾ?	Rajyotsava will be held in Hampe next week, do you know?
ಕಾಳಿಂಗ—ಗೊತ್ತು.	I know.

ರಾವ್—ನೀವು ನೋಡುವುದಕ್ಕೆ ಹೋಗಲ್ಲವಾ ?	Aren't you going to see it ?
ಕಾಳಿಂಗ—ಆಹಾ ! ನನಗೆ ಮಾಡುವುದಕ್ಕೆ ಬೇರೆ ಕೆಲಸ ಇಲ್ಲವಾ ?	Oh ! Don't I have other works to do ?
ರಾವ್—ಏನು ಹೀಗೆ ಮಾತಾಡ್ತಾ ಇದೀರಿ ? ಯಾಕೆ ತಮಾಷೆ ಮಾಡ್ತಾ ಇದೀರಿ.	Why are you talking like that ? Why are you making fun of it ?
ಕಾಳಿಂಗ—ಇನ್ನೇನು ಮಾಡಲಿ ಹೇಳಿ.	Then what else should I do ? Tell me.
ರಾವ್—ನೀವು ಮಾತಾಡೋದೇ ನನಗೆ ಅರ್ಥ ಆಗ್ತಾ ಇಲ್ಲ.	I am unable to understand what you are saying.
ಕಾಳಿಂಗ—ಅದರಲ್ಲಿ ಅರ್ಥ ಆಗೋದು ಏನಿದೆ ? ನಿಮಗೇ ಗೊತ್ತು, ಜನ ಬರಗಾಲದಿಂದ ದಿನಾ ಸಾಯ್ತಾ ಇದಾರೆ. ಅಂಥದರಲ್ಲಿ ರಾಜ್ಯೋತ್ಸವ ಯಾಕೆ ಮಾಡಬೇಕು ? ನಮ್ಮ ಜನಕ್ಕೆ ಹೊಟ್ಟೆಗೆ ಇಲ್ಲ. ಇಂಥ ಸಮಯದಲ್ಲಿ ನಾವು ಹಬ್ಬ ಮಾಡೋದು ಸರೀನಾ ?	What is there to understand ? You know very well. People are dying everyday out of famine. That being so why should we celebrate Rajyotsava ? Our people don't have anything to eat. Is it proper to celebrate a festival in such situation.
ರಾವ್—ನೀವು ಅನ್ನುವುದು ಒಂದು ರೀತೀಲಿ ಸರಿ.	What you say is right in one way.
ಕಾಳಿಂಗ—ಹಾಗಾದರೆ ಇನ್ನೊಂದು ರೀತೀಲಿ ತಪ್ಪಾ ?	Then is it wrong in another way ?
ರಾವ್—ತಪ್ಪೇನಿಲ್ಲ. ರಾಜ್ಯೋತ್ಸವ ನಮ್ಮ ಸಂಸ್ಕೃತಿಯ ಅಂಗ. ಅದನ್ನು ನಾವು ಮಾಡೋಕೆ ತಯಾರಾಗಬೇಕು.	Nothing wrong. Rajyotsava is a part of our culture. We should be ready to celebrate it.

ಕಾಳಿಂಗ—ಹೌದು. ಆದರೆ ಅದಕ್ಕೆ ತುಂಬಾ ಹಣ ಖರ್ಚು ಆಗತ್ತೆ. ಅದರಿಂದ ಬಡವನ ಹೊಟ್ಟೆ ತುಂಬಲ್ಲ.	Yes. But a lot of money is to be spent on it. That won't fill poor man's stomach.
ರಾವ್—ಕವಿಮೇಳ, ಕಲಾಮೇಳ, ಸಾಂಸ್ಕೃತಿಕ ಮೇಳಗಳು ನಮಗೆ ದೊಡ್ಡಸ್ತಿಕೆ ತರುತ್ತೆ. ನಮ್ಮ ಸಂಸ್ಕೃತಿಯ ಪ್ರದರ್ಶನ ಭಾವೈಕ್ಯದ ಒಂದು ಭಾಗ. ಅದರಲ್ಲಿ ಅನುಮಾನವೇ ಇಲ್ಲ.	The poets conferences, art festivals and cultural festivals bring us prestige. The exhibition of culture is a part of integration. There is no doubt about it.
ಕಾಳಿಂಗ—ಅಯ್ಯೋ, ನಿಮಗೆ ದೊಡ್ಡಸ್ತಿಕೆ ಯೋಚನೆ ನನಗೆ ದುಡ್ಡಿನ ಯೋಚನೆ. ಹಾಗಾದರೆ ನೀವು ರಾಜ್ಯೋತ್ಸವ ನೋಡೋಕ್ಕೆ ಹೋಗ್ತೀರಿ.	You think of prestige. Alas! I am worried about money. So you are going to attend Rajyotsava.
ರಾವ್—ನೋಡೋದಕ್ಕೆ ಹೋಗಲ್ಲ, ಮಾತಾಡೋದಕ್ಕೆ ಹೋಗ್ತೀನಿ. ನಾನು ಅಲ್ಲಿ ವಿಜಯನಗರದ ಗತಕಾಲದ ವೈಭವದ ಮೇಲೆ ಪ್ರಬಂಧ ಓದಬೇಕು.	I am not going t witness it, but to give lecture. I have to read an article on the past glory of Vijayanagar..
ಕಾಳಿಂಗ—ರಾಜ್ಯೋತ್ಸವ ಈ ವರ್ಷ ಎಷ್ಟು ದಿನ ನಡೆಯುತ್ತೆ ?	For how many days Rajyotsava will be celebrated this year ?
ರಾವ್—ಈ ವರ್ಷ ಒಂದು ವಾರ ನಡೆಯುತ್ತೆ. ಭುವನೇಶ್ವರಿಯ ಮೆರವಣಿಗೆ ಅದರ ಮುಖ್ಯ ಆಕರ್ಷಣೆ.	It will be celebrated for a week this year. Goddess Bhuvaneswari's procession is the main attraction.
ಕಾಳಿಂಗ—ಒಳ್ಳೆಯದು. ನಾನು ಬರಲ್ಲ. ನನಗೆ ಕೂಲಿ ಕಾರ್ಮಿಕರ ಬಳಿ ಕೆಲಸ ಇದೆ. ಅವರ ಕಷ್ಟ ಸುಖ ಕೇಳಬೇಕು. ನಾನು ಬರ್ತೀನಿ.	That is fine, I am not coming I have some work with labourers. I have to enquire about their comforts and discomforts. I take leave of you.

DRILLS :

I Build up Drill :

a) Model :

ನೋಡೋದಕ್ಕೆ

ಸಿನಿಮಾ ನೋಡೋದಕ್ಕೆ

ಹೋಗೋದು ಸಿನಿಮಾ ನೋಡೋದಕ್ಕೆ

ಬೆಂಗಳೂರಿಗೆ ಹೋಗೋದು ಸಿನಿಮಾ ನೋಡೋದಕ್ಕೆ

ಅವರು ಬೆಂಗಳೂರಿಗೆ ಹೋಗೋದು ಸಿನಿಮಾ ನೋಡೋದಕ್ಕೆ

Build up the following making the changes wherever necessary :

1) ಕಲಿಯೋದಕ್ಕೆ
2) ತರೋದಕ್ಕೆ
3) ತಿನ್ನೋದಕ್ಕೆ
4) ಕೇಳೋದಕ್ಕೆ

b) Model :

ಹೋಗೋದಿಲ್ಲ

ನೋಡೋದಕ್ಕೆ ಹೋಗೋದಿಲ್ಲ.

ರಾಜ್ಯೋತ್ಸವ ನೋಡೋದಕ್ಕೆ ಹೋಗೋದಿಲ್ಲ.

ಮುಂದಿನ ವಾರ ರಾಜ್ಯೋತ್ಸವ ನೋಡೋದಕ್ಕೆ ಹೋಗೋದಿಲ್ಲ.

ನಾನು ಮುಂದಿನ ವಾರ ರಾಜ್ಯೋತ್ಸವ ನೋಡೋದಕ್ಕೆ ಹೋಗೋದಿಲ್ಲ.

Build up the following making the changes wherever necessary :

1) ಕಲಿಯೋದಿಲ್ಲ
2) ಕೇಳೋದಿಲ್ಲ
3) ಮಾಡೋದಿಲ್ಲ.
4) ಬರೆಯೋದಿಲ್ಲ.

II Transformation Drill :

a) Model : T : ನಾನು ಸಿನಿಮಾ ನೋಡಲು ಹೋಗ್ತೀನಿ.

S : ನಾನು ಸಿನಿಮಾ ನೋಡೋದಕ್ಕೆ ಹೋಗ್ತೀನಿ.

1) ತಿಂಡಿ ತಿನ್ನಲು ಕ್ಯಾಂಟೀನಿಗೆ ಬರ್ತೀರಾ ?
2) ಪುಸ್ತಕ ತರಲು ಅಂಗಡಿಗೆ ಹೋಗ್ತೀನಿ.
3) [illegible] ಬೇಕಾ ?
4) ನಗಲು ನಿನಗೆ ಏನಾಗಿದೆ ಅಂತ.

b) Model : T : ನೀವು ಹೋಗೋದು ಸಿನಿಮಾ ನೋಡೋದಕ್ಕೆ

S : ನೀವು ಹೋಗೋದು ಸಿನಿಮಾ ನೋಡೋದಕ್ಕಲ್ಲವಾ ?

1) ನೀವು ಹೋಗೋದು ಕೆಲಸ ಮಾಡೋದಕ್ಕೆ.
2) ನೀವು ಇರೋದು ಪಾಠ ಬರೆಯೋದಕ್ಕೆ.
3) ನೀವು ಹೋಗೋದು ಪ್ರಬಂಧ ಓದೋದಕ್ಕೆ.

c) Model : T : ಅವಳು ನಾಳೆ ಊರಿಗೆ ಹೋಗ್ತಾಳೆ.

S : ಅವಳು ನಾಳೆ ಊರಿಗೆ ಹೋಗೋದಿಲ್ಲ.

1) ಅವರು ಬಾಳೆ ಹಣ್ಣು ತಿನ್ನುತ್ತಾರೆ.
2) ನಮ್ಮ ಅಣ್ಣ ಮುಂದಿನ ವಾರ ಬೆಂಗಳೂರಿನಿಂದ ಬರ್ತಾರೆ.
3) ನಾವು ಚೆನ್ನಾಗಿ ಕನ್ನಡ ಕಲೀತೀವಿ.
4) ರಾಮು ಬೊಂಬೆ ತಗೊಳ್ತಾನೆ.

EXERCISES

I Fill in the blanks using the Kannada equivalents of the English words given in the brackets.

1) ಮುಂದಿನ ವಾರ ಹಂಪೆಯಲ್ಲಿ ರಾಜ್ಯೋತ್ಸವ ———— ಗೊತ್ತಾ ? (held)
2) ಯಾಕೆ ——— ಮಾಡ್ತಾ ಇದೀರಿ? (fun)
3) ಜನ ——— ದಿಂದ ಸಾಯ್ತಾ ಇದಾರೆ? (famine)
4) ಅವನ ——— ದೊಡ್ಡದು. (stomach)
5) ನಿಮ್ಮ ಮಾತು ಒಂದು ರೀತೀಲಿ ——— (wrong)
6) ವಿಜಯನಗರದ ಗತಕಾಲದ ——— ಏನು ಹೇಳ್ತೀಯೆ ! (glory)
7) ಅವರ ——— ಏನು ಅಂತ ಕೇಳು . (trouble)
8) ಅಲ್ಲಿ ——— ಮುಖ್ಯ ——— (procession, attraction)

II Transform into negative :

a)
1) ನಾನು ನಾಳೆ ಹಂಪೆಗೆ ಹೋಗ್ತೀನಿ.
2) ಸುಮ ಮುಂದಿನ ವಾರ ಇಲ್ಲಿಗೆ ಬರ್‍ತಾಳೆ.
3) ರವಿ ಸಾಯಂಕಾಲ ಮೆರವಣಿಗೆ ನೋಡ್ತಾನೆ.
4) ಅಪರ್ಣ ಇವತ್ತು ರಾತ್ರಿ ಕಾಫಿ ಕುಡೀತಾಳೆ.
5) ಮುಂದಿನ ವರ್ಷ ಒಂದು ಮನೆ ತಗೊಳ್ತೀನಿ.

b)
1) ಅವರು ಹೋಗ್ತಾ ಇರೋದು ಪ್ರಬಂಧ ಓದೋದಕ್ಕೆ.
2) ನೀನು ಬರೋದು ಹಾಡು ಕೇಳೋದಕ್ಕೆ.
3) ಅವನು ಇರೋದು ತಿನ್ನೋದಕ್ಕೆ.
4) ಅವಳು ಇರೋದು ಕೆಲಸ ಮಾಡೋದಕ್ಕೆ.

III Combine the following sentences according to the model :

Model : Q : ನಾನು ಊರಿಗೆ ಹೋಗ್ತೀನಿ.
ನಾನು ನನ್ನ ತಂದೆ ತಾಯಿ ನೋಡ್ತೀನಿ.
Ans : ನಾನು ನನ್ನ ತಂದೆ ತಾಯಿ ನೋಡೋಕೆ
ಊರಿಗೆ ಹೋಗ್ತೀನಿ.

1) ನಾನು ಹಂಪೆಗೆ ಹೋಗ್ತೀನಿ.
ನಾನು ರಾಜ್ಯೋತ್ಸವದಲ್ಲಿ ಪ್ರಬಂಧ ಓದ್ತೀನಿ.

2) ರಮಾ ಸಿಟಿಗೆ ಹೋಗ್ತಾಳೆ.
ಅವಳು ಸಿನಿಮಾ ನೋಡ್ತಾಳೆ.

3) ಯಾದವ್ ಮೈಸೂರಿಗೆ ಬರ್ತಾರೆ.
ಅವರು ಕನ್ನಡ ಕಲಿಯುತ್ತಾರೆ.

4) ಕಾಳಿಂಗ ಕಾರ್ಮಿಕರ ಹತ್ತಿರ ಹೋಗ್ತಾರೆ.
ಅವರು ಕಾರ್ಮಿಕರ ಕಷ್ಟ ಕೇಳ್ತಾರೆ.

5) ನಮ್ಮ ತಂಗಿ ಮೈಸೂರಿಗೆ ಬರ್ತಾಳೆ.
ಅವಳು ದಸರಾ ನೋಡ್ತಾಳೆ.

IV Tick the opposite word :

1) ಕಷ್ಟ
   1. ಇಷ್ಟ
   2. ಕಟು
   3. ಸುಖ

2) ಮೇಲೆ
   1. ಮೇಲುಗಡೆ
   2. ಒಳಗೆ
   3. ಕೆಳಗೆ

3) ಕೇಳು
   1. ಕೊಳ್ಳು
   2. ಏಳು
   3. ಹೇಳು

4) ದೊಡ್ಡದು
   1. ದಪ್ಪದು
   2. ಚಿಕ್ಕದು
   3. ಪುಟ್ಟದು

V Answer the following questions :

1) ರಾಜ್ಯೋತ್ಸವ ಎಲ್ಲಿ ನಡೆಯುತ್ತದೆ ?
2) ರಾವ್ ಹಂಪೆಗೆ ಯಾಕೆ ಹೋಗ್ತಾರೆ ?
3) ಕಾಳಿಂಗ ರಾಜ್ಯೋತ್ಸವಕ್ಕೆ ಯಾಕೆ ಹೋಗಲ್ಲ ?
4) ರಾಜ್ಯೋತ್ಸವದಲ್ಲಿ ಏನೇನು ನಡೆಯುತ್ತೆ ?

VOCABULARY :

ಅಂಗ—part
ಅರ್ಥ—meaning
ಅರ್ಥ ಆಗು—to understand
ಅನುಮಾನ—doubt, inference
ಆಕರ್ಷಣೆ—attraction
ಕವಿ ಮೇಳ—poets conference
ಕಲಾ ಮೇಳ—art festival
ಕಷ್ಟ—trouble
ಕಾಗದ—letter, paper
ಕಾರ್ಮಿಕರು—labourers
ಕಾರಣ—reason

ಗತಕಾಲ—past time

ತಪ್ಪು—wrong, fault, mistake

ತಮಾಷೆ—fun

ತಯಾರು—preparation

ತಯಾರಾಗಿ—ready, prepared

ತಿಳಿ—to understand, to know

ತುಂಬು—to fill

ದೊಡ್ಡಸ್ತಿಕೆ—greatness

ಪ್ರಬಂಧ—essay

ಬಡವರು—poor people

ಬರಗಾಲ—famine

ಬಳಿ—near, with functions ಹತ್ತಿರ

ಭಾವೈಕ್ಯ—emotional integration

ಭಾಗ—part

ಮಾತಾಡು—to talk

ಮೆರವಣಿಗೆ—procession

ಮೇಲೆ—on (post position with genitive)

ಯೋಚನೆ—worry, thought

ರಾಜ್ಯೋತ್ಸವ—State festival

ರೀತಿ—way, notion

ವೈಭವ—glory

ಸಂಸ್ಕೃತಿ—culture

ಸಮಯ—time

ಸಾಂಸ್ಕೃತಿಕ ಮೇಳ—cultural festival

ಸಾಯು—to die

ಸುಖ—happiness

ಹಬ್ಬ—festival

ಹಾಕು—to drop, to put

ಹೊಟ್ಟೆ—stomach

GRAMMAR NOTES :

1. Purpossive infinitive markers are –akke (dative case) and –alu. – akke is added to the verbal noun form.

Ex : ನಾನು ಊಟಮಾಡುವುದಕ್ಕೆ ಕ್ಯಾಂಟೀನ್‌ಗೆ ಹೋಗ್ತೀನಿ.

—alu will be added to the verb root.

Ex : ನಾನು ಊಟ ಮಾಡಲು ಕ್ಯಾಂಟೀನ್‌ಗೆ ಹೋಗ್ತೀನಿ.

—akke and —alu are interchangeable.

2. Whenever emphatic marker –ee is used in deffinitive Imperative construction, it takes –al as infinitive suffix

Ex : ನೀನು ಆ ಕೆಲಸ ಮಾಡಲೇಬೇಕು

ಮಾಡು + ಅಲ್ + ಏ + ಬೇಕು = ಮಾಡಲೇಬೇಕು.

UNIT 7

Review

LESSON 7

HOW TO GO TO SHALIMAR THEATRE?

DIALOGUE

ಭಾಸ್ಕರನ್—ರಾಜಣ್ಣ ನಾಳೆ ರಜಾ ಇದೆ. ನೀವು ಏನು ಮಾಡ್ತೀರಾ ?

ರಾಜಣ್ಣ—ಮಾಡೋದು ಏನು ? ಹೋಂ ವರ್ಕ್ ಎಲ್ಲಾ ಬರೆಯೋದು. ಮತ್ತೆ, ಅವರು ಇವರು ಸ್ನೇಹಿತರು ಮನೆಗೆ ಬರ್ತಾ ಇರ್ತಾರೆ. ಅವರ ಜೊತೆ ಹರಟೆ ಹೊಡೆಯೋದು.

ಭಾಸ್ಕರನ್—ಬರೆಯೋದು, ಓದೋದು ಇದ್ದೇ ಇರುತ್ತೆ, ನಾವಿಬ್ಬರೂ ಸಿನಿಮಾಕ್ಕೆ ಯಾಕೆ ಹೋಗಬಾರದು ?

ರಾಜಣ್ಣ—ಯಾವ ಸಿನಿಮಾಕ್ಕೆ ?

ಭಾಸ್ಕರನ್—"ಫಿಡ್ಲರ್ ಆನ್ ದಿ ರೂಫ್" ಸಿನಿಮಾಕ್ಕೆ. ಶಾಲಿಮಾರ್‌ನಲ್ಲಿ ನಡೆಯುತ್ತಾ ಇದೆ.

ರಾಜಣ್ಣ—ಓ, ಅದನ್ನು ನಾನು ನೋಡಬೇಕು. ಎಲ್ಲಾ ಒಳ್ಳೆಯ ಸಿನಿಮಾ ಅಂತಾರೆ. ನಾಳೆ ಎಷ್ಟು ಗಂಟೆಗೆ ಹೋಗೋಣ. ?

ಭಾಸ್ಕರನ್—ನಾಳೆ ಮ್ಯಾಟ್ನಿಗೆ ಹೋಗೋಣ.

ರಾಜಣ್ಣ—ಅದಕ್ಕಿಂತ ಒಂದು ಕೆಲಸ ಮಾಡೋಣ. ಶಾಲಿಮಾರ್ ಟಾಕೀಸಿನಲ್ಲಿ ಮಧ್ಯಾಹ್ನ ಹನ್ನೆರಡುವರೆ ಗಂಟೆಗೆ ಪ್ರದರ್ಶನ ಹಾಕ್ತಾ ಇರ್ತಾನೆ. ಆ ಪ್ರದರ್ಶನಕ್ಕೆ ಹೋಗೋಣ. ಮೂರು ಗಂಟೆಗೆ ಬಿಡ್ತಾನೆ.

ಭಾಸ್ಕರನ್—ಹೌದು, ಅದೇ ಸರಿ. ಆದರೆ ಅಲ್ಲಿಗೆ ಹೇಗೆ ಹೋಗೋದು ? ತುಂಬಾ ದೂರ.

ರಾಜಣ್ಣ—ಸಿನಿಮಾ ನೋಡೋದಕ್ಕೆ ತುಂಬಾ ದೂರ ಆದರೇನು ಹತ್ತಿರ ಆದರೇನು ? ಹೋಗಲೇಬೇಕಲ್ವಾ ?

ಭಾಸ್ಕರನ್—ಆಟೋದಲ್ಲಿ ಹೋಗೋದಕ್ಕೆ ತುಂಬಾ ಖರ್ಚು ಆಗತ್ತೆ. ಬಸ್ಸಿನಲ್ಲಿ ಹೋಗೋಣ್ವಾ ?

ರಾಜಣ್ಣ—ಬಸ್ಸಿನಲ್ಲೇ ಹೋಗೋಣ. ಆದರೆ ಹದಿನಾಲ್ಕನೆ ನಂಬರ್ ಬಸ್ಸಿನಲ್ಲಿ ಬೇಡ. ನೀವು ಹತ್ತೂವರೆ ಗಂಟೆಗೆ ನಮ್ಮ ಮನೆ ಹತ್ತಿರ ಬನ್ನಿ. ಅಲ್ಲಿಂದ ಹನ್ನೆರಡನೇ ನಂಬರ್ ಬಸ್ಸು ಹೋಗತ್ತೆ. ಅದು ಸೀದಾ ಟಾಕೀಸ್ ಹತ್ತಿರ ಹೋಗತ್ತೆ. ಅದರಲ್ಲಿ ಹೋಗೋಣ. ನಾನು ಅದರಲ್ಲಿ ಹೋಗ್ತಾ ಇರ್ತೀನಿ.

ಭಾಸ್ಕರನ್—ರೂಟ್ ನಂಬರ್ ಹನ್ನೆರಡು ಹೋಗತ್ತಾ ? ನನಗೆ ಗೊತ್ತೇ ಇಲ್ಲ. ಎಷ್ಟು ಹೊತ್ತಿಗೆ ಸರಸ್ವತಿಪುರಂನಿಂದ ಹೊರಡುತ್ತೆ. ?

ರಾಜಣ್ಣ—ಹನ್ನೊಂದು ಗಂಟೆಗೆ ಹೊರಡತ್ತೆ. ಅಲ್ಲಿಗೆ ಹನ್ನೆರಡು ಗಂಟೆಗೆ ಸೇರುತ್ತೆ.

ಭಾಸ್ಕರನ್—ಅಲ್ಲಿಗೆ ಹೇಗೆ ಹೋಗುತ್ತೆ ?

ರಾಜಣ್ಣ—ಸರಸ್ವತಿಪುರಂನಿಂದ ಸೀದ ರಾಮಸ್ವಾಮಿ ಸಕರ್ಲ್, ನೂರಡಿ ರಸ್ತೆ ಮುಖಾಂತರ ಬಸ್‌ಸ್ಟಾಂಡಿಗೆ ಹೋಗುತ್ತೆ. ಅಲ್ಲಿಂದ ಆಶೋಕ ರೋಡ್, ಕೆ. ಆರ್. ಹಾಸ್ಪಿಟಲ್ ಮೂಲಕ ಹೋಗುತ್ತೆ.

ಭಾಸ್ಕರನ್—ಬಹಳ ಸಮಯ ಆಗುತ್ತಾ ?

ರಾಜಣ್ಣ—ಹೌದು ಒಂದು ಗಂಟೆ ಆಗುತ್ತೆ. ಆದರೆ ಅನುಕೂಲ.

ಭಾಸ್ಕರನ್—ಟಿಕೆಟ್ ಛಾರ್ಜ್ ಎಷ್ಟು ?

ರಾಜಣ್ಣ—ಸರಸ್ವತಿಪುರಂನಿಂದ ಅರವತ್ತು ಪೈಸೆ.

ಭಾಸ್ಕರನ್—ಆಗಲಿ. ಅದಕ್ಕೇ ಹೋಗೋಣ. ನಾನು ಬರ್ತೀನಿ.

ರಾಜಣ್ಣ—ಯಾಕೆ ಅಷ್ಟು ಅವಸರ ಇದೆ. ಯಾರಾದರೂ ಕಾಯ್ತಾ ಇರ್ತಾರಾ ?

ಭಾಸ್ಕರನ್—ಇಲ್ಲ ಯಾರೂ ಕಾಯ್ತಾ ಇರಲ್ಲ. ನಾನೇ ಎಲ್ಲೋ ಹೋಗಬೇಕು.

ರಾಜಣ್ಣ—ನಾಳೆ ಹತ್ತೂವರೆ ಗಂಟೆಗೆ ಬರೋದು ಮರೆಯಬೇಡಿ.

TEST PAPER

I Fill in the blanks using the Kannada equivalents of the English words/phrases given in the brackets :

1) ನೀನು ಈ ಪುಸ್ತಕವನ್ನು ——— ——— (read)
2) ನಾವು ಆ ಕೆಲಸವನ್ನು ಅರ್ಧ ಗಂಟೆಯ ಒಳಗೆ ——————— (can do)
3) ನನ್ನ ಮಗಳು ಹೊರಗೆ ——————— (is playing)
4) ರಾಜಶೇಖರ್ ——————— ಕ್ಯಾಂಟೀನ್‌ಗೆ ಹೋಗ್ತಾ ಇದ್ದಾರೆ. (to take meals)
5) ಆ ನೀರು ——————— (is not drinkable)

II Transform the following sentences into their respective negative forms :

1) ರಾಮಪ್ಪನ ಮಗ ಬೆಂಗಳೂರಿನಲ್ಲಿ ಓದ್ತಾ ಇದಾನೆ.
2) ಆ ಪುಸ್ತಕ ಸಣ್ಣ ಮಕ್ಕಳು ಓದೋದು.
3) ಆ ಪೆನ್ನು ನೀನು ಬರೆಯುವುದಕ್ಕೆ.

4) ಅವರು ಸುಮ್ಮನೆ ಹೊರಗೆ ನೋಡುತ್ತಾ ಇರುತ್ತಾರೆ.

5) ಅವರು ದಿನಾ ಸಾಯಂಕಾಲ ಆಟ ಆಡುತ್ತಾರೆ.

III (a) Give the negative answers for the following questions :

1) ನೀವು ಹಿಂದಿ ಸಿನಿಮಾ ನೋಡ್ತೀರಾ ?

2) ಆ ಪುಸ್ತಕ ನಿಮ್ಮದಾ ?

3) ನಿಮ್ಮಂಥವರು ಆ ಕೆಟ್ಟ ಕೆಲಸ ಮಾಡ್ತೋರಾ ?

4) ನಿಮಗೆ ಒಂದು ದಿನಕ್ಕೆ ಎರಡು ರೂಪಾಯಿ ತಿಂಡಿಗೆ ಸಾಲಲ್ವಾ ?

5) ನಿಮ್ಮ ಮಗ ಹಿಂದಿ ಸಿನಿಮಾ ನೋಡಬಹುದಾ ?

b) Give the positive answers for the following questions :

1) ನೀವು ನಮ್ಮ ಅಂಗಡಿಗೆ ಸಾಯಂಕಾಲ ಬರ್ತೀರಾ ?

2) ನೀವು ಇವತ್ತು ಸಾಯಂಕಾಲ ಸಿನಿಮಾಕ್ಕೆ ಹೋಗ್ತೀರಾ ?

3) ಅವನು ಇಲ್ಲಿಗೆ ಬರುವುದಕ್ಕೆ ಹೇಳ್ತೀರಾ ?

IV Combine the following sentences using the purpossive infinitive form :

1) ನಾನು ಸಿಟಿಗೆ ಹೋಗ್ತೀನಿ.
ನಾನು ಸಿನಿಮಾ ನೋಡ್ತೀನಿ.

2) ರಾಧ ಕಾಲೇಜಿಗೆ ಹೋಗ್ತಾಳೆ.
ಅವಳು ಆಟ ಆಡ್ತಾಳೆ.

3) ಅವನು ಕ್ಯಾಂಟೀನ್‌ಗೆ ಹೋಗ್ತಾನೆ.
ಅವನು ಹುಡುಗಿಯರನ್ನು ನೋಡ್ತಾನೆ.

V. Transform the following verbs into negative purpossive form and use them in your own sentences :

1) ಓದು
2) ಕೇಳು
3) ನೋಡು

VI. Transform the following sentences into present continuous forms :

1) ಅವನು ಓದೋದು ಕಾದಂಬರಿ.
2) ಅವಳು ಕಾಗದ ಬರೆಯುತ್ತಾಳೆ.
3) ಅವರು ಕುಡಿಯೋದು ಕಾಫಿ
4) ನಾನು ಕನ್ನಡ ಕಲಿಯುತ್ತೇನೆ.
5) ಅವರು ದಿನಾ ಸಂಗೀತ ಹಾಡುತ್ತಾರೆ.

VI Answer the following questions :

1) ರಾಜಣ್ಣ, ಭಾಸ್ಕರನ್ ಯಾವ ಸಿನಿಮಾ ನೋಡುವುದಕ್ಕೆ ಹೋಗ್ತಾರೆ.?
2) ಅವರು ಸಿನಿಮಾ ನೋಡುವುದಕ್ಕೆ ಹೇಗೆ ಹೋಗ್ತಾರೆ.?
3) ಅವರು ಯಾವ ಮಾರ್ಗದಲ್ಲಿ ಹೋಗ್ತಾರೆ.?

VOCABULARY :

ಕಾಯು—to wait
ದೂರ—distance, far
ಪ್ರದರ್ಶನ—exhibition, show
ಮರೆ—to forget
ಮುಖಾಂತರ, ಮೂಲಕ—(via), through
ಸೀದ—straight
ಹರಟೆ ಹೊಡೆ—to gossip

UNIT 8

LESSON 28

GANESHA FESTIVAL

DIALOGUE

ಸುಮನ್—ಎಲ್ಲಿಂದ ಬರ್ತಾ ಇದೀಯಾ ಶೀಲಾ ?	Sheela, where are you coming from ?
ಶೀಲಾ—ಮಾರ್ಕೆಟ್ಟಿಂದ ಬರ್ತಾ ಇದೀನಿ ಸುಮನ್.	I am coming from the market Suman.

ಸುಮನ್—ಏನು ಇಷ್ಟು ದೊಡ್ಡ ಚೀಲ ಕೈಯ್ಯಲ್ಲಿ !

Oh what, such a big bag in your hand !

ಶೀಲಾ—ನಾಳಿದ್ದು ಗಣೇಶನ ಹಬ್ಬ ಅಲ್ವಾ ? ಚೀಲದ ತುಂಬಾ ಹಬ್ಬದ ಸಾಮಾನು ಗಳಿವೆ.

Day after tomorrow is Ganesha festival isn't it ? There are things full of the bag.

ಸುಮನ್—ಅದು ನಿಮಗೆ ತುಂಬಾ ದೊಡ್ಡ ಹಬ್ಬಾನಾ ?

Is it a big festival for you ?

ಶೀಲಾ—ಹೌದು. ತುಂಬಾ ದೊಡ್ಡ ಹಬ್ಬ.

Yes. It is a big festival.

ಸುಮನ್—ಅದನ್ನು ಹೇಗೆ ಆಚರಿಸ್ತೀರಿ ನೀವು ?

How do you celebrate it ?

ಶೀಲಾ—ಪ್ರತಿ ವರ್ಷ ಭಾದ್ರಪದ ಶುದ್ಧ ಚೌತಿದಿನ ನಾವು ಗಣೇಶನ ಹಬ್ಬ ಆಚರಿಸ್ತೀವಿ. ಹಿಂದಿನ ದಿನಾನೇ ಗಣೇಶನಿಗೆ ಒಂದು ಸುಂದರವಾದ ಮಂಟಪ ಕಟ್ತೀವಿ. ಮಂಟಪವನ್ನು ತಳಿರು ತೋರಣಗಳಿಂದ ಅಲಂಕರಿಸ್ತೀವಿ. ಕೆಲವರು ಮಂಟಪದ ಅಲಂಕಾರಕ್ಕೆ ಬಣ್ಣ ಬಣ್ಣದ ಕಾಗದಾನೂ ಉಪಯೋಗಿಸ್ತಾರೆ. ಮಂಟಪದ ಮೇಲಿಂದ ಫಲವಸ್ತು ಇಳಿಬಿಡ್ತೀವಿ.

Every year on the day of Bhadrapada Shuddha Chouti we celebrate Ganesha festival. We build a beautiful mantapam for Ganesha on the previous day itself. We decorate the mantapam with festoons. Some people use coloured paper to decorate the mantapam. We hang the phalavastu in the mantapam.

ಸುಮನ್—ಫಲವಸ್ತು ಅನ್ನೋದು ಏನು ?

What is phalavastu ?

ಶೀಲಾ—ಎಲ್ಲಾ ತರದ ಹಣ್ಣು ಕಾಯಿಗಳೇ ಫಲವಸ್ತು. ಇದನ್ನು ದಾರದಲ್ಲಿ ಕಟ್ತೀವಿ. ಅನಂತರ ಮಂಟಪದ ಮೇಲಿನಿಂದ ಇಳಿಬಿಡ್ತೀವಿ. ಇದು ನೋಡೋವಕ್ಕೆ ತುಂಬಾ ಚೆನ್ನಾಗಿರತ್ತೆ.

All types of ripe and unripe fruits are phalavastu. We tie them on with strings. Then we hang them from the top of the manta pam. This will be very beautiful to look at.

ಸುಮನ್— ಆಮೇಲೆ ಏನು ಮಾಡ್ತೀರಿ ?

What will you do afterwards ?

ಶೀಲಾ—ಚತುರ್ಥಿ ದಿನ ಗಣೇಶನ ವಿಗ್ರಹ ವನ್ನು ಮಂಟಪದಲ್ಲಿ ಪ್ರತಿಷ್ಠಾಪಿಸ್ತೀವಿ. ಗಣಪತಿಯನ್ನು ಭಕ್ತಿಯಿಂದ ಪೂಜಿಸ್ತೀವಿ.

On the day of chaturthi we install the idol of Ganapathi in the mantapam. We worship Ganapathi with devotion·

ಸುಮನ್—ಗಣಪತಿಯನ್ನು ಯಾವಾಗ ವಿಸರ್ಜಿಸ್ತೀರಿ ?

When will you immerse the idol ?

ಶೀಲಾ—ತಕ್ಷಣ ಗಣೇಶನನ್ನು ವಿಸರ್ಜಿಸಲ್ಲ. ಗಣೇಶನ್ನ ಬಿಡೋಕೆ ವಾರ, ನಕ್ಷತ್ರ ಎಲ್ಲಾ ನೋಡಬೇಕು. ಮೂರನೇ ದಿನ, ಐದನೇ ದಿನ ಅಥವಾ ಏಳನೇ ದಿನ ಗಣೇಶನನ್ನು ಬಿಡ್ತೀವಿ.

We do not immerse the idol immediately. We have to be taken to consideration the day and star etc. for the immersion. We immerse Ganesha either on the third or fifth or seventh day.

ಸುಮನ್—ಗಣೇಶನನ್ನು ಎಲ್ಲಿ ಬಿಡ್ತೀರಿ ?

Where do you immerse the idol.

ಶೀಲಾ—ನದೀಲಿ ಬಿಡ್ತೀವಿ. ಕೆಲವರು ಕೆರೆಗೂ, ಬಾವಿಗೂ ಬಿಡ್ತಾರೆ.

Into the river. Some people immerse the idol in a tank or well.

ಸುಮನ್—ಈ ಹಬ್ಬವನ್ನು ಕರ್ನಾಟಕ ದಲ್ಲೆಲ್ಲಾ ಆಚರಿಸ್ತಾರಾ ?

Is this festival celebrated all over Karnataka?

ಶೀಲಾ—ಹೌದು. ಕರ್ನಾಟಕದ ಅದ್ಯಂತ ಸಂಭ್ರಮದಿಂದ ಆಚರಿಸ್ತಾರೆ. ಏಯ್, ಸುಮನ್ ನಾಳೆ ಎಲ್ಲಾ ಹಬ್ಬದ ವಿಷಯಾನೇ ಕನವರಿಸಬೇಡ. ನಾಳಿದ್ದು ನಮ್ಮ ಮನೆಗೆ ಬಾ. ನಾವು ಹೇಗೆ ಆಚರಿಸ್ತೀವಿ ಅನ್ನೋದನ್ನ ಕಣ್ಣಾರೆ ನೋಡು.

Yes. They celebrate it all over Karnataka with joy. Suman don't dream about tomorrow's festival. Come to our house day after tomorrow, see how we celebrate.

ಸುಮನ್—ಆಗಲಿ ಶೀಲಾ ಬರ್ತೀನಿ.

O.K. Sheela· I will come.

DRILLS

I Build up Drill :

Model : ಅಲಂಕರಿಸು

ಮಂಟಪವನ್ನು ಅಲಂಕರಿಸು

ಹೂವಿನಿಂದ ಮಂಟಪವನ್ನು ಅಲಂಕರಿಸು

ಹಬ್ಬದ ದಿನ ಹೂವಿನಿಂದ ಮಂಟಪವನ್ನು ಅಲಂಕರಿಸು

ಗಣೇಶನ ಹಬ್ಬದ ದಿನ ಹೂವಿನಿಂದ ಮಂಟಪವನ್ನು ಅಲಂಕರಿಸು

Build up the following making the appropriate changes wherever necessary:

1) ಆಚರಿಸು

2) ಕನವರಿಸು

3) ಸಹಕರಿಸು

4) ಪೂಜಿಸು

II Transformation Drill :

Model : T : ಮಂಟಪವನ್ನು ಅಲಂಕಾರ ಮಾಡು.

S : ಮಂಟಪವನ್ನು ಅಲಂಕರಿಸು.

Transform the following according to the model making use of the underlined words :

1) ನೀನು ಆ ಪುಸ್ತಕವನ್ನು ಕನ್ನಡಕ್ಕೆ ಭಾಷಾಂತರ ಮಾಡು.

2) ದಿನಾ ದೇವರನ್ನು ಧ್ಯಾನ ಮಾಡಬೇಕು.

3) ನೀನು ದೊಡ್ಡವರನ್ನು ಅನುಕರಣೆ ಮಾಡು.

4) ನಾಳೆ ಬೆಂಗಳೂರಿನಲ್ಲಿ ರಾಜ್ಯೋತ್ಸವ ಆಚರಣೆ ಮಾಡುತ್ತಾರೆ.

EXERCISES

I Fill in the blanks using the correct forms of the words given in the brackets :

1) ನೀವು ತೆಲುಗಿನಿಂದ ಕನ್ನಡಕ್ಕೆ ———— (ಭಾಷಾಂತರಿಸು)
2) ನಿನ್ನ ಮನೆಯ ಅಲಂಕಾರಕ್ಕೆ ಬಣ್ಣ ಬಣ್ಣದ ಕಾಗದವನ್ನು ———— (ಉಪಯೋಗ)
3) ನಾವು ಗಣೇಶನ ಹಬ್ಬದ ದಿನ ಗಣೇಶನನ್ನು ———— (ಪೂಜಿಸು)
4) ನಾವು ಇವತ್ತು ಮಂಟಪವನ್ನು ಚೆನ್ನಾಗಿ ———— (ಅಲಂಕರಿಸು)
5) ನೀನು ರಾತ್ರಿಯಲ್ಲಿ ———— (ಕನವರಿಸು)

II Write as directed:

1) ಅವರು ರೂಮನ್ನು ಅಲಂಕರಿಸುತ್ತಾರೆ. (change into do type of interrogative)
2) ಅವಳು ದೇವರನ್ನು ಪೂಜಿಸುತ್ತಾಳೆ. (change into permissive imperative)
3) ನೀನು ಚೆನ್ನಾಗಿ ಕನವರಿಸು. (change into imperative plural)
4) ಸವಿತಾ ನಿನ್ನನ್ನು ಅನುಕರಿಸು ಮಾಡುತ್ತಾಳೆ. (correct it)
5) ನೀನು ಉಪಯೋಗಿಸು. (change into imperative negative)
6) ರಾಮು ಅವರ ಜೊತೆ ಸಹಕರಿಸಲಿ. (change into prohibitive imperative)

III If ಅಲಂಕಾರ / ಅಲಂಕರಣ is ಅಲಂಕರಿಸು. what will be the following :

1) ಭಾಷಾಂತರ
2) ಧ್ಯಾನ
3) ಪೂಜೆ
4) ಸಹಕಾರ
5) ವಿಸರ್ಜನೆ
6) ಆಚರಣೆ
7) ಪ್ರತಿಷ್ಠಾಪನೆ

IV Transform into negative :

1) ಅವನು ಮಂಟಪವನ್ನು ಅಲಂಕರಿಸುತ್ತಾನೆ.
2) ಅವಳು ಯಾವಾಗಲೂ ಕನವರಿಸುತ್ತಾಳೆ.
3) ನೀನು ಅವನನ್ನು ಅನುಕರಿಸು.
4) ಇವತ್ತು ನಿಮ್ಮ ಮನೆಯನ್ನು ಅಲಂಕರಿಸುತ್ತೀರಾ ?
5) ನೀವು ಬಾಳೆಕಾಯಿ ಉಪಯೋಗಿಸಬಹುದು.

V Answer the following questions :

1) ಗಣೇಶನ ಹಬ್ಬ ಹೇಗೆ ಆಚರಿಸುತ್ತಾರೆ ?
2) ಫಲವಸ್ತು ಎಂದರೆ ಏನು ?
3) ಗಣೇಶನನ್ನು ಎಷ್ಟು ದಿನಕ್ಕೆ ವಿಸರ್ಜಿಸುತ್ತಾರೆ ?
4) ಗಣೇಶನನ್ನು ಎಲ್ಲಿ ವಿಸರ್ಜಿಸುತ್ತಾರೆ ?
5) ಈ ಹಬ್ಬವನ್ನು ಎಲ್ಲಿ ಸಂಭ್ರಮದಿಂದ ಆಚರಿಸುತ್ತಾರೆ?

VI Write in 15 lines about a festival of your place.

VOCABULARY :

ಅನಂತರ—afterwards

ಅಲಂಕಾರ—decoration

ಆಚರಿಸು—to celebrate

ಪರ್ಯಂತ—throughout

ಇಳಿಬಿಡು—hang down

ಉಪಯೋಗಿಸು—use

ಕಟ್ಟು—to tie, to build

ಕಣ್ಣಾರೆ—with one's own eyes

ಕನಸು—dream

ಕನವರಿಸು—talking in sleep

ಕಾಲುವೆ—canal

ಕೆರೆ—tank

ಕೆಲವು—some

ಕೈ—hand

ಗಣೇಶನ ಹಬ್ಬ—Ganesha festival

ಚತುರ್ಥಿ—fourth lunar day

ಚೀಲ—bag

ಚೌತಿ—the fourth day of the waring moon.

ತಳಿರು—tender leaf

ತೋರಣ—festoon

ದಾರ—thread

ನದಿ—river

ನಕ್ಷತ್ರ—star

ಫಲವಸ್ತು—nuts and fruits used in religious works.

ಪೂಜಿಸು—worship

ಪ್ರತಿ—every, each

ಪ್ರತಿಷ್ಠಾಪಿಸು—install

ಬಿಡು—to dispose ; immerse

ಭಕ್ತಿ—devotion

ಭಾದ್ರಪದ—sixth month of the lunar calendar.

ಮಂಟಪ—mantapam

ಮಂದಿ—people

ವರ್ಷ—year

ವಿಗ್ರಹ—image of deity

ವಿಸರ್ಜಿಸು—immerse, dispose

ಶುದ್ಧ—the light half of a month ; pure

ಸಂಭ್ರಮ—pomp ; joy

ಹಿಂದಿನ—previous

Supplementary Vocabulary :

ಅನುಕರಣೆ—imitation

ಧ್ಯಾನ—meditation

ಭಾಷಾಂತರ—translation

ಸಹಕರಿಸು—cooperate

GRAMMAR NOTES :

Verbaliser –isu is introduced in this lesson. By adding –isu to the nouns borrowed from Sanskrit and other languages, we can obtain the verbs :

Ex : ಅಲಂಕಾರ

ಅಲಂಕಾರ + ಇಸು = ಅಲಂಕರಿಸು

ಆಚರಣೆ

ಆಚರಣೆ + ಇಸು = ಆಚರಿಸು

When –isu is added to the nouns which have a long vowel in the medial position, the long vowel becomes the corresponding short vowel :

Ex : ಅಲಂಕಾರ + ಇಸು = ಅಲಂಕರಿಸು

If the nouns end with nasals the final syllable drops.

ಆಚರಣೆ + ಇಸು = ಆಚರಿಸು

LESSON 29

ALL INDIA RADIO PROGRAMME

DIALOGUE

ಆಕಾಶವಾಣಿ, ಮೈಸೂರು. ಈಗ ತರುಣ ಭಾರತಿ ಕಾರ್ಯಕ್ರಮ. ಈ ಕಾರ್ಯಕ್ರಮ
ದಲ್ಲಿ ಮೈಸೂರಿನ ದಕ್ಷಿಣ ಪ್ರಾಂತೀಯ ಭಾಷಾ ಕೇಂದ್ರದಲ್ಲಿನ ಕನ್ನಡ ಪ್ರಶಿಕ್ಷಣಾರ್ಥಿ
ಗಳೊಡನೆ ಸಂದರ್ಶನ. ಸಂದರ್ಶನ ಮಾಧವ ಅವರಿಂದ.

All India Radio, Mysore. Now the youths programme. In this programme there is an interview with Kannada trainees of the Southern Regional Language Centre, Mysore. Interview by Madhava.

ಮಾಧವ—ಎಲ್ಲರಿಗೂ ನಮಸ್ಕಾರ.	Namaste to all.
ಎಲ್ಲರೂ—ನಮಸ್ಕಾರ ಸಾರ್.	Namaste sir.
ಮಾಧವ—ನೀವು ಕನ್ನಡ ಭಾಷೆಯನ್ನು ಕಲೀತಾ ಇರೋದು ತುಂಬಾ ಸಂತೋಷ. ನಾವು ಸಂದರ್ಶನವನ್ನು ಕನ್ನಡದಲ್ಲೇ ನಡೆಯಿಸೋಣ. ಸಂಕೋಚಪಡಬೇಡಿ. ಮೊದಲು ನಿಮ್ಮ ನಿಮ್ಮ ಹೆಸರು, ರಾಜ್ಯದ ಬಗ್ಗೆ ತಿಳಿಸ್ತೀರಾ? ನೀವು ಹೇಳಿ ನೋಡೋಣ.	I am very glad to know that you are all learning Kannada language. Let us conduct our Interview in Kannada only. Don't feel shy. First will you please let me know your name and state? You Start.
ನರಸಿಂಹರಾವ್—ನನ್ನ ಹೆಸರು ನರಸಿಂಹ ರಾವ್ ಸಾರ್, ನನ್ನದು ಆಂಧ್ರ ಪ್ರದೇಶ.	My name is Narasimha Rao, Sir. Mine is Andhra Pradesh.
ನಾರಾಯಣನ್—ನನ್ನದು ಕೇರಳ. ನನ್ನ ಹೆಸರು ನಾರಾಯಣನ್ ಸಾರ್.	Mine is Kerala. My name is Narayanan Sir.
ಮಾಧವ—ನಿಮ್ಮ ಹೆಸರು ಏನು?	What is your name?
ಯಾದವ್—ನನ್ನ ಹೆಸರು ಯಾದವ್, ನನ್ನ ರಾಜ್ಯ ಬಿಹಾರ.	My name is Yadav. My state is Bihar.
ನಾಥ್—ನನ್ನ ಹೆಸರು ನಾಥ್. ನನ್ನ ರಾಜ್ಯ ಅಸ್ಸಾಂ. ನಾವೆಲ್ಲರೂ ಹೈಸ್ಕೂಲು ಅಧ್ಯಾಪಕರು.	My name is Nath. My state is Assam. We are all High School teachers.
ಮಾಧವ—ಒಳ್ಳೆಯದು. ನೀವು ಎಷ್ಟು ವರ್ಷ ಇಲ್ಲಿ ಕನ್ನಡ ಕಲೀತೀರಿ?	Good. How many years will you learn Kannada here?
ನಾರಾಯಣನ್—ನಾವು ವರ್ಷಗಟ್ಟಲೆ ಕನ್ನಡ ಕಲಿಯಲ್ಲ ಸಾರ್. ಬರೀ ಹತ್ತು ತಿಂಗಳು ಮಾತ್ರ ಕಲೀತೀವಿ.	We will not learn for years together sir, we will learn for only ten months.

ಮಾಧವ—ಏನು ! ಹತ್ತು ತಿಂಗಳಲ್ಲಿ ಒಂದು ಹೊಸ ಭಾಷೆ ಕಲೀತೀರಾ ? ನಿಜವಾಗಿಯೂ ಒಂದು ಪವಾಡವೇ. ನೀವು ಹೇಗೆ ಕಲೀತೀರಿ ? ನಿಮಗೆ ಹೇಗೆ ಕಲಿಸ್ತಾರೆ ? ನನಗೆ ಹೇಳ್ತೀರಾ ?

What ! Are you learning a new language within ten months? Really it is a miracle. How do you learn ? How do they teach you ?, Could you please tell me ?

ನರಸಿಂಹರಾವ್—ನಮ್ಮ ಅಧ್ಯಾಪಕರ ನಿಷ್ಠೆ ಮತ್ತು ನಮ್ಮ ದುಡಿಮೆಯಿಂದ ಇದು ಸಾಧ್ಯ. ಜೊತೆಗೆ ನಮ್ಮ ಸಂಸ್ಥೆಯಲ್ಲಿ ಅದಕ್ಕೆ ತಕ್ಕ ಪಾಠಗಳಿವೆ. ಹೇಗೆ ಇನ್ನೊಂದು ಭಾಷೆಯನ್ನು ಸುಲಭವಾಗಿ ಕಲಿಸಬೇಕು, ಅದಕ್ಕೆ ಎಂಥ ಪಾಠಬೇಕು, ಎಲ್ಲಾ ಅವರು ಸಿದ್ಧಪಡಿಸ್ತಾರೆ.

It is possible due to the determination of our teacher and our hard work. In addition to this there are appropriate lessons for this in our Institute. How to teach a new language easily, what sort of the lesson is needed everything they attend to.

ನಾಥ್—ನಮ್ಮ ಹತ್ತು ತಿಂಗಳ ಅವಧಿಯಲ್ಲಿ ಮೂರು ಹಂತಗಳಿವೆ. ಮೊದಲನೆಯದು ಬೇಸಿಕ್ ಕೋರ್ಸ್. ಎರಡನೆಯದು ಇಂಟರ್ ಮೀಡಿಯೇಟ್ ಕೋರ್ಸ್, ಕಡೆಯದು ಅಡ್ವಾನ್ಸ್ ಕೋರ್ಸ್.

There are three stages in the duration of our ten months programme. The first one is Basic Course, the Second one is Intermediate Course, the last one is the Advanced Course.

ಯಾದವ್—ಬೇಸಿಕ್ ಕೋರ್ಸಿನಲ್ಲಿ ಆಡು ನುಡಿಯನ್ನೂ (ಮಾತಾಡೋದನ್ನ) ವ್ಯಾಕರಣವನ್ನೂ ಕಲಿಸ್ತಾರೆ.

They teach the spoken language and grammar in the Basic Course.

ನಾರಾಯಣನ್—ಇಂಟರ್, ಅಡ್ವಾನ್ಸ್ ಕೋರ್ಸಿನಲ್ಲಿ ಗ್ರಾಂಥಿಕ ಭಾಷೆ ಕಲಿಸ್ತಾರೆ.

The teach written language in Inter and Advance Courses.

ಮಾಧವ—ಒಂದು ದಿನಕ್ಕೆ ಎಷ್ಟು ಗಂಟೆ ಕ್ಲಾಸ್ ಇರುತ್ತೆ ?

How many hours of class do you have per day ?

ನರಸಿಂಹರಾವ್—ಐದೂವರೆ ಗಂಟೆ ಇರುತ್ತೆ ಸಾರ್.

Five and a half hours Classes Sir.

ಮಾಧವ—ಅಬ್ಬಾ! ಐದೂವರೆ ಗಂಟೇನಾ? ಏನು ಮಾಡಿಸ್ತಾರೆ ಅಷ್ಟು ಹೊತ್ತು?

My goodness! Is it for five and half hours? What do they make you to do for such a long time?

ನಾರಾಯಣರಾವ್—ಮೊದಲು ಮೇಷ್ಟ್ರು ಪಾಠ ಮಾಡ್ತಾರೆ. ಅನಂತರ ನಮ್ಮಿಂದ ಓದಿಸ್ತಾರೆ, ಬರೆಯುಸ್ತಾರೆ, ನಮ್ಮ ನಮ್ಮಲ್ಲೇ ಸಂಭಾಷಣೆ ಮಾಡಿಸ್ತಾರೆ. ಕೆಲವೊಮ್ಮೆ ತರಗತಿಯಲ್ಲಿ ಲಾಂಗ್ವೇಜ್ ಗೇಮ್ಸ್ ವರ್ಡ್ ಬಿಲ್ಡಿಂಗ್, ಚರ್ಚಾಸ್ಪರ್ಧೆ, ಆಶುಭಾಷಣ, ರೋಲ್ ಪ್ಲೇ ಮಾಡಿಸ್ತಾರೆ.

First teachers teach the lesson. Then they make us read and they make us write. They make converse among ourselves. Sometimes in the classroom they make us to play language games, word building, debate, imprampta speech, role play.

ನರಸಿಂಹರಾವ್- ನಮ್ಮ ಇನ್ಸ್ಟಿಟ್ಯೂಟ್‌ನಲ್ಲಿ ಒಂದು ಭಾಷಾ ಪ್ರಯೋಗಾಲಯ ಇದೆ. ಅಲ್ಲಿ ಭಾಷೆಯನ್ನು ಅಭ್ಯಾಸ ಮಾಡ್ತೀವಿ.

There is a language laboratory in our Institute. We practice the language there.

ಮಾಧವ—ಭಾಷಾ ಪ್ರಯೋಗಾಲಯ! ಅಲ್ಲಿ ಏನು ಮಾಡ್ತೀರಿ?

Language Laboratory! what do you do there?

ನರಸಿಂಹರಾವ್—ಅಲ್ಲಿ ಪಾಠವನ್ನು ಮೊದಲೇ ಧ್ವನಿ ಮುದ್ರಿಸಿರ್ತಾರೆ. ಅದನ್ನು ಟೇಪ್ ರೆಕಾರ್ಡರ್ ಮೂಲಕ ನಮಗೆ ಕೇಳಿಸ್ತಾರೆ. ಆಮೇಲೆ ನಾವು ನಮ್ಮ ಧ್ವನಿ ಮುದ್ರಿಸ್ತೀವಿ. ಅನಂತರ ನಮ್ಮ ಧ್ವನಿಯನ್ನೂ ಅಧ್ಯಾಪಕರ ಧ್ವನಿಯನ್ನೂ ಹೋಲಿಸ್ತೀವಿ.

The lesson will be recorded there earlier. They make us listen using the tape-recorder. Afterwords we record our voice. Then we compare our voice with that of the master's.

ಮಾಧವ—ತುಂಬಾ ಚೆನ್ನಾಗಿದೆ. ಅದರಿಂದ ನಿಮ್ಮ ಉಚ್ಚಾರಣೆ, ವೇಗ ಉತ್ತಮಗೊಳ್ಳುತ್ತೆ. ಅದು ಸರಿ, ಈ ವಯಸ್ಸಿನಲ್ಲಿ ನೀವು ಕನ್ನಡ ಕಲಿಯೋದರಿಂದ ಏನು ಉಪಯೋಗ ?

That is very good. That way your pronounciation and speed will improve. That is fine. What is the use of learning Kannada at your age ?

ನರಸಿಂಹರಾವ್—ಇದರಿಂದ ಬಹಳ ಉಪಯೋಗ ಇದೆ. ಹೀಗೆ ಬೇರೆ ಭಾಷೆ ಕಲಿಯೋದರಿಂದ ಭಾವೈಕ್ಯ ಸಾಧಿಸಬಹುದು. ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಪುಸ್ತಕಗಳನ್ನು ಭಾಷಾಂತರಿಸಬಹುದು. ಜೊತೆಗೆ ನಮ್ಮ ರಾಜ್ಯದಲ್ಲಿ ಸಣ್ಣ ಮಕ್ಕಳಿಗೆ ಭಾಷೆ ಕಲಿಸಬಹುದು.

There is a lot of benefit form this (for learning Kannada). Through learning the other language like this we can attain integration. We would translate books from one language to another. In addition to this we would teach this language to children in our state.

ಮಾಧವ—ನೀವು ರಾಷ್ಟ್ರೀಯ ಸಮಸ್ಯೆಯ ಬಗ್ಗೆ ಚೆನ್ನಾಗಿ ಯೋಚಿಸ್ತಾ ಇದೀರಿ!

It seems that you are thinking well about National problem.

ಯಾದವ್—ಅದರ ಬಗ್ಗೆ ಯೋಚಿಸೋದು ಪ್ರತಿಯೊಬ್ಬರ ಕರ್ತವ್ಯ ಸಾರ್.

It is every one's duty to think about that sir.

ಮಾಧವ—ಹೌದು. ನಾವೆಲ್ಲಾ ಯೋಚಿಸಬೇಕು. ಜೊತೆಗೆ ನಿಮ್ಮ ಹಾಗೆ ಪರಿಹಾರ ಸೂಚಿಸಬೇಕು. ನೀವು ಈ ಹತ್ತು ತಿಂಗಳಲ್ಲಿ ಕರ್ನಾಟಕದ ಪ್ರವಾಸ ಹೋಗ್ತೀರಾ ?

Yes. We should all think. In addition to that the solution like yours may also be suggested. Are you going on a tour of Karnataka during these ten months ?

ನಾರಾಯಣನ್—ಹೌದು. ನಾವು ಕನ್ನಡ ನಾಡಿನ ಪ್ರವಾಸಕ್ಕೆ ಹೋಗ್ತೀವಿ. ಆಗ ನಮ್ಮ ಅಧ್ಯಾಪಕರು ಐತಿಹಾಸಿಕ, ಸಾಂಸ್ಕೃತಿಕ ಸ್ಥಳಗಳನ್ನು

Yes. We are going on a tour of Karnataka. At that time our teachers will show us historical and cultural places. They arrange

ತೋರಿಸ್ತಾರೆ. ಪ್ರಮುಖ ಲೇಖಕರ ಭೇಟಿಮಾಡಿಸ್ತಾರೆ. ಬೇರೆ ಬೇರೆ ಪ್ರದೇಶಗಳ ಉಪಭಾಷೆಗಳ ಪರಿಚಯ ಮಾಡಿಸ್ತಾರೆ. ಹೀಗೆ ಇಲ್ಲಿಯ ಸಂಸ್ಕೃತಿಯನ್ನು ಅಧ್ಯಯನ ಮಾಡ್ತೀವಿ.	the meetings with important writers. They make us get to know about different places and dialects. Like this we will study the culture of this place.
ಮಾಧವ—ನೀವು ತುಂಬಾ ಜವಾಬ್ದಾರಿ ಕೆಲಸ ಮಾಡ್ತಾ ಇದೀರಿ. ನಾವೆಲ್ಲಾ ನಿಮ್ಮಿಂದ ತುಂಬಾ ನಿರೀಕ್ಷಿಸ್ತಾ ಇದೀವಿ. ನಿಮ್ಮ ಕೆಲಸದಲ್ಲಿ ಜಯ ಸಿಗಲಿ.	You are doing a very responsible job. We are all expecting a lot from you. I wish great success in your work.
ಎಲ್ಲರೂ—ನಮ್ಮ ಕೈಲಿ ಆದಷ್ಟು ಪ್ರಯತ್ನ ಪಡ್ತೀವಿ ಸಾರ್.	We will try our level best sir.
ನಮಸ್ಕಾರ. ಬರ್ತೀವಿ.	Namaskara. We take leave of you.

DRILLS

I Build up Drill :

Model : ಮಾಡಿಸ್ತಾರೆ.

ಹೋಂವರ್ಕ್ ಮಾಡಿಸ್ತಾರೆ.

ತುಂಬಾ ಹೋಂವರ್ಕ್ ಮಾಡಿಸ್ತಾರೆ.

ನಮ್ಮಿಂದ ತುಂಬಾ ಹೋಂವರ್ಕ್ ಮಾಡಿಸ್ತಾರೆ.

ಅಧ್ಯಾಪಕರು ನಮ್ಮಿಂದ ತುಂಬಾ ಹೋಂವರ್ಕ್ ಮಾಡಿಸ್ತಾರೆ.

Build up the following making the necessary changes wherever necessary :

1) ಕಲಿಸು

2) ಬರೆಯಿಸ್ತೀನಿ

3) ಕುಡಿಸ್ತಾಳೆ

4) ತೋರಿಸು

5) ಹೇಳಿಸ್ತೀನಿ

II Transformation Drill :

Model : T : ಅವನು ಪಾಠ ಬರೆಯುತ್ತಾನೆ.

S : ಅವನು ಪಾಠ ಬರೆಯಿಸ್ತಾನೆ.

1) ಕಮಲ ಇವತ್ತು ಸಿಹಿ ತಿಂಡಿ ಮಾಡ್ತಾರೆ.

2) ನಾನು ಪ್ರಜಾವಾಣಿ ಪೇಪರ್ ತರ್ತೀನಿ.

3) ನೀನು ಹತ್ತನೇ ಪಾಠ ಓದು.

4) ನಾನು ನಿಮಗೆ ನೂರು ರೂಪಾಯಿ ಕೊಡ್ತೀನಿ.

5) ಈ ಹುಡುಗನಿಗೆ ಐದು ಮಾರ್ಕ್ಸ್ ಹೆಚ್ಚಿಗೆ ಕೊಡಬಹುದು.

IV Response Drill :

1) ನೀವು ವಿದ್ಯಾರ್ಥಿಗಳಿಗೆ ದಿನಕ್ಕೆ ಎಷ್ಟು ಗಂಟೆ ಪಾಠ ಕಲಿಸ್ತೀರಿ ?

2) ನೀವು ಎಷ್ಟು ಗಂಟೆ ಪಾಠ ಬರೆಯಿಸ್ತೀರಿ ?

3) ನಿಮ್ಮ ವಿದ್ಯಾರ್ಥಿಗಳಿಗೆ ಪ್ರತಿ ವರ್ಷಾನೂ ಹೊಸ ಹೊಸ ಸ್ಥಳ ತೋರಿಸ್ತೀರಾ ?

EXERCISES :

I **Fill in the blanks using the correct transitive/causative form of the word given in the bracket :**

1) ಜವಾನಿಯ ಕೈಯಲ್ಲಿ ಕೆಲಸ———. (ಮಾಡು)

2) ಕಮಲಮ್ಮನವರು ಮಗುವಿಗೆ ಔಷಧವನ್ನು———. (ಕುಡಿ)

3) ಅಧ್ಯಾಪಕರು ನಮಗೆ ಕರ್ನಾಟಕ ಸಂಸ್ಕೃತಿಯ ಬಗ್ಗೆ———. (ತಿಳಿ)

4) ನೀನು ನನಗೆ ಶ್ರೀರಂಗಪಟ್ಟಣ———? (ತೋರು)

5) ನಿನಗೆ ನಾನು ಕೆಟ್ಟವನು———? (ಅನ್ನು)

II a) Transform in to negative :

1) ಮೇಷ್ಟ್ರು ಪಾಠ ಬರೆಯಿಸುತ್ತಾರೆ.
2) ಅವಳು ತನ್ನ ಕಾಗದವನ್ನು ರಾಮನ ಕೈಲಿ ಓದಿಸುತ್ತಾಳೆ.
3) ನಾನು ಪ್ರಜಾವಾಣಿ ತರಿಸ್ತೀನಿ.
4) ರಮೇಶ್ ನನಗೆ ಆಕಾಶವಾಣಿಯಲ್ಲಿ ಕೆಲಸ ಕೊಡಿಸ್ತಾರೆ.
5) ಸೀತಮ್ಮನವರು ಹಬ್ಬಕ್ಕೆ ಮಗಳನ್ನು ಕರೆಯಿಸುತ್ತಾರೆ.

b) Change the following nouns/verbs into their respective verbal/causal forms :

1) ಸಂದರ್ಶನ	6) ಕಲಿ
2) ತಾ	7) ಪ್ರಯತ್ನ
3) ಊಟ ಮಾಡು	8) ಅಧ್ಯಯನ
4) ಆಕ್ಷೇಪಣೆ	9) ತೋರು
5) ಉಚ್ಚಾರಣೆ	10) ಪ್ರದಕ್ಷಿಣೆ

III ಆಗಸ್ಟ್ 15 ನೇ ತಾರೀಕು ನಿಮ್ಮ ಸ್ಕೂಲಿನಲ್ಲಿ ಏನೇನು ಮಾಡಿಸ್ತೀರಿ? ಬರೆಯಿರಿ.

IV Answer the following questions :

1) ಆಕಾಶವಾಣಿ ಕಾರ್ಯಕ್ರಮ ಯಾರು ಯಾವ ಭಾಷೆಯಲ್ಲಿ ನಡೆಯಿಸ್ತಾರೆ?
2) ಪ್ರಶಿಕ್ಷಣಾರ್ಥಿಗಳು ಎಷ್ಟು ತಿಂಗಳು ಕನ್ನಡ ಕಲೀತಾರೆ ?
3) ದಕ್ಷಿಣ ಪ್ರಾಂತೀಯ ಭಾಷಾ ಕೇಂದ್ರದಲ್ಲಿ ಹೇಗೆ ಕನ್ನಡ ಕಲಿಸ್ತಾರೆ?
4) ಕನ್ನಡ ಕಲಿಯೋದರಿಂದ ಏನು ಉಪಯೋಗ ?
5) ಅವರಿಗೆ ಕರ್ನಾಟಕದ ಸಂಸ್ಕೃತಿಯ ಪರಿಚಯ ಹೇಗೆ ಆಗುತ್ತೆ ?

VOCABULARY :

ಅಧ್ಯಯನ—Study
ಅನ್ನಿಸು—to feel

ಅಭ್ಯಾಸ—Practice, habit

ಅವಧಿ—period

ಆಕಾಶವಾಣಿ—All India Radio

ಆಗ—then, at that time

ಆಡುನುಡಿ—spoken language

ಉಚ್ಚಾರಣೆ—pronounciation

ಉತ್ತಮ—better, improvement

ಉಪಭಾಷೆ—dialect

ಉಪಯೋಗ—usefulness

ಐತಿಹಾಸಿಕ—historical

ಒಡನೆ—with

ಒಮ್ಮೆ—once

ಕರ್ತವ್ಯ—duty

ಕಲಿ—to learn

ಕಲಿಸು—to teach

ಕಾರ್ಯಕ್ರಮ—programme

ಕೆಲವೊಮ್ಮೆ—sometime

ಜಯ—victory

ಜವಾಬ್ದಾರಿ—responsibility

ತರುಣ ಭಾರತಿ ಕಾರ್ಯಕ್ರಮ—Youth's programme

ತಕ್ಕ—appropriate

ತಿಳಿಸು—to inform

ದುಡಿಮೆ—labour

ಧ್ವನಿ—voice

ಧ್ವನಿಮುದ್ರಿಸು—to record

ನಡೆಯಿಸು—to hold, to make to walk, to conduct

ನಾಡು—Country

ನಿರೀಕ್ಷಿಸು—to expect

ನಿಷ್ಠೆ—faithfulness, dedication

ಪರಿಹಾರ—solution

ಪವಾಡ—miracle

ಪ್ರದೇಶ—region

ಪ್ರಯತ್ನ—effort

ಪ್ರವಾಸ—tour

ಪ್ರಶಿಕ್ಷಣಾರ್ಥಿ—trainee

ಬಗ್ಗೆ—about

ಬರಿ—simply, just

ಭಾಷಾಂತರಿಸು—to translate

ರಾಷ್ಟ್ರೀಯ ಸಮಸ್ಯೆ—national problem

ಲೇಖಕ—writer

ವಯಸ್ಸು—age

ವರ್ಷಗಟ್ಟಲೆ—years together

ವ್ಯಾಕರಣ—grammar

ವೇಗ—speed

ಸಮಸ್ಯೆ—problem

ಸಾಧ್ಯ—possible

ಸಿದ್ಧಪಡಿಸು—to prepare

ಸಾಧಿಸು—to achieve

ಸುಲಭ—easy

ಸೂಚಿಸು—to suggest

ಸಂಕೋಚಪಡು—to feel shy

ಸಂದರ್ಶನ—interview

ಸಂಭಾಷಣೆ—conversation

ಹಂತ—stage, steps

ಹೋಲಿಸು—to compare

GRAMMAR NOTES

Note the distinction between transitive and intransitic verbs.

The transitive verb must have a direct object, where as the intransitive verb will not have a direct object.

Compare the following sentences :

1) ನಾನು ಪುಸ್ತಕವನ್ನು ಓದುತ್ತೇನೆ.
2) ನಾನು ಓಡುತ್ತೇನೆ.

Both of the above sentenses can be transformed into cansative forms. The causative verb gives the meaning that the action indicated by it is induced by an agent.

Ex : 1) ನಾನು ಪುಸ್ತಕವನ್ನು ಓದಿಸುತ್ತೇನೆ.
2) ನಾನು ಓಡಿಸುತ್ತೇನೆ.

There is a close relationship between the causative, transitive and intransitive verbs in the sense that the causative verb may be derived, to show the causative meaning, from both the transitive and intransitive verbs by an addition of the causative suffix--isu.

Note that some of the transitive verbs have an inherent—isu suffix. These verbs will take another—isu over and above the inherent one to show the causative meaning.

Ex : 1) ಅವರಿಗೆ ಮೈಸೂರು ತೋರಿಸು. (trans.)
2) ಅವರಿಗೆ ಮೈಸೂರು ತೋರಿಸಿಸು. (causative)

The person who is the object of the casued action of a verb which has been transformed from transitive verb to a causative verb is in the instrumental case.

Ex : ನಾನು ಪುಸ್ತಕವನ್ನು ಅವನಿಂದ ಓದಿಸ್ತೀನಿ.

'I make him read the book'

The person who is the object of the caused action of a verb which has been transformed from intransitive verb to a causative verb is in the accusative case.

Ex : ನಾನು ಅವನನ್ನು ಓಡಿಸ್ತೀನಿ.

'I make him run'

Unit 8

Review
LESSON 8

ONAM FESTIVAL

DIALOGUE:

ರಾಜಣ್ಣ—ಅಕ್ಟೋಬರ್ ತಿಂಗಳಿನಲ್ಲಿ ನಮಗೆ ರಜಾ ಇದೆ ಭಾಸ್ಕರನ್. ನೀವು ಊರಿಗೆ ಹೋಗ್ತೀರಾ ?

ಭಾಸ್ಕರನ್—ಹೌದು ರಾಜಣ್ಣ. ನಾನು ಆ ರಜದಲ್ಲಿ ಊರಿಗೆ ಹೋಗ್ತಾ ಇದೀನಿ.

ರಾಜಣ್ಣ—ಮತ್ತೆ ಕರ್ನಾಟಕದಲ್ಲಿ ಬೇರೆ ಬೇರೆ ಸ್ಥಳ ನೋಡುವುದಕ್ಕೆ ಹೋಗಲ್ಲವಾ ?

ಭಾಸ್ಕರನ್—ಇಲ್ಲ ರಾಜಣ್ಣ. ನಾನು ಮೊದಲು ನಮ್ಮ ಊರಿಗೆ ಹೋಗ್ತೀನಿ. ಅಲ್ಲಿ ನನ್ನ ಹೆಂಡತಿ ಮಕ್ಕಳನ್ನು ನೋಡಬೇಕು. ಅಕ್ಟೋಬರ್ ಕಡೆ ವಾರ ಅಥವಾ ಸೆಪ್ಟಂಬರ್ ತಿಂಗಳು ಮೊದಲನೇ ವಾರದಲ್ಲಿ ನಮಗೆ ಓಣಂ ಹಬ್ಬ ಇರುತ್ತೆ.

ರಾಜಣ್ಣ—ಓಣಂ ಹಬ್ಬ ನೀವು ತುಂಬಾ ಜೋರಾಗಿ ಆಚರಿಸ್ತೀರಾ ?

ಭಾಸ್ಕರನ್—ಹೌದು, ಅದು ನಮ್ಮ ರಾಷ್ಟ್ರೀಯ ಹಬ್ಬ. ಅದನ್ನು ಎಲ್ಲರೂ ವೈಭವದಿಂದ ಆಚರಿಸ್ತಾರೆ.

ರಾಜಣ್ಣ—"ಓಣಂ" ಅರ್ಥ ಏನು ಭಾಸ್ಕರನ್ ?

ಭಾಸ್ಕರನ್—"ಓಣಂ" ಅಂದರೆ ಒಳ್ಳೆಯ ಕಾಲ.

ರಾಜಣ್ಣ—ಓಣಂ ಹಬ್ಬದ ಹಿನ್ನಲೆ ಏನು ?

ಭಾಸ್ಕರನ್—ಬಲಿ ಚಕ್ರವರ್ತಿ, ವಾಮನನ ಕಥೆ ನಿಮಗೆ ಗೊತ್ತಾ ?

ರಾಜಣ್ಣ—ಹೌದು, ಗೊತ್ತು.

ಭಾಸ್ಕರನ್—ಆ ಬಲಿ ಚಕ್ರವರ್ತಿಯ ನೆನಪಿಗೋಸ್ಕರ ನಾವು ಇದನ್ನು ಆಚರಿಸ್ತೀವಿ.

ರಾಜಣ್ಣ—ಹಬ್ಬದ ದಿನ ನೀವು ಏನು ಮಾಡ್ತೀರಿ ?

ಭಾಸ್ಕರನ್—ಈ ಹಬ್ಬ ಹತ್ತು ದಿನಗಳವರೆಗೆ ನಡೆಯುತ್ತೆ. ಮನೆಯನ್ನೆಲ್ಲಾ ಚೆನ್ನಾಗಿ ಸಾರಿಸ್ತೀವಿ. ಆಮೇಲೆ ಮನೆಯ ಅಂಗಳವನ್ನು ಹೂವಿನಿಂದ ಅಲಂಕರಿಸ್ತೀವಿ. ಈ ಅಲಂಕಾರವನ್ನು ಏಳು ದಿನಗಳವರೆಗೆ ನಡೆಸ್ತೀವಿ. ಕೊನೆ ಮೂರು ದಿನ ವಿಶೇಷ ಭಕ್ಷ್ಯಭೋಜ್ಯಗಳೊಡನೆ ಸಂತೋಷದಿಂದ ಹಬ್ಬ ಆಚರಿಸ್ತೀವಿ. ಕಡೆ ದಿನವನ್ನು "ತಿರುವೋಣಂ" ಅಂತ ಕರೆಯುತ್ತೇವೆ. ಅದೇ ನಮಗೆ ಮುಖ್ಯ.

ರಾಜಣ್ಣ—ಈ ಹಬ್ಬವನ್ನು ಎಲ್ಲಾ ಜಾತಿಯವರೂ ಆಚರಿಸ್ತಾರಾ ?

ಭಾಸ್ಕರನ್—ಹೌದು. ಎಲ್ಲರೂ ಆಚರಿಸ್ತಾರೆ.

ರಾಜಣ್ಣ—ಹಾಗಾದರೆ. ಈ ಹಬ್ಬಕ್ಕೆ ನೀವು ಹೋಗಲೇಬೇಕು.

ಭಾಸ್ಕರನ್—ಹೌದು ರಾಜಣ್ಣ. ನೀವೂ ನನ್ನ ಜೊತೆ ಬನ್ನಿ. ಓಣಂ ಹಬ್ಬ ನೋಡಬಹುದು.

ರಾಜಣ್ಣ—ಇಲ್ಲ ಭಾಸ್ಕರನ್, ನಾನು ಬರಲಾರೆ. ನನಗೆ ಬೇರೆ ಕೆಲಸ ಇದೆ.

TEST PAPER

I Fill in the blanks using the Kannada equivalents of the English Words given in the brackets :

1) ರಮೇಶ ನಮಗೆ ತಮಿಳು .... (teaches)
2) ಕರ್ನಾಟಕದಲ್ಲಿ ನವೆಂಬರ್ ಒಂದಕ್ಕೆ ರಾಜ್ಯೋತ್ಸವ .... (celeberate)
3) ಬಲಿ ಚಕ್ರವರ್ತಿಯ .... ಓಣಂ ಆಚರಿಸ್ತಾರೆ. (for memory)
4) ರಾಜು ತೆಲುಗಿನಿಂದ ಕನ್ನಡಕ್ಕೆ .... (translates)
5) ನಾವು ಲ್ಯಾಬೊರೇಟರಿಯಲ್ಲಿ ನಮ್ಮ ಧ್ವನಿಯನ್ನು .... (record)

II Add–isu to the following sentences and change it accordingly :

1) ನಾವು ನಾಳೆ ಗಣಪತಿಯನ್ನು ವಿಸರ್ಜನೆ ಮಾಡ್ತೀವಿ.
2) ರಮಾ ತನ್ನ ನೋಟ್ಸ್ ಬರೆಯುತ್ತಾಳೆ.
3) ಮಕ್ಕಳು ದೊಡ್ಡವರನ್ನು ಅನುಕರಣೆ ಮಾಡ್ತಾರೆ.
4) ಅಧ್ಯಾಪಕರು ಪಾಠ ಓದುತ್ತಾರೆ.

III Write as directed—

1) ಅವರು ಉಗಾದಿ ಹಬ್ಬವನ್ನು ಆಚರಿಸಲ್ಲ. (into 'Do' type of interrogative)

2) ಲೀಲಾವತಿ ತನ್ನ ಕೆಲಸವನ್ನು ಬೇರೆಯವರ ಕೈಯಲ್ಲಿ ಮಾಡಿಸ್ತಾರೆ. (into negative)

3) ನೀವು ಚೆನ್ನಾಗಿ ಭಾಷಾಂತರಿಸಿ (into singular)

4) ಅವನು ನಮಗೆ ಮೈಸೂರು ತೋರಿಸುತ್ತಾನೆ. (into fem. singular)

5) ನೀವು ಪ್ರಜಾವಾಣಿ ತರಿಸ ಬಹುದು. (into negative)

IV Answer the following questions—

1) ಭಾಸ್ಕರನ್ ಯಾಕೆ ಊರಿಗೆ ಹೋಗ್ತಾರೆ ?

ಅವರು ಓಣಂ ಹಬ್ಬ ಯಾಕೆ ಆಚರಿಸ್ತಾರೆ?

3) ಓಣಂ ಹಬ್ಬವನ್ನು ಹೇಗೆ ಆಚರಿಸ್ತಾರೆ ?

Vocabulary—

ಅಂಗಳ—front yard of the house

ಕೊನೆ—last

ಜಾತಿ—caste

ನೆನಪು—memory

ಭಕ್ಷ್ಯಭೋಜ್ಯ—eatables

ರಾಷ್ಟ್ರೀಯ ಹಬ್ಬ—national festival

ಸಾರಿಸು—to wash, to clean

ಹಿನ್ನೆಲೆ—back-ground information.

UNIT 9

LESSON 30

AT SON-IN-LAW'S HOUSE

DIALOGUE

ಮಾಧು—ಊರಿಂದ ಯಾವಾಗ ಬಂದಿರಿ ಮಾವ ?	When did you come from your place father-in-law ?
ಮಾವ—ನಾವು ಮಧ್ಯಾಹ್ನ ಮೂರು ಗಂಟೆಗೆ ಬಂದೆವು. ನೀನು ಬರೋದು ಯಾಕಿಷ್ಟು ತಡ ಆಯ್ತು ?	We came at 3 o'clock in the afternoon. Why are you so late in coming ?

ಮಾಧು—ನಮಗೆ ಇವತ್ತು ಫ್ಯಾಕಲ್ಟಿ ಮೀಟಿಂಗ್ ಇತ್ತು. ಆಮೇಲೆ ನನ್ನ ಸ್ನೇಹಿತ ರವೀ ಮನೇಲಿ ಸ್ವಲ್ಪ ಕೆಲಸ ಇತ್ತು. ಅಲ್ಲಿಗೆ ಹೋದೆ. ಬರೋದು ತಡ ಆಯ್ತು.	We had a faculty meeting today. Afterwards I had some work at my friend Ravi's house. I went there. That is why I am late.
ಮಾವ—ಊರಿಂದ ನನ್ನ ಜೊತೆ ನಿನ್ನ ನಾದಿನೀನೂ ಬಂದಳು. ಅವಳಿಗೆ ಕೃಷ್ಣರಾಜಸಾಗರ ನೋಡಬೇಕು ಅಂತ ಆಸೆ.	Your younger sister-in-law also came with me from our place. She wants to see Krishnaraja-sagar.
ಮಾಧು—ಆಗಲಿ. ಅದಕ್ಕೇನು. ನಾಡಿದ್ದು ಭಾನುವಾರ ಎಲ್ಲಾ ಹೋಗೋಣ.	O.K. No problems. Let us all go on Sunday.
ಮಾವ—ಇದೇನು ಮಾಧು! ಮೈಸೂರಲ್ಲಿ ಇಷ್ಟು ಸೆಖೆ. ಒಳಗೆ ಕೂರೋಕೆ ಆಗಲ್ಲ. ಬಾ ಹೊರಗೆ ವರಾಂಡದಲ್ಲಿ ಕೂತ್ಕೊಳ್ಳೋಣ.	My Goodness Madhu! It is so sultry in Mysore. It is impossible to sit inside. Come let us sit on the Veranda.
ಮಾಧು—ಹೌದು ಮಾವ. ಈ ವರ್ಷ ಮೈಸೂರೂ ಮದರಾಸಿನ ಹಾಗೇ ಇದೆ. ಎಲ್ಲೆಲ್ಲೂ ಧಗೆ. ಇಲ್ಲಿ (ಹೊರಗೆ) ಸ್ವಲ್ಪ ಪರವಾಗಿಲ್ಲ. ಒಳಗಡೆ ಅಸಾಧ್ಯ ಸೆಖೆ.	Yes, father-in-law. This year Mysore is also like Madras. Everywhere it is terrible hot. Here (outside) it is better. Inside it is too sultry.
ಮಾಧು—ಹೌದೌದು. ಈಗ ಸ್ವಲ್ಪ ದೇಹಕ್ಕೆ ತಂಪಾಯ್ತು.	Yes. Now we are a bit cooler.
ಮಾಧು—ಮಾವ, ಅರುಣಂದೂ, ಕಿರ	Father-in-law, you thought of

ಣಂದೂ ಮದುವೆ ಮಾಡಬೇಕು ಅಂತ ಇದ್ದಿರಲ್ಲಾ ಏನಾಯ್ತು ?	holding Arun and Kiran's marriage. What happened?
ಮಾವ—ಇಬ್ಬರೂ ಈ ವರ್ಷ ಮದುವೆ ಬೇಡ ಅಂದರು. ಆದ್ದರಿಂದ ಆ ವಿಚಾರ ಕೈ ಬಿಡಬೇಕಾಯ್ತು.	They said that they didn't want to marry this year. Therefore I had to drop the idea.
ಮಾಧು—ಹೋಗಲಿ ಬಿಡಿ. ಈಗೇನು ಅವಸರ. ಅರುಣನಿಗೆ ಇನ್ನೂ ರಜ ಇದೆ ಅಲ್ವಾ? ಅವನು ಇನ್ನೂ ಎಷ್ಟು ದಿನ ಇರ್ತಾನೆ?	Never mind. What hurry is there. Aruna is still on vacation, isn't he? How many days more will he stay?
ಮಾವ—ಅಯ್ಯೋ ಅವನೆಲ್ಲಿ? ಹದಿನೈದು ದಿವಸ ಮಾತ್ರ ಊರಲ್ಲಿ ಇದ್ದ. ಆಗಲೇ ಮೊನ್ನೇನೇ ಬೊಂಬಾಯಿಗೆ ಹೋದ. ಜೊತೇಲಿ ಒಂದೆರಡು ತಿಂಗಳು ಇದ್ದೀನಿ ಅಂತ ನಿಮ್ಮತ್ತೇನೂ ಹೋದರು.	Oh, he was at home for only fifteen days. He went to Bombay a few days ago. Your mother-in-law also went to stay with him for a few months.
ಮಾಧು—ಏ, ಅರ್ಪಿತಾ ಗೇಟಿಂದ ಒಳಗೆ ಎರಡು ಹಸುಗಳು ಬಂದವು. ಗಿಡ ತಿನ್ನುತ್ವೆ. ಓಡಿಸು ಬಾ.	Eh, Arpita, two cows came in through. They will eat the plants. Come, drive them away.
ಶೀಲಾ—(ಒಳಗಿನಿಂದ) ಅವಳ ಕೈಲಿ ಎಲ್ಲಿ ಆಗುತ್ತೆ. ನೀವೇ ಓಡಿಸಿ.	How can she drive them? You (hon.) do it.
ಅರ್ಪಿತ—ಎಲ್ಲಿ ಅಪ್ಪಾಜಿ ಹಸು ?	Daddy, where are the cows?
ಮಾವ—ನೀನು ತಡವಾಗಿ ಬಂದೇಮ್ಮಾ. ಹಸೂನ ನಿಮ್ಮ ಅಪ್ಪಾಜೀನೇ ಹೊಡೆದರು.	You came late. Your father drove away the cows, himself.

DRILLS

I Build up Drill :

a) Model : ಹೋದರು

ಬೆಂಗಳೂರಿಗೆ ಹೋದರು.

ಅತ್ತೆ ಬೆಂಗಳೂರಿಗೆ ಹೋದರು

ನಮ್ಮ ಅತ್ತೆ ಬೆಂಗಳೂರಿಗೆ ಹೋದರು.

ಬೆಳಿಗ್ಯೆ ನಮ್ಮ ಅತ್ತೆ ಬೆಂಗಳೂರಿಗೆ ಹೋದರು.

ಇವತ್ತು ಬೆಳಿಗ್ಯೆ ನಮ್ಮ ಅತ್ತೆ ಬೆಂಗಳೂರಿಗೆ ಹೋದರು.

Build up the following making the necessary changes wherever necessary :

1) ಬಂದನು
2) ತಂದೆವು
3) ಇದ್ದಳು
4) ಹೊಡೆದೆ
5) ಹೋದವು

b) Model : ಅಂದರು

ಅಂತ ಅಂದರು.

ಬರ್‍ತೀನಿ ಅಂತ ಅಂದರು.

ಮನೆಗೆ ಬರ್‍ತೀನಿ ಅಂತ ಅಂದರು.

ನಮ್ಮ ಮನೆಗೆ ಬರ್‍ತೀನಿ ಅಂತ ಅಂದರು.

ಮೇಷ್ಟ್ರು ನಮ್ಮ ಮನೆಗೆ ಬರ್‍ತೀನಿ ಅಂತ ಅಂದರು.

Build up the following making the necessary changes wherever necessary :

1) ಹೋದರು

2) ಅಂದೆ

3) ಹೊಡೆದಳು

II Transformation Drill :

a) Model : T : ಅವನು ಊರಿಗೆ ಬರ್ತಾನೆ.

S : ಅವನು ಊರಿಗೆ ಬಂದ.

Transform :

1) ಅವನು ಮನೆಯಲ್ಲಿ ಇದಾನೆ.

ತಿ ಲ ಬೆಂಗಳೂರಿಗೆ ಹೋಗ್ತಾರೆ.

3) ಅವರು ಬರೋದು ತಡ ಆಗುತ್ತೆ.

4) ಜವಾನ ಕಿಟಕಿ ತೆಗೆಯುತ್ತಾನೆ.

5) ನೀವು ಊರಿಂದ ಏನು ತರ್ತೀರಿ ?

III Substitution Drill :

b) Model : T : ಅವನು ಬೆಳಿಗ್ಗೆ ಊರಿಗೆ ಹೋದ.

S : ಅವರು ಬೆಳಿಗ್ಗೆ ಊರಿಗೆ ಹೋದರು.

Substitute :

1) ನಾವು ನಮಗೆ ಊಟ ಬೇಡ ಅಂದೆವು.

ಅವರು

....

2) ಅವನು ಮನೆಯಲ್ಲಿ ಇದ್ದ.
ಅವಳು

....

4) ರವಿ ರಮೇಶನನ್ನು ಹೊಡೆದ.
ಉಷಾ

....

4) ನೀನು ಯಾಕೆ ಕಿಟಕಿ ತೆಗೆದೆ.
ನೀವು

....

5) ನಾನು ನಿನ್ನೆ ಸಾಯಂಕಾಲ ಸಿನಿಮಾಕ್ಕೆ ಹೋದೆ.
ನಾವು

....

IV Response Drill :

1) ನೀವು ನಿಮ್ಮ ಊರಿಂದ ಮೈಸೂರಿಗೆ ಯಾವ ತಿಂಗಳಲ್ಲಿ ಬಂದಿರಿ ?
2) ನೀವು ಕ್ಲಾಸಿಗೆ ಬರೋದು ಯಾಕಷ್ಟು ತಡ ಆಯ್ತು ?
3) ನಿಮ್ಮ ಊರಿಂದ ಮೈಸೂರಿಗೆ ಹೇಗೆ ಬಂದಿರಿ ?
4) ಇವತ್ತು ಬೆಳಿಗ್ಗೆ ಕಾಲೇಜಿಗೆ ಎಷ್ಟು ಗಂಟೆಗೆ ಬಂದಿರಿ ?

EXERCISES

I Fill in the blanks using the correct past tense forms of the verbs given in the brackets.

1) ನೀವು ಯಾವಾಗ .... ? (ಬರು)
2) ಕೃಪಾ ಮನೆಗೆ .... (ಹೋಗು)

3) ನಿನ್ನೆ ಮನೆಗೆ ಹೋಗೋದು ತಡ......... (ಆಗು)

4) ನಮ್ಮ ತಂದೆ ಬೆಂಗಳೂರಿಂದ ಹೊಸ ಪುಸ್ತಕ .... (ತರು)

5) ನಾನು ಅವನನ್ನು ಚೆನ್ನಾಗಿ .... (ಹೊಡೆ)

II Transform into Past tense :

1) ನಿಮ್ಮ ಅಕ್ಕ ಯಾವತ್ತು ಬರ್ತಾರೆ ?

2) ಕಮಲ ಸುಮನ ಮನೆಗೆ ಹೋಗ್ತಾರಾ ?

3) ನನ್ನ ತಮ್ಮ ಮಂತ್ರಿ ಆಗ್ತಾನೆ.

III Combine the following sentences following the model :

Model : T : ನಾನು ಸ್ಕೂಲಿಗೆ ಹೋಗ್ತೀನಿ.
ಅವನು ಏನು ಹೇಳ್ತಾನೆ ?

S : ಅವನು ಸ್ಕೂಲಿಗೆ ಹೋಗ್ತೀನಿ ಅಂತ ಹೇಳ್ತಾನೆ.

1) ನಾನು ಕೃಷ್ಣರಾಜಸಾಗರ ನೋಡಬೇಕು.
ಅವಳಿಗೆ ಏನು ಆಸೆ ?

2) ನಾನು ಸಿನಿಮಾ ನೋಡಬೇಕು.
ನನಗೆ ಏನು ಇಷ್ಟ ?

3) ನಾವು ಬೆಂಗಳೂರಿಗೆ ಹೋಗ್ತೀವಿ.
ಅವರು ಏನು ಅಂದರು ?

4) ನಾನು ಊಟಕ್ಕೆ ಕ್ಯಾಂಟೀನ್‌ಗೆ ಹೋಗ್ತೀನಿ.
ಅವನು ಎಲ್ಲಿಗೆ ಹೋದ ?

5) ನಾವು ಕನ್ನಡ ಕಲಿಯಬೇಕು.
ಅವರು ಏನು ಹೇಳ್ತಾ ಇದಾರೆ ?

IV If you add ಆಗಿ — to the word ( ) ತಡ

you make the word ತಡವಾಗಿ

Example : ತಡ + ಆಗಿ = ತಡವಾಗಿ

In the same model add ( )—ಆಗಿ to the following words and use them in your own sentences :

1) ಚೆನ್ನ

2) ನಿಧಾನ

3) ಜೋರು

4) ಒಡ್ಡೊಡ್ಡು

4) ಕೆಟ್ಟದು

VII Answer the following questions :

1) ಮಾಧು ಮನೆಗೆ ತಡವಾಗಿ ಬರಲು ಕಾರಣ ಏನು ?

2) ಈ ವರ್ಷ ಮೈಸೂರಿನ ಹವ ಹೇಗಿದೆ ?

3) ಅರುಣ ಯಾರು ? ಎಲ್ಲಿ ಕೆಲಸ ಮಾಡ್ತಾ ಇದಾನೆ ?

4) ಮಾಧುವಿನ ಅತ್ತೆ ಎಲ್ಲಿಗೆ, ಯಾಕೆ ಹೋದರು ?

VOCABULARY :

ಅತ್ತೆ—aunty, mother-in-law

ಆಸೆ—desire, hope, wish

ಅಸಾಧ್ಯ—impossible

ಓಡಿಸು—to drive away

ಕುಶಲ—happy

ಕೂರು—to sit

ಕೈಬಿಡು—to drop out

ತಂಪು—cool

ತೆಗೆ—to open

ಧಗೆ—hot, heat

ದೇಹ—body

ವಿಚಾರ—idea, matter

ಹವೆ—weather

ಹಸು—**cow**

ಹೊಡೆ—to beat, to drive out.

Supplementary Vocabulary :

ತೆಗೆ—to open

ಬೀದಿ—street

ಬೈಯು—to scold

GRAMMAR NOTES

1. The simple Past tense d is introduced in this lesson. The detail grammatical explanation is given in the next lesson.

2. The impersonal use of the verb ಆಗು with verbal noun in dative indicates possibility or impossibility in idiomatic expression.

Ex : 1. ನಿಮ್ಮ ಮನೆಗೆ ಬರೋಕೆ ಆಗುತ್ತೆ.
It is possidle to come to your house.

2, ನಿಮ್ಮ ಮನೆಗೆ ಬರೋಕೆ ಆಗಲ್ಲ.
It is not possible to come to your house.

3. '**ಅಂತ**' **is** a quotative or **reportive** particle which **follows** **direct or** indirect discourse or designation of the **name**.

ex : 1. ನಾನು ಬರ್ತೀನಿ ಅಂತ ಹೇಳಿದೆ.

2. ನನಗೆ ಊರಿಗೆ ಹೋಗಬೇಕು ಅಂತ ಆಸೆ.

3. ನಮ್ಮ ತಂದೆ ನನ್ನ ಅಣ್ಣನ ಜೊತೆ ಇರ್ತೀನಿ **ಅಂತ** ಹೇಳಿದರು.

4. ಅವನ ಹೆಸರು ರಾಮಯ್ಯ ಅಂತ.

LESSON 31

PREPARATION TO GO TO CLASS

DIALOGUE:

ಶಾಸ್ತ್ರಿ—ಶರ್ಮಾ, ಯಾಕಿಷ್ಟು ತಡವಾಗಿ ಎದ್ದಿರಿ? ಹುಷಾರಿಲ್ವಾ?	Sharma, why did you get up so late? Aren't you well?
ಶರ್ಮ—ರಾತ್ರಿ ನಾಟಕದ ರಿಹರ್ಸಲ್ ಇತ್ತು. ಮಲಗೋದು ತುಂಬಾ ತಡ ಆಯ್ತು.	There was a drama rehearsal in the night. So I went to bed very late.

ಶಾಸ್ತ್ರಿ—ನಾಟಕದ ರಿಹರ್ಸಲ್ ಎಲ್ಲಿ ಇತ್ತು?

Where was the drama rehearsal?

ಶರ್ಮ—ನಾಟಕದ ರಿಹರ್ಸಲ್ ಮೂರ್ತಿಯವರ ಮನೇಲಿ ಇತ್ತು.

The drama rehearsal was in Murthy's house.

ಶಾಸ್ತ್ರಿ—ರೂಮಿಗೆ ಎಷ್ಟು ಗಂಟೆಗೆ ಬಂದಿರಿ?

What time did you get back to room ?

ಶರ್ಮ—ರಾತ್ರಿ ಹನ್ನೆರಡು ಗಂಟೆಗೆ ಬಂದೆ.

I came about 12 o'clock in the night.

ಶಾಸ್ತ್ರಿ—ಎಲ್ಲಿ ನಿಮ್ಮ ರೂಮ್‌ಮೇಟ್ ಕಾಣ್ತಾನೆ ಇಲ್ಲ. ಎಲ್ಲಿಗೆ ಹೋದರು?

Where is your room mate? He is never around. Where has he gone?

ಶರ್ಮ—ಅವರು ಆಗಲೇ ಕ್ಲಾಸಿಗೆ ಹೋದರು.

He has gone to class already.

ಶಾಸ್ತ್ರಿ—ಹೊತ್ತಾಯ್ತು ಹೊರಡಿ. ಇನ್‌ಸ್ಟಿಟ್ಯೂಟಿಗೆ ಹೋಗೋಣ. ತಿಂಡಿ ತಿಂದಿರಾ?

It is getting late. Let us go to the Institute. Have you had your breakfast?

ಶರ್ಮ—ತಿಂಡೀನೂ ತಿಂದೆ, ಕಾಫೀನೂ ಕುಡಿದೆ. ನನ್ನ ಹೋಂವರ್ಕ್ ಪುಸ್ತಕಾನ ಹುಡುಕ್ತಾ ಇದೀನಿ.

I have eaten breakfast and drunk some coffee. I am searching for my home-work book.

ಶಾಸ್ತ್ರಿ—ಹೊರಡಿ. ಐದು ನಿಮಿಷಾನೂ ತಡವಾಗಕೂಡದು. ಆಬ್ಸೆಂಟ್ ಬೀಳುತ್ತೆ.

Start. One shouldn't be even five minutes late. We will be marked down as absent.

ಶರ್ಮ—ಹೌದು. ನಾನು ಮೊನ್ನೆ ಹತ್ತು

Yes. Day before yesterday I

ನಿಮಿಷ ತಡವಾಗಿ ಹೋದೆ. ಅಬ್ಸೆಂಟ್ ಬಿತ್ತು. ಬನ್ನಿ ಹೋಗೋಣ.	went ten minutes late. I was marked absent, come let us go.

DRILLS :

I Build up drill :

a) Model : ಬರೆದೆ

ಕಾಗದ ಬರೆದೆ

ನಮ್ಮ ತಂದೆಗೆ ಕಾಗದ ಬರೆದೆ

ಬೆಳಿಗ್ಗೆ ನಮ್ಮ ತಂದೆಗೆ ಕಾಗದ ಬರೆದೆ

ಇವತ್ತು ಬೆಳಿಗ್ಗೆ ನಮ್ಮ ತಂದೆಗೆ ಕಾಗದ ಬರೆದೆ

ನಾನು ಇವತ್ತು ಬೆಳಿಗ್ಗೆ ನಮ್ಮ ತಂದೆಗೆ ಕಾಗದ ಬರೆದೆ.

Build up the following making the changes wherever necessary :

1) ಕುಡಿದೆ

2) ಕರೆದಳು

3) ಹೋಯಿತು

4) ತಿಂದರು

b) Model : ಎದ್ದರು

ತಡವಾಗಿ ಎದ್ದರು.

ಬೆಳಿಗ್ಗೆ ತಡವಾಗಿ ಎದ್ದರು

ನಿನ್ನೆ ಬೆಳಿಗ್ಗೆ ತಡವಾಗಿ ಎದ್ದರು

ಅವರು ನಿನ್ನೆ ಬೆಳಿಗ್ಗೆ ತಡವಾಗಿ ಎದ್ದರು.

Build up the following making the changes wherever necessary:

1) ಬಯ್ದು
2) ಬಿದ್ದ
3) ಬಂದಳು

III Transformation Drill :

a) Model : T : ಅವರು ಬ್ಯಾಡ್ಮಿಂಟನ್‌ನಲ್ಲಿ ಗೆಲ್ಲುತ್ತಾರೆ.

S : ಅವರು ಬ್ಯಾಡ್ಮಿಂಟನ್‌ನಲ್ಲಿ ಗೆದ್ದರು.

Transform :

1) ಅವಳು ಬೆಳಿಗ್ಗೆ ಬೇಗ ಏಳುತ್ತಾಳೆ.
2) ರಾಮು ಎಷ್ಟು ಗಂಟೆಗೆ ತಿಂಡಿ ತಿಂತಾನೆ ?
3) ಮರದಿಂದ ಹಣ್ಣು ಕೆಳಗೆ ಬೀಳುತ್ತದೆ.
4) ಅಧ್ಯಾಪಕರು ನಮ್ಮನ್ನು ಬೈಯ್ಯುತ್ತಾರೆ.
5) ನಾವು ಇವತ್ತು ಹತ್ತು ಪಾಠ ಬರೆಯುತ್ತೇವೆ.

b) Model : T : ಅವನು ಹತ್ತನೇ ಪಾಠ ಬರೆದ.

S : ಅವನು ಹತ್ತನೇ ಪಾಠ ಬರೆದನಾ ?

Transform :

1) ಅವನು ಮನೆಯಲ್ಲಿ ಇದ್ದ.
2) ಅವಳು ದಾರಿಯಲ್ಲಿ ಬಿದ್ದಳು.
3) ರವಿ ಆಟದಲ್ಲಿ ಗೆದ್ದ.
4) ಅವರು ಐದು ಗಂಟೆಗೆ ಎದ್ದರು.
5) ಮಗು ಬಿಸ್ಕೆಟ್ ತಿಂದಿತು.

III Substitution Drill:

Model : T : ಅವನು ನನ್ನನ್ನು ಕರೆದನು.
ಅವಳು

S : ಅವಳು ನನ್ನನ್ನು ಕರೆದಳು

Substitution :

1) ಅವರು ತಡವಾಗಿ ಎದ್ದರು
ನೀನು

....

2) ನಾನು ತಿಂಡಿ ತಿಂದೆ.
ಅವಳು

....

3) ಅವನಿಗೆ ನಾಳೆ ಅಪ್ಸೆಂಟ್ ಬೀಳುತ್ತೆ.
ನಿನ್ನೆ

....

4) ನೀವು ಪಾಠ ಬರೆದಿರಿ.
ನಾವು

....

5) ನಿಮ್ಮ ತಂಗಿ ನನ್ನನ್ನು ಬೈದಳು.
ತಮ್ಮ

....

IV Response Drill :

1). ನೀವು ಇವತ್ತು ಬೆಳಿಗ್ಗೆ ಎಷ್ಟು ಗಂಟೆಗೆ ಎದ್ದಿರಿ ?

2) ನಿಮ್ಮ ರೂಂಮೇಟ್ ಎಷ್ಟು ಗಂಟೆಗೆ ಎದ್ದರು?

3) ಇವತ್ತು ಬೆಳಿಗ್ಗೆ ಏನು ತಿಂಡಿ ತಿಂದಿರಿ ?

4) ಇವತ್ತು ಬೆಳಿಗ್ಗೆ ನೀವು ಕಾಫಿ ಕುಡಿದಿರೋ, ಟೀ ಕುಡಿದಿರೋ ?

5) ನಿನ್ನೆ ರಾತ್ರಿ ಎಷ್ಟನೇ ಪಾಠ ಬರೆದಿರಿ ?

EXERCISES :

I A) Fill in the blanks using the correct Past tense forms of the verbs given in the brackets :

1) ನಾನು ಆಟದಲ್ಲಿ .... (ಗೆಲ್ಲು)
2) ಹಸುಗಳು ಗಿಡ .... (ತಿನ್ನು)
3) ನಾನೇನು ನೀನು ಬರೋದು ಬೇಡ .... ? (ಅನ್ನು)
4) ನಾವು ಬೆಳಗಿನ ಜಾವ ನಾಲ್ಕು ಗಂಟೆಗೆ .... (ಏಳು)
5) ಸುಬ್ಬಯ್ಯನವರು ಕಾಫಿ .... (ಕುಡಿ)

II Conjugate the following verbs in past tense as directed :

1) ಗೆಲ್ಲು (in III person)
2) ಇರು (in I and II person)
3) ಕುಡಿ (in I and II person. plural & III person neut.)
4) ಬರು (II person neut. sg. and plu.)
5) ಬೀಳು (I and II person)

III Expand the following sentences as per the model by using the cues given in the bracket :

Model : T : ನಾನು ಬಂದೆ.

(ಬೆಳಿಗ್ಗೆ ಎಂಟುಗಂಟೆ, ಜೂನ್ ತಿಂಗಳು, ಮೈಸೂರು, ಆರನೇ ತಾರಿಖು)

S : ನಾನು ಜೂನ್ ತಿಂಗಳು ಆರನೇ ತಾರೀಖು ಬೆಳಿಗ್ಗೆ ಎಂಟು ಗಂಟೆಗೆ ಮೈಸೂರಿಗೆ ಬಂದೆ.

1) ನಾವು ಹೋದೆವು.
(ಬೇಲೂರು, ಪಿಕ್‌ನಿಕ್, ಹತ್ತು ಗಂಟೆ ಬೆಳಗ್ಗೆ)

2) ಅವಳು ಬಂದಳು.
(ತರಗತಿ, ತಡವಾಗಿ, ಎಂಟು ನಿಮಿಷ, ಇವತ್ತು)

3) ಅವರು ತಿಂದರು.
(ಚಪಾತಿ, ಹಾಸ್ಟೆಲ್, ನಾಲ್ಕು, ಮಧ್ಯಾಹ್ನ)

IV Answer the following questions :

1) ಶರ್ಮಾ ಯಾಕೆ ತಡವಾಗಿ ಎದ್ದರು ?
2) ನಾಟಕದ ರಿಹರ್ಸಲ್ ಎಲ್ಲಿ ಇತ್ತು ?
3) ಶರ್ಮಾ ಅವರ ರೂಂಮೇಟ್ ಎಲ್ಲಿಗೆ ಹೋದರು ?
4) ಶರ್ಮನಿಗೆ ಮೊನ್ನೆ ಯಾಕೆ ಅಬ್ಸೆಂಟ್ ಬಿತ್ತು ?

VOCABULARY :

ಆಗು—to happen
ಅಬ್ಸೆಂಟ್ ಬೀಳು—to be marked absent (Impersonal Construction)
ಏಳು—to get up
ಕಾಣು—to be seen
ಕಾಣಿಸು—to appear
ನಾಟಕ—drama
ಬೀಳು—to fall
ಮಲಗು—to sleep
ರಾತ್ರಿ—night
ಹುಡುಕು—to search
ಹುಷಾರು—careful, safe, cured, well

Supplementary Vocabulary :

ಗೆಲ್ಲು—to win

ತೆರೆ—to open

GRAMMAR NOTES:

The verbs which take –d– as Past tense marker are introduced in lesson 30 and 31. Structure of the Past tense in Kannada is verb root + Past tense marker + Pronominal ending.

ಹೋಗು + ದ್ + ಎ = ಹೋದೆ. observe the deletion of –gu–.

There is no conditioning factor to say as to which verb will take –d– as Past Suffix. A list of verbs in which –d– occurs in Past tense is given at the end.

The pronominal endings of all the persons are given below.

I	Per. Sg.	ನಾನು ಹೋದೆ.	Pl.	ನಾವು ಹೋದೆವು.
II	Per. Sg.	ನೀನು ಹೋದೆ	Pl.	ನೀವು ಹೋದಿರಿ.
III	Per. mas. Sg.	ಅವನು ಹೋದ	Pl.	ಅವರು ಹೋದರು.
	Per. fem. Sg.	ಅವಳು ಹೋದಳು		
	neut. Sg.	ಅದು ಹೋಯ್ತು	Pl.	ಅವು ಹೋದವು

III Person neuter singular will take either one of the two Pronominal endings, viz, –tu or –itu. in Past paradigm.

–tu will be added directly to the verb root. Here Past tense is zero. If it is –itu Past tense marker is retained.

Ex : ತಿನ್ + ೦ + ತು = ತಿನ್ತು.

ತಿನ್ + ದ್ + ಇತು = ತಿಂದಿತು.

ಇರು, ಹೋಗು and ಆಗು exhibit irregular forms in the III Person neut. Sg.

Ex : ಇತ್ತು, ಹೋಯ್ತು and ಆಯ್ತು.

List of the Verbs which take Past tense marker --d--.

ಹೋಗು—to go
ಬಾ—to come
ತಾ—to bring
ಬರೆ—to write
ಕುಡಿ—to drink
ನಡೆ—to walk
ಹೊಡೆ—to beat
ಎಳೆ—to pull
ತೆರೆ—to open
ಕಡಿ—to cut / to bite
ತೆಗೆ—to open
ಕೆರೆ—to scratch
ಕರೆ—to call
ಎರೆ—to apply
ಕಳೆ—to substract
ಬೆಳೆ—to grow
ಸೆಳೆ—to attract
ಒಗೆ—to wash the cloth
ಕೊಲ್ಲು—to kill
ಬೀಳು—to fall
ಅನ್ನು—to say
ತಿನ್ನು—to eat
ಇರು—to be
ಮುರಿ—to break
ಬೈಯ್ಯು—to scold
ಕೊಯ್ಯು—to Pluck, to cut the fruit
ಏಳು—to get up
ಕಾಯು—to wait
ಗೆಲ್ಲು—to win
ತುಳಿ—to push down by foot
ಆಗು—to become

Observe how some of the following verbs change with past tense marker :

	Verb	Present tense	Past tense
1)	ಹೋಗು	ಹೋಗ್ತೀನಿ	ಹೋದೆ
2)	ಬಾ	ಬರ್ತೀನಿ	ಬಂದೆ
3)	ತಾ	ತರ್ತೀನಿ	ತಂದೆ
4)	ಕೊಲ್ಲು	ಕೊಲ್ತೀನಿ	ಕೊಂದೆ
5)	ಅನ್ನು	ಅನ್ತೀನಿ	ಅಂದೆ
6)	ಇರು	ಇರ್ತೀನಿ	ಇದ್ದೆ
7)	ಬೈಯ್ಯು	ಬೈತೀನಿ	ಬೈದೆ
8)	ಏಳು	ಏಳ್ತೀನಿ	ಎದ್ದೆ
9)	ಗೆಲ್ಲು	ಗೆಲ್ತೀನಿ	ಗೆದ್ದೆ
10)	ಬೀಳು	ಬೀಳ್ತೀನಿ	ಬಿದ್ದೆ
11)	ಕಾಯು	ಕಾಯ್ತೀನಿ	ಕಾದೆ

LESSON 32

CONEVRSATION WITH DAUGHTER

DIALOGUE :

ಮಾಘು—ಅರ್ಪಿತಾ ಬಾಮ್ಮ ಇಲ್ಲಿ ಇವತ್ತು ಸ್ಕೂಲಿನಲ್ಲಿ ಏನೇನು ಬರೆದೆ ? ತೋರಿಸು.	Arpita come here. Show me, everything you wrote today in the school.
ಅರ್ಪಿತಾ—ನಾಲ್ಕನೇ ಪಾಠ ಬರೆದೆ ಅಪ್ಪಾಜ **ತಗೋಳಿ ನೋಡಿ.**	I wrote fourth lesson daddy. **Take it and look.**

ಮಾಧು—ಅಕ್ಷರಾನ ದುಂಡಗೆ ಬರೀಬೇಕು. ನಿಮ್ಮಮ್ಮನ ಅಕ್ಷರದ ಹಾಗೆ ಬರೀ ಬಾರದು.	**You should write the letters legibly. You shouldn't write like your mummy.**
ಅರ್ಪಿತಾ—ಯಾಕಪ್ಪಾಜಿ, ಅಮ್ಮನ ಅಕ್ಷರ ಅಷ್ಟು ಕೆಟ್ಟದಾಗಿ ಇರುತ್ತಾ ?	Why daddy, Is Mummy's hand-writing so bad ?
ಮಾಧು—ಹೂ. ಅವಳ ಅಕ್ಷರಗಳು ಅವಳ ಹಲ್ಲಿನ ಸಾಲಿನ ಹಾಗೆ ಇರುತ್ವೆ.	Yes. Her handwriting is like her rows of teeth.
ಅರ್ಪಿತಾ—ಆಗಲಿ ಅಪ್ಪಾಜಿ. ಇನ್ನು ಮೇಲೆ ಚೆನ್ನಾಗಿ ಬರೀತೀನಿ.	All right Daddy. In future I will write legibly.
ಮಾಧು—ಮಗ್ಗಿ ಎಲ್ಲಿಯವರೆಗೆ ಕಲಿತೆ ಹೇಳಮ್ಮಾ ನೋಡೋಣ.	Tell me, how far you have learnt your tables ?
ಅರ್ಪಿತಾ—ಮಗ್ಗಿ ಹನ್ನೆರಡರವರೆಗೆ ಬರುತ್ತೆ. ಹೇಳಲಾ ?	I have learnt upto twelve. Shall I say them ?
ಮಾಧು—ಈಗ ಬೇಡ. ಹೊತ್ತಾಗುತ್ತೆ. ಸಿನಿಮಾಕ್ಕೆ ಹೋಗೋಣ. ಹೊರಡು.	No. Not now. It is getting late Let us go to movie. Start.
ಅರ್ಪಿತಾ—ಅಮ್ಮಾ ನನಗೆ ತಲೆ ಬಾಚು.	Mummy, comb my hair.
ಲೀಲಾ—ಬಾಚ್ತೀನಿ ಬಾ. ಏನದು ಕೈಲಿ ? ಅದ್ಯಾಕಮ್ಮಾ ಆ ಮೊಗ್ಗು ಕಿತ್ತೆ. ಒಳಗಡೆ ಹೂವು ಇದೆ. ಇನ್ನು ಮೇಲೆ ಮೊಗ್ಗು ಕೀಳಬಾರದು. ಗೊತ್ತಾಯಿತಾ ?	Come I will comb it. What is that in the hand ? Why did you pluck that bud ? There is flower inside (the house). Here after-wards shouldn't pluck **the buds,** Did you understand ?

ಅರ್ಪಿತಾ—ಗೊತ್ತಾಯಿತಮ್ಮಾ. ಇನ್ನು ಮೇಲೆ ಕೀಳಲ್ಲ.	I understand mummy. Hereafterwards I will not pluck them.
ಮಾಧು—ಶೀಲಾ, ಬೇಗ ಹೊರಡಬೇಕು. ಇವತ್ತು ಟಿಕೆಟ್ ರಿಸರ್ವ್ ಮಾಡಿ ಸೋದು ಮರೆತೆ. ಆಗಲೇ ಆರು ಗಂಟೆ ಆಯ್ತು.	Sheela, you have to start soon. Today I forgot to reserve the tickets. It is already 6 O'clock.
ಶೀಲಾ—ಆಯ್ತು ನಡೀರಿ, ಹೋಗೋಣ.	I am ready. Let us go.

DRILLS

I Build up Drill :

Model : ಅತ್ತಳು.

ಜೋರಾಗಿ;ಅತ್ತಳು

ರಾತ್ರಿ ಜೋರಾಗಿ ಅತ್ತಳು.

ನಿನ್ನೆ ರಾತ್ರಿ ಜೋರಾಗಿ ಅತ್ತಳು.

ಸವಿತ ನಿನ್ನೆ ರಾತ್ರಿ ಜೋರಾಗಿ ಅತ್ತಳು.

Build up the following making the changes wherever necessary

1) ಹೆತ್ತಳು
2) ಸತ್ತ
3) ಸೋತೆವು
4) ಮರೆತೆ

II Transformation Drill :

Model : T : ಸುಮ ಸಂಗೀತ ಕಲೀತಾಳೆ.

S : ಸುಮ ಸಂಗೀತ ಕಲಿತಳು.

Transformation :

1) ನೀವು ಹೂವು ತರೋದು ಮರೀತೀರಿ.
2) ಮಗು ಅಳುತ್ತೆ.
3) ನೀನು ಹೊಲ ಉಳುತ್ತೀಯಾ ?
4) ಅವಳು ಹೂ ಕೀಳುತ್ತಾಳೆ.
5) ಅಪಘಾತದಿಂದ ಜನಗಳು ಸಾಯುತ್ತಾರೆ.
6) ನಾವು ಸೀರೆ ನೂಲುತ್ತೇವೆ.

III Substitution Drill :

Model : T : ಅವನು ಹತ್ತನೇ ಪಾಠ ಕಲಿತ.
ಅವರು

S : ಅವರು ಹತ್ತನೇ ಪಾಠ ಕಲಿತರು.

Substitute :

1) ನಾನು ತರಗತಿಗೆ ಪೆನ್ನು ತರೋದು ಮರೆತೆ.
ಸುಮಾ

....

2) ಗಾಂಧೀಜಿ ಚರಕದಿಂದ ನೂಲು ನೂತರು.
ನೀನು

....

3) ನೀವು ಆಟದಲ್ಲಿ ಸೋತಿರಿ.
ನಾವು

....

4) ನಾಯಿ ಹಸಿವಿನಿಂದ ಸತ್ತಿತು.
ಬೆಕ್ಕುಗಳು

....

IV Response Drill :

1) ನಿಮ್ಮ ಅಕ್ಷರ ಹೇಗಿದೆ ?
2) ನೀವು ಯಾವ ಭಾಷೆ ಕಲೀತೀರಿ ?
3) ನಿಮ್ಮ ಮಗ / ಮಗಳು ಇವತ್ತು ಯಾವ ಪಾಠ ಕಲಿತಳು ?

EXERCISES

I Fill in the blanks using the correct past tense forms of the verbs given in the brackets :

1) ಕಮಲ ಆಟದಲ್ಲಿ .... (ಸೋಲು)
2) ರವಿ ಚರಕದಿಂದ ನೂಲು .... (ನೂಲು)
3) ಅಯ್ಯೋ ! ನಾನು .... (ಸಾಯು)
4) ಅವನು ಹೇಗೆ ನಿನ್ನನ್ನು .... ? (ಮರೆ)
5) ಅವರು ನಿಮ್ಮ ಹತ್ತಿರ ಸಂಗೀತ .... ? (ಕಲಿ)

II Transform into past :

1) ಅವನು ಯುದ್ಧದಲ್ಲಿ ಸಾಯುತ್ತಾನೆ.
2) ಅವನು ಇನ್ನೂ ಇದಾನೆ ಅನ್ನೋದೆ ಮರೀತೀರಿ.

3) ಕತ್ತೆ ಒದೆಯೋದನ್ನು ಕಲಿಯತ್ತೆ.

4) ಮೊಲ ಪಂದ್ಯದಲ್ಲಿ ಸೋಲುತ್ತದೆ.

5) ಅವಳು ಗಂಡು ಮಗು ಹೆರುತ್ತಾಳೆ.

6) ನೀನು ಯಾಕೆ ಅಳುತ್ತೀಯೆ ?

III Conjugate the following verbs in past tense in all the persons :

ಕೀಳು, ಅಳು, ನೂಲು, ಉಳು

IV Answer the following questions:

1) ಅರ್ಪಿತ ಎಷ್ಟನೇ ಪಾಠ ಬರೆದಳು ?

2) ಅರ್ಪಿತಾಳ ಅಮ್ಮನ ಅಕ್ಷರ ಹೇಗಿದೆ ?

3) ಮೊಗ್ಗನ್ನು ಯಾರು ಕಿತ್ತರು ?

4) ನೀವು ಒಂದು ವಾರದಿಂದ ಎಷ್ಟು ಪಾಠ ಕಲಿತಿರಿ ?

Vocabulary—

ಅಪ್ಪಾಜಿ—daddy. Some children also use ಅಣ್ಣ in the sense of daddy.

ಅಕ್ಷರ—letter, alphabet

ಇನ್ನು ಮೇಲೆ—hereafter

ಕಲಿ—to learn

ಕೀಳು—to pluck

ಗೊತ್ತಾಯ್ತು—understood

ದುಂಡಗೆ } —legibly
ಗುಂಡಗೆ }

ಮಗ್ಗಿ—arithmetic tables

ಮರೆ—to forget

ಮೊಗ್ಗು—bud

ಸಾಲು—row

ಹಲ್ಲು—teeth

ಹೊತ್ತಾಯ್ತು—it is becoming late

Supplementary Vocabulary :

ಅಜ್ಜಿ—grand mother

ಅಪಘಾತ—accident

ಅಳು—to weep

ಉಳು—to plough

ಗಟ್ಟಿಯಾಗಿ—loudly

ಚರಕ—spinning wheel

ನೂಲು—to weave, thread

ಸಾಯು—to die

ಸೋಲು—to be defeated

ಹೆರು—to give birth (human)

ಹೊಲ—field

GRAMMAR NOTES :

–**t**– past tense is introduced in this lesson. This tense marker is used with different stem as given below :

	Verb	Present tense	Past tense
1)	ಕಲಿ	ಕಲಿಯುತ್ತೇನೆ	ಕಲಿತೆ
2)	ಮರೆ	ಮರೆಯುತ್ತೇನೆ	ಮರೆತೆ
3)	ಅಳು	ಅಳುತ್ತೇನೆ	ಅತ್ತೆ
4)	ಉಳು	ಉಳುತ್ತೇನೆ	ಉತ್ತೆ
5)	ಹೆರು	ಹೆರುತ್ತೇನೆ	ಹೆತ್ತೆ
6)	ಕೀಳು	ಕೀಳುತ್ತೇನೆ	ಕಿತ್ತೆ
7)	ಸೋಲು	ಸೋಲುತ್ತೇನೆ	ಸೋತೆ
8)	ನೂಲು	ನೂಲುತ್ತೇನೆ	ನೂತೆ
9)	ಸಾಯು	ಸಾಯುತ್ತೇನೆ	ಸತ್ತೆ

Note that when some of the verb roots end with r, l, ḷ and y the addition of –t– leads to the deletion of final r, l, ḷ and y. **After deletion** –t– is doubled in r, ḷ and y ending verbs.

e. g. 1. ಹೆರು + ತ್ + ಎ = ಹೆತ್ತೆ

heru + t + e = hette

2. ಸೋಲು + ತ್ + ಎ = ಸೋತೆ.

soolu + t + e = soote.

3. ಕೀಳು + ತ್ + ಎ = ಕಿತ್ತೆ.

kiilu + t + e = kitte.

4. ಸಾಯು + ತ್ + ಎ = ಸತ್ತೆ.

saayu + t + e = satte.

LESSON 33

ABOUT HOSTEL DAY

DIALOGUE

ಪಲ್ಲವಿ—ಬೆಂಗಳೂರಿನಿಂದ ಯಾವಾಗ ಬಂದೆ ಮಾಧವಿ ?	When did you come from Bangalore Madhavi ?
ಮಾಧವಿ—ಈಗ ತಾನೇ ಬರ್ತಾ ಇದೀನಿ. ಹೋದವಾರ ನಿಮ್ಮ ಹಾಸ್ಟಲ್ ಡೇ ಆಯ್ತು ಅಂತ ಗೊತ್ತಾಯ್ತು.	Just I am returning from there. I came to know that you had your hostel day last week.

ಪಲ್ಲವಿ—ನಿನಗೆ ಹೇಗೆ ಗೊತ್ತಾಯ್ತು ?	How did you come to know ?
ಮಾಧವಿ—ದಾರಿಯಲ್ಲಿ ಮಾಧುರಿ ಸಿಕ್ಕಳು. ಅವಳಿಂದ ನಿಮ್ಮ ಹಾಸ್ಟಲ್ ಡೇ ವಿಚಾರ ಗೊತ್ತಾಯ್ತು. ಹೇಗಿತ್ತು ವಾರ್ಷಿಕೋತ್ಸವ ?	I met Madhuri on the way. I came to know about your hostel day from her. How was the Annual day ?
ಪಲ್ಲವಿ—ವಾರ್ಷಿಕೋತ್ಸವ ತುಂಬಾ ಚೆನ್ನಾಗಿತ್ತು ಕಣೇ ಅಮ್ಮಾ.	The annual day was very nice, my dear.
ಮಾಧವಿ—ಏನೇನು ಕಾರ್ಯಕ್ರಮ ಇತ್ತು? ಮುಖ್ಯ ಅತಿಥಿ ಯಾರು ?	What were the programme you had ? Who was the chief guest ?
ಪಲ್ಲವಿ—ನಮ್ಮ ಪ್ರಿನ್ಸಿಪಾಲರೇ ಮುಖ್ಯ ಅತಿಥಿಗಳು. ಕಾರ್ಯಕ್ರಮದಲ್ಲಿ ಚರ್ಚಾ ಸ್ಪರ್ಧೆ, ವಿವಿಧ ವಿನೋದಾವಳಿ, ಸಂಗೀತ ಸ್ಪರ್ಧೆ, ಆಶುಭಾಷಣ ಇದ್ದವು.	Our Principal was the Chief Guest. Programme included debate, fancy dress, music competition and impromptu speech
ಮಾಧವಿ—ಯಾರ ಯಾರ ಕಾರ್ಯಕ್ರಮ ಚೆನ್ನಾಗಿ ಬಂತು ?	Whose programmes were all good ?
ಪಲ್ಲವಿ—ಸತ್ಯಭಾಮಳ ನಕಲಿಶಾಮನ ಪಾತ್ರ ತುಂಬಾ ಚೆನ್ನಾಗಿ ಇತ್ತು. ಎಲ್ಲಾ ಹೊಟ್ಟೆ ಹುಣ್ಣಾಗಬೇಕು ಹಾಗೆ ನಕ್ಕರು.	Satyabhama's acting as a funny girl was good. Every one laughed fit to burst.
ಮಾಧವಿ—ಹೌದಾ ! ಅಷ್ಟು ಚೆನ್ನಾಗಿ ಮಾಡಿದಳಾ ?	Really ! was it that good ?

ಪಲ್ಲವಿ—ಹೌದು ಕಣೇ ತುಂಬಾ ಚೆನ್ನಾಗಿ ಮಾಡ್ತಾಳೆ.	Yes. She acts very well.
ಮಾಧವಿ—ಊಟಕ್ಕೆ ಏನು ಸ್ಪೆಷಲ್ ಇತ್ತು ?	What special food was there for the meal ?
ಪಲ್ಲವಿ—ರಸಗುಲ್ಲಾ, ಚಂಪಾಕಲಿ ಮತ್ತು ಫ್ರೂಟ್‌ಸಲಾಡ್. ಕಡೆಯಲ್ಲಿ ತುಂಬಾ ಮಿಗ್ತು. ಬಹಳ ದಂಡ ಆಯ್ತು.	We had Rasagulla, Champakali and Fruit salad. In the end a lot was left over. There was a lot of waste.
ಮಾಧವಿ—ಹಾಗಾದರೆ, ಈ ತಿಂಗಳ ಬಿಲ್ಲು ತುಂಬಾ ಬರಬಹುದು.	Then, the mess bill will be high this month.
ಪಲ್ಲವಿ—ಹೂ. ಹತ್ತಿರ ಹತ್ತಿರ ಇನ್ನೂರು ರೂಪಾಯಿ ಬರಬಹುದು.	Yes. It will be around two hundred rupees.
ಮಾಧವಿ—ಅದು ಸರಿ. ಬೆಂಗಳೂರಿನಿಂದ ಏನೇನು ತಂದೆ ?	That is all right. What did you bring from Bangalore ?
ಪಲ್ಲವಿ—ಬೆಂಗಳೂರಿನಲ್ಲಿ ಎರಡು ಸೀರೆ ಕೊಂಡೆ. ನಿನಗೆ ತೋರಿಸ್ತೀನಿ. ಬಾ ಹೋಗೋಣ.	I bought two sarees in Bangalore. I will show you. Come, let us go.

DRILLS :

I Build up Drill :

Model : ನಕ್ಕಳು

ಜೋರಾಗಿ ನಕ್ಕಳು.

ಕಮಲ ಜೋರಾಗಿ ನಕ್ಕಳು.

ಪಕ್ಕದ ಮನೆ ಕಮಲ ಜೋರಾಗಿ ನಕ್ಕಳು.

Build up the following making the changes wherever necessary:

1) ಮಿಕ್ಕಿತು
2) ಸಿಕ್ಕಿ
3) ನಕ್ಕೆ
4) ಕಂಡಳು

II Transformation Drill:

Model: T : ಅವಳು ಜೋರಾಗಿ ನಗುತ್ತಾಳೆ.

S : ಅವಳು ಜೋರಾಗಿ ನಕ್ಕಳು.

Transform:

1) ನನ್ನ ಸಂಬಳದಲ್ಲಿ ತುಂಬ ಹಣ ಮಿಗುತ್ತದೆ.
2) ನೀನು ಯಾಕೆ ನಗುತ್ತೀಯೆ ?
3) ಅವರು ಎಲ್ಲಿ ಸಿಗುತ್ತಾರೆ ?

III Subsitution Drill:

1) ಅವರು ಸಯ್ಯಾಜಿರಾವ್ ರೋಡಿನಲ್ಲಿ ಸಿಕ್ಕರು.

ಅವನು

....

2) ಎರಡು ಮಾವಿನಹಣ್ಣು ಮಿಕ್ಕವು.

ಒಂದು

....

3) ನಾನು ತರಗತಿಯಲ್ಲಿ ಇದ್ದಕ್ಕಿದ್ದ ಹಾಗೆ ನಕ್ಕೆ.

ನಾವು

....

4) ಕಳ್ಳರು ಮನೆ ಹೊಕ್ಕರು.

ಅವಳು

....

5) ಅವನು ಒಂದು ಹೊಸ ಮನೆ ಕೊಂಡ.

ಅವರು

....

IV Response Drill :

1) ಇವತ್ತು ಕ್ಲಾಸಿನಲ್ಲಿ ನೀವು ಯಾಕೆ ಜೋರಾಗಿ ನಕ್ಕಿರಿ ?
2) ನಿಮಗೆ ಈ ತಿಂಗಳ ಸಂಬಳದಲ್ಲಿ ಎಷ್ಟು ಹಣ ಮಿಕ್ಕಿತು ?
3) ನಿನ್ನೆ ಮಾರ್ಕೆಟ್ ಹತ್ತಿರ ನಿಮಗೆ ಯಾರು ಸಿಕ್ಕರು ?
4) ಕಳ್ಳ ನಿಮ್ಮ ಮನೆ / ಹಾಸ್ಟಲ್ ಹೊಕ್ಕನಾ ?

EXERCISES

I Fill in the blanks using the correct past tense forms of the verbs given in the brackets :

1) ನಿಮ್ಮ ಮಗು ——— (ನಗು)
2) ನಾಯಿ ಮನೆ ——— (ಹೊಗು)
3) ದಾರಿಯಲ್ಲಿ ಒಂದು ರೂಪಾಯಿ ——— (ಸಿಗು)
4) ನಾವು ನಿನ್ನೆ ಸಿಟಿಯಲ್ಲಿ ಅವರನ್ನು ——— (ಕಾಣು)

II Change the following sentences into their past tense forms :

1) ಈ ಸೀರೆ ಲಕ್ಷ್ಮೀ ಸಿಲ್ಕ್ ಎಂಪೋರಿಯಂನಲ್ಲಿ ಸಿಗುತ್ತೆ.
2) ಅವರು ಸುಮ್ಮಸುಮ್ಮನೆ ನಗ್ತಾರೆ.
3) ಮದುವೆಯಲ್ಲಿ ಸಾಮಾನು ತುಂಬಾ ಮಿಗತ್ತೆ.

III Conjugate the following verbs as directed :

1) ಮಿಗು (III person neuter)
2) ನಗು (I and II persons)
3) ಸಿಗು (III person)
4) ಹೋಗು (I and II persons)

IV Answer the following questions :

1. ಪಲ್ಲವಿಗೆ ಹಾಸ್ಟಲ್ ವಾರ್ಷಿಕೋತ್ಸವ ಇತ್ತು ಅಂತ ಹೇಗೆ ತಿಳಿಯಿತು ?
2. ವಾರ್ಷಿಕೋತ್ಸವದಲ್ಲಿ ಯಾವ ಯಾವ ಕಾರ್ಯಕ್ರಮಗಳು ಇದ್ದವು?
3. ಎಲ್ಲರೂ ಏಕೆ ಹೊಟ್ಟೆಹುಣ್ಣಾಗುವಂತೆ ನಕ್ಕರು ?
4. ವಾರ್ಷಿಕೋತ್ಸವದ ಸ್ಪೆಷಲ್ ಏನು ?

VOCABULARY :

ಆಶುಭಾಷಣ—impromptu speech

ಕಾರ್ಯಕ್ರಮ—programme

ಕೊಳ್ಳು—to buy

ದಂಡ—waste, penalty

ನಗು—to laugh

ನಕಲಿಶಾಮ—a funny character

ಪಾತ್ರ—character, role

ಮುಖ್ಯ ಅತಿಥಿ—chief guest

ಮಿಗು—to exceed

ವಾರ್ಷಿಕೋತ್ಸವ—annual day

ವಿಚಾರ—idea, thought

ವಿವಿಧ ವಿನೋದಾವಳಿ—fancy dress

ಸಿಗು— to be available

ಸಂಗೀತ ಸ್ಪರ್ಧೆ—music competition

ಹುಣ್ಣು —wound

ಹೊಟ್ಟೆ ಹುಣ್ಣಾಗಬೇಕು ಹಾಗೆ—to laugh fit to burst or to laugh till ones sides split

ಹೋದ—pervious

Supplementary Vocabulary :

ಇದ್ದಕ್ಕಿದ್ದ ಹಾಗೆ—immediately

ಕಳ್ಳ—thief

ಸಕ್ಕರೆ—sugar

ಸಂಬಳ—salary

ಹೋಗು—to enter, break us in

GRAMMAR NOTES

1. Past tense marker –k– and –ḍ– are introduced. Verbs which have (C) VC syllable pattern where the last C stands for –g will take -k– as the past tense marker.

ex : ನಗ್ (ಉ) + ಕ್ + ಎ = ನಕ್ಕೆ

nag (u) + k + e = nakke

Note that when the past tense marker –k– is added, the last consonant –g is assimilated with –k– to give –kk–.

2. Verbs which ends in –ṇ– will take –ḍ– as the past tense marker.

ex : ಕಾಣು + ಡ್ + ಎ = ಕಂಡೆ

kānu + ḍ + e = kaṇḍe

The verb koḷḷu also takes–ḍ– past tense marker. When –ḍ– is added koḷḷu changes into koṇ– and to past tense marker

eg : ಕೊಳ್ಳು → ಕೊಣ್ /–ಡ್

kollu → koṇ /–ḍ

ಕೊಣ್ + ಡ್ + ಎ = ಕೊಂಡೆ

koṇ + ḍ + e = koṇḍe

koḷḷu as an auxillary verb is used in the construction of compound verb.

LESSON 34

ABOUT NEW RENTED HOUSE

DIALOGUE :

ಸುರೇಶ್—ಏನು ಗಿರೀಶ್, ಈಗೊಂದು ಸ್ವಲ್ಪ ದಿನದಿಂದ ನೀವು ಈ ಕಡೆ ಕಾಣಿಸ್ತಾ ಇದೀರಿ. ಏನು ಸಮಾಚಾರ ?	Hallo Girish, How is that you have been noticed in this area recently ? What is the news ?
ಗಿರೀಶ್—ನಾನೀಗ ಇರೋದು ಇಲ್ಲೇ ಈ ಮೂರನೇ ಮನೇಲಿ.	I am staying in this area only. In the third house.

ಸುರೇಶ್—ಆ ಮನೆ ಯಾಕೆ ಬಿಟ್ಟಿರಿ ?
ಚೆನ್ನಾಗಿಯೇ ಇತ್ತಲ್ಲಾ.

Why did you leave that house
That was also good.

ಗಿರೀಶ್—ಆ ಮನೆಗೆ ಮನೆಯ ಯಜ
ಮಾನರೇ ಬಂದರು. ಅದಕ್ಕೇ
ಬಿಟ್ಟೆ.

The owner himself moved into the house. That is why I left ?

ಸುರೇಶ್—ಈ ಮನೆಗೆ ಬಾಡಿಗೆ ಎಷ್ಟು
ಕೊಡ್ತಾ ಇದೀರಿ ?

How much rent do you pay for this house ?

ಗಿರೀಶ್—ಇದಕ್ಕೆ ಇನ್ನೂರೈವತ್ತು ರೂ
ಪಾಯಿ ಕೊಡ್ತಾ ಇದೀನಿ.

I am paying two hundreden fifty rupees for this house (as rent)

ಸುರೇಶ್—ಅಡ್ವಾನ್ಸ್ ಎಷ್ಟು ಕೊಟ್ಟಿರಿ ?

How much advance did you pay ?

ಗಿರೀಶ್—ಅಡ್ವಾನ್ಸ್ ಒಂದು ಸಾವಿರ
ರೂಪಾಯಿ ಕೊಟ್ಟೆ.

I paid one thousand rupees as advance.

ಸುರೇಶ್—ಏನು ! ಮನೆ ತುಂಬಾ
ದೊಡ್ಡದಾ ?

What ! Is it a very big house ?

ಗಿರೀಶ್—ಮನೆಯೇನೊ ತುಂಬಾ ದೊಡ್ಡದೆ.
ಹೊಸ ಮನೆ. ಬಹಳ ಚೆನ್ನಾಗಿದೆ.
ಒಂದು ವಾರದ ಹಿಂದೆ ಗೃಹಪ್ರವೇಶ
ಆಯ್ತು.

It is indeed a very big house. It is a new house. A very nice house. Just last week the house warming ceremony was performed.

ಸುರೇಶ್—ಒಂದು ವಾರದ ಹಿಂದೆ ಗೃಹ
ಪ್ರವೇಶ ಆಯ್ತು ಅಂತೀರಿ. ಆಗಲೆ

You say that the house warming ceremony was performed one

ಮನೆ ಮುಂದೆ ತೆಂಗಿನ ಗಿಡ ಎಲ್ಲಾ ಇದೆ.	week back, But there are already coconut plants in the front of the house.
ಗಿರೀಶ್—ಗೃಹಪ್ರವೇಶದ ದಿವಸ ಮನೆ ಯಜಮಾನರೇ ಒಂದೆರಡು ತೆಂಗಿನ ಗಿಡಾನೂ ನೆಟ್ಟರು.	On the day of the house warming ceremony the owner himself planted some coconut plants.
ಸುರೇಶ್—ಏನಿದು ಕೈಯಲ್ಲಿ ಬ್ಯಾಂಡೇಜ್?	What is this bandage on your hand ?
ಗಿರೀಶ್—ಹೊಸ ಮನೇಲಿ ಹಾಲು ಉಕ್ಕಿಸ ಬೇಕಲ್ಲ. ಆಗ ಸ್ಟೌನಲ್ಲಿ ಕೈ ಸುಟ್ಟಿತು.	We have to boil milk in the new house. My hand got burnt by the stove.
ಸುರೇಶ್—ನಮ್ಮ ಮನೆ ಇಲ್ಲಿಗೆ ತುಂಬಾ ಹತ್ತಿರ. ಒಂದು ಸಲ ಬನ್ನಿ.	My house is very near here. Please come sometimes.
ಗಿರೀಶ್—ಆಗಲಿ ಬರ್ತೀನಿ.	All right, I will come.

DRILLS

I Build up Drill :

Model : ಬಿಟ್ಟ

ಕಲಿಯೋದು ಬಿಟ್ಟ

ಚಿಕ್ಕಮ್ಮನ ಮಗ ತಮಿಳು ಕಲಿಯೋದು ಬಿಟ್ಟ

ನಮ್ಮ ಚಿಕ್ಕಮ್ಮನ ಮಗ ತಮಿಳು ಕಲಿಯೋದು ಬಿಟ್ಟ.

Build up the following making the changes wherever necessary :

1) ಕೊಟ್ಟಿ
2) ಇಟ್ಟಳು
3) ಸುಟ್ಟ
4) ಹೊರಟಿತು.

II Transformation Drill :

Model : T : ನಮ್ಮ ತಂದೆ ನನಗೆ ನೂರು ರೂಪಾಯಿ ಕೊಡ್ತಾರೆ.

S : ನಮ್ಮ ತಂದೆ ನನಗೆ ನೂರು ರೂಪಾಯಿ ಕೊಟ್ಟರ

Transform :

1) ಅವಳು ಹೊಸ ಸೀರೆ ಉಡುತ್ತಾಳೆ.
2) ನೀವು ಎಷ್ಟು ಗಂಟೆಗೆ ಹೊರಡುತ್ತೀರಿ ?
3) ನೀನು ಯಾಕೆ ತೆಂಗಿನ ಗಿಡ ನೆಡುತ್ತೀಯೆ ?
4) ಹಣ್ಣು ಕೆಡುತ್ತದೆ.

III Substitution Drill :

1) ನಮ್ಮ ತಂದೆ ಮನೆ ಬಾಡಿಗೆಗೆ ಕೊಟ್ಟರು.

ನೀವು

....

2) ಅವನು ಮೇಜಿನ ಮೇಲೆ ಪುಸ್ತಕ ಇಟ್ಟ.

ನೀನು

....

3) ಅವರು ಪ್ರತಿಮೆ ಸುಟ್ಟರು.

ನಾನು

....

4) ಅವನು ಪುಸ್ತಕ ಮೇಜಿನ ಮೇಲೆ ಇಡ್ತಾನೆ.
ಅವರು

....

IV Response Drill :

1) ನೀವು ಹಾಸ್ಟೆಲಿಗೆ ಅಡ್ವಾನ್ಸ್ ಎಷ್ಟು ಕೊಟ್ಟ್ರಿ ?
2) ನೀವು ನಿಮ್ಮ ಮನೆ ಮುಂದೆ ಎಂಥ ಗಿಡ ನೆಟ್ಟ್ರಿ ?
3) ಈ ತಿಂಗಳು ಹಾಸ್ಟೆಲಿಗೆ ಫೀ ಎಷ್ಟು ಕೊಟ್ಟ್ರಿ ?

EXERCISES

I Fill in the blanks using the correct past tense forms of the verbs given in the brackets :

1) ರವಿ ಪಟಾಕಿ .... (ಸುಡು)
2) ಅವಳು ಮನೆಯಿಂದ ನಾಲ್ಕು ಗಂಟೆಗೆ .... (ಹೊರಡು)
3) ನೀವು ನನ್ನ ಪೆನ್ನು ಎಲ್ಲಿ ....? (ಇಡು)
4) ನಾವು ಮಾವಿನ ಗಿಡ .... (ನೆಡು)
5) ನೀನು ಏಕೆ ಈ ಕೆಂಪು ಸೀರೆ ....? (ಉಡು)
6) ನಿನ್ನ ಗಡಿಯಾರ ....? (ಕೆಡು)

II Conjugate the following verbs in past tense as directed :

1) ಉಡು (II and III persons)
2) ತೊಡು (I person)
3) ಸುಡು (III person neuter)
4) ಬಿಡು (I and II person)

III Change the following sentences into their present tense forms.

1) ಶಾರದೆಯು ಸ್ಕೂಲು ಬಿಟ್ಟಿತು.
2) ಕಮಲ ಹೊಸ ಸೀರೆ ಉಟ್ಟಳು.
3) ಬಸ್ಸು ನಾಲ್ಕು ಗಂಟೆಗೆ ಹೊರಟಿತು.
4) ದಾರಿಯಲ್ಲಿ ಬಸ್ಸು ಕೆಟ್ಟಿತು.
5) ಕಂಡಕ್ಟರ್ ದುಡ್ಡು ವಾಪಸ್ ಕೊಟ್ಟ.
6) ನಾವು ದುಡ್ಡು ಪರ್ಸಲ್ಲಿ ಇಟ್ಟೆವು.

IV Answer the following questions :

1) ಗಿರೀಶ್ ಮನೆ ಯಾಕೆ ಬಿಟ್ಟರು ?
2) ಗಿರೀಶ್ ಹೊಸ ಮನೆಗೆ ಎಷ್ಟು ಮುಂಗಡ ಹಣ ಕೊಟ್ಟರು ?
3) ಮನೆಯ ಮುಂದೆ ತೆಂಗಿನ ಗಿಡ ಯಾರು ನೆಟ್ಟರು ?

VOCABULARY :

ಉಕ್ಕಿಸು—to boil

ನೆಡು—to plant

ಯಜಮಾನ—owner, master

ಸುಡು—to burn

Supplementary Vocabulary :

ಇಡು—to keep. to put

ಉಡು—to wrap, to wear saree or dhoti

ಕೆಡು—to get spoiled

ತೊಡು—to wear male garment

ಪಟಾಕಿ—crackers.

GRAMMAR NOTES :

Past tense marker –ṭ– is introduced in this lesson. All verbs which have (C) VC syllable pattern where the last C stands for –ḍ will take –ṭ– as the past tense marker.

Eg. ಕೊಡ್ (ಉ) + ಟ್ + ಎ = ಕೊಟ್ಟೆ
kod̤ (u) + ṭ + e = koṭṭe
ಇಡ್ (ಉ) + ಟ್ + ಎ = ಇಟ್ಟೆ
iḍ (u) + ṭ + e = iṭṭe

Note that when the past tense marker –ṭ– is added the last consonant –ḍ is assimilated with –ṭ– to give –ṭṭ–.

ಅಲ್ಲೆ is the spoken form of ಅಲ್ಲಿ and should not be confused with the negation ಅಲ್ಲ.

UNIT 9

Review
LESSON 9

ENQUIRING ABOUT BHASKARAN'S PLACE

DIALOGUE:

ರಾಜಣ್ಣ—ಊರಿಂದ ಯಾವತ್ತು ಬಂದಿರಿ ಭಾಸ್ಕರನ್ ?

ಭಾಸ್ಕರನ್—ಊರಿಂದ ನಿನ್ನೆ ಸಾಯಂಕಾಲ ಬಂದೆ ರಾಜಣ್ಣ.

ರಾಜಣ್ಣ—ನಿನ್ನೆ ಎಷ್ಟು ಹೊತ್ತಿಗೆ ಬಂದಿರಿ ?

ಭಾಸ್ಕರನ್—ನಿನ್ನೆ ರಾತ್ರಿ ಒಂಭತ್ತೂವರೆ ಗಂಟೆಗೆ ಬಂದೆ.

ರಾಜಣ್ಣ—ಹೇಗೆ ಬಂದಿರಿ? ಬಸ್ಸಿನಲ್ಲಿ ಬಂದಿರಾ?

ಭಾಸ್ಕರನ್—ಹೌದು.

ರಾಜಣ್ಣ—ಯಾಕೆ ಇಷ್ಟು ಬೇಗ ಬಂದಿರಿ? ಇನ್ನೂ ಒಂದು ವಾರ ರಜಾ ಇದೆಯಲ್ಲಾ?

ಭಾಸ್ಕರನ್—ಇನ್ನು ಒಂದು ವಾರ ರಜಾನೇನೂ ಇದೆ. ಆ ರಜದಲ್ಲಿ ಹಳೇಬೀಡು, ಬೇಲೂರು, ಜೋಗ್ ಜಲಪಾತ ನೋಡೋಣ ಅಂತ ಬಂದೆ.

ರಾಜಣ್ಣ—ಓಹೋ, ಹಾಗಾದರೆ ಟೂರ್ ಹೋಗ್ತೀರಾ? ಯಾವತ್ತು ಹೋಗಬೇಕು ಅಂತ ಇದೀರಿ.

ಭಾಸ್ಕರನ್—ನಾಳೆ ಸಾಯಂಕಾಲ ಹೊರಡಬೇಕೊಂತ ಇದೀನಿ.

ರಾಜಣ್ಣ—ಭಾಸ್ಕರನ್ ನಿಮ್ಮ ಊರಿನಲ್ಲಿ ಓಣಂ ಹಬ್ಬ ಹೇಗೆ ಇತ್ತು? ಮೈಸೂರು ಸಿಲ್ಕ್ ಸೀರೆಯನ್ನು ನಿಮ್ಮ ಮನೆಯವರಿಗೆ ಕೊಟ್ಟಿರಾ?

ಭಾಸ್ಕರನ್—ಹಬ್ಬ ತುಂಬಾ ಚೆನ್ನಾಗಿತ್ತು. ಸಿಲ್ಕ್ ಸೀರೆಯನ್ನು ಕೊಟ್ಟೆ. ಅದನ್ನು ಅವರು ತುಂಬಾ ಇಷ್ಟಪಟ್ಟರು. ರಾಜಣ್ಣ, ನಿಮ್ಮ ಮಕ್ಕಳಿಗೆ ಯಕ್ಷಗಾನದ ಬೊಂಬೆ ತುಂಬಾ ಇಷ್ಟ ಆಗಬಹುದು ಅಲ್ಲವಾ?

ರಾಜಣ್ಣ—ಮಕ್ಕಳಿಗೆ ಎಂಥಾ ಬೊಂಬೇನೂ ಇಷ್ಟ ಆಗುತ್ತೆ.

ಭಾಸ್ಕರನ್—ಒಂದು ಬೊಂಬೆ ರೂಮಿನಲ್ಲಿ ಇದೆ. ಆಮೇಲೆ ಕೊಡ್ತೀನಿ.

ರಾಜಣ್ಣ—ಅದನ್ನು ಯಾಕೆ ತರುವುದಕ್ಕೆ ಹೋದಿರಿ?

ಭಾಸ್ಕರನ್—ನಮ್ಮ ಊರಿನ ಎಂಪೋರಿಯಂನಲ್ಲಿ ಆ ಬೊಂಬೆ ನನ್ನ ಕಣ್ಣಿಗೆ ಬಿತ್ತು. ಹುಡುಗರಿಗೆ ಕೊಡೋಣಾಂತ ತಂದೆ.

ರಾಜಣ್ಣ—ತುಂಬಾ ಥ್ಯಾಂಕ್ಸ್. ಭಾಸ್ಕರನ್ ನಿಮ್ಮ ಕ್ಲಾಸ್‌ಮೇಟ್ ನರಸಿಂಹರಾವ್ ಸಿಕ್ಕರಾ? ಅವರು ಹಾಸ್ಟೆಲಿನಲ್ಲೇ ಇದಾರೆ.

ಭಾಸ್ಕರನ್—ಹೌದು ಇವತ್ತು ಬೆಳಿಗ್ಗೆ ಸಿಕ್ಕರು.

ರಾಜಣ್ಣ—ನನಗೆ ಮೊನ್ನೆ ಸಿಟಿಯಲ್ಲಿ ಭೇಟಿಯಾದರು. ನಾಳೆ ಎಷ್ಟು ಗಂಟೆಗೆ ಹೊರಡ್ತೀರಿ ಭಾಸ್ಕರನ್ ?

ಭಾಸ್ಕರನ್—ನನಗೆ ಹೇಗೆ ಹೋಗಬೇಕು ಅಂತ ಗೊತ್ತಿಲ್ಲ. ನೀವು ಸ್ವಲ್ಪ ಅದರ ಬಗ್ಗೆ ಹೇಳಿ.

ರಾಜಣ್ಣ—ಆಗಲಿ. ನಾಳೆ ಬೆಳಿಗ್ಗೆ ನಿಮ್ಮ ಹಾಸ್ಟೆಲಿಗೆ ಬರ್ತೀನಿ. ಆಗ ಎಲ್ಲಾ ಹೇಳ್ತೀನಿ.

ಭಾಸ್ಕರನ್—ಸರಿ. ನಾಳೆ ಬೆಳಿಗ್ಗೆ ಬನ್ನಿ. ನಿಮಗೆ ಕಾಯ್ತಾ ಇರ್ತೀನಿ.

TEST PAPER

I Change the following sentences into their respective past tense forms:

1) ನನಗೆ ನಾಳೆ ರಮೇಶ ಸಿಕ್ಕುತ್ತಾನೆ.
2) ಲೀಲಾ ಪುಸ್ತಕ ತರುವುದನ್ನು ಮರೆಯುತ್ತಾಳೆ.
3) ಮಗು ದಾರಿಯಲ್ಲಿ ಬೀಳುತ್ತದೆ.
4) ರಾಜು ನನಗೆ ನೂರು ರೂಪಾಯಿ ಕೊಡುತ್ತಾರೆ.
5) ನೀವು ಇವತ್ತು ಆಟದಲ್ಲಿ ಸೋಲುತ್ತೀರಾ ?
6) ರಮೇಶ ರಮಾನನ್ನು ಕರೆಯುತ್ತಾನೆ.
7) ನನ್ನ ಮಗ ಕಾಲೇಜು ಬಿಡುತ್ತಾನೆ.
8) ಅವಳು ಜೋರಾಗಿ ನಗುತ್ತಾಳೆ.
9) ಅವರು ಬೆಳಿಗ್ಗೆ ಬೇಗ ಏಳುತ್ತಾರೆ.
10) ನಮ್ಮ ಮನೆಯ ಮುಂದೆ ಗಿಡ ನೆಡುತ್ತೇವೆ.

II Substitute the given words and write the sentences accordingly :

1) ಮಂಗಳೆ ನನ್ನ ಹತ್ತು ರೂಪಾಯಿ ಕೊಟ್ಟಳು.

ರಾಜು

....

2) ಅವರು ಒಳ್ಳೆಯ ಕಥೆ ಬರೆದರು.

ಅವಳು

....

3) ನೀನು ಎಲ್ಲಿ ತಮಿಳು ಕಲಿತೆ ?

ನೀವು

....

4) ನಾನು ಹಾರಿಯಲ್ಲಿ ಬಿದ್ದೆ.

ನಾವು

....

5) ನಾಯಿಗಳು ಮನೆಯ ಒಳಗೆ ಬಂದವು.

ಬೆಕ್ಕು

....

6) ನಾನು ಅವನನ್ನು ಕೊಂದೆ.

ಕೊಂದೆವು.

....

7) ತರಗತಿಯಲ್ಲಿ ವಿದ್ಯಾರ್ಥಿಗಳು ನಕ್ಕರು.

ರಾಮು

....

III Use the following adverbs in your own sentences :

1) ಚೆನ್ನಾಗಿ

2) ಜೋರಾಗಿ

3) ನಿಧಾನವಾಗಿ

IV Arrange the words in the following sentences so as to make the correct sentences :

1) ತಿಂದರು ಹೋಟೆಲಿನಲ್ಲಿ ಅವರು ತಿಂಡಿ.

2) ಮನೆ ಹಿಂದಿನ ಬಿಟ್ಟೆ ನಾನು.

3) ನಕ್ಕರು ಹೊಟ್ಟೆ ಹುಣ್ಣಾಗಬೇಕು ಹಾಗೆ ಎಲ್ಲಾ.

V Conjugate the following verbs in all persons :

1) ತರು

2) ಬೀಳು

3) ಕೇಳು

4) ನಗು

5) ಸೋಲು

VI Change the following sentences into their respective Present tense forms

1) ಅವರು ರಾಮಪ್ಪನ ಮನೆ ಕಟ್ಟಿದರು.

2) ಬರ್ಗರ್ಸ್ ಸ್ಯಾಂಡ್‌ವಿಚಸ್ ಹೋಟೆಲಿನಲ್ಲಿ ಸಿಕ್ಕವು.

3) ಅಧ್ಯಾಪಕರು ನಮ್ಮನ್ನು ಬೈದರು.

4) ನಾವು ಈ ವರ್ಷ ತುಂಬಾ ತರಕಾರಿ ಬೆಳೆದೆವು.

5) ನಮ್ಮ ಮಗು ಆ ಹೂ ಕಿತ್ತಿತು.

VII Answer the following Questions :

1) ಭಾಸ್ಕರನ್ ಊರಿಂದ ಹೇಗೆ ಬಂದರು ?
2) ಅವರು ಯಾಕೆ ಅಷ್ಟು ಬೇಗ ಬಂದರು ?
3) ಮೈಸೂರು ಸಿಲ್ಕ್ ಸೀರೆಯನ್ನು ಯಾರು ಇಷ್ಟಪಟ್ಟರು ?
4) ಭಾಸ್ಕರನ್ ಊರಿಂದ ಏನು ತಂದರು ?

Vocabulary—

ಇಷ್ಟಪಡು—to like

ಕಣ್ಣು—eye

ಕಣ್ಣಿಗೆ ಬೀಳು—to catch ones eye

ಗೊಂಬೆ—doll

ಭೇಟಿ—meeting

ಯಕ್ಷಗಾನ—'Varnacular drama'

UNIT 10

LESSON 35

SUNDAY PROGRAMME

DIALOGUE :

ಅರವಿಂದ—ನಿನ್ನೆ ಭಾನುವಾರ. ರಜಾ ಇತ್ತು. ನೀವು ಏನು ಮಾಡಿದಿರಿ ?	Yesterday was Sunday. It was holiday. What did you do ?
ಅವಿನಾಶ—ನಿನ್ನೆಯೆಲ್ಲಾ ನಾವು ಮೈಸೂರು, ಶ್ರೀರಂಗಪಟ್ಟಣ ಮತ್ತು ಬೃಂದಾವನ ನೋಡಿದೆವು.	Yesterday we saw Mysore, Srirangapattana and Brindavan
ಅರವಿಂದ—ಇದೇ ಮೊದಲ ಸಲನಾ ನೀವು ನೋಡ್ತಾ ಇರೋದು ?	Is it the first time that you ar seeing them ?

ಶ್ರೀನಿವಾಸ—ಹೌದು ಇದೇ ಮೊದಲನೆ ಸಲ.	Yes. This is the first time.
ಅರವಿಂದ—ಹೇಗೆ ಹೋದಿರಿ ? ಪ್ರೈವೇಟ್ ಬಸ್ಸಿನಲ್ಲಿ ಹೋದಿರೋ ಇಲ್ಲ ಟ್ಯಾಕ್ಸೀಲಿ ಹೋದಿರೋ ?	How did you go? Did you go by Private bus or by Taxi?
ಶ್ರೀನಿವಾಸ—ಟ್ಯಾಕ್ಸೀಲಿ. ನಾವು ಆರು ಜನ ಇದ್ವಿ. ಅದ್ದರಿಂದ ಒಂದು ಟ್ಯಾಕ್ಸೀನ ಗೊತ್ತುಮಾಡಿದ್ವಿ.	By Taxi. We were six in number. So we hired a taxi.
ಅರವಿಂದ—ಹಾಸ್ಟೆಲಿನಿಂದ ಎಷ್ಟು ಗಂಟೆಗೆ ಹೊರಟಿರಿ ?	At what time did you start from the hostel?
ಶ್ರೀನಿವಾಸ—ಹಾಸ್ಟೆಲಿನಿಂದ 12 ಗಂಟೆಗೆ ಹೊರಟೆವು.	We started at 12 O'clock.
ಅರವಿಂದ—ಹಾಗಾದರೆ ಬೆಳಿಗ್ಗೆ ಎಲ್ಲಾ ಹಾಸ್ಟೆಲ್ನಲ್ಲೇ ಇದ್ದಿರಾ ?	So you were in the hostel all the morning?
ಶ್ರೀನಿವಾಸ—ಹೌದು. ಬೆಳಿಗ್ಗೆ ಎಂಟು ಗಂಟೆ ವರೆಗೆ ವಾಲೀ ಬಾಲ್ ಆಡಿದ್ವಿ. ಆಮೇಲೆ ಊಟ ಮಾಡಿದ್ವಿ. ನಾನು ಹನ್ನೆರಡು ಗಂಟೆವರೆಗೆ ಮಲಗಿದ್ದೆ. ಆಮೇಲೆ ಹೊರಟ್ವಿ.	Yes. We played volley ball till 8 O'clock in the morning. Afterwards we took meals. I slept until twelve O'clock. Then we started.
ಅರವಿಂದ—ಮೈಸೂರಿನಲ್ಲಿ ಯಾವ ಯಾವ ಸ್ಥಳಗಳನ್ನು ನೋಡಿದಿರಿ ?	What places did you see in Mysore?
ಶ್ರೀನಿವಾಸ—ಜಗನ್ಮೋಹನ ಚಿತ್ರಶಾಲೆ, ಮೃಗಾಲಯ, ಸಿಲ್ಕ್ ಫ್ಯಾಕ್ಟರಿ, ಗಂಧದ ಕಾರ್ಖಾನೆ ನೋಡಿದೆವು.	We saw the Jaganmohan art gallery, the Zoo, the Silk factory and the Sandalwood factory.
ಅರವಿಂದ—ಜಗನ್ಮೋಹನ ಚಿತ್ರಶಾಲೆ ಚೆನ್ನಾಗಿದೆ ಅಲ್ವಾ ?	The Jaganmohan art gallery is good, isn't it?

ಅವಿನಾಶ—ಹೌದು. ನನಗೆ ತುಂಬಾ ಹಿಡಿಸಿತು. ರವಿವರ್ಮನ ಚಿತ್ರಗಳು, ಗಡಿಯಾರ ಮತ್ತು ಸೈನಿಕರು, ಅವೆಲ್ಲಕ್ಕಿಂತ ಆ ದೀಪದ ಹೆಂಗಸು ನನಗೆ ತುಂಬಾ ಹಿಡಿಸಿದವು.	Yes. I liked it very much. I liked Ravi Varmas portraits, the clock and soldiers, but better than all those, that lady with the lamp.
ಅರವಿಂದ—ಶ್ರೀರಂಗಪಟ್ಟಣದಲ್ಲಿ ಏನೇನು ನೋಡಿದಿರಿ ?	What did you see in Sriranga-pattana ?
ಅವಿನಾಶ—ಅಲ್ಲಿ ಶ್ರೀರಂಗನಾಥನ ದೇವಸ್ಥಾನ, ದರಿಯಾ ದೌಲತ್, ಸಂಗಮ್ ನೋಡಿದೆವು.	We saw Sriranganatha's temple Dariya daulath and Sangam.
ಅರವಿಂದ—ಶ್ರೀರಂಗನಾಥನ ಪ್ರತಿಮೆ ಹೇಗಿದೆ ?	How is Lord Sriranganatha's Idol ?
ಅವಿನಾಶ—ಪ್ರತಿಮೆ ತುಂಬಾ ಚೆನ್ನಾಗಿದೆ.	The image is very beautiful.
ಅರವಿಂದ—ಅಲ್ಲಿ ಪೂಜೆ ಮಾಡಿಸಿದಿರಾ ?	Did you perform puja there ?
ಅವಿನಾಶ—ನೋಡಿ, ನನಗೆ ಅದರಲ್ಲಿ ಎಲ್ಲಾ ನಂಬಿಕೆ ಇಲ್ಲ. ಆದರೆ ನನ್ನ ಸ್ನೇಹಿತರು ಬಿಡಬೇಕಲ್ಲ. ಅವರೇ ದುಡ್ಡು ಕಟ್ಟಿದರು. ಅವರ ಬಲವಂತಕ್ಕೆ ಪೂಜೆ ಮಾಡಿಸಿದೆ.	Look, I don't have any faith in all that. But, my friends didn't leave me alone. They themselves paid the money. I performed the puuja because of their insistence.
ಅರವಿಂದ—ಅಲ್ಲಿಂದ ಬೃಂದಾವನಕ್ಕೆ ಹೋದಿರಾ ?	Did you go from there to Brindavan ?
ಅವಿನಾಶ—ಹೌದು. ಬೃಂದಾವನ ತುಂಬಾ ಚೆನ್ನಾಗಿದೆ. ಇದೇ ಮೊದಲು	Yes. Brindavan is fantastic. This is the first time that I

ನಾನು ಅಂಥ ಸುಂದರವಾದ ಸ್ಥಳ ನೋಡ್ತಾ ಇರೋದು. ಅದನ್ನು ಯಾರು ಕಟ್ಟಿಸಿದರು ?	have seen such a beautiful place. Who designed it ?
ಅರವಿಂದ—ಅದನ್ನು ನಾಲ್ವಡಿ ಕೃಷ್ಣರಾಜ ಒಡೆಯರು ಕಟ್ಟಿಸಿದರು. ಸರ್. ಎಂ. ವಿಶ್ವೇಶ್ವರಯ್ಯನವರು ಯೋಜನೆ ಹಾಕಿದರು.	Sri Naalvadi Krishnarajawadeyar built it. Sir M. Visweswaraiah planned it.
ಅವಿನಾಶ—ಆ ಬಣ್ಣ ಬಣ್ಣದ ಕಾರಂಜಿಗಳು, ವಿದ್ಯುದ್ದೀಪದ ವೈಭವ, ನೀರಿನ ರಭಸ ಒಂದೊಂದೂ ಅದ್ಭುತವಾಗಿದೆ. ಈಗಂತೂ ನೀರು ಭರ್ತಿ ಇದೆ. ಸಾಯಂಕಾಲದ ಹೊತ್ತು ಅದನ್ನು ನೋಡಬೇಕು.	Those colourful fountains, the illumination, the water current each and everything is marvelous. Now the dam is full of water. One should see it in the evening.
ಅರವಿಂದ—ಎಷ್ಟು ಗಂಟೆವರೆಗೆ ಅಲ್ಲಿದ್ದಿರಿ ?	How long were you there ?
ಅವಿನಾಶ—ಎಂಟೂಮುಕ್ಕಾಲು ತನಕ ಅಲ್ಲೆಲ್ಲಾ ತಿರುಗಿದೆವು. ನನ್ನ ಸ್ನೇಹಿತರು ಹಾಡಿದರು. ಇಬ್ಬರು ಅದಕ್ಕೆ ತಕ್ಕಂತೆ ಕುಣಿದರು.	Till 8–45 p.m. we went around. My friends sang songs. Two danced in time to the music.
ಅರವಿಂದ—ಅಂಥ ಜಾಗದಲ್ಲಿ ಯಾರಿಗೆ ತಾನೆ ಕುಣೀಬೇಕು ಅಂತ ಅನ್ನಿಸಲ್ಲ ಹೇಳಿ.	Tell me, who does not feel like dancing in such a place.
ಅವಿನಾಶ—ನೀವು ಹೇಳೋದು ನಿಜ. ಬೃಂದಾವನ ಹೆಸರಿಗೆ ತಕ್ಕ ಹಾಗೆ ಇದೆ.	You are right. The name Brindavan suits it well.
ಅರವಿಂದ—ಅಂತೂ ರಜಾದಿನವನ್ನು ತುಂಬಾ ಚೆನ್ನಾಗಿ ಕಳೆದಿರಿ.!	So, you spent a nice holiday !

ಅಸಿನಾಥ—ರಜಾದಿನಾನೇನೋ ಚೆನ್ನಾಗಿಯೇ ಕಳೆದೆ. ಆದರೆ ಸಾಕಷ್ಟು ಹಣಾನೂ ಕೈಬಿಟ್ಟು.	Of course, I spent a nice holiday. At the same time I spent quite a lot of money too.

DRILLS :

I Transformation Drill :

a) Model : T ; ನಾನು ಕೆಲಸ ಮಾಡ್ತೀನಿ.

S : ನಾನು ಕೆಲಸ ಮಾಡಿದೆ.

Transform :

1. ನೀನು ರಮಾನನ್ನ ಕೂಗ್ತೀಯೆ.
2. ಮಕ್ಕಳು ಜೋರಾಗಿ ಓಡ್ತಾರೆ.
3. ನೀವು ಹಣ್ಣು ಮಾರ್ತೀರಿ.
4. ನರಿ ದ್ರಾಕ್ಷಿ ನೋಡುತ್ತೆ.

b) Model : T : ನಾನು ಬೆರಳು ಕಚ್ಚುತ್ತೇನೆ.

S : ನಾನು ಬೆರಳು ಕಚ್ಚಿದೆ.

Transform :

1. ಅವನು ಪರೀಕ್ಷೆಗೆ ದುಡ್ಡು ಕಟ್ಟುತ್ತಾನೆ.
2. ಅವಳು ಭತ್ತ ಕುಟ್ಟುತ್ತಾಳೆ.
3. ನನ್ನ ತಂದೆ ಬಾಗಿಲು ತಟ್ಟುತ್ತಾರೆ.
4. ನಾನು ಬಾಗಿಲು ಮುಚ್ಚುತ್ತೇನೆ.

c) Model : T : ನಾನು ಮನೆಯನ್ನು ಕಟ್ಟಿಸುತ್ತೇನೆ.

S : ನಾನು ಮನೆಯನ್ನು ಕಟ್ಟಿಸಿದೆ.

Transform :

1. ವಿಶ್ವೇಶ್ವರಯ್ಯನವರು ಕನ್ನಂಬಾಡಿ ಅಣೆಕಟ್ಟು ಕಟ್ಟಿಸುತ್ತಾರೆ
2. ಅವಳು ಹಸು ಓಡಿಸುತ್ತಾಳೆ.
3. ನಾವು ಒಂದು ಪೆನ್ನು ತರಿಸುತ್ತೇವೆ.
4. ನೀನು ಪತ್ರ ಬರೆಸುತ್ತೀಯೆ.

d) Model : T : ನಾನು ಮಲಗ್ತೀನಿ.

S : ನಾನು ಮಲಗಿದೆ.

Transform :

1. ಅವನು ಊರೆಲ್ಲಾ ತಿರುಗುತ್ತಾನೆ.
2. ಕತ್ತೆ ಅರಚುತ್ತದೆ.
3. ಮಂಜು ಕರಗುತ್ತದೆ.
4. ದುಷ್ಯಂತ, ಶಕುಂತಲೆ ಅಗಲುತ್ತಾರೆ.

II Build up Drill :

Model : ಓದಿದರು.

ಪಾಠ ಓದಿದರು.

ನಾಲ್ಕನೇ ಪಾಠ ಓದಿದರು.

ಕನ್ನಡ ನಾಲ್ಕನೇ ಪಾಠ ಓದಿದರು.

ಕ್ಲಾಸಿನಲ್ಲಿ ಕನ್ನಡ ನಾಲ್ಕನೇ ಪಾಠ ಓದಿದರು.

ಬೆಳಿಗ್ಗೆ ಕ್ಲಾಸಿನಲ್ಲಿ ಕನ್ನಡ ನಾಲ್ಕನೇ ಪಾಠ ಓದಿದರು.

ನಿನ್ನೆ ಬೆಳಿಗ್ಗೆ ಕ್ಲಾಸಿನಲ್ಲಿ ಕನ್ನಡ ನಾಲ್ಕನೇ ಪಾಠ ಓದಿದರು.

ವಿದ್ಯಾರ್ಥಿಗಳು ನಿನ್ನೆ ಬೆಳಿಗ್ಗೆ ಕ್ಲಾಸಿನಲ್ಲಿ ಕನ್ನಡ ನಾಲ್ಕನೇ ಪಾಠ ಓದಿದರು.

Build up the following making the necessary changes wherever necessary :

1. ಕಟ್ಟಿಸಿದ.
2. ಮುಚ್ಚಿದಳು.
3. ಓಡಿತು.

III Response Drill :

1) ನಿನ್ನೆ ನೀವು ಯಾವ ಪಾಠ ಓದಿದಿರಿ ?
2) ನಿಮ್ಮ ಸ್ನೇಹಿತರು ಎಷ್ಟು ಗಂಟೆಗೆ ಮಲಗಿದರು ?
3) ನಿನ್ನೆ ಲ್ಯಾಬ್‌ನಲ್ಲಿ ಏನುಮಾಡಿದಿರಿ ?
4) ನಿಮ್ಮ ಶರ್ಟ್ ಯಾವಾಗ ಹೊಲಿಸಿದಿರಿ ?

EXERCISES

I Fill in the blanks using the correct past tense forms of the verbs given in the brackets :

1) ಅವನು ಕಾಗದದ ಮೇಲೆ ....(ಗೀಚು)
2) ನೀವು ಯಾಕೆ ಆ ಪ್ರಶ್ನೆ .... ? (ಕೇಳು)
3) ಆ ಹುಡುಗ ನನ್ನನ್ನು ....(ಎಳೆ)
4) ರಮಾ ಮಗುವನ್ನು ....(ಆಡಿಸು)
5) ಲೀಲಾ ಮೇಜಿನ ಮೇಲೆ ಪುಸ್ತಕ ....(ಇಡು)
6) ನಿಮಗೆ ಆ ಚಿತ್ರ ....? (ಹಿಡಿಸು)
7) ನೀವು ಸುಮ್ಮನೆ ಯಾಕೆ ....? (ನಗು)
8) ಅವಳು ಅವರ ಕಾಲು ....(ಮುಟ್ಟು)
9) ಮಗು ತೊಟ್ಟಿಲಿನಲ್ಲಿ ....(ಮಲಗು)
10) ನಾವು ಕನ್ನಡ ಚೆನ್ನಾಗಿ ....(ಕಲಿ)

II Fill in the blanks using the Kannada equivalents of the English words given in the brackets :

1) ನನಗೆ ಅದರ ಅಳು ....**(heard)**
2) ಅವಳು ನನಗ ಬೊಂಬೆಯನ್ನು.........(showed)

3) ನಾನು ಪುಸ್ತಕ ....(closed)

4) ಅವನು ನನ್ನನ್ನು ....(touched)

5) ನಾವು ಜೋರಾಗಿ ....(screamed)

6) ಪ್ರಿನ್ಸಿಪಾಲ್ ನನ್ನನು ....(called)

7) ಅವರು ಬಾಗಿಲು ....(knocked)

8) ನೀನು ಕಾಡಿನಲ್ಲೆಲ್ಲಾ ....?(wandered)

III a) Change the following sentences into interrogative using interrogative marker.

1) ನೀನು ಕೆಲಸ ಮಾಡಿದೆ.

2) ರಾಮು ಸಿನಿಮಾ ನೋಡಿದ.

3) ವಿಶ್ವೇಶ್ವರಯ್ಯನವರು ಕನ್ನಂಬಾಡಿ ಅಣೆಕಟ್ಟನ್ನು ಕಟ್ಟಿಸಿದರು.

4) ರಮಾ ಪೂಜೆ ಮಾಡಿಸಿದಳು.

5) ನಾನು ಹಾಗಂತ ಹೇಳಿದೆ.

6) ಅದು ಜೋರಾಗಿ ಓಡಿತು.

b) Change the following sentences into their past tense forms :

1) ನೀವು ಎಲ್ಲಿ ಆಟ ಆಡ್ತೀರಿ ?

2) ಕೃಷ್ಣ ಯಾಕೆ ಅಷ್ಟು ಸಿಗರೇಟ್ ಸೇದುತ್ತಾರೆ ?

3) ನನಗೆ ಅವಳ ವೇಷ ಹಿಡಿಸುತ್ತದೆ.

4) ನಾನು ಕತೆ ಹೇಳ್ತೀನಿ, ನೀವು ಕೇಳ್ತೀರಿ.

5) ಅವರು ನನಗೆ ಪುಸ್ತಕ ಕೊಡುತ್ತಾರೆ.

IV Answer the following questions :

1) ಯಾರು ನಿನ್ನೆ ಮೈಸೂರು, ಬೃಂದಾವನ ಮತ್ತು ಶ್ರೀರಂಗಪಟ್ಟಣವನ್ನು ನೋಡಿದರು ?

2) ಅವಿನಾಶನಿಗೆ ಜಗನ್ಮೋಹನ ಚಿತ್ರಶಾಲೆಯಲ್ಲಿ ಏನೇನು ಹಿಡಿಸಿದವು?

3) ಕನ್ನಂಬಾಡಿ ಅಣೆಕಟ್ಟನ್ನು ಯಾರು ಕಟ್ಟಿಸಿದರು ?

4) ಬೃಂದಾವನ ಹೇಗಿದೆ ? ವರ್ಣಿಸಿ.

V Write fifteen sentences about an interesting place of your state.

VOCABULARY :

ಆಟ ಆಡು—to play

ಇಲ್ಲ—in the sense of 'or'

ಕಟ್ಟಿಸು—to build

ಕಳೆ—to spend, substitute

ಕುಣಿ—to dance

ಕಾರಂಜಿ—water fountain

ಗಡಿಯಾರ—clock

ಗಂಧದ ಕಾರ್ಖಾನೆ—sandal wood factory

ಗೊತ್ತು ಮಾಡು—to fix up, arrange

ಚಿತ್ರ—portrait, figure

ಚಿತ್ರಶಾಲೆ—art gallery

ತಿರುಗು—to wander

ದೀಪ—lamp

ದುಡ್ಡು ಕಟ್ಟು—pay money

ನಂಬಿಕೆ—faith, belief

ಬಲವಂತವಾಗಿ—due to compulsion

ಭರಿತ—full

ಯೋಜನೆ—plan

ಯೋಜನೆ ಮಾಡು—to plan

ರಭಸ—with force (with strength)

ವಿದ್ಯುದ್ದೀಪ—electric lamp

ಸಂಗಮ—confluence

ಸೈನಿಕರು—soldiers

ಹಿಡಿಸು—to like, subject in dative

Supplementary Vocabulary :

ಅಟ್ಟು—to drive away (animate)

ಅರಚು—to scream

ಆಟದ ಸಾಮಾನು—(doll), playing article

ಕಚ್ಚು—to bite

ಕತ್ತೆ—donkey

ಕನ್ನಂಬಾಡಿ—another name for K.R.S.

ಕರಗು—to melt

ಕಿರುಚು—to scream

ಕೊರಗು—to moan

ಗೀಚು—to scribble

ತಟ್ಟು—to knock

ತೂಗು—to swing

ತೇಗು—to belch

ತೊಟ್ಟಿಲು—craddle

ತೋಡು—to dig

ದ್ರಾಕ್ಷಿ—grapes

[illegible]—sound

ನರಿ—fox

ಬೆರಳು—finger

ಭತ್ತ—paddy

ಮಂಜು—fog, dew

ಮುಚ್ಚು—to close

ಮುಟ್ಟು—to touch

[illegible]

ಹಳ್ಳ—ditch

GRAMMAR NOTES :

–id– past tense marker is introduced in this lesson. This takes three categories of verbs.

1. (C) VC Type

eg : ಹೇಳ್ + ಇದ್ + ಎ = ಹೇಳಿದೆ

heeḷ + id + e = heeḷide

ಆಡ್ + ಇದ್ + ಎ = ಆಡಿದೆ

aaḍ + id + e = aaḍide.

'hoogu' and 'aagu' are two exceptions which are already covered under –d– past tense marker.

2. CVCC Type

eg : ಮುಚ್ + ಇದ್ + ಎ = ಮುಚ್ಚಿದೆ.

mucc + id + e = muccide'

3. Multi syllabic verbs :

The verbs which have more than two syllables will take –id– past tense marker. This takes all–isu type verbs.

Ex. ಮಲಗು + ಇದ್ + ಎ = ಮಲಗಿದೆ.
malagu + id + e = malagide

ಅಲಂಕರಿಸು + ಇದ್ + ಎ = ಅಲಂಕರಿಸಿದೆ.
alankarisu + id + e = alankariside.

ನಿದ್ರಿಸು + ಇದ್ + ಎ = ನಿದ್ರಿಸಿದೆ.
nidrisu + id + e = nidriside

The verbs which covered under d, t, ṭ, k and –ḍ– will not come under –id–past tense marker.

The following table gives the distribution of past tense marker

past tense marker	Verb root	Past tense form in I per sg.	Sentence
ದ	ಬರೆ	ಬರೆದೆ	ನಾನು ಪಾಠ ಬರೆದೆ
–d–	bare	barede	naanu paaṭha barede.
	ಬೀಳು	ಬಿದ್ದೆ	ನಾನು ಕೆಳಗೆ ಬಿದ್ದೆ
	biiḷu	bidde	naanu keḷage bidde
ತ	ಕಲಿ	ಕಲಿತೆ	ನಾನು ಮಗ್ಗಿ ಕಲಿತೆ
–t–	kaḷi	kalite	naanu maggi kalite
	ಕೀಳು	ಕಿತ್ತೆ	ನಾನು ಹೂವು ಕಿತ್ತೆ
	kiiḷu	kitte	naanu huuvu kitte

Past tense marker	Verb root	Past tense form in I per. Sg.	Sentence
ಕ	ನಗು	ನಕ್ಕೆ	ನಾನು ನಕ್ಕೆ
-k-	nagu	nakke	naanu nakke
ಟ	ಕೊಡು	ಕೊಟ್ಟೆ	ನಾನು ಪುಸ್ತಕ ಕೊಟ್ಟೆ
-ṭ-	kodu	koṭṭe	naanu pustaka koṭṭe
	ಇಡು	ಇಟ್ಟೆ	ನಾನು ಪುಸ್ತಕ ಮೇಜಿನ ಮೇಲೆ ಇಟ್ಟೆ
	iḍu	iṭṭe	naanu pustaka meejina meele iṭṭe
ಡ	ಕೊಳ್ಳು	ಕೊಂಡೆ	ನಾನು ಕಾರು ಕೊಂಡೆ
-ḍ-	koḷḷu	koṇḍe	naanu kaaru koṇḍe
	ಕಾಣು	ಕಂಡೆ	ನಾನು ಅವನನ್ನು ಕಂಡೆ
	kaaṇu	kaṇḍe	naanu avanannu kaṇḍe
ಇದ್	ಕೇಳು	ಕೇಳಿದೆ	ನಾನು ಒಂದು ಪ್ರಶ್ನೆ ಕೇಳಿದೆ
-id-	keeḷu	keelide	naanu ondu praśne keelide
	ಮುಚ್ಚು	ಮುಚ್ಚಿದೆ	ನಾನು ಕಿಟಕಿ ಮುಚ್ಚಿದೆ
	muccu	muccide	naanu kiṭaki muccide
	ಹೊಲೆಯಿಸು	ಹೊಲೆಯಿಸಿದೆ	ನಾನು ಶರ್ಟು ಹೊಲೆಯಿಸಿದೆ
	holeyisu	holeyiside	naanu śarṭu holeyiside.

LESSON 36

CONVERSATION BETWEEN FREINDS

DIALOGUE :

ನಿಶಾ—ನಿನ್ನೆ ನಿನಗೋಸ್ಕರ ಲೈಬ್ರರೀಲಿ ತುಂಬಾ ಹೊತ್ತು ಕಾದೆ. ನೀನು ಯಾಕೆ ಬರಲಿಲ್ಲ ?

Yesterday I waited long time for you in the library. Why didn't you come ?

ಉಷಾ—ಯಾಕೆಂದರೆ, ನಮ್ಮ ಮನೇಲಿ ನಿನ್ನೆ ಯಾರೂ ಇರಲಿಲ್ಲ. ಅದ್ರಿಂದ ಬರೋಕೆ ಆಗಲಿಲ್ಲ. ಹೋಗಲಿ, ಶುಭಮಂಗಳ ಹೇಗಿತ್ತು ಹೇಳು.

Because, yesterday nobody was there at home. So, I couldn't come. Tell me, how was 'Shubhamangala'

ನಿಶಾ—ನನ್ನ ಜೊತೆಗೆ ಯಾರೂ ಸಿಗಲಿಲ್ಲ. ಆದ್ದರಿಂದ ನಾನೂ ಸಿನಿಮಾಕ್ಕೆ ಹೋಗಲಿಲ್ಲ.	Nobody was there to accompany me. So I didn't go.
ಉಷಾ—ಸಿನಿಮಾ ಚೆನ್ನಾಗಿದೆ ಅಂತ ಪ್ರಜಾವಾಣಿಯಲ್ಲಿ ವಿಮರ್ಶೆ ಓದಿದೆ. ಇವತ್ತು ಹೋಗೋಣವಾ ?	I read review in Prajavani that movie is good. Shall we go today ?
ನಿಶಾ—ಯಾವಾಗ ? ಮ್ಯಾಟಿನಿಗೋ, ಮೊದಲನೇ ಆಟಕ್ಕೋ ?	When ? Whether for matinee or for first show ?
ಉಷಾ—ಮ್ಯಾಟಿನಿಗೇ ಹೋಗೋಣ. ಮೊದಲನೇ ಆಟಕ್ಕೆ ಟಿಕೆಟ್ ಸಿಗೋದು ಕಷ್ಟ.	Let us go for matinee. It is difficult to get ticket for first show.
ನಿಶಾ—ನಾನು ಮನೆಯಿಂದ ಬರ್ತಾ ಹಣಾನೇ ತರಲಿಲ್ಲ. ಆಗಲೇ ಒಂದು ಗಂಟೆ ಆಗ್ತಾ ಬಂತು. ಮ್ಯಾಟಿನಿಗೆ ಹೋಗೋದು ಹೇಗೆ ?	I didn't bring money while coming. It is already one O'clock how to go for matinee ?
ಉಷಾ—ಹಣ ನನ್ನ ಹತ್ತಿರ ಇದೆ. ಅದಕ್ಕೇನೂ ಯೋಚನೆ ಮಾಡಬೇಡ. ಬಾ ಹೋಗೋಣ.	I have money, Don't worry. Come let us go.
ನಿಶಾ—ಆಶಾ ಲೈಬ್ರರಿಯಲ್ಲಿ ಇರಬೇಕು. ಅವಳೇನಾದರೂ ಸಿನಿಮಾಕ್ಕೆ ಬರ್ತಾಳೋ ಏನೋ ಕೇಳೋಣ.	Asha must be in the library. Let us ask her whether she will also accompany us.
ಉಷಾ—ಲೈಬ್ರರಿ ಒಳಗೆ ಎಲ್ಲೂ ಕಾಣಲಿಲ್ಲ. ಅವಳು ಮೊದ್ಲೇನೇ ಬರೋಕೆ	No. She is not to be seen in the library. She didn't agree to

ಒಪ್ಪಲಿಲ್ಲ. ಇನ್ನು ಇವತ್ತು ಬರ್ತ್ತಾಳಾ ? ಅವಳೊಬ್ಬಳು 'ಪುಸ್ತಕದ ಹುಳು.'	come day before yesterday. Do you think that she will come today ? She is a 'book worm.'
ನಿತಾ—ಸರಿ ಬಿಡು. ನಾವು ಹೋಗೋಣ.	Then all right. Let us go.

DRILLS

I Build up Drill :

Model : ಹೇಳಲಿಲ್ಲ
ಹಾಡು ಹೇಳಲಿಲ್ಲ
ಸಭೆಯಲ್ಲಿ ಹಾಡು ಹೇಳಲಿಲ್ಲ
ಸಾಯಂಕಾಲದ ಸಭೆಯಲ್ಲಿ ಹಾಡು ಹೇಳಲಿಲ್ಲ
ನಿನ್ನೆ ಸಾಯಂಕಾಲದ ಸಭೆಯಲ್ಲಿ ಹಾಡು ಹೇಳಲಿಲ್ಲ
ರಮಾ ನಿನ್ನೆ ಸಾಯಂಕಾಲದ ಸಭೆಯಲ್ಲಿ ಹಾಡು ಹೇಳಲಿಲ್ಲ

Build up the following making the changes wherever necessary :

1) ಕಲಿಯಲಿಲ್ಲ
2) ಕೊಡಲಿಲ್ಲ
3) ತಿಳಿಯಲಿಲ್ಲ

II Transformation Drill :

Model : T : ಅವರು ಮದುವೆಗೆ ಬಂದರು.
S : ಅವರು ಮದುವೆಗೆ ಬರಲಿಲ್ಲ.

Transform :

1) ಮೇಷ್ಟ್ರು ಪ್ರಶ್ನೆ ಕೇಳಿದರು.
2) ನಾನು ಪರೀಕ್ಷೆಗೆ ಚೆನ್ನಾಗಿ ಓದಿದೆ.
3) ಅವನು ನಿನ್ನನ್ನು ಮರೆತ.
4) ಕಮಲ ಒಂದು ಸೀರೆ ಕೊಂಡಳು.
5) ದನಗಳು ತೋಟಕ್ಕೆ ನುಗ್ಗಿದವು.

III Substitute the given words following the model.

Model : T. ನಾನು ಉತ್ತರ ಹೇಳಲಿಲ್ಲ

ಕೇಳು

ನಾನು ಉತ್ತರ ಕೇಳಲಿಲ್ಲ.

1) ನಾನು ಪಾಠ ಬರೆಯಲಿಲ್ಲ.

ಓದು

....

2) ಅವಳು ಅಡಿಗೆ ಮಾಡಲಿಲ್ಲ.

ಕಲಿ

....

3) ಅವರು ಸುಮ್ಮಸುಮ್ಮನೆ ನಗಲಿಲ್ಲ.

ಅಳು

....

4) ಹಸು ಹುಲ್ಲು ತಿನ್ನಲಿಲ್ಲ.

ಮೇಯು

....

IV Response Drill :

1) ನೀನು ಯಾಕೆ ಲೈಬ್ರರಿಗೆ ಬರಲಿಲ್ಲ ?
2) ನಿಮ್ಮ ಸ್ನೇಹಿತರು 'ಶುಭಮಂಗಳ' ಸಿನಿಮಾ ನೋಡಿದರಾ ?
3) ನೀವು ಯಾಕೆ ಹೋಮ್‌ವರ್ಕ್ ಬರೆಯಲಿಲ್ಲ ?

EXERCISES

I Fill in the blanks using the past negative froms of the verbs given in the brackets.

1) ರವಿ ಮರದಿಂದ .... (ನೆಗೆ)
2) ನೀನು ಆ ವಿಷಯದ ಮಹತ್ವವನ್ನು .... (ಅರಿ)
3) ನಿನ್ನ ಸ್ನೇಹಿತ ನಿನ್ನೆ ಸಿನಿಮಾಕ್ಕೆ ....? (ಹೋಗು)
4) ಮಕ್ಕಳು ಸಾಯಂಕಾಲ ಆಟ .... (ಆಡು)
5) ನೀನು ಯಾಕೆ ಹಾಡು .... ? (ಹಾಡು)
6) ರಮ ಏನು ತುಂಬ .... ? (ನಗು)

II Transform into negative :

1) ರಮನಿಗೆ ದಾರಿಯಲ್ಲಿ ಮಾಧವಿ ಸಿಕ್ಕಳು.
2) ಪಲ್ಲವಿ ಸಂಗೀತ ಚೆನ್ನಾಗಿ ಕಲಿತಳು.
3) ಕುಸುಮ ಆಟದಲ್ಲಿ ಗೆದ್ದಳು.
4) ನೀನು ಆಟದಲ್ಲಿ ಸೋತೆ.
5) ಅವರು ರವಿಯನ್ನು ಮಾರ್ಕೆಟ್ಟಿನಲ್ಲಿ ಕಂಡರು.
6) ಅವಳು ಮಗುವನ್ನು ಮಲಗಿಸಿದಳು.

III Fill in the blanks using the appropriate verbs in past tense :

1) ರಶ್ಮಿ ಆಟ ....
2) ಅಮ್ಮ ಅಡಿಗೆ ....
3) ಸವಿತ ಚೆನ್ನಾಗಿ ಊಟ ....
4) ಕೆಲಸದ ನಿಂಗಿ ಬಟ್ಟೆ ....
5) ನಾನು ಹೋಟೆಲಿನಲ್ಲಿ ತಿಂಡಿ ....
6) ರಮೇಶ ಸಿನಿಮಾ ....
7) ನಮ್ಮ ತಂದೆ ತೋಟದಲ್ಲಿ ಕೆಲಸ ....
8) ಅಧ್ಯಾಪಕರು ಇವತ್ತು ತುಂಬ ಪ್ರಶ್ನೆ ....
9) ವಿದ್ಯಾರ್ಥಿಗಳು ಚೆನ್ನಾಗಿ ಉತ್ತರ ....
10) ತಾಯಿ ಮಗುವಿಗೆ ....

IV Write a narration in 15 lines about your experience in Mysore so far. Use past positive and past negative forms :

V Answer the following questions :

1) ನಿಶಾ ಯಾರಿಗಾಗಿ ಲೈಬ್ರರಿಯಲ್ಲಿ ಕಾದಳು ?
2) ನಿಶಾ ಯಾಕೆ ಸಿನಿಮಾಕ್ಕೆ ಹೋಗಲಿಲ್ಲ ?
3) ನಿಶಾ, ಉಷಾ ಯಾವ ಆಟಕ್ಕೆ ಹೋದರು ?

VOCABULARY :

ಆಟ—in the sense of film show.

ಪುಸ್ತಕದ ಹುಳ—book worm

ಮೊದಲನೆ ಆಟ—first show

ಯೋಚನೆ—thought, worry

ವಿಮರ್ಶೆ—review, criticism

Supplementary Vocabulary :

ಅರಿ—to know

ನೆಗೆ—to Jump

ದನ—cattle

ಮೇಯು—to grase

ಹುಲ್ಲು – grass

ಮಹತ್ವ—importance

GRAMMAR NOTES

1. Past negative form of the verb is introduced in this lesson,

Ex : ನೋಡು + ಅಲ್ + ಇಲ್ಲ = ನೋಡಲಿಲ್ಲ

ನಾನು ಅವನನ್ನು ನೋಡಲಿಲ್ಲ

The structure of the past negative form is,

verb root + infinitive suffix + illa. Which gives the meaning 'did not............'. Here the infinitive suffix is always—al.

ಮಾಡ್ + ಅಲ್ + ಇಲ್ಲ = ಮಾಡಲಿಲ್ಲ.

2. '—ooskara' is added to the dative case marker in the sense of 'for the sake of.'

LESSON 37

MYSORE

NARRATION

ಮೈಸೂರಿಗೆ 'ಮೈಸೂರು' ಎಂಬ ಹೆಸರು ಯಾಕೆ ಬಂತು? ಅದಕ್ಕೆ ಒಂದು ಸ್ವಾರಸ್ಯವಾದ ದಂತಕತೆಯಿದೆ. ಆ ದಂತಕಥೆಯನ್ನು ನಿಮಗೆ ಹೇಳುತ್ತೇನೆ. ಕೇಳಿ

How did the city of Mysore get the name 'Mysore'? There is an interesting legend about it. I will narrate that legend to you. You (all) listen.

ತುಂಬಾ ಹಿಂದಿನ ಕಾಲದಲ್ಲಿ ಈ ಪ್ರದೇಶದಲ್ಲಿ ಭಯಂಕರವಾದ ಕಾಡು ಇತ್ತು. ಆ ಕಾಡಿನಲ್ಲಿ ಋಷಿಗಳು ತಪಸ್ಸು

Long long ago there was a thick forest in this area. In that the sages were doing the penance

ಮಾಡ್ತಾ ಇದ್ದರು. ಆ ಕಾಡಿನ ಪಕ್ಕದಲ್ಲಿ ಒಂದು ಸಣ್ಣ ಊರು ಇತ್ತು. ಅಲ್ಲಿಯ ಜನ ಮತ್ತು ಋಷಿಗಳು ನೆಮ್ಮದಿಯಿಂದ ವಾಸ ಮಾಡ್ತಾ ಇರಲಿಲ್ಲ. ಯಾಕೆಂದರೆ ಆ ಕಾಡಿನಲ್ಲಿ ಮಹಿಷಾಸುರ ಅಂತ ಒಬ್ಬ ರಾಕ್ಷಸ ವಾಸಮಾಡ್ತಾ ಇದ್ದ. ಅವನು ಯಾವಾಗಲೂ ಕೋಣನ ಮೇಲೆ ಸವಾರಿ ಮಾಡ್ತಾ ಇದ್ದ. ಮಹಿಷ ಎಂದರೆ ಎಮ್ಮೆ ಎಂದು ಅರ್ಥ. ಅದ್ದರಿಂದಲೇ ಆವನಿಗೆ ಮಹಿಷಾಸುರ ಅಂತ ಹೆಸರು ಬಂತು.

There was a small villege near that forest. The people and the sages of that area were not living peacefully. Because a demon called Mahishasura was living there. He was always riding on a he–buffallo. 'Mahisha' means buffallo. That is why he got the name Mahishasura.

ಈ ಮಹಿಷಾಸುರ ತುಂಬಾ ಕ್ರೂರಿ. ಅವನು ಜನಗಳನ್ನು ಕೊಲ್ತಾ ಇದ್ದ. ಋಷಿಗಳ ತಪಸ್ಸನ್ನು ಕೆಡಿಸ್ತಾ ಇದ್ದ. ಎಲ್ಲೆಲ್ಲೂ ಅಟ್ಟಹಾಸದಿಂದ ಮೇರಿತಾ ಇದ್ದ. ಅವನ ಭಯದಿಂದ ಋಷಿಗಳು ತಪಸ್ಸು ಮಾಡ್ತಾ ಇರಲಿಲ್ಲ. ಜನಗಳು ಶಾಂತವಾಗಿ ಜೀವಿಸ್ತಾ ಇರಲಿಲ್ಲ. ಈ ರಾಕ್ಷಸ ಯಾರಿಗೂ ಹೆದರ್ತಾ ಇರಲಿಲ್ಲ. ‘ನಿನಗೆ ಈ ಭೂಮಿ ಮೇಲೆ ಯಾವ ಗಂಡಸಿಂದಲೂ ಮರಣ ಇಲ್ಲ’ ಅಂತ ಅವನಿಗೆ ಶಿವನ ವರ ಇತ್ತು. ಆದ್ದರಿಂದಲೇ ಅವನು ಜನಗಳಿಗೆ ಹಿಂಸೆ ಕೊಡ್ತಾ ಇದ್ದ. ಅದ್ದರಿಂದ ಋಷಿಗಳೆಲ್ಲ ದೇವತೆಗಳ ಹತ್ತಿರ ಹೋದರು. ದೇವತೆಗಳಿಗೂ ಏನೂ ಉಪಾಯ ಹೊಳೆಯಲಿಲ್ಲ. ಆದ್ದ

This Mahishasura was very cruel. He was killing people. He was interrupting the penance of the sages. He was committing autrocities every–where. Because of fear (for him) sages were not doing penance. People were not living peacefully. He was not afraid of any one. He had a boon from Shiva that he would not die at the hand of any man on this earth. That is way he was torturing the people. Therefore sages went to Gods. Gods were also unable to find a solution.

ರಿಂದ ಅವರೆಲ್ಲಾ ಶಿವನ ಹತ್ತಿರ ಹೋದರು. ಆಗ ಶಿವ ಅವರಿಗೆ ಪಾರ್ವತಿಯನ್ನು ತೋರಿಸಿದ.	So all of them went to Shiva. Shiva directed them to Parvathi.
ಪಾರ್ವತಿ ಶಕ್ತಿಯ ಅವತಾರ. ಋಷಿಗಳೂ ದೇವತೆಗಳೂ ಅವಳನ್ನು ಪ್ರಾರ್ಥಿಸಿದರು. ಪಾರ್ವತಿ ಚಾಮುಂಡಿ ರೂಪದಿಂದ ಪ್ರತ್ಯಕ್ಷಳಾದಳು. ಮಹಿಷನನ್ನು ಕೊಂದಳು. ಆಮೇಲೆ ಅವಳು ಹತ್ತಿರದಲ್ಲೇ ಬೆಟ್ಟದ ಮೇಲೆ ನೆಲಸಿದಳು. ಆದ್ದರಿಂದಲೇ ಆ ಬೆಟ್ಟಕ್ಕೆ ಚಾಮುಂಡಿಬೆಟ್ಟ ಅಂತ ಹೆಸರು ಬಂತು. ಆಮೇಲೆ ಮಹಿಷಾಸುರನ ಹೆಸರೇ ಈ ಊರಿಗೆ ಬಂತು. ಕ್ರಮೇಣ ಮಹಿಷನ ಊರು ಮೈಸೂರು ಆಯ್ತು.	Parvathi is an incarnation of Shakti. The sages and the Gods prayed to her. Parvathi appeared in the form of Chamundi. She killed Mahisha. Afterwards she settled on the top of the hill near by. That is how the hillock got the name Chamundi hill. After that the city also got the name after Mahishasura. Gradually Mahisha's place (Mahishana uuru) become Mysore.

DRILLS

I Build up Drill:

a) Model: ಕೇಳುತ್ತಾ ಇದ್ದೆ

ವಾದನವನ್ನು ಕೇಳುತ್ತಾ ಇದ್ದೆ

ವೇಣುವಾದನವನ್ನು ಕೇಳುತ್ತಾ ಇದ್ದೆ

ಟಿ. ಆರ್. ಮಹಾಲಿಂಗಂ ಅವರ ವೇಣುವಾದನವನ್ನು ಕೇಳುತ್ತಾ ಇದ್ದೆ

ನಿನ್ನೆ ಟಿ. ಆರ್. ಮಹಾಲಿಂಗಂ ಅವರ ವೇಣುವಾದನವನ್ನು ಕೇಳುತ್ತಾ ಇದ್ದೆ

ನಾನು ನಿನ್ನೆ ಟಿ. ಆರ್. ಮಹಾಲಿಂಗಂ ಅವರ ವೇಣುವಾದನವನ್ನು ಕೇಳುತ್ತಾ ಇದ್ದೆ.

Build up the following making the changes wherever necessary :

1) ನೋಡುತ್ತಾ ಇತ್ತು.
2) ಕೊಡುತ್ತಾ ಇದ್ದರು.
3) ಕೊಲ್ಲುತ್ತಾ ಇದ್ದ.
4) ಮಾಡುತ್ತಾ ಇದ್ದೆ.
5) ಓದುತ್ತಾ ಇದ್ದಳು.

b) Model : ಇರಲಿಲ್ಲ.

ಮಾಡ್ತಾ ಇರಲಿಲ್ಲ

ವಾಸ ಮಾಡ್ತಾ ಇರಲಿಲ್ಲ

ಇಲ್ಲಿ ವಾಸ ಮಾಡ್ತಾ ಇರಲಿಲ್ಲ

ಮಹಿಷಾಸುರ ಇಲ್ಲಿ ವಾಸ ಮಾಡ್ತಾ ಇರಲಿಲ್ಲ

ಹಿಂದೆ ಮಹಿಷಾಸುರ ಇಲ್ಲಿ ವಾಸ ಮಾಡ್ತಾ ಇರಲಿಲ್ಲ.

Build up the following making the changes wherever necessary :

1. ನೋಡ್ತಾ ಇರಲಿಲ್ಲ
2. ಮಾಡ್ತಾ ಇರಲಿಲ್ಲ
3. ಕಾಣ್ತಾ ಇರಲಿಲ್ಲ.

II Transformation Drill :

a) Model : T : ನಾನು ಹಾಡು ಹೇಳಿದೆ.

S : ನಾನು ಹಾಡು ಕೇಳ್ತಾ ಇದ್ದೆ.

Transform :

1) ರವಿ ಕಥೆ ಹೇಳಿದ.
2) ಕಮಲ ಮಗುವಿಗೆ ಬಿಸ್ಕೆಟ್ ಕೊಟ್ಟಳು.

3) ಅವರು ಸಂಗೀತ ಕಲಿತರು.

4) ಶಾಮರಾಯರು ನಕ್ಕರು.

5) ನಾಯಿ ಮನೆ ಮುಂದೆ ಇತ್ತು.

b) Model : T : ನಾನು ಬಸ್ಸಿಗೆ ಹೊರಡುತ್ತಾ ಇದೀನಿ.

S : ನಾನು ಬಸ್ಸಿಗೆ ಹೊರಡುತ್ತಾ ಇದ್ದೆ.

Transform :

1. ರವಿ ಆಟ ಆಡುತ್ತಾ ಇದಾನೆ.
2. ಅಂಗಡಿಯಲ್ಲಿ ಸಕ್ಕರೆ ಕೊಡುತ್ತಾ ಇದಾರೆ.
3. ಅವಳು ಊಟ ಮಾಡುತ್ತಾ ಇದಾಳೆ.
4. ಇಲ್ಲಿ ತರಕಾರಿ ಅಗ್ಗವಾಗಿ ಸಿಗುತ್ತಾ ಇದೆ.
5. ನೀವು ಯಾವ ಅಂಗಡಿಯಲ್ಲಿ ಬೇಳೆ ಕೊಳ್ಳುತ್ತಾ ಇದೀರಿ?

c) Model : T : ಅವನು ಋಷಿಗಳಿಗೆ ತೊಂದರೆ ಕೊಡ್ತಾ ಇದ್ದ.

S : ಅವನು ಋಷಿಗಳಿಗೆ ತೊಂದರೆ ಕೊಡ್ತಾ ಇರಲಿಲ್ಲ.

Transform :

1. ಅವನು ರಸ್ತೆಯಲ್ಲಿ ಓಡ್ತಾ ಇದ್ದ
2. ಅವಳು ಆಗಾಗ ನಮ್ಮ ಮನೆಗೆ ಬರ್ತಾ ಇದ್ದಳು.
3. ನಿನ್ನೆ ಸಾಯಂಕಾಲ ನೀವು ಕಾಫಿ ಕುಡೀತಾ ಇದ್ದಿರಿ.
4. ನಾವು ಸಿನಿಮಾಕ್ಕೆ ಹೋಗ್ತಾ ಇದ್ದೆವು.

5) ನಾನು ತಿಪಟೂರಿನಲ್ಲಿ ಓದ್ತಾ ಇದ್ದೆ.

d) Model : T : ಅವನು ಹಣ್ಣು ತಿನ್ತಾ ಇಲ್ಲ.

S : ಅವನು ಹಣ್ಣು ತಿನ್ತಾ ಇರಲಿಲ್ಲ.

Transform :

1) ಅವಿನಾಶ್ ಬರ್‍ತಾ ಇಲ್ಲ.

2) ಸಿಂಧು ನಗ್ತಾ ಇಲ್ಲ.

3) ನಿಮ್ಮ ಅಮ್ಮ ಕರೀತಾ ಇಲ್ಲ.

4) ನೀನು ಸಿಗರೇಟ್ ಸೇದ್ತಾ ಇಲ್ಲ.

5) ಅವನು ಪುಸ್ತಕ ಮಾರ್‍ತಾ ಇಲ್ಲ.

III Substitution Drill :

Model : T : ಅವಳು ನಿನ್ನೆ ಚಾಮುಂಡಿಬೆಟ್ಟಕ್ಕೆ ಹೋಗ್ತಾ ಇದ್ದಳು.
ಅವನು
ಅವನು ನಿನ್ನೆ ಚಾಮುಂಡಿಬೆಟ್ಟಕ್ಕೆ ಹೋಗ್ತಾ ಇದ್ದನು.

Substitute :

1) ಮಹಿಷಾಸುರ ಕೋಣನ ಮೇಲೆ ಸವಾರಿ ಮಾಡ್ತಾ ಇದ್ದ.
ನಾನು

....

2) ಅವಳು ಹೋದ ವರ್ಷ ಮೈಸೂರಿನಲ್ಲಿ ವಾಸ ಮಾಡ್ತಾ ಇದ್ದಳು.
ಅವರು

....

3) ನಾವು ಹಾಸ್ಟೆಲಿನಲ್ಲಿ ಎಂಟೂವರೆ ಗಂಟೆಗೆ ಊಟಮಾಡ್ತಾ ಇದ್ದೆವು.
ಅವನು

....

4) ಆ ನಾಯಿ ದಿನಾ ನಮ್ಮ ಮನೆಗೆ ಬರ್‍ತಾ ಇತ್ತು.
ಆ ಮನುಷ್ಯ

....

5) ನೀನು ಐದು ಗಂಟೆಗೆ ಏಳ್ತಾ ಇದ್ದೆಯಾ ?
   ನೀವು

   ....

IV Response Drill :

1) ಹೋದ ವರ್ಷ ನೀವು ಎಲ್ಲಿ ಕೆಲಸ ಮಾಡ್ತಾ ಇದ್ದಿರಿ ?
2) ನೀವು ವಿದ್ಯಾರ್ಥಿಗಳಿಗೆ ಪಾಠ ಹೇಳಿ ಕೊಡ್ತಾ ಇದ್ದಿರಾ ?
3) ನಿಮಗೆ ಯಾರು ಯಾರು ಕನ್ನಡ ಕಲಿಸ್ತಾ ಇದ್ದಾರೆ ?
4) ನಿಮ್ಮ ಮನೆಯಿಂದ ಹೋದ ವರ್ಷ ಯಾರೂ ಸ್ಕೂಲಿಗೆ ಹೋಗ್ತಾ ಇರಲಿಲ್ಲವಾ ?

EXERCISES

I Fill in the blanks using the Kannada equivalents of the English words given in the brackets :

1) ನಿಮಗೆ ಒಂದು .... ಹೇಳ್ತೀನಿ (legend)
2) ಅವನು .... ಮೇಲೆ .... ಮಾಡ್ತಾ ಇದ್ದ. (he-buffalo, ride)
3) ಮಹಿಷಾಸುರ ತುಂಬಾ .... (cruel)
4) ಮಹಿಷಾಸುರನಿಗೆ ಶಿವನ .... ಇತ್ತು. (boon)
5) ಪಾರ್ವತಿ ಶಕ್ತಿಯ .... (incarnation)

II Fill in the blanks using the correct past continuous form of the verbs given in the brackets :

1) ಅವನು ನನಗೆ .... (ಕಾಣು)
2) ಅಪರ್ಣ ನಿನ್ನೆ ಸಾಯಂಕಾಲ ಹಾಡು ...... (ಕಲಿ)

3) ನಾನು ನಿನ್ನೆ ಸಿನಿಮಾ .... (ನೋಡು)

4) ಮೇನಕೆ ವಿಶ್ವಾಮಿತ್ರನ ತಪಸ್ಸು ....(ಕೆಡಿಸು)

5) ಅವರು ಮೈಸೂರಿನಲ್ಲಿ ವಾಸ .... (ಮಾಡು)

III Expand the following by using the cues as per the model :

Model : T : ಶ್ರೀರಾಮ ಮಾಡ್ತಾ ಇದ್ದ.

(ಅಯೋಧ್ಯೆ, ವಾಸ, ಸುಖ ಸಂತೋಷ)

S : ಶ್ರೀರಾಮ ಅಯೋಧ್ಯೆಯಲ್ಲಿ ಸುಖ ಸಂತೋಷದಿಂದ ವಾಸ ಮಾಡ್ತಾ ಇದ್ದ.

Expand :

1) ನೀವು ಹೋಗ್ತಾ ಇದ್ದಿರಿ.
(ಮಧ್ಯಾಹ್ನ, ಗಂಗೋತ್ರಿ ಕಡೆ, ನಿನ್ನೆ, ಸ್ನೇಹಿತರ ಜೊತೆ)

2) ಶೀಲ ಜಗಳವಾಡ್ತಾ ಇದ್ದಳು.
(ಹೊಸ ಸೀರೆ, ಅಂತ, ತನಗೆ, ಗಂಡನೊಡನೆ, ತರಲಿಲ್ಲ)

3) ನಾನು ಮಾಡ್ತಾ ಇರಲಿಲ್ಲ.
(1974, ಇಸವಿ, ಜುಲೈ, ಬೆಂಗಳೂರು, ತಿಂಗಳು, ಕೆಲಸ)

IV a) Transform the following sentences into negative form :

1) ನಾನು ಮಂಗಳೂರಿನಲ್ಲಿ ಕಾಲೇಜಿನಲ್ಲಿ ಕೆಲಸ ಮಾಡ್ತಾ ಇದ್ದೆ.

2) ಆ ಕಾಲೇಜಿನಲ್ಲಿ ಸರಿಯಾಗಿ ಸಂಬಳ ಕೊಡ್ತಾ ಇದ್ದರು.

3) ಮಂಗಳೂರಿನಲ್ಲಿ ಒಂದು ಬಾಡಿಗೆ ಮನೆಯಲ್ಲಿ ವಾಸಮಾಡ್ತಾ ಇದ್ದೆ.

4) ನಾನು ಹೋಟೆಲಿನಲ್ಲಿ ಊಟ ಮಾಡ್ತಾ ಇದ್ದೆ.

5) ನಮಗೆ ರಜದಲ್ಲಿ ಸಂಬಳಕೊಡ್ತಾ ಇದ್ದರು.

b) Transform the following sentences into interrogative by using interrogative marker.

1) ನಮ್ಮ ತಂದೆ ನನಗೆ ಹಣ ಕೊಡ್ತಾ ಇರಲಿಲ್ಲ.
2) ಗೀತ ನಿನ್ನೆ ಹಾಡು ಹಾಡ್ತಾ ಇರಲಿಲ್ಲ.
3) ಅವರು ನನ್ನ ಪ್ರಶ್ನೆಗೆ ಉತ್ತರ ಹೇಳ್ತಾ ಇರಲಿಲ್ಲ.
4) ನಾವು ಸುಮ್ಮಸುಮ್ಮನೆ ಜಗಳ ಆಡ್ತಾ ಇರಲಿಲ್ಲ.
5) 1970 ನೇ ಇಸವಿಯಲ್ಲಿ ನಾನು ಮೈಸೂರಿನಲ್ಲಿ ಓದ್ತಾ ಇರಲಿಲ್ಲ.

V Narrate a story in your own sentences by using present continuous form ;

VI Answer the following questions :

1) ಮೈಸೂರಿಗೆ ಮೈಸೂರು ಅಂತ ಹೆಸರು ಬರಲು ಕಾರಣ ಏನು ?
2) ರಾಕ್ಷಸನಿಗೆ ಮಹಿಷಾಸುರ ಅಂತ ಹೆಸರು ಯಾಕೆ ಬಂತು ?
3) ಮಹಿಷಾಸುರ ಜನರಿಗೆ, ಋಷಿಗಳಿಗೆ ಏನೇನು ತೊಂದರೆ ಕೊಡ್ತಾ ಇದ್ದ ?
4) ಅವನಿಗೆ ಯಾರಿಂದ, ಏನೆಂದು ವರ ಇತ್ತು ?
5) ಮಹಿಷಾಸುರನನ್ನು ಯಾರು ಕೊಂದರು ?

VOCABULARY :

ಅಟ್ಟಹಾಸ—pomp, arrogance

ಅಹಂಕಾರ—ego

ಉಪಾಯ—plan

ಋಷಿ—sage

ಎನ್ನು—to say

ಎಮ್ಮೆ—buffalo (she)

ಕ್ರಮೇಣ—gradually

ಕ್ರೂರಿ—one who is cruel

ಕೆಡಿಸು—to spoil

ಕೋಣ—buffalo (he)

ಚಾಮುಂಡಿ—Goddess Chamundeswari

ತಪಸ್ಸು—penance, austerities

ದೇವತೆ—Goddess

ದಂತ ಕಥೆ—legend

ನೆಮ್ಮದಿ—peacefulness

ನೆಲಸು—to stay, take up residence

ಪ್ರದೇಶ—place

ಭಯಂಕರ—horrible

ಭಯಂಕರ ಕಾಡು—thick forest

ಭೂಮಿ—earth

ಮರಣ—death

ಮೆರಿ—to exhibit, to show

ರಾಕ್ಷಸ—demon

ರೂಪ—form, shape

ವರ—boon

ಸನಿಹ—near

ಸವಾರಿ ಮಾಡು—to ride

ಸ್ವಾರಸ್ಯ—interesting

ಹೆದರು—fear

ಹಿಂಸೆ—violence, trouble

ಹೊಳೆ—to flash

Supplementary Vocabulary :

ಇಸವಿ—calender year

ಜಗಳ—quarrel

ನೆಗೆ—to jump

ಭಾಷಣ —speech

ವೇಣುವಾದನ—flute recital

GRAMMAR NOTES :

1.Past continuous tense is introduced in this lesson. The structure for this is the continuous participle of verb + the past tense form of verb 'iru.'

ಮಾಡ್ತಾ + ಇದ್ದೆ = ಮಾಡ್ತಾ ಇದ್ದೆ.

2. The corresponding negative form is also introduced. The structure is the continuous Participle of verb + the past negation of verb 'iru.'

ಮಾಡ್ತಾ + ಇರಲಿಲ್ಲ = ಮಾಡ್ತಾ ಇರಲಿಲ್ಲ.

This is the same continuous participle form which was introduced with past tense form of verb ' iru.' previously

UNIT 10

Review

LESSON 10

AN INCIDENT

NARRATION :

ಒಂದು ಭಾನುವಾರ ಬೆಳಿಗ್ಗೆ ಭಾಸ್ಕರನ್ ಮತ್ತು ನರಸಿಂಹರಾವ್ ಕಾವೇರಿ ಹಾಸ್ಟೆಲಿನಿಂದ ಸಿಟಿ ಕಡೆ ಹೋಗ್ತಾ ಇದ್ದರು. ಅವರಿಬ್ಬರೂ ನಡೆಯುತ್ತಾ ಹೋಗ್ತಿದ್ದರು. ದಾರಿಯಲ್ಲಿ ಅವರಿಗೆ ಸುರೇಶ್ ಸಿಕ್ಕಿದರು. ಸುರೇಶ್ ತೆಲುಗು ಕಲಿಯುತ್ತಾ ಇದ್ದಾರೆ. ಅವರು ಕರ್ನಾಟಕದವರು. ಸುರೇಶ್ ಭಾಸ್ಕರನ್ ಮತ್ತು ನರಸಿಂಹರಾವ್ ಇಬ್ಬರನ್ನೂ ಮಾತನಾಡಿಸಿದರು. ನೀವಿಬ್ಬರೂ ಎಲ್ಲಿಗೆ ಹೋಗ್ತಾ ಇದ್ದೀರಿ ಅಂತ ಕೇಳಿದರು. ಅವರಿಬ್ಬರೂ ಜಗನ್ಮೋಹನ ಕಲಾ ಶಾಲೆಯನ್ನು ನೋಡೋಕೆ ಹೋಗ್ತಾ ಇದೀವಿ ಅಂದರು. ಜೊತೆಗೆ ಸುರೇಶ್ ಅವರನ್ನು ಬನ್ನಿ ಅಂತ ಕರೆದರು. ಆದರೆ ಸುರೇಶ್ ಅವರ ಜೊತೆ ಹೋಗಲಿಲ್ಲ. ಅವರಿಗೆ ಬೇರೆ ಕೆಲಸ ಇತ್ತು.

ಭಾಸ್ಕರನ್ ಮತ್ತು ನರಸಿಂಹರಾವ್ ಮೆಟ್ರೋಪೋಲ್ ಹೊಟೇಲ್ ಹತ್ತಿರ ಬಂದರು. ಅಲ್ಲಿ ಅವರಿಗೆ ರಸ್ತೆಯ ಪಕ್ಕದಲ್ಲಿ ಒಂದು ಗುಂಪು ಕಾಣಿಸ್ತು. ಅವರು ಕುತೂಹಲದಿಂದ ಅಲ್ಲಿಗೆ ಹೋದರು. ಜನಗಳ ಸಂದಿಯಿಂದ ನೋಡಿದರು. ಅವರಿಗೆ ಏನೂ ಕಾಣಲಿಲ್ಲ. ಕಡೆಗೆ ಜನಗಳ ಮಧ್ಯೆದಿಂದ ಹಾಗೂ ಹೀಗೂ ಮುಂದೆ ಬಂದರು. ಅವರ ಕಣ್ಣಿಗೆ ಹಾವಾಡಿಗ ಮತ್ತು ಅವನ ಹಾವು ಕಂಡವು. ಇಬ್ಬರೂ ಅಲ್ಲೇ ನೋಡ್ತಾ ನಿಂತರು. ಹಾವಾಡಿಗನ ಕನ್ನಡ ಅವರಿಗೆ ಸರಿಯಾಗಿ ಅರ್ಥ ಆಗಲಿಲ್ಲ. ಆದರೆ ವಿಚಿತ್ರ ಕೂಗಾಟ ಅವರಿಗೆ ತುಂಬಾ ಹಿಡಿಸಿತು. ಅವನು ಕನ್ನಡದಲ್ಲಿ ಹೇಳೋದನ್ನೆಲ್ಲಾ ಜ್ಞಾಪಕದಲ್ಲಿ ಇಡುವುದಕ್ಕೆ ಪ್ರಯತ್ನಿಸಿದರು. ಆದರೆ ಎಲ್ಲಾ ಜ್ಞಾಪಕಕ್ಕೆ ಬರಲಿಲ್ಲ. ಬಂದಷ್ಟನ್ನೇ ಗಟ್ಟಿ ಮಾಡಿದರು. ಅಲ್ಲಿಂದ ಅವರು ಜಗನ್ಮೋಹನ ಚಿತ್ರಶಾಲೆಗೆ ಹೋದರು.

ಈಗ ನೀವು ಅವರಿಬ್ಬರನ್ನೂ ನೋಡಬೇಕು. ಎಷ್ಟು ಚೆನ್ನಾಗಿ ಕನ್ನಡದಲ್ಲಿ ಹಾವಾಡಿಗನ ಹಾಗೆ ಮಾತಾಡ್ತಾರೆ. ಹಾವಾಡಿಗನದೇ ಭಂಗಿ, ಅದೇ ಕಂಠ, ಅದೇ ಧಾಟಿ.

TEST PAPER

I Change the following sentences into their respective present tense forms:

1) ರಹಮಾನ್ ಚೆನ್ನಾಗಿ ಆಟ ಆಡಿದರು.
2) ನಾವು ಸಂಜೆ ವಾಕಿಂಗ್ ಹೋಗ್ತಾ ಇದ್ದೆವು.
3) ನಾನು ನಿನಗೋಸ್ಕರ ಕಾಯ್ತಾ ಇದ್ದೆ.
4) ಅವರೆಲ್ಲಾ ಕ್ಯಾಂಟೀನಿನಲ್ಲಿ ಊಟ ಮಾಡಿದರು.
5) ಸುಶೀಲ ತುಂಬಾ ಪ್ರಶ್ನೆ ಕೇಳಿದಳು.

II Transform the following sentences into their negative form:

1) ಸುರೇಶ ನನ್ನನ್ನು ಬೈದ.
2) ಸವಿತ ನಿನ್ನೆ ರಾತ್ರಿ ಜೋರಾಗಿ ಅತ್ತಳು.

3) ನಮ್ಮ ತಂದೆ ಈ ಗಿಡ ನೆಟ್ಟರು.

4) ರಾಜೂ ಮನೆಯಲ್ಲಿ ತುಂಬಾ ತಿಂಡಿ ಸಿಕ್ಕಿತು.

5) ಅವರು ದೇವಸ್ಥಾನದಲ್ಲಿ ಪೂಜೆ ಮಾಡಿಸಿದರು.

6) ನಾವು ಒಂದು ವರ್ಷದ ಹಿಂದೆ ಎಂ. ಎ. ಓದುತ್ತಾ ಇದ್ದೆವು.

7) ಮಕ್ಕಳು ಜೂಗಾರ್ಡನ್ ನೋಡಿದ್ದರು.

8) ಅವರು ದಿನಾ ನಮ್ಮ ಮನೆ ಮುಂದೆ ಹೋಗ್ತಾ ಇದ್ದರು.

III Use the following words in your own sentences :

ಸ್ವಾರಸ್ಯ, ಅಟ್ಟಹಾಸ, ಉಪಾಯ, ಗುಂಪು,
ಕುತೂಹಲ, ಕೂಗಾಟ, ಥಾಟಿ

IV Change the following sentences into present negative forms ;

1) ಅವರು ಕಾಫಿ ಕುಡಿಯಲಿಲ್ಲ.

2) ರಾಜೇಶ್ ನಮ್ಮ ಮನೆಗೆ ಬರ್‍ತಾ ಇರಲಿಲ್ಲ.

3) ಸೀತಾ ಲೈಬ್ರರಿಯಲ್ಲಿ ಓದುತ್ತಾ ಇರಲಿಲ್ಲ.

4) ಪರೀಕ್ಷೆಯಲ್ಲಿ ಏನೂ ಜ್ಞಾಪಕಕ್ಕೆ ಬರಲಿಲ್ಲ

5) ನಾನು ಲೈಬ್ರರಿಗೆ ಪುಸ್ತಕ ವಾಪಸ್ ಕೊಡಲಿಲ್ಲ.

V Rewrite the sentences as directed :

1. ಅವನು ಸಿಟಿಗೆ ಹೋಗ್ತಾ ಇದ್ದಾನೆ. (into past continuous)

2. ರಮೇಶ ಕ್ಯಾಂಟೀನ್‌ನಲ್ಲಿ ಊಟಮಾಡಿದ (into negative)

3. ಅವನು ಹಿಂದಿ ಹಾಡು ಹಾಡ್ತಾನೆ (into present continuous)

4. ರಮಾ ರಾಜನನ್ನು ನೋಡಿದಳು (interrogate by using interrogative pronoun)

5. ಅವರು ನಿದ್ರೆ ಮಾಡ್ತಾ ಇದಾರೆ (into permissive)

VI Answer the following questions:

1) ಭಾಸ್ಕರನ್ ಮತ್ತು ನರಸಿಂಹರಾವ್ ಎಲ್ಲಿಗೆ ಹೋಗ್ತಾ ಇದ್ದರು?
2) ದಾರಿಯಲ್ಲಿ ಅವರಿಗೆ ಯಾರು ಸಿಕ್ಕಿದರು ?
3) ದಾಸ್‌ಪ್ರಕಾಶ್ ಹೋಟೆಲ್ ಹತ್ತಿರ ಅವರಿಗೆ ಏನು ಕಾಣಿಸ್ತು?
4) ಹಾವಾಡಿಗನ ಕನ್ನಡ ಅವರಿಗೆ ಸರಿಯಾಗಿ ಅರ್ಥವಾಯ್ತಾ ?
5) ಈಗ ಅವರು ಹೇಗೆ ಮಾತನಾಡ್ತಾರೆ ?

VOCABULARY

ಕುತೂಹಲ—curiosity

ಕೂಗಾಟ—shouting

ಕಂಠ—voice

ಗಟ್ಟಿಮಾಡು—by heart

ಗುಂಪು—Crowd

ಧಾಟಿ—manner

ಭಂಗಿ—style

ಮಧ್ಯ—centre

ವಿಚಿತ್ರ—peculiar

ಸಂದು—narrow place

ಹಾವು—snake

ಹಾವಾಡಿಗ—snake charmer

*

UNIT 11

LESSON 38

MADHU'S DIARY

NARRATION :

ನಾನು ಮೈಸೂರಿಗೆ ಬಂದು ಸುಮಾರು ಒಂದೂವರೆ ತಿಂಗಳು ಇರಬೇಕು. ಈ ಒಂದೂವರೆ ತಿಂಗಳಲ್ಲಿ ಒಂದು ದಿನಾನೂ ದಿನಚರಿ ಬರೆಯಬೇಕು ಅನ್ನಿಸಲೇ ಇಲ್ಲ. ಆದರೆ ಇವತ್ತು ಯಾಕೋ ಆ ಕೆಟ್ಟ ಬುದ್ಧಿ ಬಂದುಬಿಡ್ತು. ಬೆಳಿಗ್ಗೆಯಿಂದ ಒಂದೇ ಸಮನೆ ಬರೀಬಾರದು ಬರೀಬಾರದು ಅಂತ ಮಾಡಿದೆ. ಆದರೆ ನನ್ನ ಮನಸ್ಸು ಕೇಳ ಬೇಕಲ್ಲ! ಬರಿ ಬರಿ ಅಂತ ಅದು ಒತ್ತಾಯಿ

It may be about one and a half months since I came to Mysore. During this one and a half months I never felt like writing my daily routine even a single day. But somehow today I got that bad idea (of writing my daily routine). Since morning I made up my mind not to

ಸ್ಫೂರ್ತಿನೇ ಬಂತು. ಹೋಗಲಿ ಬರಿಯೋಕೆ ಏನಿದೆ ಮಣ್ಣು! ಹಾಸಿಗೆಯಿಂದ ಎದ್ದು ಹಲ್ಲು ಉಜ್ಜಿ ಕಾಫಿಕುಡಿದು ಪೇಪರ್ ಓದಿದೆ ಅಂತ ಬರೀಲಾ? ಛೆ! ದಿನಚರಿ ಅನ್ನೋದು ಹೇಗಿರಬೇಕು? ಮಹಾ ಮಹಾ ಪುರುಷರೂ ಬರೀತಾರೆ. ಅದು ದಿನಚರಿ. ಅದು ಬಿಟ್ಟು ನನ್ನ ದಿನಚರಿ ಓದಿ ಹೊಟ್ಟೆಗೆ ಕಣ್ಣೀರು ಸುರ್‍ಕೋಬೇಕು. ಅದು ನೀವು ಪಡೆದು ಬಂದದ್ದು. ಅನುಭವಿಸಿ.

write my daily routine. But you see, my mind should listen to me! My mind went on insisting me to write. Let it be. What is there to write? May I write that, having got up from the bed, I finished brushing my teeth, took a cup of coffee and read the newspaper? Che! How a daily routine of a person should be? Great people also write· That is diary. Instead of reading their diary why do you take the pain of reading my diary when you don't get anything out of it? All right, it is your bad luck to read my diary. Read.

ನಾನು (ಅದೇ ಈ ದಿನಚರಿಯ ಕರ್ತೃ) ಪ್ರತಿದಿನಾ ಬೆಳಿಗ್ಗೆ (ಕೆಲವ್ರೊವ್ಮೆ ದಿನಬಿಟ್ಟು ದಿನ) ಆರು ಗಂಟೆಗೆ ಏಳ್ತೀನಿ. ಇದರಲ್ಲೇನೂ ವಿಶೇಷ ಇಲ್ಲ ಅನ್ನಿ. ಆದರೆ ವಿಶೇಷ ಇರೋದು ಹಲ್ಲು ಉಜ್ಜಿ ಕಾಫಿ ಕುಡೀತೀನಲ್ಲಾ ಅದರಲ್ಲಿ. ನಮ್ಮ ಹಾಸ್ಟಲಿನಲ್ಲಿ ನನ್ನ ಒಬ್ಬನನ್ನು ಬಿಟ್ಟು ಯಾರು ಹಲ್ಲು ಉಜ್ಜಿ ಕಾಫಿ ಕುಡೀತಾರೆ ಹೇಳಿ? ಕಾಫಿ ಕುಡಿದು ರೀಡಿಂಗ್ ರೂಮಿಗೆ ಹೋಗಿ ವರ್ತಮಾನ ಪತ್ರಿಕೆ ಓದ್ತೀನಿ. ನಾನು ಯಾವಾಗಲೂ ಕನ್ನಡ ವರ್ತಮಾನ ಪತ್ರಿಕೆಯನ್ನೇ ಓದ್ತೀನಿ. ಇದಕ್ಕೆ ಕಾರಣ ಎರಡು. ಒಂದು ಕನ್ನಡದ ಕಟ್ಟಾಭಿಮಾನ. ಇನ್ನೊಂದು ಇಂಗ್ಲೀಷ್ ಚೆನ್ನಾಗಿ ಬರಲ್ಲ.

I (means the writer of this diary) get up everyday morning (sometimes alternate days) at 6 O'clock. Of course there is nothing special in it. What is special in it is taking a cup of coffee after brushing my teeth. Tell me in our hostel except me who will take coffee after brushing the teeth? After taking coffee I go to reading room and read the newspaper. I always read the Kannada newspaper. There are two reasons for this.

ವರ್ತಮಾನ ಪತ್ರಿಕೆ ಓದಿ ಸ್ನಾನ ಮಾಡ್ತೀನಿ. ಇಲ್ಲಿಯೂ ಒಂದು ವಿಶೇಷ ಇದೆ. ಪ್ರತಿದಿನಾ ತಣ್ಣೀರಿನಲ್ಲಿ ಸ್ನಾನ ಮಾಡೋದು ನಾನೊಬ್ಬನೇ. ಸ್ನಾನ ಮಾಡಿ ಒಂಬತ್ತು ಗಂಟೆತನಕ ಪಾಠ ಬರೀತೀನಿ. ದಿನಾ ಒಂದೊಂದು ಪಾಠ ಬರೆದು ಅದನ್ನು ಅಧ್ಯಾಪಕರಿಗೆ ತೋರಿಸಲೇಬೇಕು. ಅದು ನನ್ನ ನಿಯಮ. ಊಟ ಮಾಡಿ ರೂಮಿಗೆ ಬಂದು ಬಟ್ಟೆ ತೊಟ್ಟು ನನ್ನ ರೂಂಮೇಟ್ ಜೊತೆ ಇನ್ಸ್ಟಿಟ್ಯೂಟಿಗೆ ಹೊರಡ್ತೀನಿ. ಇನ್ಸ್ಟಿಟ್ಯೂಟಿಗೆ ಹೋಗ್ತಾ ಸಿಗರೇಟ್ ಸೇದಿ ಕ್ಲಾಸಿಗೆ ಹೋಗ್ತೀನಿ. ಸಿಗರೇಟ್ ಸೇದೋದು ನನಗೇನೂ ಚಟ ಅಲ್ಲ. ಬರೀ ಖುಷಿ ಅಷ್ಟೆ.

One is my love for Kannada. The other is, I do not know English well. After reading the newspaper I take bath. There is a speciality here also. I am the only person who bathe daily in cold water. After taking bath, I write lessons upto 9 o'clock. Everyday I should write one lesson and show it to the teacher. That is my principle. After taking meals I will come to my room, dress myself and go to the Institute along with my room mate. While going to the Institute I smoke a cigarette. Smoking cigarette is not a habit for me. It is only for pleasure. That is all.

ಇನ್ಸ್ಟಿಟ್ಯೂಟಿಗೆ ಹೋಗಿ ಅಧ್ಯಾಪಕರಿಗೆ ಹೋಂವರ್ಕ್ ಪುಸ್ತಕ ಕೊಟ್ಟು ಕ್ಲಾಸಿಗೆ ಹೋಗ್ತೀನಿ. ಕ್ಲಾಸಿನಲ್ಲಿ ಮುಂದಿನ ಸೀಟಿನಲ್ಲಿ ಕೂರೋದು ನನಗೆ ಸುತರಾಂ ಇಷ್ಟ ಇಲ್ಲ. ಹಿಂದಿನ ಸೀಟಿನಲ್ಲಿ ಕೂರ್ತೀನಿ. ಕೂತು ಸ್ವಲ್ಪ ಹೊತ್ತು ಬೇರೆಯವರ ಜೊತೆ ಹರಟೆ ಹೊಡಿತೀನಿ. ಅಷ್ಟು ಹೊತ್ತಿಗೆ ಮೇಷ್ಟ್ರು ಕ್ಲಾಸಿಗೆ ಬಂದು ಅಟೆಂಡೆನ್ಸ್ ಹಾಕಿ ಪಾಠ ಶುರು ಮಾಡ್ತಾರೆ. ಮೊದಲನೆ ಪೀರಿಯಡ್ ಗಪ್ ಚಿಪ್ಪಾಗಿಕೂತು ಪಾಠ ಕೇಳ್ತೀನಿ. ಮೊದಲನೇ ಪೀರಿಯಡ್‌ನಲ್ಲಿ ಪಾಠ ಕೇಳೋದು ನನಗೆ ಬಹಳ ಮುಖ್ಯ. ಆಮೇಲೆ

Having gone to Institute I give homework book to the teacher and go to class. I don't like sitting in the front row in the class room. I sit in the back-row. Having sat there I gossip for sometimes with others. By that time the teacher comes to the class, he takes the attendance and starts teaching the lesson First period I sit without making any noice and listen to the lesson. It is very important to

ಹನ್ನೊಂದು ಗಂಟೆ ಇಪ್ಪತ್ತು ನಿಮಿಷಕ್ಕೆ ಕ್ಲಾಸಿನಿಂದ ಹೊರಗೆ ಬಂದು ಟಪಾಲು ನೋಡಿ ಡ್ರಿಲ್ ಕ್ಲಾಸಿಗೆ ಹೋಗ್ತೀನಿ. ಇದು ಆಟದ ಮೈದಾನದಲ್ಲಿನ ಡ್ರಿಲ್ ಅಲ್ಲ. ಅದಕ್ಕಿಂತ ಕಷ್ಟ ಇದು. ನೀವು ಒಮ್ಮೆ ಬಂದು ನೋಡಿ ಗೊತ್ತಾಗುತ್ತೆ. ಡ್ರಿಲ್ ಮಾಡಿ ಮೂರನೇ ಪೀರಿಯಡ್ ಲ್ಯಾಬೊರೇಟರಿಗೆ ಹೋಗ್ತೀನಿ. ಹೋಗಿ ಅಲ್ಲಿ ಭಾಷೆಯನ್ನು ಚೆನ್ನಾಗಿ ಅಭ್ಯಾಸ ಮಾಡ್ತೀನಿ.

listen to the lesson in the first period. After coming out of the class at 11-20, I see the mail and I will go to the drill class. This is not like the drill in the play ground. It is more difficult than that. You come and see once, then you will understand. After the drill class I go to language laboratory in the third period. Having gone there I practice language lessons well.

ಒಂದೂವರೆ ಗಂಟೆಯಿಂದ ಮೂರು ಗಂಟೆ ತನಕ ನಮಗೆ ಬಿಡುವು. ಆಗ ಕ್ಯಾಂಟೀನ್‌ಗೆ ಹೋಗಿ ತಿಂಡಿ ತಿಂದು ಟೀ ಕುಡೀತೀನಿ. ನನ್ನ ದಿನಚರಿಯಂತೆಯೇ ನಮ್ಮ ಊಟದ ವ್ಯವಸ್ಥೆ, ವ್ಯಾಸಂಗ ರೀತಿ ಎಲ್ಲವೂ ವಿಚಿತ್ರ ಇಲ್ಲಿ. ಊಟ ಬೆಳಿಗ್ಗೆ, ತಿಂಡಿ ಮಧ್ಯಾಹ್ನ. ಎಲ್ಲಾ ತಿರುವು ಮುರುವು. ಟೀ ಕುಡಿದು ಖುಷಿಗೆ ಇನ್ನೊಂದು ಸಿಗರೇಟ್ ಸೇದಿ ಲೈಬ್ರರಿಗೆ ಹೋಗ್ತೀನಿ. ಲೈಬ್ರರಿಗೆ ಹೋಗಿ ಕೆಲವು ಪತ್ರಿಕೆಗಳ ಸ್ವಾರಸ್ಯ ಪುಟಗಳನ್ನು ತಿರುವಿ ಹಾಕ್ತೀನಿ. ಉದಾಹರಣೆಗೆ ಸುಧಾ ವಾರ ಪತ್ರಿಕೆಯನ್ನು ಮುಂದಿನಿಂದ ತೆಗೆಯುವುದಿಲ್ಲ. ಹಿಂದಿನಿಂದ ತೆಗೆಯುತ್ತೇನೆ. ಹೀಗೆ ಒಂದೆರಡು ಪತ್ರಿಕೆಗಳನ್ನು ನೋಡಿ ಮೂರು ಗಂಟೆಗೆ ಕ್ಲಾಸಿಗೆ ಹೋಗ್ತೀನಿ.

Lunch break is from 1–30 to 3 p.m. At that time I go to canteen, I eat tiffin and take a cup of tea. Like my daily routine our meals system, the way of learning every thing is peculiar here. (They serve) meals in the morning, Tiffin in the afternoon. Everything is topsyturvy. After taking a cup of Tea I smoke another cigeratte for pleasure. I will go to library. Having gone to library I just turn the interesting pages of some of the magazines. For example I don't open *Sudha* from the front side. I open it from the back side. Like this having seen few magazines I go to the class at 3 o'clock.

ಐದು ಗಂಟೆಗೆ ಕ್ಲಾಸು ಮುಗಿಯುತ್ತೆ. ಮತ್ತೆ ಕ್ಯಾಂಟೀನ್‌ಗೆ ಹೋಗಿ ಕಾಫಿ ಕುಡಿದು ಹಾಸ್ಟಲಿಗೆ ಹೋಗ್ತೀನಿ. ಈಗ ಸಿಗರೇಟ್ ಸೇದಲ್ಲ. ಖುಷಿಗೆ ಬೇರೆ ಏನೇನೋ ಇರುತ್ತೆ. ಹಾಸ್ಟೆಲಿಗೆ ಹೋಗಿ ಆರು ಗಂಟೆತನಕ ಬ್ಯಾಡ್ಮಿಂಟನ್ ಆಟ ಆಡಿ ಏಳುಗಂಟೆಗೆ ಓದೋಕೆ ಆರಂಭಿಸ್ತೀನಿ. ಎಂಟೂವರೆಗೆ ಊಟದ ಶಾಸ್ತ್ರ ಮಾಡ್ಬಿಟ್ಟು ಹತ್ತು ಗಂಟೆ ತನಕ ಪಾಠ ಓದಿ ಮಲಗ್ತೀನಿ.

Class will be over by 5 O'clock. Again I will go to canteen, I take a cup of tea and then I go to hostel. Now I don't smoke cigarette. There will be many things for pleasure now. Having gone to the hostel, I play badminton upto 6 O'clock and then I start my studies at 7 O' clock. I finish my usual dinner at 8-30 p.m. and again study up to 10 O' clock and then I sleep.

ನಾನು ದಿನಚರಿ ಬರೆದಿರೋದನ್ನ ಎಚ್ಚರಿಕೆಯಿಂದ ಗಮನಿಸಿ. ಇದು ಒಂದು ದಿನಕ್ಕಿಂತ ಎಲ್ಲಾ ದಿನಕ್ಕೂ ಅನ್ವಯಿಸುತ್ತೆ ಅಲ್ವಾ? ಹಾಗಿದೆ ನಮ್ಮ ದಿನನಿತ್ಯದ ಚಟುವಟಿಕೆ !

Notice carefully my way of writing diary. This will be applicable for every day rather than a day. Our daily activities are like that !

DRILLS

I Build up Drill :

Model: ಕಲಿಸ್ತೀನಿ

ಕನ್ನಡ ಕಲಿಸ್ತೀನಿ

ಮಕ್ಕಳಿಗೆ ಕನ್ನಡ ಕಲಿಸ್ತೀನಿ.

ಹೋಗಿ ಮಕ್ಕಳಿಗೆ ಕನ್ನಡ ಕಲಿಸ್ತೀನಿ.

ನಾನು ಊರಿಗೆ ಹೋಗಿ ಮಕ್ಕಳಿಗೆ ಕನ್ನಡ ಕಲಿಸ್ತೀನಿ.

Build up the following making the changes wherever necessary. Use atleast one verbal participle form :

1) ಮಲಗಿದೆ.
2) ನೋಡ್ತೀನಿ.
3) ಊಟ ಮಾಡ್ತಾಳೆ.
4) ಕುಡಿಯುತ್ತಾನೆ.
5) ಬರೆಯಿರಿ.

II Expansion Drill :

Model : T : ನಾನು ———————— ಮಲಗಿದೆ.

ನಿನ್ನೆ, ಐದು, ಬರೆ, ಪಾಠ

S : ನಾನು ನಿನ್ನೆ ಐದು ಪಾಠ ಬರೆದು ಮಲಗಿದೆ.

Expand :

1) ಶೀಲಳಿಗೆ ———————— ಕೆಂಪಾಯಿತು.

ಮಣ್ಣು, ಕಣ್ಣು, ಬೀಳು

2) ನನಗೆ ———————— ಸಾಕಾಯಿತು.

ಮನೆ, ಗಣಪತಿಹಬ್ಬ, ಅಲಂಕಾರಮಾಡು.

3) ನಾನು ———————— ಹೋಗ್ತೀನಿ.

ಕಾಲೇಜು, ಬರು, ಸಿನಿಮಾ

4) ಕಮಲ ———————— ಕೆಟ್ಟಳು.

ಅವನು, ಮಾತು, ನಂಬು

5) ನೀವು ————————— ಬಂದಿರಾ ?

ಕ್ಲಾಸು, ತರೋದು, ಪುಸ್ತಕ, ಮರೆ

6) ನಾಯಿ ————————— ಹೋಯಿತು.

ಹಾಲು, ಹೊರಗೆ, ಕುಡಿ

III Combinatory Drill :

a) Model : T : ಅವಳು ಮೈಸೂರಿಗೆ ಬರ್ತಾಳೆ.
ಅವಳು ಕನ್ನಡ ಕಲಿತಾಳೆ.

S : ಅವಳು ಮೈಸೂರಿಗೆ ಬಂದು ಕನ್ನಡ ಕಲೀತಾಳೆ.

Combine :

1) ಅವರು ದಿನಾ ಪುಸ್ತಕವನ್ನು ಮನೆಯಲ್ಲಿ ಮರೆಯುತ್ತಾರೆ.
ಅವರು ಬರಿಕೈಯಲ್ಲಿ ಕಾಲೇಜಿಗೆ ಬರುತ್ತಾರೆ.

2) ಶಾಮು ನನಗೆ ಸಿಟಿಯಲ್ಲಿ ಸಿಕ್ಕ.
ನಾನು ಬರೋದು ತಡ ಆಯ್ತು.

3) ರಾಜು ದಾರಿಯಲ್ಲಿ ಬಿದ್ದ.
ಅವನು ಅಳ್ತಾ ಇದ್ದಾನೆ.

4) ನಾವು ನಿಮ್ಮ ಪುಸ್ತಕ ಮೇಜಿನ ಮೇಲೆ ಇಟ್ತೀವಿ.
ನಾವು ಒಳಗೆ ಹೋಗ್ತೀವಿ.

5) ನಾನು ಕಾಫಿ ಕುಡಿತೀನಿ
ನಾನು ಕಾಲೇಜಿಗೆ ಬರ್ತೀನಿ.

b) Model : T : ನಾನು ಸಿಗರೇಟ್ ಸೇದ್ತೀನಿ.
ನಾನು ಖುಷಿ ಪಡ್ತೀನಿ.

S : ನಾನು ಸಿಗರೇಟ್ ಸೇದಿ ಖುಷಿ ಪಡ್ತೀನಿ.

Combine :

1) ಆ ಹುಡುಗರು ದಿನಾ ಮೂರು ಸಾರಿ ಊಟ ಮಾಡ್ತಾರೆ.
   ಅವರು ಬೇಗ ದೊಡ್ಡವರಾಗ್ತಾರೆ.

2) ನಾನು ಇವತ್ತು ವರ್ತಮಾನ ಪತ್ರಿಕೆ ಓದಿದೆ.
   ನಾನು ಆಮೇಲೆ ಸ್ನಾನ ಮಾಡಿದೆ.

3) ಅವರು ಸಿಗರೇಟ್ ಸೇದ್ತಾರೆ.
   ಅವರು ಕೆಮ್ಮು ಬರಿಸಿಕೊಳ್ತಾರೆ.

c) Model : T : ಅವನು ಪಾಠ ಓದ್ತಾ ಇದ್ದ.
   ಅವನು ಮಲಗಿದ.

   S : ಅವನು ಪಾಠ ಓದ್ತಾ ಮಲಗಿದ.

Combine :

1) ಮಗು ದಾರಿಯಲ್ಲಿ ಹೋಗ್ತಾ ಇತ್ತು.
   ಮಗು ಕೆಳಗೆ ಬಿತ್ತು.

2) ನಾನು ಕ್ಲಾಸಿಗೆ ಹೋಗ್ತಾ ಇದ್ದೆ.
   ನಾನು ಸಿಗರೇಟು ಸೇದಿದೆ.

3) ಅವಳು ತಿಂಡಿ ತಿನ್ತಾ ಇದ್ದಳು.
   ಅವಳು ಪೇಪರ್ ಓದ್ತಾ ಇದ್ದಳು.

IV Response Drill :

1) ನೀವು ಬೆಳಿಗ್ಯೆ ಎದ್ದು ಏನು ಕುಡೀತೀರಿ ?
2) ನೀವು ಹೋಂವರ್ಕ್ ಬರೆದು ಯಾರ ಹತ್ತಿರ ಕೊಡ್ತೀರಿ ?
3) ನೀವು ಕನ್ನಡ ಕಲಿತು ಏನು ಮಾಡ್ತೀರಿ ?

4) ನೀವು ಮಧ್ಯಾಹ್ನ ಕ್ಯಾಂಟೀನ್‌ಗೆ ಹೋಗಿ ಊಟ ಮಾಡ್ತೀರೋ ತಿಂಡಿ ತಿಂತೀರೋ ?

5) ಇವತ್ತು ಸಾಯಂಕಾಲ ಹಾಸ್ಟೆಲಿಗೆ ಹೋಗಿ ಸಿನಿಮಾಕ್ಕೆ ಹೋಗ್ತೀರಾ ?

6) ದೀಪಾವಳಿ ಹಬ್ಬಕ್ಕೆ ಊರಿಗೆ ಹೋಗಿ ಯಾವಾಗ ವಾಪಸ್ ಬರ್ತೀರಿ?

7) ನೀವು ಲ್ಯಾಬ್‌ನಲ್ಲಿ ಪಾಠ ಕೇಳಿ ಏನು ಮಾಡ್ತೀರಿ?

EXERCISES

I Fill in the blanks using the correct verbal participle forms of the verbs given in the brackets :

1) ಅವನು ——— ಬೀಳುತ್ತಾನೆ. (ಸಾಯು)

2) ಗಿಡವನ್ನು ——— ನೀರು ಹಾಕುತ್ತಾರೆ. (ನೆಡು)

3) ನಿನ್ನನ್ನು ——— ನಾನು ಕೆಟ್ಟೆ. (ನಂಬು)

4) ಯಾರಿಗೆ ——— ಇಲ್ಲಿಗೆ ಬಂದಿರಿ ? (ಹೇಳು)

5) ಬಸ್ಸು ನಾಲ್ಕು ಗಂಟೆಗೆ ——— ಊರನ್ನು ಐದು ಗಂಟೆಗೆ ಸೇರಿತು. (ಹೊರಡು)

6) ಮಗುವನ್ನು ——— ಸ್ನೇಹಿತೆ ಮನೆಗೆ ಹೋದೆ. (ಮಲಗಿಸು)

7) ಜನಾನ ಕಿಟಕಿ ——— ಹೊರಗೆ ಹೋದ. (ಮುಚ್ಚು)

8) ಅವರು ನನ್ನನ್ನು ——— ಮಾತಾಡಿಸಿದರು. (ಕಾಣು)

9) ಅವನು ಊರಿಗೆ ———, ——— ಬಂದು ಬಿಟ್ಟ.

(ಹೋಗು, ತಿರುಗು)

10) ಅವರು ಪ್ರಿನ್ಸಿಪಾಲ್ ——— ರಿಟೈರ್ ಆದರು. (ಆಗು)

II Give the verbal participle forms of the following **verbs and** use them in your own sentences :

1) ಆಡು 2) ಕೇಳು 3) ಹೊಗು 4) **ಕೂಗು**

5) ಹೊಲಿಸು 6) ಕೊಳ್ಳು 7) ಸೋಲು 8) **ಮಲಗು**

III Combine the following sentences using **the verbal participle** forms :

1) ಅವರು ಪಾಠ ಬರೀತಾರೆ.
   ಅವರು ಆಟ ಆಡ್ತಾರೆ.
2) ನಾನು ದಿನಾ ಪೇಪರ್ ಓದ್ತೀನಿ.
   ಆಮೇಲೆ ಸ್ನಾನ ಮಾಡ್ತೀನಿ.
3) ಅವರು ಬೇಲೂರಿನ ದೇವಸ್ಥಾನ ನೋಡಿದರು.
   ಅವರು ಆಹಾ ಎಷ್ಟು ಚೆನ್ನಾಗಿದೆ ಅಂದರು.
4) ನೀವು ನನಗೆ ಒಂದು ಪುಸ್ತಕ ಕೊಟ್ಟಿರಿ.
   ನೀವು ಒಂದು ರೂಪಾಯಿ ತಗೊಂಡಿರಿ.
5) ಕಳ್ಳ ರಂಗಪ್ಪನನ್ನು ಕೊಂದ.
   ಕಳ್ಳ ಜೈಲಿಗೆ ಹೋದ.
6) ಲೀಲ ಹಾಡುತ್ತಾ ಇದ್ದಳು.
   ಅವಳು ಮನೆಗೆ ಹೋದಳು.
7) ಇಪ್ಪತ್ತೈದರಲ್ಲಿ ಹನ್ನೊಂದು ಕಳೆಯಿರಿ.
   ಎಷ್ಟು ಉಳಿಯುತ್ತದೆ ಹೇಳಿ.
8) ನಾನು ಎಂ. ಎ. ಓದುತ್ತಾ ಇದ್ದೆ.
   ನಾನು ಟೈಪಿಂಗ್ ಕಲಿತೆ.

IV Use the following expressions is your own sentences :

1) ಏನಿದೆ ಮಣ್ಣು !
2) ಹೊಟ್ಟೆಗೆ ತಣ್ಣೀರು ಸುರ್ಕ್ಕೋಬೇಕು !
3) ಚಟ ಅಲ್ಲ. ಖುಷಿ ಅಷ್ಟೆ.
4) ಸುತಾರಾಂ ಇಷ್ಟ ಇಲ್ಲ.
5) ಗಪ್ ಚಿಪ್ಪಾಗಿ.
6) ತಿರುವುಮುರವು.
7) ಶಾಸ್ತ್ರಮಾಡಿ.

V Split the following passage into small sentences replacing the participle form of the verbs by finite form of the verbs :

ನಾನು ಇನ್‌ಸ್ಟಿಟ್ಯೂಟಿಗೆ ಹೋಗಿ ಅಧ್ಯಾಪಕರಿಗೆ ಹೋಂವರ್ಕ್ ಪುಸ್ತಕ ಕೊಟ್ಟು ಕ್ಲಾಸಿಗೆ ಹೋಗ್ತೀನಿ. ಕ್ಲಾಸಿನಲ್ಲಿ ಮುಂದಿನ ಸೀಟಿನಲ್ಲಿ ಕೂರೋದು ನನಗೆ ಸುತರಾಂ ಇಷ್ಟ ಇಲ್ಲ. ಹಿಂದಿನ ಸೀಟಿನಲ್ಲಿ ಕೂರ್ತೀನಿ. ಕೂತು ಸ್ವಲ್ಪ ಹೊತ್ತು ಬೇರೆಯವರ ಜೊತೆ ಹರಟೆ ಹೊಡೀತೀನಿ. ಅಷ್ಟು ಹೊತ್ತಿಗೆ ಮೇಷ್ಟ್ರು ಕ್ಲಾಸಿಗೆ ಬಂದು ಅಟೆಂಡೆನ್ಸ್ ಹಾಕಿ ಪಾಠ ಶುರುಮಾಡ್ತಾರೆ. ಮೊದಲನೇ ಪೀರಿಯಡ್ ಗಪ್ ಚಿಪ್ಪಾಗಿ ಕೂತು ಪಾಠ ಕೇಳ್ತೀನಿ. ಆಮೇಲೆ ಹನ್ನೊಂದು ಗಂಟೆ ಇಪ್ಪತ್ತು ನಿಮಿಷಕ್ಕೆ ಕ್ಲಾಸಿನಿಂದ ಹೊರಗೆ ಬಂದು ಟಪಾಲು ನೋಡಿ ಡ್ರಿಲ್ ಕ್ಲಾಸಿಗೆ ಹೋಗ್ತೀನಿ. ಇದು ಆಟದ ಮೈದಾನದಲ್ಲಿನ ಡ್ರಿಲ್ ಅಲ್ಲ. ಅದಕ್ಕಿಂತ ಕಷ್ಟ ಇದು. ನೀವು ಒಮ್ಮೆ ಬಂದು ನೋಡಿ ಗೊತ್ತಾಗುತ್ತೆ. ಡ್ರಿಲ್ ಮಾಡಿ ಮೂರನೇ ಪೀರಿಯಡ್ ಲ್ಯಾಬೋರೇಟರಿಗೆ ಹೋಗ್ತೀನಿ. ಹೋಗಿ ಅಲ್ಲಿ ಭಾಷೆಯನ್ನು ಚೆನ್ನಾಗಿ ಅಭ್ಯಾಸ ಮಾಡ್ತೀನಿ.

VI Narrate in ten sentences about your arrival to Mysore and joining duty in Southern Regional Language Centre using verbal participle forms of the verbs :

VII Answer the following questions :

1) ಮಾಧುವಿನ ದಿನಚರಿ ಎಂಥದು?
2) ಮಾಧು ಬೆಳಿಗ್ಗೆ ಎದ್ದು ಏನೇನು ಮಾಡ್ತಾರೆ? ಅದರಲ್ಲಿ **ಏನು ವಿಶೇಷ** ಇದೆ?
3) ಮಾಧು ಇನ್‌ಸ್ಟಿಟ್ಯೂಟಿನಲ್ಲಿ ಏನು ಮಾಡ್ತಾರೆ?
4) ಮಧ್ಯಾಹ್ನ ಮಾಧು ಯಾವಾಗ, ಎಲ್ಲಿ ತಿಂಡಿ ತಿಂತಾರೆ?
5) ಸಾಯಂಕಾಲ ಇನ್‌ಸ್ಟಿಟ್ಯೂಟ್‌ನಿಂದ ಬಂದು ಏನು **ಮಾಡ್ತಾರೆ?**

VOCABULARY :

ಅನುಭವಿಸು—to experience

ಅನ್ವಯಿಸು—applicable

ಆಟದ ಮೈದಾನ—play ground

ಉಜ್ಜು—to brush

ಒತ್ತಾಯಿಸು—to insist

ಒಂದೇಸಮನೆ—continuously

ಕಟ್ಟಾಭಿಮಾನ—strong affection

ಕರ್ತೃ—writer

ಕಾರಣ—reason

ಕೆಟ್ಟ ಬುದ್ಧಿ—wickedness

ಖುಷಿ—pleasure

ಗಪ್‌ಚಿಪ್—silence, figurative expression

ಚಟ—habit

ಚಟುವಟಿಕೆ—activity

ಟಪಾಲು—post, mail

ತಣ್ಣೀರು—cold water

ತಿರುವುಮುರುವು—topsy turvy

ತಿರುವಿ ಹಾಕು—to turn over

ದಿನಚರಿ—daily routine, diary

ದಿನನಿತ್ಯ—daily

ನಿಯಮ—principle

ಪುಟ—page

ಬಿಡುವು—liesure, interval

ಮನಸ್ಸು—mind

ಮಣ್ಣು—'mud'. In this lesson it is used in a figurative sense as useless.

ಮಹಾಪುರುಷರು—great men

ವ್ಯವಸ್ಥೆ—system

ವ್ಯಾಸಂಗ—study

ವಿಚಿತ್ರ—peculiar

ಶಾಸ್ತ್ರ—ritual

ಶಾಸ್ತ್ರಮಾಡು—perform an action habitually

ಸ್ವಾರಸ್ಯ—interesting

ಸುತರಾಂ—'a little' figurative expression

ಸುಮಾರು—approximately

ಸುರಿ—to pour

ಹರಟೆಹೊಡಿ—to gossip

ಹಾಸಿಗೆ—bed

ಹೊಟ್ಟೆಗೆ ತಣ್ಣೀರು ಸುರಿದ್ಕೊ—An idiomatic expression means endure an unpleasant situation.

GRAMMAR NOTES :

1. The verbal Participle Construction is introduced in this lesson. The function of verbal participle construction is to show the completion of one action and anticipation of another action. For ex: in English 'having done my work I came here'.

There are two verbal participle suffixes – u and – i in Kannada The use of verbal participle suffix – u and – i are determined by the type of stem which the verb forms.

1. a. – u suffix is added to the past stems of those verbs which form their past tenses with – d –, – t –, – k –, – ṭ –, **and – ḍ –**

Thus the structure is,

Past tense stem + – u.

Ex :

1) ನಾನು ಊರಿಂದ ಬಂದು ಕಾಲೇಜಿಗೆ ಹೋಗ್ತೀನಿ.
2) ಅವಳು ಕನ್ನಡ ಕಲಿತು ಹೈದರಾಬಾದಿಗೆ ಹೋಗ್ತಾಳೆ.
3) ಅವರಿಗೆ ಹತ್ತು ರೂಪಾಯಿ ಕೊಟ್ಟು ಬಂದೆ.
4) ತುಂಬಾ ತಿಂಡಿ ಮಿಕ್ಕು ಹಾಳಾಯ್ತು.
5) ನಾನು ಇವತ್ತು ಒಂದು ಸೀರೆ ತೆಗೆದುಕೊಂಡು ಬಂದೆ.

1. b. – i suffix is directly added to the verb root of those verbs which form their past tense stems with – id.

structure is

Verb root + – i

Ex :

1) ನಾನು ಸಿನಿಮಾ ನೋಡಿ ಬಂದೆ.

2) ಅವರು ಮನೆಗೆ ಹೋಗಿ ಬಂದರು.

3) ಅವಳು ಆಟ ಆಡಿ ಬಂದಳು.

Note the Verbal participle of ಆಗು and ಹೋಗು is ಆಗಿ and ಹೋಗಿ.

2. Sometimes the verbal participle form of the verb 'biḍu' is used along with the verbal participle of another verb. It is sometimes used for emphasis some times as no particular meaning.

Ex :

1) ನಾನು ಸಿನಿಮಾ ನೋಡಿಬಿಟ್ಟು ಬಂದೆ.

2) ಅವರು ತಿಂಡಿ ತಿಂದುಬಿಟ್ಟು ಬಂದರು.

Note in the above examples the participle of 'biḍu' is compounded with the participle of another verb. However finite form of 'biḍu' may also be compounded with participle of another form.

Ex :

ನಾನು ಆ ಸಿನಿಮಾ ನೋಡಿಬಿಟ್ಟೆ.

LESSON 39

PREPARATION TO GO FOR CONVOCATION

DIALOGUE

ಕಮಲ : ಸುಮಾ ನೀನು ಇನ್‌ಸ್ಟಿಟ್ಯೂಟಿಗೆ ಬರಲ್ವಾ? ಹೊತ್ತಾಯ್ತು. ಇವತ್ತು ಹನ್ನೊಂದು ಗಂಟೆಗೆ ನಮ್ಮ ಘಟಿಕೋತ್ಸವ. ನೆನಪು ಇದೆ ತಾನೆ?	Suma aren't you coming to the Institute? It is time. Our convocation is at 11 O' clock to day. Do you remember it ?
ಸುಮಾ : ಬರ್ತೀನಿ ಕಮಲ. ನಾವಿಬ್ಬರೂ ಒಂಭತ್ತೂವರೆಗೆ ಅಲ್ಲಿರಬೇಕು. ನಮ್ಮದು ರಿಸೆಪ್ಷನಿಸ್ಟ್ ಕೆಲಸ ತಾನೆ ?	Coming Kamala. We will have to be there at 9–30. Ours is receptionist job. isn't it ?

ಕಮಲ : ಹೌದು ಸುಮಾ. ಆಗಲೆ ಒಂಭತ್ತು ಗಂಟೆ ಆಗ್ತಾ ಬಂತು. ಇನ್ನೂ ನೀನು ಸ್ನಾನ ಮಾಡಿಕೊಳ್ಳಬೇಕಾ ? ಇನ್ನೂ ತಲೆ ಬಾಚಿಕೋಬೇಕು.

Yes Suma. It is already nearing 9 O' clock. Do you have to take bath yet ? You have to comb your hair too.

ಸುಮಾ : ನಿಂತುಕೊಂಡೇ ಮಾತಾಡ್ತಾ ಇದೀಯಲ್ಲಾ ಕಮಲ, ಕೂತ್ಕೊ. ಆಗಲೇ ಸ್ನಾನ ಮಾಡಿಕೊಂಡೆ. ಬೇಗ ಬೇಗ ತಲೆ ಬಾಚಿಕೊಳ್ತೀನಿ. ಯಾಕೆ ಅಷ್ಟು ಅವಸರ ಮಾಡ್ತೀಯಾ ?

Kamala, you are talking standing. Sit down. I took bath already. I will comb my hair quickly. Why are you making such a hurry?

ಕಮಲ : ಹಾಗಲ್ಲ. ಅಲ್ಲಿ ತುಂಬಾ ಕೆಲಸ ಇದೆ. ಪ್ರಮುಖ ಆಹ್ವಾನಿತರದು ಒಂದು ಪಟ್ಟಿ ಮಾಡಿಕೊಳ್ಳಬೇಕು. ನಿನ್ನೆ ರಾತ್ರಿ ಮಾಡಿಕೊಳ್ಳೋಕೆ ಆಗಲಿಲ್ಲ. ಆಮೇಲೆ ಶ್ರೀಧರನ್ ಅವರಿಗೆ ಹೇಳಿ ಕಾಫಿ, ಬಿಸ್ಕಿಟ್ ತರಿಸೋಕೆ ಏರ್ಪಾಡು ಮಾಡಬೇಕು.

Not like that. There is lot of work. We have to prepare a list of important invitees. Yesterday night we could not have it prepared. Afterwards we will have to arrange to get coffee, biscuit informing Shridhar.

ಸುಮಾ : ಶ್ರೀಧರ್ ಎಲ್ಲಾ ಸರಿಯಾಗಿ ಏರ್ಪಾಟು ಮಾಡಿಕೊಂಡು ಬರ್ತಾರೆ. ಎಲ್ಲಿ ಆ ಬಾಚಣಿಗೆ ಕೊಡು. ತಲೆ ಬಾಚಿಕೊಳ್ತೀನಿ.

Sridhar will come arranging everything properly. Give me that comb. I will comb my hair.

ಕಮಲ : ತಗೊ. ಇದ್ಯಾಕೆ ನಿನ್ನ ಮುಖ ಹೀಗೆ ಇದೆ. ಸರಿಯಾಗಿ ಸೋಪು ಹಾಕಿಕೊಂಡು ಮುಖ ತೊಳೆದು ಕೊಳ್ಳಲಿಲ್ವಾ ?

Take. Why is it your face like this. Have you not washed it properly by using soap?

ಸುಮಾ : ಇಲ್ಲ. ಸರಿಯಾಗೇ ತೊಳೆದು ಕೊಂಡೆ. ತಾಳು ಕನ್ನಡೀಲಿ ನೋಡಿ

No. I washed it properly. Wait, I will see it in the mirror.

ಕೊಳ್ತೀನಿ. ಅವಸರದಲ್ಲಿ ಸ್ನಾನ ಮಾಡಿಕೊಂಡೆ. ಸೋಪು ಅಲ್ಲಲ್ಲಿ ಹಾಗೇ ಉಳಿದುಕೊಂಡು ಇದೆ.	In a hurry I had my bath. Soap remains here and there.
ಕಮಲ : ಹೊರಡೇ ಸುಮಾ ಬೇಗ. ಹೊತ್ತಾಯ್ತು ಇನ್ನೂ ಕುಂಕುಮಾನೇ ಹಚ್ಚಿಕೊಳ್ತಾ ಇದೀಯಾ. ಇನ್ನೂ ಸೀರೆ ಉಟ್ಕೊಳ್ಳಬೇಕು. ಹೀಗೇ ಮಾತಾಡ್ತಾ ಇದೀಯ.	Start soon Suma. It is already late. Still you are putting on Kum Kum. You have to wear saree yet. Simply you are talking.
ಸುಮಾ : ಕಮಲ ನೀನು ಬೈಬೇಡ. ನಾನು ಎಷ್ಟೇ ಆಗಲಿ ಸೋಮಾರಿ. ಯಾವ ಸೀರೆ ಉಟ್ಕೊಳ್ಳಲಿ ಹೇಳು ?	Don't scold Kamala. Any way I am lazy. Tell me which saree shall I wear?
ಕಮಲ : ಹಸಿರು ಸೀರೆ ಉಟ್ಕೊ. ಬಾ ಇಲ್ಲಿ ನಿನಗೆ ಕುಂಕುಮಾನ ನಾನೇ ಹಚ್ತೀನಿ. ಹೂ ಮುಡಿದು ಕೊಳ್ಳಲ್ವಾ ?	Wear green saree. Come here I myself will put Kum Kum on your forehead. Won't you wear flowers on your plait ?
ಸುಮಾ : ಥ್ಯಾಂಕ್ಸ್ ದಯವಿಟ್ಟು ಅಷ್ಟು ಮಾಡು. ಇವತ್ತು ಹೂ ಮುಡಿದು ಕೊಳಲ್ಲ.	Thanks. Please do that. Today I won't wear flowers.
ಕಮಲ : ರೆಡಿ ಆದೆಯಲ್ಲಾ ಹೊರಡು. ಹೋಗೋಣ. ಇನ್ನೂ ಕ್ಯಾಂಟೀನ್‌ಗೆ ಹೋಗಿ ತಿಂಡಿ ತಿಂದುಕೊಂಡು ಹೋಗಬೇಕು.	You are ready now. Start. Let us go. Still we have to go to canteen, eat our breakfast and then go.

DRILLS

I Build up Drill :

Model : ತಿಂದುಕೊಂಡು ಬರ್ತೀನಿ.

ತಿಂಡಿ ತಿಂದುಕೊಂಡು ಬರ್ತೀನಿ.

ಕ್ಯಾಂಟೀನಿನಲ್ಲಿ ತಿಂಡಿ ತಿಂದುಕೊಂಡು ಬರ್ತೀನಿ.

ದಿನಾ ಕ್ಯಾಂಟೀನಿನಲ್ಲಿ ತಿಂಡಿ ತಿಂದುಕೊಂಡು ಬರ್ತೀನಿ.

ನಾನು ದಿನಾ ಕ್ಯಾಂಟೀನಿನಲ್ಲಿ ತಿಂಡಿ ತಿಂದುಕೊಂಡು ಬರ್ತೀನಿ.

Build up the following making the changes wherever necessary.

1) ಕೊಂಡುಕೊಂಡು ಬರ್ತೀನಿ.
2) ಕರೆದುಕೊಂಡು ಬರ್ತಾಳೆ.
3) ಬರೆದುಕೊಳ್ತಾ ಇಲ್ವಾ ?
4) ನೋಡಿಕೊಂಡು ಬರ್ತಾರೆ.
5) ಓದಿಕೊಳ್ಳಿ.

II Substitution Drill :

Model : T : ನೀನು ಹಲ್ಲು ಉಜ್ಜಿಕೊಂಡು ಬಾ.

ನೀವು

S : ನೀವು ಹಲ್ಲು ಉಜ್ಜಿಕೊಂಡು ಬನ್ನಿ.

Substitute :

1) ಅವರು ಬಟ್ಟೆ ಹಾಕಿಕೊಳ್ತಾ ಇದಾರೆ.

ಅವಳು

....

ಅವನು

....

2) ನಾನು ಸ್ನಾನ ಮಾಡಿಕೊಂಡೆ.

ನಾವು

....

3) ಆ ಹುಡುಗರು ಆಟ ಆಡಿಕೊಳ್ತಾ ಇದಾರೆ.

ಹುಡುಗಿ

____

4) ಅವಳು ಬಟ್ಟೆ ಒಗೆದುಕೊಳ್ಳುತ್ತಾಳೆ.

ಅವನು

____

III Transformation Drill :

Model : T : ನಾನು ಅಡಿಗೆ ಮಾಡಿದೆ.

S : ನಾನು ಅಡಿಗೆ ಮಾಡಿಕೊಂಡೆ.

Transform :

1) ಅವರು ಸ್ನಾನ ಮಾಡ್ತಾ ಇದಾರೆ.
2) ನೀವು ಈ ಸೀರೆ ಕೊಳ್ತೀರಾ ?
3) ಅವಳು ಸಾಯಂಕಾಲ ಹಾಡು ಹಾಡ್ತಾ ಇರ್ತಾಳೆ.
4) ನಾನು ಹೇಳೋದನ್ನ ನೀವು ಬರೀತೀರಾ ?
5) ನೀವು ಇವತ್ತು ಸಿನಿಮಾ ನೋಡಿ ಬರ್ತೀರಾ ?

IV Response Drill :

1) ನಿಮ್ಮ ಬಟ್ಟೆ ನೀವೇ ಒಗೆದುಕೊಳ್ತೀರಾ ?
2) ನೀವು ದಿನಾ ಎಷ್ಟು ಸಾರಿ ತಲೆ ಬಾಚಿಕೊಳ್ತೀರಿ ?
3) ನೀವು ಮಧ್ಯಾಹ್ನ ಹಾಸ್ಟೆಲಿನಿಂದ ಊಟ ತರಿಸಿಕೊಳ್ತೀರಾ ?
4) ನಿಮ್ಮ ರೂಂಮೇಟ್ ರಾತ್ರಿ ಎಷ್ಟುಗಂಟೆಗೆ ಮಲಗಿಕೊಳ್ತಾರೆ ?
5) ನೀವು ಎಷ್ಟು ಗಂಟೆಗೆ ಮಲಗಿಕೊಳ್ತೀರಿ ?

EXERCISES

I Fill in the blanks using the correct reflexive form of the verbs given in the brackets :

1) ರಮೇಶ್ ದಿನಾ ಬೆಳಿಗ್ಗೆ ಎಂಟು ಗಂಟೆಗೆ ಶೇವ್ .... (ಮಾಡು)
2) ಲೀಲಾ ರಾತ್ರಿ ಹತ್ತು ಗಂಟೆಯವರೆಗೆ .... (ಓದು)
3) ನಿನ್ನೆ ನನ್ನ ಸ್ನೇಹಿತರು ಒಂದು ಸ್ಕೂಟರ್ .... (ಕೊಳ್ಳು)
4) ವಿದ್ಯಾರ್ಥಿಗಳು ಕ್ಲಾಸಿನಲ್ಲಿ ಪಾಠ .... ಇದ್ದಾರೆ. (ಬರೆ)
5) ದಯವಿಟ್ಟು .... ಈ ಕಾಫಿ .... (ಕುಳಿತು, ತೆಗೊ)
6) ನಮ್ಮ ಕೆಲಸ ನಾವೇ .... ಬೇಕು. (ಮಾಡು)
7) ಹುಡುಗರು ತಮ್ಮ ತಮ್ಮಲ್ಲಿ ಕೆಟ್ಟ ಮಾತು .... ಬಾರದು. (ಆಡು)
8) ನೀವೆಲ್ಲಾ ಒಳ್ಳೆಯ ಬುದ್ಧಿ .... (ಕಲಿ)
9) ನಾನು ತಲೆ .... (ಬಾಚಿ),ತಿಂಡಿ......... ಕ್ಲಾಸಿಗೆ ಹೋಗಬೇಕು. (ತಿನ್ನು)
10) ನಾನು ಯಾವ ಸೀರೆ ....? (ಉಡು)

II Transform the following passage into reflexive form :

ರಾಮು ದಿನಾ ಬೆಳಿಗೆ ಏಳು ಗಂಟೆಗೆ ಎದ್ದು ಹಲ್ಲು ಉಜ್ತಾನೆ. ಅವನು ಬೆಳಿಗೆ ಕಾಫಿ, ತಿಂಡಿ, ಮಧ್ಯಾಹ್ನ ಸಾಯಂಕಾಲ ಅಡಿಗೆ ಮಾಡ್ತಾನೆ. ಅವನ ಬಟ್ಟೆ ಅವನೇ ಒಗೆಯುತ್ತಾನೆ. ಬೆಳಿಗ್ಗೆ ಎಂಟು ಗಂಟೆಯಿಂದ ಒಂಬತ್ತೂವರೆ ತನಕ ಪಾಠ ಬರೀತಾನೆ. ಸಾಯಂಕಾಲ ನಾಲ್ಕು ಗಂಟೆಗೆ ಲೈಬ್ರರಿಗೆ ಹೋಗಿ ನೋಟ್ಸ್ ಮಾಡ್ತಾನೆ. ರಾತ್ರಿ ಹತ್ತು ಗಂಟೆತನಕ ಓದ್ತಾನೆ. ಹತ್ತು ಗಂಟೆಗೆ ಮಲಗ್ತಾನೆ.

III Write in ten lines about your preparation to the class and daily activities using the reflexive construction of the verb.

IV Answer the following questions:

1) ಕಮಲ ಮತ್ತು ಸುಮಾ ಎಲ್ಲಿಗೆ ಹೋಗುವುದಕ್ಕೆ ಸಿದ್ಧತೆ ಮಾಡಿಕೊಳ್ತಾ ಇದಾರೆ ?
2) ಅವರು ಇನ್‌ಸ್ಟಿಟ್ಯೂಟಿಗೆ ಹೋಗಿ ಏನು ಕೆಲಸ ಮಾಡಿಸಬೇಕು ?
3) ಸುಮನ ಮುಖ ಯಾಕೆ ಹಾಗಿದೆ?
4) ಕಮಲ ಯಾವ ಸೀರೆ ಉಟ್ಟುಕೊಳ್ಳುವುದಕ್ಕೆ ಹೇಳಿದಳು?

VOCABULARY :

ಅವಸರ — hurry

ಆಹ್ವಾನಿತರು — invitees

ಉಡು — to wear saree or dhoti

ಏರ್ಪಾಡು / ಏರ್ಪಾಟು — arrangement

ಕನ್ನಡಿ — mirror

ಕುಂಕುಮ — safron

ಘಟಿಕೋತ್ಸವ — convocation

ತಲೆ — head

ತಲೆ ಬಾಚು — to comb the hair

ತಾಳು — to wait

ತೊಳೆ — to wash

ನೆನಪು — remembrance

ನಿಲ್ಲು — to stand

ಪಟ್ಟಿ — list

ಪ್ರಮುಖ — important

ಬಾಚಣಿಗೆ — comb

IV Answer the following questions:

1) ಕಮಲ ಮತ್ತು ಸುಮಾ ಎಲ್ಲಿಗೆ ಹೋಗುವುದಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಿದಾರೆ ?
2) ಅವರು ಇನ್ಸ್ಟಿಟ್ಯೂಟಿಗೆ ಹೋಗಿ ಏನು ಕೆಲಸ ಮಾಡಿಸಬೇಕು ?
3) ಸುಮನ ಮುಖ ಯಾಕೆ ಹಾಗಿದೆ?
4) ಕಮಲ ಯಾವ ಸೀರೆ ಉಟ್ಟುಕೊಳ್ಳುವುದಕ್ಕೆ ಹೇಳಿದಳು?

VOCABULARY:

ಅವಸರ — hurry

ಆಹ್ವಾನಿತರು — invitees

ಉಡು — to wear saree or dhoti

ಏರ್ಪಾಡು / ಏರ್ಪಾಟು — arrangement

ಕನ್ನಡಿ — mirror

ಕುಂಕುಮ — safron

ಘಟಿಕೋತ್ಸವ — convocation

ತಲೆ — head

ತಲೆ ಬಾಚು — to comb the hair

ತಾಳು — to wait

ತೊಳೆ — to wash

ನೆನಪು — remembrance

ನಿಲ್ಲು — to stand

ಪಟ್ಟಿ — list

ಪ್ರಮುಖ — important

ಬಾಚಣಿಗೆ — comb

LESSON 40

LETTER TO A COLLEAGUE

LETTER

ತಾರೀಕು 13-5-1976
ಮೈಸೂರು

ಪ್ರಿಯ ನರಸಿಂಹರಾವ್,

ನಿಮಗೆ ಕಾಗದ ಬರೆಯುವೆ ಒಂದು ತಿಂಗಳು ಆಯ್ತು. ನಾನು ಒಂದು ದಿನ ತಡವಾಗಿ ನಮ್ಮೂರಿನಿಂದ ಹೊರಟೆ. ಏಕೆಂದರೆ ಹದಿಮೂರನೇ ತಾರೀಕು ನನಗೆ ರಿಸರ್ವೇಷನ್ ಸಿಕ್ಕದೆ ಹೊರಡಲಿಲ್ಲ. ಮಾರನೇ ದಿನಕ್ಕೆ ನನಗೆ ರಿಸರ್ವೇಷನ್ ಸಿಕ್ಕಿತು. ಹದಿನಾಲ್ಕನೇ ತಾರೀಕು ನಮ್ಮೂರನ್ನು ಬಿಟ್ಟು ಹದಿನೈದನೇ ತಾರೀಕು ಮೈಸೂರಿಗೆ

Dear Narasimha Rao,

It is a month since I wrote you a letter. I left home a day late. Because I could not get reservation on 13th, (so) I did not start. I got a reservation for the following day. Leaving our place on 14th I arrived Mysore on 15. I had difficulty in

ಬಂದೆ. ಮದ್ರಾಸಿನಲ್ಲಿ ಸಹ ಸೀಟು ಸಿಕ್ಕದೆ ನನಗೆ ತುಂಬಾ ಕಷ್ಟ ಆಯಿತು. ಆದರೂ ಅಲ್ಲಿ ಉಳಿಯದೆ ಅವತ್ತೇ ಹೊರಟು ಮೈಸೂರಿಗೆ ಬಂದೆ. ಏಕೆಂದರೆ ಹದಿನೈದನೇ ತಾರೀಖು ಸಾಯಂಕಾಲದ ಒಳಗೆ ಇಲ್ಲಿ ಸೇರಿಕೊಳ್ಳಬೇಕಿತ್ತು.

getting a seat in Madras also. Even so instead of staying in Madras, leaving the same day (from Madras) I arrived at Mysore. Because I had to join here by the afternoon of 15th.

ಮೈಸೂರು ತುಂಬಾ ಸುಂದರವಾದ ಪಟ್ಟಣ. ಇದನ್ನು ಅವಶ್ಯವಾಗಿ ನೀನು ಒಮ್ಮೆ ನೋಡಲೇಬೇಕು. ಇನ್ನು ಹತ್ತು ತಿಂಗಳಲ್ಲಿ ಒಮ್ಮೆಯಾದರೂ ಇಲ್ಲಿಗೆ ಬರದೆ ಇರಬೇಡ. ಇಷ್ಟು ಸುಂದರವಾದ ಸ್ಥಳವನ್ನು ನಾನು ವರ್ಣಿಸಲಾರೆ. ನೀನೇ ಒಮ್ಮೆ ಬಂದು ನೋಡಿ ಆನಂದಪಡು.

Mysore is a very beautiful city. You really must see it some time. Do not fail to come here at least once with in the next ten months. I can't describe what a beautiful place it is. Come some time and have the pleasure of seeing it for yourself.

ಇಲ್ಲಿ ನಾನು ಕಾವೇರಿ ಹಾಸ್ಟೆಲ್‌ನಲ್ಲಿ ಇದ್ದೇನೆ. ಮಾನಸಗಂಗೋತ್ರಿ ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ. ನಮ್ಮ ಭಾರತೀಯಭಾಷಾ ಸಂಸ್ಥಾನ ಅಲ್ಲೇ ಇದೆ. ನಮ್ಮ ಹಾಸ್ಟೆಲಿನಿಂದ ಇನ್ಸ್ಟಿಟ್ಯೂಟಿಗೆ ಒಂದೂವರೆ ಕಿಲೋಮೀಟರ್ ಆಗುತ್ತೆ. ಬೆಳಿಗ್ಗೆ ಒಂಭತ್ತು ಗಂಟೆಗೆ ಊಟ ಹಾಕುತ್ತಾರೆ. ಮಧ್ಯಾಹ್ನ ಒಂದೂವರೆ ಗಂಟೆಗೆ ಕ್ಯಾಂಟೀನ್‌ನಲ್ಲಿ ತಿಂಡಿ ತಿನ್ನುತ್ತೇನೆ. ಮತ್ತೆ ರಾತ್ರಿ ಹಾಸ್ಟೆಲಿನಲ್ಲೇ ಊಟ.

I am staying in Kaveri hostel here. Manasagangotri is the Post graduate centre of Mysore University. Our Central Institute of Indian Languages is also situated there. The Institute is about $1\frac{1}{2}$ KM from our hostel. They serve meals at 9 O'clock in the morning. I eat tiffin at 1–30 p.m. in the canteen. The evening meal is served in the hostel.

ನಮಗೆ ತರಗತಿಗಳು ಆರಂಭವಾಗಿ ತುಂಬಾ ದಿನ ಆಯಿತು. ಮೊದಮೊದಲು ಹೆಂಡತಿ ಮಕ್ಕಳನ್ನು ಸ್ನೇಹಿತರನ್ನು ಬಿಟ್ಟು

Many days have passed since our classes started. In the beginning being away from wife

ಇರುವುದು ತುಂಬಾ ಕಷ್ಟ ಅನ್ನಿಸುತ್ತಿತ್ತು. ಈಗಲೂ ನಿಮ್ಮನ್ನೆಲ್ಲಾ ನೋಡದೆ ಬಹಳ ದಿನ ಆಯಿತು ಅನ್ನಿಸುತ್ತಾ ಇದೆ. ಆದರೆ ಇಲ್ಲಿಯ ಪ್ರಿನ್ಸಿಪಾಲರು, ಅಧ್ಯಾಪಕರು ತುಂಬಾ ಒಳ್ಳೆಯವರು. ಈಗ ಯಾವ ತೊಂದರೆಯೂ ಇಲ್ಲದೆ ಇದ್ದೇನೆ. ಇಲ್ಲಿಯ ಜನರು ಹೆಚ್ಚಿಗೆ ಮಾತನಾಡದೆ ತಮ್ಮ ಪಾಡಿಗೆ ತಾವು ಇರುತ್ತಾರೆ. ಬೇರೆಯವರಿಗೆ ತೊಂದರೆ ಕೊಡದೆ ಸಹಾಯ ಮಾಡುತ್ತಾರೆ. ಅಥವಾ ಸಹಾಯ ಮಾಡದೆ ತಮ್ಮಷ್ಟಕ್ಕೆ ತಾವು ಇರುತ್ತಾರೆ.

and children and friends seemed very difficult. Even now I feel that it is long since that I saw you all. But the Principal and the lecturers are very good people. Now I do not have any problem. Here people do not talk much and mind their own business. They don't cause trouble to any one but do try to help them. Or if they cannot help (others) they mind their own business.

ನಮಗೆ ಇಲ್ಲಿ ದಿನಕ್ಕೆ ಐದೂವರೆ ಗಂಟೆ ಕ್ಲಾಸು. ಈ ವಯಸ್ಸಿನಲ್ಲಿ ಐದೂವರೆ ಗಂಟೆ ಕುಳಿತುಕೊಳ್ಳಲು ಬಹಳ ಕಷ್ಟ. ಆದರೆ ಕುಳಿತುಕೊಳ್ಳದೆ ವಿಧಿ ಇಲ್ಲ. ಅಲ್ಲದೆ ಹಾಸ್ಟೆಲಿಗೆ ಹತ್ತಿರದಲ್ಲಿ ಯಾವ ಮನರಂಜನೆಯೂ ಇಲ್ಲದೆ ತುಂಬಾ ಬೇಸರ ಆಗುತ್ತೆ. ಸಿನಿಮಾ ನೋಡುವುದಕ್ಕೆ ಸಿಟಿಗೆ ಹೋಗಬೇಕು. ಐದು ಗಂಟೆಯ ಮೇಲೆ ಅಷ್ಟು ಉತ್ಸಾಹ ಇರಲ್ಲ. ಆಗಾಗ್ಗೆ ಇಲ್ಲಿಗೆ ತೆಲುಗು ಸಿನಿಮಾಗಳು ಬರುತ್ತಾ ಇರುತ್ತವೆ. ಭಾನುವಾರದ ದಿನ ಮಾತ್ರ ಸಿಟಿಗೆ ಹೋಗಿ ಸಿನಿಮಾ ನೋಡಬಹುದು. ಇತ್ತೀಚೆಗೆ ಒಳ್ಳೆಯ ಕನ್ನಡ ಸಿನಿಮಾಗಳು ಬರುತ್ತಿವೆ. ನಮ್ಮವರು ಅಂಥ ಸಿನಿಮಾಗಳನ್ನು ಮಾಡದೆ ಎಂಥೆಂಥದ್ದೋ ಮಾಡುತ್ತಾರೆ. ನೀನೊಮ್ಮೆ ತಪ್ಪದೆ ಕನ್ನಡ ಸಿನಿಮಾಗಳನ್ನು ನೋಡಬೇಕು. ಖಂಡಿತವಾಗಿಯೂ ಅವುಗಳನ್ನು ಮೆಚ್ಚಿಕೊಳ್ಳುತ್ತೀಯೆ.

We have 5½ hours classes per day. It is very difficult to sit for 5½ hours at a stretch at this age. We have no option but to sit (in the class). Also as there is no place for entertainment near the hostel, it gets bored. We have to go to city to see movies. There is not much enthusiasm (left)after 5 O' clock. Often Telugu movies come to the city. On Sundays only, one could go to city and see a movie. Now good Kannada movies are coming. Our people instead of producing such movies produce different kind altogether. You. must see Kannada movies with out failing. Certainly you will like them.

ನನ್ನ ಆರೋಗ್ಯದ ಬಗ್ಗೆ ಬರೆಯದೆ ಏನೇನೋ ಬರೆದೆ. ಕಳೆದ ವಾರ ಸ್ವಲ್ಪ ನೆಗಡಿ ಆಗಿತ್ತು. ಈಗ ಆರೋಗ್ಯದಿಂದ ಇದ್ದೇನೆ. ನಿಮ್ಮ ಆರೋಗ್ಯಕ್ಕೆ ತಪ್ಪದೆ ಕಾಗದ ಬರೆಯುತ್ತಾ ಇರಿ.	I have written many things but I haven't mentioned about my health. Last week I had a bit of cold. I am in good health now. Continue to write about your health without fail.
ನಿಮ್ಮ ಸ್ನೇಹಿತ	Your friend,
ಕೃಷ್ಣಮೂರ್ತಿ	Krishnamurthy

DRILLS :

I Build up Drill :

Model : ಬಂದರು.

ನೋಡದೆ ಬಂದರು.

ಲಾಲ್‌ಬಾಗ್ ನೋಡದೆ ಬಂದರು.

ಬೆಂಗಳೂರಿಗೆ ಹೋಗಿ ಲಾಲ್‌ಬಾಗ್ ನೋಡದೆ ಬಂದರು.

ಅವರು ಬೆಂಗಳೂರಿಗೆ ಹೋಗಿ ಲಾಲ್‌ಬಾಗ್ ನೋಡದೆ ಬಂದರು.

Build up the following making the changes wherever necessary:

1) ಹೋದರು.

2) ಆಡಿದರು.

3) ಹೋಗಲಿಲ್ಲ.

II Transformation Drill :

a) Model : T : ದೇವರು ನಿನಗೆ ಒಳ್ಳೆಯದು ಮಾಡಲಿ

S : ದೇವರು ನಿನಗೆ ಒಳ್ಳೆಯದು ಮಾಡದೆ ಇರಲಿ.

Transform :

1) ನಿನಗೆ ವಿದ್ಯೆ ಬುದ್ಧಿ ಚೆನ್ನಾಗಿ ಬರಲಿ.

2) ನಾವು ಆ ಕೆಲಸ ಮಾಡೋಣ.

3) ನೀವು ಆ ಪುಸ್ತಕ ಓದಿ.

4) ಸಾಯಂಕಾಲ ನೀನು ಲೈಬ್ರರಿಗೆ ಹೋಗು.

5) ನಾನು ಊರಿಗೆ ಹೋಗಲಾ ?

b) Model : T : ನೀನು ಕ್ಯಾಂಟೀನಿಗೆ ಹೋಗಿ ಕಾಫಿ ಕುಡಿದೆಯಾ ?

S : ನೀನು ಕ್ಯಾಂಟೀನಿಗೆ ಹೋಗದೆ ಕಾಫಿ ಕುಡಿದೆಯಾ ?

Transform :

1) ನೀವು ಪಾಠ ಓದಿ ಪ್ರಶ್ನೆಗಳಿಗೆ ಉತ್ತರ ಬರೆದಿರಾ ?

2) ನೀನು ಕಾಗದ ಬರೆದು ಊರಿಗೆ ಹೋದೆಯಾ ?

3) ರಮೇಶ ಮನೆಗೆ ಹೋಗಿ ಸಿನಿಮಾಕ್ಕೆ ಹೋದ.

4) ಕೃಷ್ಣಮೂರ್ತಿ ಮದ್ರಾಸಿಗೆ ಬಂದು ಮೈಸೂರಿಗೆ ಬಂದರು.

5) ಸತೀಶ ಆ ಪುಸ್ತಕವನ್ನು ಭಾಷಾಂತರಿಸಿ ಸತ್ತರು.

c) Model : T : ನಾನು ಕ್ಯಾಂಟೀನ್‌ಗೆ ಹೋಗಿ ಕಾಫಿ ಕುಡಿದೆ.

S : ನಾನು ಕ್ಯಾಂಟೀನ್‌ಗೆ ಹೋಗದೆ ಕಾಫಿ ಕುಡಿಯಲಿಲ್ಲ.

Transform :

1) ಹದಿಮೂರನೇ ತಾರೀಕು ರಿಸರ್ವೇಷನ್ ಸಿಕ್ಕಿ ಹೊರಟೆ.

2) ನಾನು ಪಾಠ ಬರೆದು ಆಟ ಆಡಿದೆ.

3) ಅವನು ಕಾಗದ ಬರೆದು ಊರಿಗೆ ಹೋದ.

4) ಹುಡುಗರು ಟಿಕೆಟ್ ತೆಗೆದುಕೊಂಡು ಸಿನಿಮಾಕ್ಕೆ ಹೋಗುತ್ತಾರೆ.

5) ಅವಳು ಕನ್ನಡ ಕಲಿತು ಹುಡುಗರಿಗೆ ಕನ್ನಡ ಕಲಿಸುತ್ತಾಳೆ.

III Response Drill :

Model : T : ನೀವು ದಿನಾ ಹಲ್ಲು ಉಜ್ಜದೆ ಕಾಫಿ ಕುಡಿಯುತ್ತೀರಾ?

S : ಇಲ್ಲ ದಿನಾ ನಾನು ಹಲ್ಲು ಉಜ್ಜದೆ ಕಾಫಿ ಕುಡಿಯಲ್ಲ.
ಹಲ್ಲು ಉಜ್ಜಿ ಕಾಫಿ ಕುಡಿಯುತ್ತೇನೆ.

Kespond :

1) ನೀವು ಊಟ ಮಾಡದೆ ಕಾಲೇಜಿಗೆ ಬರುತ್ತೀರಾ?
2) ನೀವು ಚೆನ್ನಾಗಿ ಕನ್ನತ ಕಲಿಯದೆ ಪಾಠ ಹೇಳಿಕೊಡುತ್ತೀರಾ?
3) ನೀವು ನಿಮ್ಮ ಊರಿಗೆ ಹೋಗದೆ ಕನ್ನಡ ಕಲಿಸ್ತೀರಾ?
4) ಅವರು ಬರೆಯದೆ ಓದುತ್ತಾರಾ?
5) ನೀವು ಸಂಬಳ ತೆಗೆದುಕೊಳ್ಳದೆ ಹಾಸ್ಟೆಲ್ ಫೀ ಕಟ್ಟೀರಾ?

EXERCISES

I Fill in the blanks using the negative verbal participle **form** of the verbs given in the brackets :

1) ನಿಮಗೆ ಕಾಗದ ———— ಒಂದು ತಿಂಗಳು ಆಯ್ತು. (ಬರೆ)
2) ನಿನ್ನನ್ನು ———— ಬಹಳ ದಿನಗಳಾದವು. (ನೋಡು)
3) ಇಲ್ಲಿಯ ಜನ ———— ಇರ್ತಾರೆ. (ತೊಂದರೆ ಕೊಡು)
4) ಆ ಮೂರ್ಖ ಬಾಗಿಲು ———— ಒಳಗೆ ಬಂದ. (ತಟ್ಟು)
5) ನಾನು ತಿಂಡಿ ———— ಕಾಫಿ ಕುಡಿಯಲಿಲ್ಲ. (ತಿನ್ನು)

II Give the negative verbal participle form of the **following** verbs and use them in your own sentences :

1) ಕಾದು	6) ಕೊಂದು
2) ಬಿದ್ದು	7) ನಕ್ಕು
3) ಗೆದ್ದು	8) ಆನಂದ ಪಟ್ಟು
4) ನೋಡಿ	9) ತಪ್ಪಿ
5) ಬಯ್ದು	10) ಹೊರಟು

III Combine the following sentences by using negative verbal participle form :

1) ನನಗೆ ರೈಲಿನಲ್ಲಿ ಸೀಟು ಸಿಕ್ಕಲಿಲ್ಲ.
ನಾನು ಊರಿನಲ್ಲಿಯೇ ಉಳಿದೆ.

2) ಶೀಲ ನನ್ನ ಜೊತೆ ಊರಿಗೆ ಬರಲಿಲ್ಲ.
ನಾನೊಬ್ಬನೇ ಊರಿಗೆ ಹೋದೆ.

3) ನಾವು ಐದು ಗಂಟೆ ಕ್ಲಾಸಿನಲ್ಲಿ ಕುಳಿತುಕೊಳ್ಳಬೇಕು.
ನಮಗೆ ಬೇರೆ ದಾರಿಯೇ ಇಲ್ಲ.

4) ನಿಮ್ಮ ಆರೋಗ್ಯದ ಬಗ್ಗೆ ಕೇಳಲಿಲ್ಲ.
ನಿಮ್ಮನ್ನು ಏನೇನೋ ಕೇಳಿದೆ.

5) ಅವಳು ಚೆನ್ನಾಗಿ ಕನ್ನಡ ಕಲಿಯಲಿಲ್ಲ.
ಅವಳು ಹುಡುಗರಿಗೆ ಪಾಠ ಹೇಳಿಕೊಡುತ್ತಾಳೆ.

IV Change the following sentences into affirmative :

1) ಅವಳು ಸರ್ಕಸ್ಸನ್ನು ನೋಡದೆ ನಗಲಿಲ್ಲ.
2) ಕೃಷ್ಣಮೂರ್ತಿ ಮೈಸೂರಿಗೆ ಬರದೆ ಕಾಗದ ಬರೆಯಲಿಲ್ಲ.
3) ಜವಾನ ಕಿಟಕಿ ಮುಚ್ಚದೆ ಹೊರಗೆ ಹೋಗಲಿಲ್ಲ.
4) ಸುಮಾ ರವಿಗೆ ಹೊಡೆಯದೆ ಅಳಲಿಲ್ಲ.
5) ನಾವು ರಾತ್ರಿ ಊಟ ಮಾಡದೆ ಮಲಗಿಕೊಳ್ಳಲ್ಲ.

V Combine the following sentences according to the model :

Model : T : ಅವರು ಬಂದು ಕರೆಯಲಿಲ್ಲ.
ನಾನು ಮದುವೆಗೆ ಹೋಗ್ತೀನಿ.

S : ಅವರು ಬಂದು ಕರೆಯಲಿಲ್ಲ ಅಂತ ನಾನು ಮದುವೆಗೆ ಹೋಗದೆ ಇರಲ್ಲ.

Combine :

1) ನೀನು ಅಲ್ಲಿಗೆ ಹೋಗಲಿಲ್ಲ.
   ನಾನು ಅಲ್ಲಿಗೆ ಹೋಗ್ತೀನಿ.

2) ಅವಳು ಕ್ಲಾಸಿಗೆ ಬರಲಿಲ್ಲ.
   ಅವನು ಕ್ಲಾಸಿಗೆ ಬರ್ತಾನೆ.

3) ನೀನು ಸಿನಿಮಾ ನೋಡಲ್ಲ.
   ನಾನು ಸಿನಿಮಾ ನೋಡ್ತೀನಿ.

VI A passage is given below with gaps. Fill in the gaps choosing the correct verbs with appropriate constructions.

ನಾನು ಇವತ್ತು ಬೆಳಿಗ್ಗೆ ಮಾತ್ರ ಕ್ಲಾಸಿಗೆ ———. ಮಧ್ಯಾಹ್ನ ಕ್ಲಾಸಿಗೆ ——— ಆಗಲ್ಲ. ಯಾಕೆಂದರೆ ನಾನು ನಾಳೆ ಊರಿಗೆ ———. ಅದಕ್ಕೋಸ್ಕರ ಎಲ್ಲಾ ಸಿದ್ಧತೆ ———. ಆದ್ದರಿಂದ ಬೆಳಿಗ್ಗೆ ಕ್ಲಾಸಿಗೆ ———, ಅಲ್ಲಿಂದ ಹಾಗೇ ಪೋಸ್ಟಾಫೀಸಿಗೆ ———. ಪೋಸ್ಟಾಫೀಸಿಗೆ ——— ಊರಿಗೆ ——— ಅಂತ ಟೆಲಿಗ್ರಾಂ ———. ಟೆಲಿಗ್ರಾಂ ——— ಹೋಗೋಕೆ ಆಗಲ್ಲ. ನಮ್ಮ ಊರು ಸ್ಟೇಷನ್ನಿಂದ ಸ್ವಲ್ಪ ದೂರ. ಯಾರಾದರೂ ಸ್ಟೇಷನ್ ಹತ್ತಿರ ——— ಅಂತ ಟೆಲಿಗ್ರಾಂ ಕೊಡಬೇಕು. ರೈಲು ಅಲ್ಲಿಗೆ ರಾತ್ರಿ ಹತ್ತು ಗಂಟೆಗೆ ಹೋಗುತ್ತೆ. ಪೋಸ್ಟಾಫೀಸಿನಿಂದ ರೈಲ್ವೆ ಸ್ಟೇಷನ್ನಿಗೆ ——— ನಾಳೆ ಊರಿಗೆ ಒಂದು ಟಿಕೆಟ್ ———. ಅಲ್ಲಿಂದ ಸಿಟಿಗೆ ———. ಅಲ್ಲಿ ನನ್ನ ತಂಗೀಗೆ ಒಂದು ಹೊಸ ಸ್ಕರ್ಟ್ ———. ಆಮೇಲೆ ದೇವರಾಜ ಮಾರ್ಕೆಟ್ಟಿಗೆ ——— ಹೂವು ಹಣ್ಣು ———. ಇಷ್ಟೆಲ್ಲಾ ——— ವಾಪಸ್ ಬರಬೇಕು.

VII Write a letter to your colleague on the model of the lesson about your experience in Mysore so far.

VIII Answer the following :

1) ಕೃಷ್ಣಮೂರ್ತಿ ಯಾರಿಗೆ ಕಾಗದ ಬರೆಯುತ್ತಾ ಇದಾರೆ ?

2) ಕೃಷ್ಣಮೂರ್ತಿ ಅವರ ಊರಿನಿಂದ ಯಾಕೆ ತಡವಾಗಿ ಹೊರಟರು ?

3) ಕೃಷ್ಣಮೂರ್ತಿಯವರು ಮೈಸೂರಿನ ಬಗ್ಗೆ ಏನು ಬರೆಯುತ್ತಾರೆ ?

4) ಅವರ ಇನ್‌ಸ್ಟಿಟ್ಯೂಟ್ ಮತ್ತು ತರಗತಿಯ ಬಗ್ಗೆ ಏನು ಬರೆಯುತ್ತಾರೆ ?

VOCABULARY :

ಅವಶ್ಯವಾಗಿ—necessarily

ಅಲ್ಲದೆ—besides that

ಆನಂದಪಡು—to enjoy

ಆರೋಗ್ಯ—health

ಇಲ್ಲದೆ—without

ಉತ್ಸಾಹ—zeal

ಊಟ ಹಾಕು—to serve the meal

ಒಮ್ಮೆ—once

ಒಮ್ಮೊಮ್ಮೆ—once in a while

ಖಂಡಿತವಾಗಿ—definitely

ತಪ್ಪದೆ—without failing

ನೆಗಡಿ—cold

ಪತ್ರ—letter

ಪಾಡು—condition

ಪ್ರಿಯ—dear

ಬೇಸರ—boring

ಭಾರತೀಯ ಭಾಷಾ ಸಂಸ್ಥಾನ—Central Institute of Indian Languages

ಮೆಚ್ಚು—to appreciate

ವಿಧಿ ಇಲ್ಲ—no other go

ವರ್ಣಿಸು—to describe

ಸಹೋದ್ಯೋಗಿ—colleague

ಸ್ನಾತಕೋತ್ತರ ಕೇಂದ್ರ—Post graduate centre

ಸುಂದರವಾದ—beautiful

ಸೇರು—to join, to reach a place

ಹೇಳಿಕೊಡು—to teach

GRAMMAR NOTES:

Verbal participle negation is introduced in this lesson.

Verbal participle negation marker is ade.

The strucutre of the verbal participle negation is,

Verb root+ade

Ex:

ಬರೆ + ಅದೆ=ಬರೆಯದೆ

ನಿಮಗೆ ಕಾಗದ ಬರೆಯದೆ ಬಹಳ ದಿನ ಆಯ್ತು.

ತಿನ್ + ಅದೆ=ತಿನ್ನದೆ

ನಾನು ತಿಂಡಿ ತಿನ್ನದೆ ಕಾಲೇಜಿಗೆ ಬಂದೆ.

Note, the verbal participle negation, unlike the verbal participle form is not based on the past stem.

UNIT 11

Review

LESSON 11

ENQUIRY TO GO TO SIGHT SEEING PLACES

DIALOGUE

ಭಾಸ್ಕರನ್ : ಬನ್ನಿ ರಾಜಣ್ಣ.

ರಾಜಣ್ಣ : ಬರೋದು ಸ್ವಲ್ಪ ತಡ ಆಯ್ತು, ಕ್ಷಮಿಸಿ ಭಾಸ್ಕರನ್.

ಭಾಸ್ಕರನ್ : ಪರವಾಗಿಲ್ಲ ಬನ್ನಿ. ಇಲ್ಲಿ ಕೂತುಕೊಳ್ಳಿ.

ರಾಜಣ್ಣ : ಈಗ ಹೇಳಿ ಭಾಸ್ಕರನ್. ನೀವು ಯಾವ್ಯಾವ ಸ್ಥಳಗಳಿಗೆ ಹೋಗಬೇಕು.

ಭಾಸ್ಕರನ್ : ನಾನು ಹಳೇಬೀಡು, ಬೇಲೂರು, ಜೋಗ್ ಫಾಲ್ಸ್ ನೋಡಬೇಕು ಅಂತ ಇದೀನಿ.

ರಾಜಣ್ಣ : ಯಾಕೆ ನೀವು ಶ್ರವಣಬೆಳಗೊಳ ನೋಡೋಲ್ವಾ ?

ಭಾಸ್ಕರನ್ : ಅಲ್ಲಿ ಏನಿದೆ ನೋಡೋದಕ್ಕೆ ?

ರಾಜಣ್ಣ : ಅಲ್ಲಿ ಗೊಮ್ಮಟನ ಕಲ್ಲಿನ ವಿಗ್ರಹ ಇದೆ. ತುಂಬಾ ದೊಡ್ಡದು. ನೋಡೋ-ದಕ್ಕೆ ತುಂಬಾ ಚೆನ್ನಾಗಿದೆ.

ಭಾಸ್ಕರನ್ : ಈ ಶ್ರವಣಬೆಳಗೊಳ ಎಲ್ಲಿದೆ ?

ರಾಜಣ್ಣ : ಅದು ಹಳೇಬೀಡು, ಬೇಲೂರಿಗಿಂತ ಮೊದಲೇ ಸಿಕ್ಕುತ್ತೆ. ಶ್ರವಣಬೆಳಗೊಳ, ಹಳೆಬೀಡು, ಬೇಲೂರುಗಳನ್ನು ಜೋಗ್‌ಫಾಲ್ಸ್‌ಗೆ ಹೋಗ್ತಾನೆ ನೋಡ ಬಹುದು. ನಿಮ್ಮ ಹತ್ತಿರ ಕರ್ನಾಟಕದ ನಕಾಶೆ ಇದೆಯಾ ?

ಭಾಸ್ಕರನ್ : ನನ್ನ ಹತ್ತಿರ ಇಲ್ಲ.

ರಾಜಣ್ಣ : ಹೋಗಲಿ, ಹಾಗೇ ಹೇಳ್ತೀನಿ ಕೇಳಿ. ನೀವು ಹೋಗ್ತಾನೇ ಶ್ರವಣಬೆಳಗೊಳ, ಬೇಲೂರು ನೋಡಿಕೊಂಡು ಹೋಗಿ.

ಭಾಸ್ಕರನ್ : ಇವತ್ತು ರಾತ್ರಿ ಹೋಗಿ ಎಲ್ಲಿ ಉಳಿಯಬೇಕು ನಾನು ?

ರಾಜಣ್ಣ : ನೀವು ಇವತ್ತು ರಾತ್ರಿ ಹೋಗಬೇಡಿ. ನಾಳೆ ಬೆಳಿಗ್ಗೆ ಏಳು ಗಂಟೆಗೆ ಸ್ಟೇಷನಿಂದ ಹೊರಡಿ. ಶ್ರವಣಬೆಳಗೊಳಕ್ಕೆ ಒಂದು ಬಸ್ ಇದೆ. ಹನ್ನೊಂದು ಗಂಟೆಗೆ ಅದು ಅಲ್ಲಿಗೆ ಹೋಗುತ್ತೆ. ಅಲ್ಲಿ ಬಾಹುಬಲಿಯ ವಿಗ್ರಹ ನೋಡಿ ಎರಡು ಗಂಟೆಗೆ ಬಸ್ಸು ಹಿಡಿದು ಹಾಸನಕ್ಕೆ ಹೋಗಿ.

ಭಾಸ್ಕರನ್ : ಅಲ್ಲಿಂದ ಹಾಸನಕ್ಕೆ ಬಸ್ಸು ಇದೆಯಾ ?

ರಾಜಣ್ಣ : ಹೌದು. ಅಲ್ಲಿಂದ ಹಾಸನಕ್ಕೆ ಬಸ್ಸು ಇವೆ. ಹಾಸನದಲ್ಲಿ ಊಟ ತಿಂಡಿ ಮಾಡಿಕೊಂಡು ಅವತ್ತೇ ಸಾಯಂಕಾಲ ಹಳೇಬೀಡಿಗೆ ಹೋಗಿಬಿಡಿ.

ಭಾಸ್ಕರನ್ : ಹಳೇಬೀಡು ತುಂಬಾ ದೊಡ್ಡ ಊರಾ ? ಅಲ್ಲಿ ಉಳಿದುಕೊಳ್ಳೋಕೆ ರೂಮು ಸಿಗುತ್ತಾ ?

ರಾಜಣ್ಣ : ಊರು ಸುಮಾರಾಗಿದೆ. ಅಲ್ಲಿ ಒಂದು "ಪ್ರವಾಸಿ ಬಂಗಲೆ" ಇದೆ. ಅಲ್ಲಿ ಉಳಿದುಕೊಳ್ಳಬಹುದು. ಮಾರನೆದಿನ ಹಳೇಬೀಡು, ಬೇಲೂರು ನೋಡಿ ಕೊಂಡು ಜೋಗ್ ಜಲಪಾತಕ್ಕೆ ಹೋಗಬಹುದು.

ಭಾಸ್ಕರನ್ : ಹಳೆಬೀಡು ಬೇಲೂರಿನ ಹತ್ತಿರದಲ್ಲೇ ಇದೆಯಾ ?

ರಾಜಣ್ಣ : ಹೌದು, ತುಂಬಾ ದೂರ ಏನೂ ಆಗಲ್ಲ.

ಭಾಸ್ಕರನ್ : ಜೋಗ್ ಜಲಪಾತಕ್ಕೆ ಹೇಗೆ ಹೋಗಬೇಕು ?

ರಾಜಣ್ಣ : ಮತ್ತೆ ಹಾಸನಕ್ಕೆ ಬಂದು ಅಲ್ಲಿಂದ ಬಸ್ಸು ಹಿಡಿಯಬೇಕು.

ಭಾಸ್ಕರನ್ : ಹಾಸನಕ್ಕೆ ಬರದೆ ಹೋಗೋಕೆ ಆಗಲ್ವಾ ?

ರಾಜಣ್ಣ : ಬರದೆ ಹೋಗಬಹುದು. ಬೇಲೂರಿಂದ ಅರಸೀಕೆರೆಗೆ ಬಂದು ಅಲ್ಲಿಂದ ಟ್ರೈನು ಅಥವಾ ಬಸ್ಸಿನಲ್ಲಿ ಹೋಗಬಹುದು.

ಭಾಸ್ಕರನ್ : ಟ್ರೈನು ನೇರವಾಗಿ ಅಲ್ಲಿಗೆ ಹೋಗುತ್ತಾ ?

ರಾಜಣ್ಣ : ಇಲ್ಲ. ಟ್ರೈನು ತಾಳಗುಪ್ಪ ಸ್ಟೇಷನ್ನಿಗೆ ಹೋಗುತ್ತೆ. ಅಲ್ಲಿಂದ ಜೋಗ್ ಜಲಪಾತ ತುಂಬಾ ಹತ್ತಿರ. ಬಸ್ಸು ಮಾತ್ರ ನೇರವಾಗಿ ಅಲ್ಲಿಗೆ ಹೋಗುತ್ತೆ. ಅಲ್ಲಿಂದ ಒಂದೆರಡು ಬಸ್ಸು ಇರೋದರಿಂದ ಬಸ್ಸಿಗೆ ಕಾಯದೆ ಟ್ರೈನಿಗೆಹೋಗಿ ತಾಳಗುಪ್ಪದಿಂದ ಅಲ್ಲಿಗೆ ಹೋಗೋದು ಒಳ್ಳೆಯದು.

ಭಾಸ್ಕರನ್ : ವಾಪಸ್ ಬರೋಕೆ ನೇರವಾಗಿ ಬಸ್ಸು ಸಿಕ್ಕಬಹುದು ಅಲ್ವಾ ?

ರಾಜಣ್ಣ : ಹೌದು. ಅಲ್ಲಿಂದ ಒಂದು ಬಸ್ಸು ಮೈಸೂರಿಗೆ ಬರುತ್ತೆ. ಅದರಲ್ಲಿ ಬನ್ನಿ.

ಭಾಸ್ಕರನ್ : ತುಂಬಾ ಥ್ಯಾಂಕ್ಸ್. ರಾಜಣ್ಣ. ಇಷ್ಟೊಂದು ವಿವರ ತಿಳಿಸಿ ನನಗೆ ತುಂಬಾ ಸಹಾಯ ಮಾಡಿದಿರಿ.

ರಾಜಣ್ಣ : ಅದೇನು ಮಹಾ? ನಿಮ್ಮ ಅನುಭವವನ್ನೆಲ್ಲಾ ನನಗೆ ಹೇಳದೆ ಇರಬೇಡಿ.

ಭಾಸ್ಕರನ್ : ಖಂಡಿತ ಹೇಳ್ತೀನಿ.

ರಾಜಣ್ಣ : ನಾನೂ ನಾಳೆ ಬೆಳಿಗ್ಗೆ ನಿಮ್ಮ ಜೊತೆ ಬಸ್‌ಸ್ಟ್ಯಾಂಡಿಗೆ ಬರ್ತೀನಿ. ನಿಮ್ಮನ್ನು ಕಳಿಸೋದಕ್ಕೆ.

ಭಾಸ್ಕರನ್ : ನಿಮಗೆ ಯಾಕೆ ಸುಮ್ಮನೆ ತೊಂದರೆ. ನಾನೇ ಹೋಗ್ತೀನಿ.

ರಾಜಣ್ಣ : ತೊಂದರೆ ಏನಿಲ್ಲ. ಬೆಳಿಗ್ಗೆ ನಾನು ಅಲ್ಲಿಗೆ ಬರ್ತೀನಿ.

ಭಾಸ್ಕರನ್ : ಆಗಲಿ.

TEST PAPER

I Fill in the blanks using the Kannada equivalents of the English words given in the brackets :

1) ಶ್ರವಣಬೆಳಗೊಳದಲ್ಲಿ ಗೊಮ್ಮಟನ ಕಲ್ಲಿನ———ಇದೆ. (Statue)
2) ನಿಮ್ಮ ಹತ್ತಿರ ತಮಿಳುನಾಡಿನ————ಇದೆಯಾ ? (map)
3) ಹಳೇಬೀಡಿನಲ್ಲಿ ಒಂದು————ಇದೆ. (travellers bunga low)
4) ————ಜೋಗ್ ಜಲಪಾತಕ್ಕೆ ಹೋಗಬಹುದು. (next day)
5) ನಿಮ್ಮ————ನನಗೆ ತಿಳಿಸಿ..(experience)

II Combine the following sentences using verbal participle form :

1) ನಾವು ಆಟ ಆಡುತ್ತೇವೆ.
ನಾವು ಕಾಫಿ ಕುಡಿಯುತ್ತೇವೆ.
2) ಅವರು ನೋಟ್ಸ್ ಬರೆಯುತ್ತಾರೆ.
ಅವರು ನಮಗೆ ತೋರಿಸುತ್ತಾರೆ.
3) ನಾನು ಮೈಸೂರಿಗೆ ಬರಲಿಲ್ಲ.
ನಾನು ಬೃಂದಾವನಕ್ಕೆ ಹೋದೆ.
4) ನಾನು ಮಧ್ಯಾಹ್ನ ನಮ್ಮ ತಂದೆಗೆ ಊಟ ಕೊಡುತ್ತೇನೆ.
ನಾನು ಕಾಲೇಜಿಗೆ ಹೋಗುತ್ತೇನೆ.
5) ಅವರು ಹೊಸ ಕಾರು ಕೊಂಡುಕೊಳ್ಳುತ್ತಾರೆ.
ಅವರು ಜೋಗ್ ಫಾಲ್ಸ್‌ಗೆ ಹೋಗುತ್ತಾರೆ

III. Combine the following sentences according to the model :

Model : T : ನಾನು ಮೈಸೂರಿಗೆ ಹೋಗ್ತೀನಿ.
ನಾನು ಸಿನಿಮಾ ನೋಡಿ ಬರ್ತೀನಿ.
S ನಾನು ಮೈಸೂರಿಗೆ ಹೋಗಿ ಸಿನಿಮಾ ನೋಡದೆ ಬರಲ್ಲ.

Combine :

1) ಅವರು ಮೈಸೂರಿಗೆ ಹೋಗ್ತಾರೆ.
ಅವರು ಕನ್ನಡ ಕಲಿತು ಬರ್ತಾರೆ.

2) ಸುಶೀಲ ಲೈಬ್ರರಿಗೆ ಹೋಗ್ತಾಳೆ.
ಅವಳು ಪುಸ್ತಕ ತಗೊಂಡು ಬರ್‍ತಾಳೆ.

3) ನಾವು ಕ್ಯಾಂಟೀನಿಗೆ ಹೋಗ್ತೀವಿ.
ನಾವು ಕಾಫಿ ಕುಡಿದು ಬರ್‍ತೀವಿ.

4) ಅವನು ಸಿಟಿಗೆ ಹೋದ.
ಅವನು ಚಪ್ಪಲಿ ಕೊಂಡುಕೊಂಡು ಬಂದ.

5) ಮಂತ್ರಿಗಳು ಮೈಸೂರಿಗೆ ಬಂದರು.
ಅವರು ಭಾಷಣ ಮಾಡಿ ಹೋದರು.

IV Change the following sentences into negative verbal participle form :

1) ನಾನು ಕಾಫಿ ಕುಡಿದು ಬಂದೆ.
2) ಅವರು ಪೇಪರ್ ಓದಿ ಸ್ನಾನ ಮಾಡಿದರು.
3) ರಾಜೇಶ್ವರಿ ಸಿಟಿಯಿಂದ ಬಟ್ಟೆ ಕೊಂಡುಕೊಂಡು ಬಂದರು.
4) ನೀನು ಲೈಬ್ರರಿಗೆ ಹೋಗಿ ಪೇಪರ್ ಓದ್ತೀಯಾ ?
5) ಅವರು ಪಾಠ ಬರೆದು ಓದುತ್ತಾರೆ.

V Change the following sentences into their reflexive forms

1) ಅವರು ದಿನಾ ಹಾಸ್ಟೆಲಿನಿಂದ ನಡೆದುಬರ್‍ತಾರೆ.
2) ಅವಳು ಯಾವಾಗಲೂ ಕನ್ನಡೀಲಿ ತನ್ನ ಮುಖ ನೋಡ್ತಾ ಇರ್‍ತಾಳೆ.
3) ನಾವು ನಮ್ಮ ಕೆಲಸ ಮಾಡ್ತಾ ಇರ್‍ತೀವೆ.

VI Write the verbal participle form of the following verbs and use them in your own sentences :

1. ಏಳು   2. ಕೇಳು
3. ನಂಬು   4. ಇಡು

VII **Answer the following questions:-**

1) ಶ್ರವಣಬೆಳಗೊಳದಲ್ಲಿ ನೋಡುವುದಕ್ಕೆ ಏನಿದೆ ?

2) ರಾಜಣ್ಣ ಭಾಸ್ಕರನ್‌ಗೆ ಹೇಗೆ ಹೋಗಬೇಕೆಂದು ಹೇಳಿದರು ?

3) ಜೋಗ್‌ಜಲಪಾತಕ್ಕೆ ಹೇಗೆ ಹೋಗಬಹುದು ?

VOCABULARY :

ಅನುಭವ—experience

ಉಳಿ—to stay, to remain

ಕಲ್ಲಿನ ವಿಗ್ರಹ—stone statue

ಖಂಡಿತ—certainly

ನಕಾಶೆ—map

ಪ್ರವಾಸ ಬಂಗಲೆ —travellers bungalow

ವಿವರ—particulars

ಕ್ಷಮಿಸು—to excuse, to endure

ಬಾಹುಬಲಿ—the name of the monolithic statue at Sravanabelagola

UNIT 12

LESSON 42

CONVERSATION OVER TELEPHONE

DIALOGUE

ನಟರಾಜು:	ಹಲೋ. ನಾನು ನಟರಾಜ ಮಾತಾಡ್ತಾ ಇದೀನಿ. ಯಾರು ಮಾತಾಡ್ತಾ ಇರೋದು ?	Hello. This is Nataraja(speaking) who is calling please?
ರಾಜು:	ರಾಜು ಮಾತಾಡ್ತಾ ಇದೀನಿ. ಮನೆಯಿಂದ.	Raju speaking; from home.
ನಟರಾಜ:	ಏನಪ್ಪ ಸಮಾಚಾರ! ತುಂಬಾ ದಿನದ ಮೇಲೆ ನನ್ನ ಜ್ಞಾಪಕ ಬಂದುಬಿಟ್ಟಿದೆ.	Well, What is the news! It is a good few days since you thought of me.

ರಾಜು :	ಸಾಯಂಕಾಲ ಏನೂ ಪ್ರೋಗ್ರಾಂ ಹಾಕಿಕೊಂಡಿಲ್ಲ. ಆದರೆ ನಾಳೆ ಶಿವನಸಮುದ್ರಕ್ಕೆ ಹೋಗಬೇಕು ಅಂತ ಇದ್ದಾರೆ.	He has no plans for the evening. But he plans to go to Shivana samudra tomorrow.
ನಟರಾಜ :	ಯಾಕೆ, ಅವರು ಶಿವನ ಸಮುದ್ರ ನೋಡಿಲ್ವಾ ?	Why, hasn't he seen Shivana samudra.
ರಾಜು :	ಊಹೂಂ. ಅವರು ನೋಡಿಲ್ಲ. ಅದಕ್ಕೇ ಈ ಸಾರಿ ಹೋಗಬೇಕು ಅಂತ ಇದ್ದಾರೆ. ನಿನಗೂ ಬರೋಕೆ ತಿಳಿಸು ಅಂತ ಹೇಳಿದ್ದಾರೆ.	No. He hasn't seen it. That is why he plans to go there this time. He asked me to tell you to join him.
ನಟರಾಜ :	ನಾನು ಅದನ್ನು ಎರಡು ಸಲ ನೋಡಿದ್ದೇನೆ. ನೀವೇ ಹೋಗಿ ಬನ್ನಿ.	I have seen it twice. You go. Please accomPany
ರಾಜು :	ನೀನು ನೋಡಿದ್ದಿಯಾ ಅಂತಾನೇ ಕರೀತಾ ಇರೋದು. ಯಾಕೆ ಏನಾದರೂ ಕೆಲಸ ಇದೆಯಾ ?	We are asking you because you have seen it. Why, do you have any work ?
ನಟರಾಜ :	ಹೌದು. ನಾಳೆ ಸ್ವಲ್ಪ ಕೆಲಸ ಇತ್ತು. ಊರಿಂದ ದೊಡ್ಡಪ್ಪ ಬಂದಿದ್ದಾರೆ. ಅವರನ್ನು ನಂಜನಗೂಡಿಗೆ ಕರಕೊಂಡು ಹೋಗ್ಬೇಕು.	Yes. I have some work tomorrow. My father's elder brother has come from our place. I have to take him to Nanjangud.
ರಾಜು :	ಯಾಕೆ, ನಿನ್ನ ತಮ್ಮ ಚಿದಾನಂದ ಇಲ್ವಾ ?	Why, Isn't your younger brother Chidananda there ?
ನಟರಾಜ :	ಇಲ್ಲ. ಅವನು ಬೆಂಗಳೂರಿಗೆ ಹೋಗಿದ್ದಾನೆ. ಇನ್ನೂ ಬಂದಿಲ್ಲ.	No. He has gone to Bangalore. He hasn't come back yet.

ರಾಜು :	ಹೌದಾ ! ಅವನ ಕೆಲಸದ ವಿಷಯ ಏನಾಯಿತು ? ಎಲ್ಲಾದರೂ ಕೆಲಸ ಸಿಕ್ಕಿತಾ?	Is it ! What happened about his (finding) Job hunting? Did he get a job anywhere ?
ನಟರಾಜ:	ಇನ್ನೂ ಎಲ್ಲೂ ಸಿಕ್ಕಿಲ್ಲ. ಅದಕ್ಕೇ ತುಂಬಾ ಓಡಾಡ್ತಾ ಇದ್ದಾನೆ.	He hasn't got one yet. That is why he is going back and forth.
ರಾಜು :	ಮತ್ತೆ ನೀನು ನಾಳೆ ಬರಲ್ವಾ ?	Then you are not coming tomorrow ?
ನಟರಾಜ :	ನೋಡೋಣ. ಚಿದಾನಂದ ಸಾಯಂಕಾಲ ಬರಬಹುದು. ನಾನು ಸಾಯಂಕಾಲ ಐದು ಗಂಟೆಗೆ ನಿಮ್ಮ ಮನೆಗೆ ಬರ್ತೀನಿ. ಅಷ್ಟು ಹೊತ್ತಿಗೆ ನಿಮ್ಮ ಭಾವಾನೂ ಬಂದಿರ್ತಾರೆ, ಅಲ್ವಾ?	Let me see. Chidananda may come in the evening. I will come to your house at 5 O'clock this evening. By that time your brother in law will have returned too. Won't he?
ರಾಜು :	ಇಲ್ಲ. ಅಷ್ಟು ಹೊತ್ತಿಗೆ ಬಂದಿರಲ್ಲ. ಏಳುಗಂಟೆಗೆ ನೀವು ಬನ್ನಿ. ಅಷ್ಟು ಹೊತ್ತಿಗೆ ಬಂದಿರ್ತಾರೆ. ಮಾತಾಡೋಣ.	No. He won't have come by that time. You come at 7 O clock. He will have come by that time. Let us talk.
ನಟರಾಜ :	ಆಗಲಿ ಬರ್ತೀನಿ.	Allright. I will come.

DRILLS

I Build up Drill :

a) Model : ನೋಡಿದ್ದಾರೆ.
ಮದ್ರಾಸ್ ನೋಡಿದ್ದಾರೆ.
ನಮ್ಮ ತಾಯಿ ಮದ್ರಾಸ್ ನೋಡಿದ್ದಾರೆ.

Build up the following making the appropriate changes wherever necessary :

1) ಹೇಳಿದ್ದಾಳೆ.
2) ನೋಡಿದ್ದೀಯಾ ?

3) ಹೋಗಿದ್ದಾರೆ.
4) ನೋಡಿದ್ದೇನೆ.
5) ಬಂದಿರ್ತಾನೆ.

b) Model : ಕೊಟ್ಟಿಲ್ಲ.

ಅವನಿಗೆ ಕೊಟ್ಟಿಲ್ಲ.
ಪುಸ್ತಕ ಅವನಿಗೆ ಕೊಟ್ಟಿಲ್ಲ.
ನಿಮ್ಮ ಪುಸ್ತಕ ಅವನಿಗೆ ಕೊಟ್ಟಿಲ್ಲ.
ನಾನು ನಿಮ್ಮ ಪುಸ್ತಕ ಅವನಿಗೆ ಕೊಟ್ಟಿಲ್ಲ.

Build up the following making the appropriate changes **wherever** necessary :

1) ನೋಡಿಲ್ಲ.
2) ಕರೆದಿಲ್ಲ.
3) ಪ್ರಯತ್ನಿಸಿಲ್ಲ.

II Transformation Drill :

a) Model : T : ನಮ್ಮ ಅಣ್ಣ ಬೆಂಗಳೂರಿಗೆ ಹೋಗುತ್ತಾರೆ.
S : ನಮ್ಮ ಅಣ್ಣ ಬೆಂಗಳೂರಿಗೆ ಹೋಗಿದ್ದಾರೆ.

Transform :

1) ಅವರು ನನ್ನ ಮಾತು ಕೇಳುತ್ತಾರೆ.
2) ನೀನು ಪರೀಕ್ಷೆಯಲ್ಲಿ ಪಾಸಾಗುತ್ತೀಯಾ?
3) ಅವಳು ತಮಿಳು ಓದುವುದನ್ನು ಕಲಿಯುತ್ತಾಳೆ.
4) ಭಾರತ ಹಾಕಿಯಲ್ಲಿ ಪಾಕಿಸ್ತಾನದ ಮೇಲೆ ಗೆಲ್ಲುತ್ತದೆ.

b) Model : T : ಅವರು ಬಾಗಿಲು ಮುಚ್ಚುತ್ತಾರೆ.
S : ಅವರು ಬಾಗಿಲು ಮುಚ್ಚಿರುತ್ತಾರೆ.

Transform :

1) ಅವರು ಊಟ ಮಾಡಿ ಮಲಗುತ್ತಾರೆ.
2) ಅಜ್ಜಿ ಕಾಶಿಗೆಹೋಗಿ ಬರುತ್ತಾರೆ.
3) ಜಗನ್ನಾಥ ಊರಿಗೆ ಕಾಗದ ಬರೆಯುತ್ತಾರೆ.

c) Model : T : ಅವನು ಆ ಪುಸ್ತಕ ಓದಿದ್ದಾನೆ.
S : ಅವನು ಆ ಪುಸ್ತಕ ಓದಿಲ್ಲ.

Transform :

1) ನಮ್ಮ ಅಕ್ಕ ಮದ್ರಾಸಿನಿಂದ ಬಂದಿದ್ದಾಳೆ.
2) ನಮ್ಮ ಭಾವ ಸ್ನೇಹಿತರನ್ನ ನೋಡೋಕೆ ಹೋಗಿದ್ದಾರೆ.
3) ಅವರು ಲೈಬ್ರರಿಯಿಂದ ಎರಡು ಪುಸ್ತಕ ತಂದಿದ್ದಾರೆ.
4) ಅವರು ಒಳ್ಳೆಯ ಕವಿತೆ ಬರೆದಿದ್ದಾರೆ.
5) ಅವರು ಎರಡು ಎಕರೆ ಜಮೀನು ಕೊಂಡುಕೊಂಡಿದ್ದಾರೆ.

d) Model : T : ಅವನು ಆ ಪುಸ್ತಕ ಓದಿದ್ದಾನಾ?
S : ಅವನು ಆ ಪುಸ್ತಕ ಓದಿಲ್ಲವಾ?

Transform :

1) ಬಸ್ಸು ಹೊರಟಿದೆಯಾ?
2) ನಿಮ್ಮ ತಮ್ಮನಿಗೆ ಕೆಲಸ ಸಿಕ್ಕಿದೆಯಾ?
3) ಮಾರ್ಕೆಟ್ಟಿಂದ ತಿಂಡಿ ತಂದಿದ್ದೀಯಾ?

e) Model : T : ಅವರು ಇಷ್ಟು ಹೊತ್ತಿಗೆ ಬಂದಿರ್ತಾರೆ.
S : ಅವರು ಇಷ್ಟು ಹೊತ್ತಿಗೆ ಬಂದಿರಲ್ಲ.

Transform :

1) ಅವಳು ಅವನಿಗೆ ಊಟ ಕಳಿಸಿರ್ತಾಳೆ.
2) ನಾವು ಕನ್ನಡ ಕಲಿಸಿರ್ತೀವಿ.
3) ಅವನು ಕಾಗದ ಬರೆದಿರ್ತಾನೆ.

III Response Drill :

1) ನೀವು ಟೆಸ್ಟ್‌ನಲ್ಲಿ ಎಷ್ಟು ನಂಬರ್ ತಗೊಂಡಿದ್ದೀರಿ ?
2) ನಿಮ್ಮ ಮನೆಯವರು ಬೃಂದಾವನ ನೋಡಿದ್ದಾರಾ ?
3) ನೀವು ಕನ್ನಡದಲ್ಲಿ ಯಾವುದಾದರೂ ಕಥೆ ಓದಿದ್ದೀರಾ ?
4) ನೀವು ತಾಜ್ ಮಹಲ್ ನೋಡಿದ್ದೀರಾ ?
5) ನಿಮ್ಮ ಹೆಂಡತಿ, ಮಕ್ಕಳಿಗೆ ಮೈಸೂರು ತೋರಿಸಿದ್ದೀರಾ ?

EXERCISES

I a) Fill in the blanks using the present perfect form of the verbs given in the brackets.

1) ನೀನು ಮನೆಗೆ ಹೋಗೋಕ್ಕೆ ಪ್ರಿನ್ಸಿಪಾಲರನ್ನು............ ? (ಕೇಳು).
2) ನನ್ನ ಭಾವ ಎಂಜಿನಿಯರ್............ . (ಆಗು)
3) ನಾನು ತಾಜ್‌ಮಹಲ್............ . (ನೋಡು)
4) ನೀವು ಅವರನ್ನು............ ? (ಮರೆ)
5) ನಮ್ಮ ನಾಯಿ............ . (ಸತ್ತುಹೋಗು)

b) Fill in the blanks using the present perfect negative form of the verbs given in the brackets.

1) ನನ್ನ ತಮ್ಮ ಪೆನ್ನು. ———— (ಕಳೆ)
2) ಈ ಅಂಗಡಿಗೆ ಹೊಸ ಅಕ್ಕಿ ——— (ಬರು)
3) ನಮ್ಮ ಅಕ್ಕನ ಮಕ್ಕಳು ಊರಿಗೆ————(ಹೋಗು)
4) ನಾನು 'ಕಾಡು' ಸಿನಿಮಾ——— (ನೋಡು)
5) ರಾಮು ಈ ತಿಂಗಳ ಫೀ. ——— (ಕೊಡು)

II a) Transform the following sentences into present perfect, forms

1) ಅವನು ಒಂದು ಕಥೆ ಹೇಳುತ್ತಾನೆ.
2) ಆ ಕಥೆಯನ್ನು ಅವರು ಕೇಳುತ್ತಾರೆ.
3) ಆ ಕಥೆಯನ್ನು ಅವರು ಕೇಳಿ ಪುಸ್ತಕ ಬರೆಯುತ್ತಾರೆ.
5) ಆಮೇಲೆ ರಾಮು ಆ ಕಥೆಯನ್ನು ಸಿನಿಮಾ ಮಾಡುತ್ತಾನೆ.
6) ಆ ಸಿನಿಮಾ ಚೆನ್ನಾಗಿ ನಡೆಯುವುದಿಲ್ಲ.
7) ರಾಮು ತನ್ನ ಹಣ ಕಳೆದುಕೊಳ್ಳುತ್ತಾನೆ.
8) ಕಡೆಗೆ ಅವನು ಬಡವ ಆಗುತ್ತಾನೆ.

b) Transform the following sentences into present perfect negative form :

1) ನಮ್ಮ ಭಾವ ಈ ಮನೆಯನ್ನು ಬಿಟ್ಟಿದ್ದಾರೆ.
2) ರಮೇಶ ನನಗೆ ಹೇಳಿಕಳಿಸಿದ್ದಾನೆ.
3) ನಿಮಗೆ ಫೋನ್ ಬಂದಿದೆ.
4) ಅಪ್ಪ ಊರಿನಿಂದ ಹಣ್ಣು ತಂದಿದ್ದಾರೆ.
5) ನಮ್ಮ ಅಣ್ಣ ಎಂ. ಎ., ಗೆ ಸೇರಿದ್ದಾನೆ.

III Given below are certain messages, the conveyance of which may be practical using the format of the lesson in the classroom.

1. Convey a message to your family that you are not visiting them on 25th as originally planned. You will visit them on 7th of next month. Make your own reasons.

2. Convey a message to a book seller that in addition to the list of books you have already asked for, you want him to send other selected titles also.

3. Call your hostel doctor about the ailment of your room-mate and the sudden deterioration of his condition.

4. Enquire with the railway booking office about the fares, timings, connections and reservations etc, to go to Hubli via Bangalore.

IV Answer the following questions :

1) ಯಾರಿಗೆ ಫೋನ್ ಬಂದಿದೆ?
2) ರಾಜು ಎಲ್ಲಿಂದ ಮಾತಾಡ್ತಾ ಇದ್ದಾನೆ?
3) ರಾಜು ಯಾಕೆ ಫೋನ್ ಮಾಡಿದ್ದಾನೆ?
4) ಮದ್ರಾಸಿನಿಂದ ರಾಜೂನ ಅಕ್ಕಾನೂ ಬಂದಿದ್ದಾರಾ?
5) ರಾಜೂನ ಮಾವ ಶಿವನಸಮುದ್ರ ನೋಡಿಲ್ವಾ?
6) ನಟರಾಜನಿಗೆ ಭಾನುವಾರ ಏನು ಕೆಲಸ ಇದೆ?
7) ಕಡೆಗೆ ನಟರಾಜ ಏನು ಹೇಳಿದ?

VOCABULARY

ಓಡಾಡು—to move here and there

ಕರೆದುಕೊಂಡು/ಕರ್ಕೊಂಡು ಬಾ—bring some one.

ಕರೆದುಕೊಂಡು/ಕರ್ಕೊಂಡು ಹೋಗು—take some one.

ದೊಡ್ಡಪ್ಪ—father's elder brother.

ಭಾವ—brother in law.

Supplementary vocabulary :

ಕಚ್ಚು—to bite

ಕಳೆ—to lose, subtract

ಕೋತಿ—monkey

ಬಡವ—poor

ಹಳ್ಳಿ—village

GRAMMAR NOTES :

The present perfect and the future perfect tense forms of the verb is introduced in this lesson along with their respective negation.

1. The structure of present perfect tense is,
   verbal participle+present tense of 'iru'.

ಬಂದು + ಇದಾರೆ = ಬಂದಿದಾರೆ.

ನಮ್ಮ ಅಣ್ಣ ಊರಿಂದ ಬಂದಿದಾರೆ.

By adding illa to the verbal participle the corresponding negation can be obtained.

ಬಂದು + ಇಲ್ಲ = ಬಂದಿಲ್ಲ.

bandu + illa = bandilla

ನಮ್ಮ ಅಣ್ಣ ಊರಿಂದ ಬಂದಿಲ್ಲ.

2. The structure of future perfect tense is,

   verbal participle + habitual future tense of iru.

   ಬಂದು + ಇರ್ತಾರೆ = ಬಂದಿರ್ತಾರೆ.

   ಅವರು ಬೆಳಿಗ್ಗೆ ನಿಮ್ಮ ಮನೆ ಹತ್ತಿರ ಬಂದಿರ್ತಾರೆ.

By adding iralla to the verbal participle form, the future perfect negation can be obtained.

verbal participle + iralla

ಬಂದು + ಇರಲ್ಲ — ಬಂದಿರಲ್ಲ

ಅವರು ನಾಳೆ ಬೆಳಿಗ್ಗೆ ಎಂಟು ಗಂಟೆಗೆ ನಿಮ್ಮ ಮನೆಗೆ ಬಂದಿರಲ್ಲ.

LESSON 43

KANNADA ENVIRONMENT TOUR

DIALOGUE

ಮಹಾದೇವ : ಏನಪ್ಪ ಪ್ರಕಾಶ್, ತುಂಬಾ ದಿನದಿಂದ ಕಾಣಿಸ್ತಾ ಇರಲಿಲ್ಲ. ಊರಿನಲ್ಲಿ ಇರಲಿಲ್ಲವಾ?	Well Prakash, you haven't been seen for good few days. Were you not in station?
ಪ್ರಕಾಶ್ : ಹೌದು. ಹದಿನೈದು ದಿನದಿಂದ ಊರಿನಲ್ಲಿ ಇರಲಿಲ್ಲ. ನಾವು ಪ್ರವಾಸ ಹೋಗಿದ್ದೆವು. ನಿನ್ನೆ ಸಾಯಂಕಾಲ ವಾಪಸ್ ಬಂದೆವು.	Yes. For fifteen days I was not in station. We had been on a tour. We came back yesterday evening.

ಮಹಾದೇವ : ಓಹೋ! ಹೌದೇನಪ್ಪ. ತುಂಬಾ ದೀರ್ಘಪ್ರವಾಸಅಂತ ಕಾಣುತ್ತೆ! ಎಲ್ಲೆಲ್ಲಿಗೆ ಹೋಗಿದ್ದಿರಿ?	Oh! It seems to have been a long tour! Where all had you been ?
ಪ್ರಕಾಶ್ : ತುಂಬಾ ದೂರ ಏನೂ ಹೋಗಿರಲಿಲ್ಲ! ನಮ್ಮದು ಶೈಕ್ಷಣಿಕ ಪ್ರವಾಸ. ಅದೂ ಕರ್ನಾಟಕದಲ್ಲಿ ಮಾತ್ರ.	We didn't go to distant places Ours was an educational tour. just within Karnataka.
ಮಹಾದೇವ : ಹದಿನೈದು ದಿನ ಇಡೀ ಕರ್ನಾಟಕದಲ್ಲಿ ಸುತ್ತಾಡಿದಿರಾ?	Did you travel for fiteen days only within Karnataka?
ಪ್ರಕಾಶ್ : ಹೌದು. ಮಂಗಳೂರು, ಉಡುಪಿ, ಧಾರವಾಡ, ಬಾದಾಮಿ, ಬಿಜಾಪುರ, ಹಂಪೆ ಮತ್ತು ಬೆಂಗಳೂರಿಗ ಹೋಗಿದ್ದೆವು.	Yes. We had been to Mangalore, Udupi, Dharwar. Badami, Bijapura, Hampe and Bangalore.
ಮಹಾದೇವ : ಅದು ಸರಿ. ಈ ಹದಿನೈದು ದಿನಗಳು ಏನುಮಾಡ್ತಾ ಇದ್ದಿರಿ? ಒಂದು ಐದಾರು ದಿನ ಸಾಕಾಗ್ತಾ ಇರಲಿಲ್ಲವಾ?	That is fine. What were you doing during this fifteen days ? Wouldn't five or six days have been sufficient ?
ಪ್ರಕಾಶ್ : ನಾನು ಆಗಲೆ ಹೇಳಿದೆ, ನಮ್ಮದು ಶೈಕ್ಷಣಿಕ ಪ್ರವಾಸ ಅಂತ. ನಾವು ಕೆಲವು ಸ್ಥಳಗಳಲ್ಲಿ ಕೆಲವು ದಿನ ತಂಗಿದ್ದೆವು.	I told you already, that ours was an educational tour. We had stayed in some places for a few days.
ಮಹಾದೇವ : ಯಾಕೆ ?	Why ?
ಪ್ರಕಾಶ್ : ನಮ್ಮಲ್ಲಿ ಕನ್ನಡ ಕಲಿಯೋಕೆ ಬೇರೆ ಬೇರೆ ರಾಜ್ಯದಿಂದ ಶಿಕ್ಷಕರು ಬಂದಿದ್ದಾರೆ. ನಮ್ಮ ರಾಜ್ಯದ ಭಾಷಾ ವೈವಿಧ್ಯತೆ ಮತ್ತು ಸಂಸ್ಕೃತಿಯ ಪರಿಚಯ	Teachers from different states have come to learn Kannada with us. They should get to know the variations of our language and culture. Because

ಮಾಡಿಸಿ ಕೊಡಬೇಕು. ಆ ಉದ್ದೇಶದಿಂದ ಧಾರವಾಡ ಮತ್ತು ಹಂಪೆಯಲ್ಲಿ ನಾಲ್ಕು ನಾಲ್ಕು ದಿವಸ ಬಿಡಾರ ಹಾಕಿದ್ದೆವು.	of this reason we stayed four days each in Dharwar and Hampe
ಮಹಾದೇವ : ಇದೇ ಮೊದಲ ಸಾರೀನ ನೀವು ಆ ಸ್ಥಳಗಳನ್ನು ನೋಡ್ತಾ ಇರೋದು ?	Is it first time that you are seeing those places ?
ಪ್ರಕಾಶ್ : ನಾನು ಬಿಜಾಪುರ ನೋಡಿರಲಿಲ್ಲ. ಇನ್ನೆಲ್ಲಾ ಸ್ಥಳಗಳನ್ನೂ ನೋಡಿದ್ದೆ. ಅವರೆಲ್ಲಾ ಇದೇ ಮೊದಲ ಸಾರಿ ನೋಡ್ತಾ ಇರೋದು.	I had not seen Bijapur. I had seen all the other places. They were all seeing these places for the first time.
ಮಹಾದೇವ : ಧಾರವಾಡದಲ್ಲಿ ಬೇಂದ್ರೆಯವರು ಸಿಕ್ಕಿದ್ದರಾ ?	Were you able to meet Bendre in Dharwar ?
ಪ್ರಕಾಶ್ : ಹೌದು. ಸಿಕ್ಕಿದ್ದರು. ಮೊದಲೇ ಕಾಗದ ಬರೆದು ತಿಳಿಸಿದ್ದೆವು. ನಮ್ಮ ವಿದ್ಯಾರ್ಥಿಗಳಿಗೆಲ್ಲಾ ಅವರನ್ನು ನೋಡಿ ತುಂಬಾ ಸಂತೋಷ ಆಯ್ತು.	Yes. He was available. We had informed him earlier through a letter. Our students were very happy meeting him.
ಮಹಾದೇವ : ಧಾರವಾಡದಲ್ಲಿ ಎಲ್ಲಿ ಉಳಿದುಕೊಂಡಿದ್ದಿರಿ? ವಿಶ್ವವಿದ್ಯಾಲಯದಲ್ಲಿ ಉಳಿದುಕೊಂಡಿದ್ದಿರಾ ?	Where did you stay in Dharwar? Were you staying in the University ?
ಪ್ರಕಾಶ್ : ಇಲ್ಲ. ವಿಶ್ವವಿದ್ಯಾನಿಲಯದಲ್ಲಿ ಉಳಿದುಕೊಂಡಿರಲಿಲ್ಲ. ಒಂದು ಛತ್ರದಲ್ಲಿ ಉಳಿದುಕೊಂಡಿದ್ದೆವು.	No. We were not staying in the University. We were staying in a Choultry.
ಮಹಾದೇವ : ಹಂಪೆಯಲ್ಲಿ ಒಂದು ವಾರ ಎಲ್ಲಿ ಉಳಿದಿದ್ದಿರಿ? ಹೊಸಪೇಟೆಯಿಂದ ಸ್ವಲ್ಪ ದೂರ ಆಗುತ್ತೆ.	Where were you staying in Hampe for a week ? It is a bit far from Hospet.

ಪ್ರಕಾಶ್ : ಹೊಸಪೇಟೆಯಲ್ಲಿ ಒಂದು ಸ್ಕೂಲಿಗೆ ಬರೆದಿದ್ದೆವು. ಆದರೆ ಅವರೂ ಏನೂ ಏರ್ಪಾಡು ಮಾಡಿರಲಿಲ್ಲ.	We had written to a school in Hospet. But they had not arranged anything.
ಮಹಾದೇವ : ಮತ್ತೆ ಏನು ಮಾಡಿದಿರಿ ?	Then what did you do?
ಪ್ರಕಾಶ್ : ಹಂಪೆಯ ಪಕ್ಕದಲ್ಲಿ 'ಪಂಪಾ ವಿದ್ಯಾಪೀಠ' ಇದೆ. ಅದು ವಯಸ್ಕರ ಶಿಕ್ಷಣ ಕೇಂದ್ರ. ಅವರಿಗೂ ಕಾಗದ ಬರೆದಿದ್ದೆವು. ಅವರು ಎಲ್ಲಾ ಅನುಕೂಲಾನೂ ಏರ್ಪಾಡು ಮಾಡಿದ್ದರು. ಊಟ, ವಸತಿ ಎಲ್ಲಾ ಅಲ್ಲೇ.	Near Hampe there is 'Pampa Vidyapetha'. It is an adult education center. We had written to them also. They had arranged all the facilities. The board and lodge were there itself.
ಮಹಾದೇವ : ನಿಮ್ಮ ಜೊತೆ ಬೇರೆ ಯಾರಾದರೂ ಅಧ್ಯಾಪಕರು ಬಂದಿದ್ದರಾ ?	Did any other faculty members accompany you ?
ಪ್ರಕಾಶ್ : ಇಲ್ಲ. ನನ್ನ ಜೊತೆ ಅಧ್ಯಾಪಕರು ಯಾರೂ ಬಂದಿರಲಿಲ್ಲ. ಆದರೆ ನನ್ನ ಹೆಂಡತಿ ಬಂದಿದ್ದರು.	No. No other faculty members came with me. But my wife came with me.
ಮಹಾದೇವ : ಹಾಗಾದರೆ ಪ್ರವಾಸ ಪ್ರಯಾಸ ಆಗಿಲ್ಲ ಬಿಡಿ!	In that case the tour was not so tiresome !
ಪ್ರಕಾಶ್ : ಹಾಗೇನಿಲ್ಲ. ಒಟ್ಟಿನಲ್ಲಿ ಪ್ರವಾಸ ತುಂಬಾ ಚೆನ್ನಾಗಿತ್ತು. ವಿದ್ಯಾರ್ಥಿಗಳೆಲ್ಲಾ ತುಂಬಾ ಸಂತೋಷಪಟ್ಟರು.	It isn't like that. All in all the tour was fine. The trainees had a very good time.
ಮಹಾದೇವ : ಸರಿ ಬನ್ನಿ. ಕಾಫಿ ಕುಡಿಯೋಣ. ಒಟ್ಟಿಗೆ ಕಾಫಿ ಕುಡಿದು ಬಹಳ ದಿವಸ ಆಯ್ತು.	O. K. Come. Let us have coffee. It is a long time since we had coffee together.
ಪ್ರಕಾಶ್ : ಸರಿ. ಹೋಗೋಣ.	O. K. Let us go

DRILLS :

I Build up Drill :

a) Model : ಬರೆದಿದ್ದೆವು.

ಕಾಗದ ಬರೆದಿದ್ದೆವು.

ಮೊದಲೇ ಕಾಗದ ಬರೆದಿದ್ದೆವು.

ಜೇಂದ್ರೆಯವರಿಗೆ ಮೊದಲೇ ಕಾಗದ ಬರೆದಿದ್ದೆವು.

ನಾವು ಜೇಂದ್ರೆಯವರಿಗೆ ಮೊದಲೇ ಕಾಗದ ಬರೆದಿದ್ದೆವು.

Build up the following making the appropriate changes wherever necessary :

1) ಬಂದಿದ್ದ.
2) ನೋಡಿದ್ದೆ.
3) ಹಾಡಿದ್ದಳು.

b) Model : ಆಡಿರಲಿಲ್ಲ.

ಆಟ ಆಡಿರಲಿಲ್ಲ.

ಬ್ಯಾಡ್ಮಿಂಟನ್ ಆಟ ಆಡಿರಲಿಲ್ಲ.

ಯಾವತ್ತೂ ಬ್ಯಾಡ್ಮಿಂಟನ್ ಆಟ ಆಡಿರಲಿಲ್ಲ.

ನಾನು ಯಾವತ್ತೂ ಬ್ಯಾಡ್ಮಿಂಟನ್ ಆಟ ಆಡಿರಲಿಲ್ಲ.

Build up the following making the appropriate changes wherever necessary :

1) ಅತ್ತಿರಲಿಲ್ಲ.
2) ಕಾದಿರಲಿಲ್ಲ.
3) ನೋಡಿರಲಿಲ್ಲ.

II Transformation Drill :

a) Model : T : ನಾವು ಕಾಗದ ಬರೆದಿದ್ದೇವೆ.

S : ನಾವು ಕಾಗದ ಬರೆದಿದ್ದೆವು.

Transform :

1) ಅಂಗಡಿಗೆ ಸಕ್ಕರೆ ಬಂದಿದೆ.
2) ನಮ್ಮ ವಿದ್ಯಾರ್ಥಿಗಳು ಊರಿಗೆ ಹೋಗಿದ್ದಾರೆ.
3) ನೀನು ಅವರಿಗೆ ಏನು ಕೊಟ್ಟಿದ್ದೀಯೆ ?
4) ರವಿ ಇತಿಹಾಸದಲ್ಲಿ ತೊಂಬತ್ತು ನಂಬರ್ ತೆಗೆದುಕೊಂಡಿದ್ದಾನೆ.
5) ನಮ್ಮ ಅಣ್ಣ ಮನೆಯಲ್ಲಿ ಮಲಗಿದ್ದಾರೆ.

b) Model : T : ನಾನು ನಿನಗೆ ಕಾಗದ ಬರೆದಿದ್ದೆ.

S : ನಾನು ನಿನಗೆ ಕಾಗದ ಬರೆದಿದ್ದೆನಾ ?

Transform :

1) ನಾವು ಪ್ರವಾಸ ಹೋಗಿದ್ದೆವು.
2) ಲೀಲಾ ನನ್ನ ಜೊತೆ ಪ್ರವಾಸಕ್ಕೆ ಬಂದಿದ್ದಳು.
3) ಅವರು ಈ ಕಾದಂಬರಿ ಓದಿದ್ದರು.
4) ನೀನು ಇದೇ ಜಾಗದಲ್ಲಿ ಬಿದ್ದಿದ್ದೆ.

c) Model : T : ಅವನು ಮನೆಗೆ ಬಂದಿಲ್ಲ.

S : ಅವನು ಮನೆಗೆ ಬಂದಿರಲಿಲ್ಲ.

Transform :

1) ಅವರು ಪ್ರವಾಸ ಹೋಗಿಲ್ಲ
2) ಬೇಂದ್ರೆ ನಮಗೆ ಸಿಕ್ಕಿಲ್ಲ
3) ಮಗೂಗೆ ಕುಡಿಯಲು ಹಾಲು ಕೊಟ್ಟಿಲ್ಲ
4) ಪರೀಕ್ಷೆಗೆ ಚೆನ್ನಾಗಿ ಓದಿಲ್ಲ
5) ನಾನು ಬಿಜಾಪುರ ನೋಡಿಲ್ಲ

d) Model : T : ಅವರು ಊರಿಗೆ ಬರಲಿಲ್ಲ

S : ಅವರು ಊರಿಗೆ ಬಂದಿರಲಿಲ್ಲ

Transform :

1) ಮರದಿಂದ ತೆಂಗಿನಕಾಯಿ ಬೀಳಲಿಲ್ಲ
2) ನಾನು ಹಸುವನ್ನು ಓಡಿಸಲಿಲ್ಲ
3) ಅರ್ಪಿತ ಮೊಗ್ಗು ಕೇಳಲಿಲ್ಲ
4) ಅವಳು ನಿನ್ನನ್ನು ಮರೆಯಲಿಲ್ಲ
5) ಇನ್ನೂ ಸ್ಕೂಲು ಬಿಡಲಿಲ್ಲ

IV Response Drill :

1) ಹೋದ ವರ್ಷ ರಜದಲ್ಲಿ ನೀವು ಎಲ್ಲಿಗೆ ಹೋಗಿದ್ದಿರಿ ?
2) ನೀವು ನಮ್ಮ ಮನೆಗೆ ಬರ್ತೀನಿ ಅಂದಿದ್ದಿರಿ. ಯಾಕೆ ಬರಲಿಲ್ಲ ?
3) ನೀವು ಮೊನ್ನೆ ಭಾನುವಾರ ಯಾವ ಸಿನಿಮಾಕ್ಕೆ ಹೋಗಿದ್ದಿರಿ ?

EXERCISES

I Fill in the blanks using the Kannada equivalents of the English words given in the brackets :

1) ನಾನು ಉತ್ತರ ಇಂಡಿಯಾಕ್ಕೆ———ಹೋಗಿದ್ದೆ (tour)
2) ಆ ಊರಿಗೆ——— ಮಹತ್ವ ಇದೆ (historical)
3) ಎಲ್ಲಾ ಊರುಗಳಲ್ಲೂ——— ಹಾಕಿದ್ದೆವು (camp)
4) ಅವರಿಗೆ ಕನ್ನಡ ಭಾಷೆಯ———ಪರಿಚಯ ಮಾಡಿಸಬೇಕು. (diversity)
5) ಅವರು ಎಲ್ಲಾ ———ಮಾಡಿದ್ದರು (arrangement)
6) ನಿಮ್ಮ———ಮತ್ತು———ಎಲ್ಲಿ (board, lodge)

II Fill in the blanks using the past perfect negative forms of the verbs given in the brackets :

1) ಅವನು ಇನ್ನೂ———(ಸಾಯು)
2) ಅವರು ಯಾವಾಗಲೂ———(ಗೆಲ್ಲು)
3) ನಾನು ಮೊದಲೇ ಸಂಗೀತ———(ಕಲಿ)

4) ನಾವು ಅವನನ್ನು ಮೊದಲೇ ನೋಡಿದ್ದೆವು. ಆಗ ಇಷ್ಟು———(ಕೆಡು)

5) ಅವಳು ಅಂತಹ ಮಗುವನ್ನು ———(ಕಾಣು)

III Rewrite the following sentences replacing the present tense form of verbs by present perfect forms ,and the past tense form of the verbs by the past perfect forms :

1) ಮೊನ್ನೆ ಅವರು ಬೆಂಗಳೂರಿಗೆ ಹೋದರು
2) ನಾನು ಒಂದು ಕಥೆ ಹೇಳ್ತೀನಿ
3) ಈ ಕಥೆ ಅವರು ಕೇಳ್ತಾರೆ
4) ನಾನು ರಮೇಶನನ್ನು ನೋಡಿದೆ
5) ನೀವು ಪುಸ್ತಕ ಬರೆಯುತ್ತೀರಾ ?
6) ಅಧ್ಯಾಪಕಿ ಕಮಲೆಯನ್ನು ನೋಡಿ ಪ್ರೀತಿಯಿಂದ ನಕ್ಕರು
7) ಅವರು ಈ ಕಥೆ ಓದಿದರಾ ?
8) ರವಿ ಮಗುವಿಗೆ ಚಾಕೊಲೇಟ್ ಕೊಟ್ಟ
9) ನಾವು ಬಸ್ಸು ಹತ್ತಿ ಮನೆಗೆ ಬಂದೆವು
10) ಅವಳು ಸಂಗೀತ ಪರೀಕ್ಷೆಗೆ ಕಟ್ಟುತ್ತಾಳೆ

IV Read the following passage :

ಹೋದ ವರ್ಷ ನಮ್ಮ ರಾಜ್ಯದ ಶಿಕ್ಷಣ ಮಂತ್ರಿಗಳು ನಮ್ಮ ಊರಿಗೆ ಬಂದಿದ್ದರು. ನಾವೆಲ್ಲಾ ಅವರ ಭಾಷಣ ಕೇಳಲು ಹೋಗಿದ್ದೆವು. ಅವರು ಬಹಳ ಚೆನ್ನಾಗಿ ಭಾಷಣ ಮಾಡಿದ್ದರು. ಅವರ ಭಾಷಣವನ್ನು ಕೇಳಿದ ನಾವೆಲ್ಲ ಆನಂದಪಟ್ಟಿದ್ದೆವು. ಆಮೇಲೆ ಅವರು ನಮ್ಮ ಕಾಲೇಜಿಗೆ ಬಂದಿದ್ದರು. ನಮ್ಮ ಕಾಲೇಜಿನಲ್ಲಿಯೂ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳನ್ನು ಕುರಿತು ಭಾಷಣ ಮಾಡಿದ್ದರು. ಅಲ್ಲದೆ ನಮ್ಮ ಕಾಲೇಜಿನ ಲೈಬ್ರರಿ, ಲ್ಯಾಬೊರೇಟರಿಗಳಿಗೆ ಭೇಟಿ ನೀಡಿದ್ದರು. ಅವುಗಳ ಪ್ರಗತಿಯನ್ನು ನೋಡಿ ತುಂಬಾ ಹೊಗಳಿದ್ದರು. ಅವತ್ತು ಸಾಯಂಕಾಲ ನಮ್ಮೂರಿನಿಂದ ಬೆಂಗಳೂರಿಗೆ ಹೋಗಿದ್ದರು.

ದೇಶ—country

ಶಿಕ್ಷಣ ಮಂತ್ರಿ—Education Minister

ಹೊಗಳು—to praise

ಪ್ರಗತಿ—progress

ಭೇಟಿಸು—to visit

Rewrite the passage in

i) past perfect negative form

ii) present perfect form

V Narrate an incident which happened in your life some years ago.

VI Answer the following questions :

1) ಪ್ರಕಾಶ್ [illegible] ?

2) ಪ್ರಕಾಶ್ ಮತ್ತು ಅವನ [illegible] ಯಾವ ಯಾವ ಸ್ಥಳಗಳಿಗೆ ಪ್ರವಾಸ ಹೋಗಿದ್ದರು ?

3) ಅವರು ಕರ್ನಾಟಕದಿಂದ [illegible] ?

4) ಧಾರವಾಡದಲ್ಲಿ ಯಾರನ್ನು ಭೇಟಿ ಮಾಡಿದ್ದರು ?

5) ಹೊಸಪೇಟೆಯಿಂದ [illegible] ಮಾಡಿದ್ದರು ?

6) ಅವರು ಹಂಪೆಯಲ್ಲಿ ಎಲ್ಲಿ [illegible]

VOCABULARY :

ಅನುಕೂಲ—facility

ಉದ್ದೇಶ—motive, intention

ಊಟ, ವಸತಿ—boarding and lodging

ಛತ್ರ—choultry

ತಂಗು—to stay

[illegible]—[illegible]

[illegible]

ಪ್ರಯಾಸ—tiresomeness
ಪ್ರವಾಸ—tour
ಬಿಡಾರ ಹಾಕು—to camp
ವಯಸ್ಕರ ಶಿಕ್ಷಣ ಕೇಂದ್ರ—adult education centre
ವಸತಿ—lodging
ವಿದ್ಯಾಪೀಠ—seat of learning
ವಿಶ್ವವಿದ್ಯಾನಿಲಯ—university
ವೈವಿಧ್ಯತೆ—variety
ಶೈಕ್ಷಣಿಕ—educational
ಸುತ್ತಾಡು—to wander
ಹತ್ತು—to board, to climb

GRAMMAR NOTES

The past perfect tense is introduced in this lesson. The Verbal participle form of the verb along with the past tense of 'iru' gives the past perfect form of the verb.

verbal participle+past tense of 'iru' = past perfect

ಬಂದು + ಇದ್ದ = ಬಂದಿದ್ದ
ಅವನು ನಿನ್ನೆ ಕಾಲೇಜಿಗೆ ಬಂದಿದ್ದ

The corresponding negation is also introduced, which can be obtained by adding—'iralilla' to the verbal participle form :

Ex : ಬಂದು + ಇರಲಿಲ್ಲ = ಬಂದಿರಲಿಲ್ಲ
ನಾನು ನಿಮ್ಮ ಮನೆಗೆ ಬಂದಿರಲಿಲ್ಲ

UNIT 12

LESSON 44

SELF INTRODUCTION 3

NARRATION

ನನ್ನ ಹೆಸರು ಭಾಸ್ಕರನ್. ನಾನು ಕೇರಳದಿಂದ ಮೈಸೂರಿಗೆ ಕನ್ನಡ ಕಲಿಯುವುದಕ್ಕೆ ಬಂದಿದ್ದೇನೆ. ನಾನು ಭಾರತೀಯ ಭಾಷಾ ಸಂಸ್ಥಾನದಲ್ಲಿ ಹತ್ತು ತಿಂಗಳು ಕನ್ನಡ ಕಲಿಯುತ್ತೇನೆ.

ನಾನು ಸದ್ಯ ತಿರುಚ್ಚೂರಿನಲ್ಲಿ ಹೈಸ್ಕೂಲ್ ಅಧ್ಯಾಪಕನಾಗಿ ಕೆಲಸ ಮಾಡುತ್ತಿದ್ದೇನೆ. ನನ್ನ ಸ್ವಂತ ಊರು ಕೊಟ್ಟಾಯಂ. ನಾನು ನನ್ನ ಪದವಿ ಪರೀಕ್ಷೆ ಮುಗಿಸಿ ತಿರುಚ್ಚೂರಿನಲ್ಲಿ ಕೆಲಸಕ್ಕೆ ಸೇರಿಕೊಂಡೆ. ನಾನು ಅಲ್ಲಿ ಐದು ವರ್ಷ ಕೆಲಸ ಮಾಡಿದೆ. [illegible] ಕರ್ನಾಟಕಕ್ಕೆ ಒಂದು ಸಾರಿ ಬಂದಿದ್ದೆ. ನನ್ನ [illegible] ಮತ್ತು ಸಹೋದ್ಯೋಗಿಗಳ [illegible] ಬೇಲೂರು, ಮಂಗಳೂರು ನೋಡಿ

ಡೆವು. ನಮಗೆ ಮೈಸೂರು ತುಂಬಾ ಹಿಡಿಸಿತು. ಆಮೇಲೆ ನನಗೆ ಒಂದು ವರ್ಷ ಕಾಸರಗೋಡಿಗೆ ವರ್ಗ ಆಯ್ತು. ಅಲ್ಲಿ ನಮ್ಮ ಮನೆಯ ಪಕ್ಕದಲ್ಲಿ ಕನ್ನಡಿಗರು ವಾಸ ಮಾಡುತ್ತಾ ಇದ್ದರು. ಕಾಸರಗೋಡಿನಲ್ಲಿ ಬಹಳ ಜನಕ್ಕೆ ಕನ್ನಡ ಮಾತನಾಡುವುದಕ್ಕೆ ಬರುತ್ತದೆ. ಆಗ ನನಗೆ ಕನ್ನಡ ಕಲಿಯಬೇಕು ಅಂತ ಆಸೆ ಆಯಿತು. ಅವರ ಜೊತೆ ಒಂದೊಂದು ಪದ ಸೇರಿಸಿ ಕನ್ನಡ ಮಾತಾಡ್ತಾ ಇದ್ದೆ. ಅವರ ಮಾತು ನನಗೆ ಅರ್ಥ ಆಗ್ತಾ ಇರಲಿಲ್ಲ.

ಒಂದು ವರ್ಷದ ನಂತರ ಭಾರತೀಯ ಭಾಷಾ ಸಂಸ್ಥಾನದ ವಿಷಯ ತಿಳಿಯಿತು. ನಾಲ್ಕು ವರ್ಷಗಳಿಂದ ಇಲ್ಲಿಗೆ ಬರಬೇಕು ಅಂತ ಪ್ರಯತ್ನಿಸುತ್ತಿದ್ದೆ. ಬರುವುದಕ್ಕೆ ಆಗಿರಲಿಲ್ಲ. ಎರಡುಸಾರಿ ನನಗೆ ಡಿ.ಪಿ.ಐ. ನಿಂದ ಅಪ್ಪಣೆ ದೊರಕಿರಲಿಲ್ಲ. ಈ ಸಾರಿ ಅವಕಾಶ ಸಿಕ್ಕಿತು. ಬಂದೆ. ನಾನು ಇಲ್ಲಿಯವರೆಗೆ ಕರ್ನಾಟಕದ ಮೂರು ಭಾಗಗಳನ್ನು ಬಿಟ್ಟು ಬೇರೆ ಯಾವ ಪ್ರದೇಶವನ್ನೂ ನೋಡಿಲ್ಲ. ನಾಳೆ ಕೆಲವು ಸ್ಥಳಗಳನ್ನು ನೋಡಲು ಹೋಗುತ್ತಿದ್ದೇನೆ. ನಾನು ಇನ್ನೂ ಚೆನ್ನಾಗಿ ಕನ್ನಡ ಕಲಿತಿಲ್ಲ. ಆದರೂ ಒಬ್ಬನೇ ಹೋಗಿ ಆ ಎಲ್ಲಾ ಪ್ರದೇಶಗಳನ್ನು ನೋಡಿಕೊಂಡು ಬರ್ತೀನೆ. ನಮಸ್ಕಾರ.

TEST PAPER

I. Fill in the blanks using the Kannada equivalents of the English words given in the brackets :—

1) ನಾನು————ಕನ್ನಡ ಕಲಿಯುತ್ತಿದ್ದೇನೆ. (at present)
2) ನನ್ನ————ತುಂಬಾ ಚೆನ್ನಾಗಿ ಕೆಲಸ ಮಾಡುತ್ತಾರೆ. (colleagues)
3) ಅವಳಿಗೆ ಬೆಂಗಳೂರಿಗೆ ಹೋಗುವುದಕ್ಕೆ————ದೊರಕಿತು. (permission)
4) ನೀವು ಕರ್ನಾಟಕದ ಯಾವ————ನೋಡಿದ್ದೀರಿ ? (area)
5) ನಾಳೆ ನಮ್ಮ————ಊರಿಗೆ ಬರ್ತಾರೆ. (father's elder brother)

II Transform the following sentences into present perfect forms :

1) ವಿದ್ಯಾರ್ಥಿಗಳು ಪಾಠ ಬರೆಯುತ್ತಾರೆ.
2) ಅಧ್ಯಾಪಕರು ಈ ಪಾಠ ಮಾಡುತ್ತಾರೆ.
3) ನಾನು ಆ ಸಿನಿಮಾ ನೋಡುತ್ತೇನೆ.
4) ನಾನು ಆ ಮಕ್ಕಳಿಗೆ [illegible] [illegible] ಕೊಡುತ್ತೇನೆ.
5) [illegible] [illegible] ಹೋಗುತ್ತಾರೆ.

III Transform the following sentences into present perfect negative forms :

1) ನಾನು ಆ ಸಿನಿಮಾ ನೋಡಿದ್ದೇನೆ.
2) ರಮೇಶ ಪರೀಕ್ಷೆಯಲ್ಲಿ ಚೆನ್ನಾಗಿ ಬರೆದಿದ್ದಾನೆ.
3) ನಮಗೆ ಸಿನಿಮಾಕ್ಕೆ ಹೋಗುವುದಕ್ಕೆ ಟಿಕೆಟ್ ಸಿಕ್ಕಿದೆ.
4) ಅವರು ಈಗ ಹಾಸ್ಟೆಲ್ ಬಿಟ್ಟಿದ್ದಾರೆ.
5) ನನ್ನ ಮಗಳು ಹತ್ತರವರೆಗೆ ಮಗ್ಗಿ ಕಲಿತಿದ್ದಾಳೆ.

IV Fill in the blanks using the past perfect forms of the verbs given in the brackets :

1) ನಾನು ಒಂದು ವರ್ಷದ ಹಿಂದೆ ಮೈಸೂರಿಗೆ————(ಬಾ)
2) ಅವರೂ ಲೆಕ್ಚರರ್ ಕೆಲಸಕ್ಕೆ ಅಪ್ಲಿಕೇಷನ್————(ಹಾಕು)
3) ನಮ್ಮ ವಿದ್ಯಾರ್ಥಿಗಳು ಬಲಮುರಿಗೆ ಪಿಕ್‌ನಿಕ್————(ಹೋಗು)
4) ಈ ಪುಸ್ತಕ ನಮ್ಮ ಅಧ್ಯಾಪಕರು————(ಕೊಡು)
5) ಈ ಸ್ಕೂಟರ್ ನಮ್ಮ ತಂದೆ ದೆಹಲಿಯಿಂದ————(ತಾ)

V Change the following sentences into negative past perfect forms :

1) ಕೇಂದ್ರ ಮಂತ್ರಿಗಳು ನಮ್ಮ ಊರಿಗೆ ಬಂದಿದ್ದರು.
2) ನಾವೆಲ್ಲಾ ಮಂತ್ರಿಗಳ ಭಾಷಣ ಕೇಳಲು ಹೋಗಿದ್ದೆವು.
3) ಮಂತ್ರಿಗಳು ಚೆನ್ನಾಗಿ ಭಾಷಣ ಮಾಡಿದ್ದರು.
4) ಮಂತ್ರಿಗಳು ನಮ್ಮ ಊರಿನ ಸ್ಕೂಲಿಗೆ ಭೇಟಿ ನೀಡಿದ್ದರು.
5) ನಮ್ಮ ಶಾಲೆಯ ಪ್ರಗತಿಯನ್ನು ಅವರು ತುಂಬಾ ಹೊಗಳಿದ್ದರು.

VI Answer the following questions :

1) ಭಾಸ್ಕರನ್ ಯಾವ ಭಾಷೆ ಕಲಿಯುತ್ತಿದ್ದಾರೆ ?
2) ಅವರು ಈಗ ಎಲ್ಲಿ ಕೆಲಸ ಮಾಡುತ್ತಿದ್ದಾರೆ ?
3) ಅವರು ಹಿಂದೆ ಒಂದು ಬಾರಿ ಕರ್ನಾಟಕಕ್ಕೆ ಬಂದಿದ್ದರಾ ?

4) ಅವರಿಗೆ ಯಾವಾಗ ಕನ್ನಡ ಕಲಿಯಬೇಕು ಅಂತ ಆಸೆ ಆಯ್ತು ?

5) ಅವರು ಕರ್ನಾಟಕದ ಯಾವ ಯಾವ ಸ್ಥಳಗಳನ್ನು ನೋಡಿದ್ದಾರೆ ?

VOCABULARY :

ಅಪ್ಪಣೆ—permission

ಅವಕಾಶ—opportunity

ಇಲ್ಲಿಯವರೆಗೆ— till now

ದೊರಕು—to be available

ಪದವಿ—Degree, position

ಬಿಟ್ಟು—except, postposition with accusative

ವರ್ಗ—transfer

ಸದ್ಯ—presently

UNIT 13

LESSON 44

ABOUT HALEBID AND BELUR

DIALOGUE

ವಿದ್ಯಾರ್ಥಿಗಳು : ನಮಸ್ಕಾರ ಸಾರ್	Namaskaara Sir.
ಅಧ್ಯಾಪಕ—ನಮಸ್ಕಾರ, ಕುಳಿತ್ಕೊಳ್ಳಿ. ಏನು ಇವತ್ತು ಬಹಳ ಖುಷಿಯಾಗಿ ಇದ್ದೀರಿ. ಯಾರೂ ಪಾಠ ಓದುವ ಮೂಡ್‌ನಲ್ಲಿ ಇಲ್ಲ.	Namaskaara, please sit down. Well ! you all seem to be very happy today. Nobody seems to be in the mood for lessons.
ಮೋಹನ್—ಸಾರ್, ನಾಳೆ ನಾವು ಟೂರ್ ಹೋಗ್ತಾ ಇದ್ದೇವೆ. ಅದಕ್ಕೆ ಇಷ್ಟೊಂದು ಖುಷಿ.	Sir, we are going on tour to-morrow. That is why we are so happy. Could you please tell

ಇನ್ನೂ ನಮಗೆ ನಾವು ಹೋಗುವ ಸ್ಥಳಗಳ ಬಗ್ಗೆ ಸ್ವಲ್ಪ ಹೇಳ್ತೀರಾ ?

us about the places, we are visiting ?

ಅಧ್ಯಾಪಕ—ಓಹೋ ! ಮರೆತೇ ಬಿಟ್ಟೆ. ಆಗಲಿ ಹೇಳ್ತೀನಿ. ಕೇಳಿ. ನೀವು ಹೋಗ್ತಾ ಇರುವ ಸ್ಥಳಗಳ ಹೆಸರು ಬೇಲೂರು ಮತ್ತು ಹಳೇಬೀಡು. ಅಲ್ಲಿ ಹೊಯ್ಸಳರು ಕಟ್ಟಿಸಿದ ಜಗತ್ಪ್ರಸಿದ್ಧ ದೇವಸ್ಥಾನಗಳಿವೆ.

Oh ! I forgot. All right. Listen. I shall certainly tell you. The places that you are visiting are called Belur and Halebid. The world famous temples built by the Hoysalas are there.

ನೋರ್ಮನ್—ಮೈಸೂರಿನಿಂದ ಇಲ್ಲಿಗೆ ಎಷ್ಟು ದೂರ ಸಾರ್ ?

How far is it from Mysore sir ?

ಅಧ್ಯಾಪಕ—ಮೈಸೂರಿನಿಂದ ಹಳೇಬೀಡಿಗೆ 155 ಕಿ. ಮೀ. ಆಗುತ್ತೆ. ಹಳೇಬೀಡಿನಿಂದ ಬೇಲೂರಿಗೆ 15 ಕಿ. ಮೀ. ಅಷ್ಟೆ.

It is 155 Kms. from Mysore to Halebid. From Halebid to Belur it is only 15 Kms. that is all.

ನಾರಾಯಣ—ಅಲ್ಲಿರುವ ದೇವಸ್ಥಾನಗಳ ಹೆಸರು ಏನು ಸಾರ್ ?

What are the names of those temples sir ?

ಅಧ್ಯಾಪಕ—ಹಳೇಬೀಡಿನಲ್ಲಿರುವ ದೇವಸ್ಥಾನದ ಹೆಸರು ಹೊಯ್ಸಳೇಶ್ವರ ದೇವಸ್ಥಾನ. ಬೇಲೂರಿನಲ್ಲಿರುವ ದೇವಸ್ಥಾನದ ಹೆಸರು ಚೆನ್ನಕೇಶವ ದೇವಸ್ಥಾನ.

The name of the temple at Halebid is Hoysaleswara temple. The name of the temple at Belur is called Chennakesava temple.

ನೋರ್ಮನ್—ಈ ಎರಡು ದೇವಸ್ಥಾನಗಳನ್ನು ಯಾರು ಕಟ್ಟಿಸಿದರು ಸಾರ್ ? ಒಬ್ಬರೇ ಕಟ್ಟಿಸಿದರೋ ಬೇರೆಬೇರೆಯವರು ಕಟ್ಟಿಸಿದರೋ ?

Who built these two temples sir ? Did one man build them or were there several different builders ?

ಅಧ್ಯಾಪಕ—ಬೇರೆಬೇರೆಯವರು ಕಟ್ಟಿಸಿದರು. ಬೇಲೂರಿನ ದೇವಸ್ಥಾನವನ್ನು ಕಟ್ಟಿಸಿದ ರಾಜನ ಹೆಸರು ಹೊಯ್ಸಳ ವಿಷ್ಣುವರ್ಧನ. ಇವನು ರಾಜ್ಯಭಾರ ಮಾಡುತ್ತಾ ಇದ್ದ ಕಾಲದಲ್ಲಿ ಕರ್ನಾಟಕ ಕಲೆಯಲ್ಲಿ ಸುವರ್ಣಯುಗವನ್ನು ಕಂಡಿತ್ತು. ಇವನ ಹೆಂಡತಿ ಶಾಂತಲಾ 'ನಾಟ್ಯರಾಣಿ' ಎಂದು ಬಿರುದು ಹೊಂದಿದ್ದಳು. ಇವಳು ನೃತ್ಯಕ್ಕೆ ಸಲ್ಲಿಸಿದ ಕಾಣಿಕೆ ಅಪಾರ. ಹಳೇಬೀಡು ದೇವಸ್ಥಾನವನ್ನು ಕಟ್ಟಿಸಿದ ಕೇತಮಲ್ಲ ವಿಷ್ಣುವರ್ಧನನ ದಂಡನಾಯಕ ಆಗಿದ್ದ.

Different persons built them. The name of the king who constructed the temple at Belur is Hoysala Vishnuvardhana. During his reign, Karnataka had seen its golden age of art. His wife Shantala had the title of 'Natyarani'. Her contribution to the art of dance was very great. Ketamalla who built the temple at Halebid was the commander in chief of the army of Vishnuvardhana.

ನೋರಿಸ್—ಆ ಪ್ರದೇಶಗಳಿಗೆ ಹಳೇಬೀಡು ಬೇಲೂರು ಅಂತ ಹೆಸರು ಬರಲು ಕಾರಣ ಏನು ಸಾರ್ ?

How did these places come to be called Halebid and Belur sir ?

ಅಧ್ಯಾಪಕ—ಹಿಂದೆ ಹಳೇಬೀಡಿಗೆ ಇದ್ದ ಹೆಸರು 'ದ್ವಾರಸಮುದ್ರ' ಅಂತ. ಹೊಯ್ಸಳರ ರಾಜಧಾನಿಯಾಗಿದ್ದ ದ್ವಾರಸಮುದ್ರ ಮೊಗಲರ ಆಕ್ರಮಣದಿಂದ ಹಾಳಾಯಿತು. ಹಾಳಾದ ಊರಿಗೆ ಹಳೇಬೀಡು ಅಂತ ಹೆಸರು ಬಂತು. ಹಳೇಬೀಡು ಅಂದರೆ ಹಾಳಾದ ಪ್ರದೇಶ ಅಂತ ಅರ್ಥ. 'ವೇಲಾಪುರ' ಎಂದು ಪುರಾಣಗಳಲ್ಲಿ ಪ್ರಸಿದ್ಧವಾಗಿದ್ದ ಪ್ರದೇಶ ಈಗ ಬೇಲೂರು ಎಂದಾಗಿದೆ

The previous name for Halebid was 'Dwarasamudra'. Dwarasamudra the Hoysala capital was ruined by the Muslim invasions. The ruined place was named as Halebid. Halebid means ruined place. The place which was famous in the purāṇas as 'Velapur' has now become Belur.

ಮೋಹನ್—ಆಗಾಗ್ಯೆ ದಾಳಿ ಮಾಡುತ್ತಾ ಇದ್ದ ಮೊಗಲರ ಕೈಯಿಂದ ಈ ದೇವಸ್ಥಾನಗಳು ಹೇಗೆ ಉಳಿದವು ಸಾರ್ ?

How were these temples left unaffected by the frequent Muslim invasions sir ?

ಅಧ್ಯಾಪಕ—ಜನರು ಇಡೀ ದೇವಸ್ಥಾನವನ್ನು ಮರಳಿನಿಂದ ಮುಚ್ಚಿ ಅದನ್ನು ರಕ್ಷಿಸಿದರು. ಹಾಗೆ ಉಳಿದ ದೇವಸ್ಥಾನಗಳೇ ಇಂದು ಕಲೆಯನ್ನು ಮೆರೆಯುತ್ತಾ ನಿಂತಿವೆ.

People covered the whole temple with sand and thus saved the temple. The temple thus protected exhibits the art even now.

ಮೋಹನ್—ಈ ದೇವಸ್ಥಾನಗಳನ್ನು ನಿರ್ಮಿಸಿದ ಶಿಲ್ಪಿಗಳು ಯಾರು ಸಾರ್ ?

Who were the sculptors that built these temples, sir ?

ಅಧ್ಯಾಪಕ—ಈ ದೇವಸ್ಥಾನಗಳನ್ನು ನಿರ್ಮಿಸಿದ ಶಿಲ್ಪಿಗಳ ಹೆಸರು ಜಕ್ಕಣ ಮತ್ತು ಡಂಕಣ ಎಂದು ಹೇಳುತ್ತಾರೆ. ದೇವಸ್ಥಾನದ ಕಟ್ಟಡದಲ್ಲಿ ಮಲ್ಲಿತಮ್ಮ ಎಂಬ ಹೆಸರೂ ಸಹ ಇದೆ.

People say that the sculptors who built these temples were Jakkana and Dankana. The name Mallithamma is also found inscribed in the temple.

ಮೋಹನ್—ಆ ದೇವಸ್ಥಾನಗಳ ಕಲಾ ಸೌಂದರ್ಯ ಅಷ್ಟು ಚೆನ್ನಾಗಿ ಇದೆಯಾ ಸಾರ್ ?

Sir, is the sculpture of those temples so beautiful ?

ಅಧ್ಯಾಪಕ—ಅದನ್ನು ನೋಡಿಯೇ ಅನುಭವಿಸಬೇಕು. ಶಿಲ್ಪಿಗಳು ಮಾಡಿರುವ ಕುಸುರಿ ಕೆಲಸ ಅದ್ಭುತವಾಗಿದೆ.

One must see and experience it. The subtle stone carvings of the sculptors are marvellous.

ನಾರಾಯಣ—ಅಷ್ಟು ಸೂಕ್ಷ್ಮವಾದ ಕುಸುರಿ ಕೆಲಸ ಮಾಡೋಕ್ಕೆ ಎಂಥ ಕಲ್ಲು ಉಪಯೋಗಿಸಿದ್ದಾರೆ ?

What stone did they use to make such a subtle carvings ?

ಅಧ್ಯಾಪಕ—ಒಂದು ರೀತಿಯ ಬಳಪದ ಕಲ್ಲನ್ನು ಉಪಯೋಗಿಸಿದ್ದಾರೆ. ಅವರಲ್ಲಿ ಕೆತ್ತಿರುವ ದೇವಸ್ಥಾನದ ಹೊರಗೋಡೆಯಲ್ಲಿರುವ ರಾಮಾಯಣ ಮಹಾಭಾರತಗಳ ದೃಶ್ಯಗಳು, ಶಾಂತಲ ನಾಟ್ಯ ಮಾಡುತ್ತಾ ಇದ್ದ ವೃತ್ತಾಕಾರದ ಕಲ್ಲು, ವಿವಿಧ ಭಂಗಿಯಲ್ಲಿ ನಾಟ್ಯ ಮಾಡುತ್ತಾ ಇರುವ ಶಿಲಾಬಾಲಿಕೆಯರು, ನಯವಾಗಿ ಕೆತ್ತಿದ ಬಸವ ಇವೆಲ್ಲಾ ಶಿಲ್ಪಿಗಳು ನಮಗೆ ಕೊಟ್ಟ ಕಾಣಿಕೆ.

They have used a sort of slate stone. The carved scenes of Ramayana and Mahabharata on the outer wall of the temple, the circular stone on which Shantala used to dance, poses of Shilabalika's dancing in different styles finely carved bull, these are all the gifts given to us by the sculptors.

ಮೋಹನ್—ಈ ದೇವಸ್ಥಾನಗಳನ್ನು ಯಾವ ಶೈಲಿಯಲ್ಲಿ ಕಟ್ಟಿಸಿದ್ದಾರೆ ಸಾರ್.

In which style they have built these temples sir ?

ಅಧ್ಯಾಪಕ—ಇವನ್ನು ಕರ್ನಾಟಕ ಶೈಲಿಯಲ್ಲಿ ಕಟ್ಟಿಸಿದ್ದಾರೆ. ನಕ್ಷತ್ರಾಕಾರದ ಜಗಲಿಯ ಮೇಲೆ ಅತಿ ಎತ್ತರವೂ ಅಲ್ಲದ ಅತಿ ಚಿಕ್ಕದೂ ಅಲ್ಲದ ದೇವಸ್ಥಾನ ಇದೆ.

They built it in Karnataka style On the star shaped base stands the temple which is neither too tall nor too short.

ನಾರಾಯಣ್—ಹಳೇಬೀಡು ಮತ್ತು ಬೇಲೂರಿನ ದೇವಸ್ಥಾನದಲ್ಲಿ ಯಾವುದು ತುಂಬಾ ಚೆನ್ನಾಗಿದೆ ಸಾರ್ ?

Which is the more beautiful temple Halebid or Belur, sir ?

ಅಧ್ಯಾಪಕ—ಅದಕ್ಕಿಂತ ಇದು, ಇದಕ್ಕಿಂತ ಅದು ಅನ್ನುವ ಹಾಗೆ ಇಲ್ಲ. ಅವುಗಳನ್ನು ನೋಡಿ ಆನಂದಿಸಬೇಕು. ಯಾವುದು ಶ್ರೇಷ್ಠ ಎಂದು ನಿರ್ಣಯಿಸುವುದಕ್ಕೆ ಸಾಧ್ಯವಿಲ್ಲ. ಹಾಗಿವೆ ಅವು.

We can't say that one is better than the other. One must see and appreciate them. None can judge which is superior. They are like that.

DRILLS :

I Expansion Drill :

Model : ನಗುತ್ತಾ ಇದ್ದ ಹುಡುಗ.

ನಗುತ್ತಾ ಇದ್ದ ಹುಡುಗನನ್ನು ಹೊರಗೆ ಕಳಿಸಿದರು.

ಅಧ್ಯಾಪಕರು ಕ್ಲಾಸಿನಲ್ಲಿ ನಗುತ್ತಾ ಇದ್ದ ಹುಡುಗನನ್ನು ಹೊರಗೆ ಕಳಿಸಿದರು.

Expand the following using the appropriate words and making the appropriate changes wherever necessary :

1) ಬರೆದ ಕಾಗದ
2) ಕೊಟ್ಟಿದ್ದ ಸೀರೆ
3) ಆಡುತ್ತಾ ಇದ್ದ ಮಗು
4) ಕೇಳುತ್ತಾ ಇರುವ ಪ್ರಶ್ನೆ
5) ಬರುವ ವಾರ

II Transformation Drill :

Model : T : ಆ ಹುಡುಗಿ ನಿನ್ನೆ ಹಾಡಿದಳು.

S : ಅವಳು ನಿನ್ನೆ ಹಾಡಿದ ಹುಡುಗಿ.

Transform :

1) ಆ ಹುಡುಗ ನಿನ್ನೆ ಬಂದ.
2) ಈ ಮಗು ಸದಾ ಅಳುತ್ತದೆ.
3) ಈ ಮೇಷ್ಟ್ರು ಕತೆಯನ್ನು ಚೆನ್ನಾಗಿ ಹೇಳಿದರು.
4) ಈ ಮನೆಯನ್ನು ರಾಮರಾಯರು ಕಟ್ಟಿಸಿದರು.
5) ನಾನು ಈ ಕಾಲೇಜಿನಲ್ಲಿ ಓದುತ್ತಾ ಇದ್ದೆ.
6) ಈ ಕಾಗದ ಅವಳಿಗೆ ಬಂದಿತ್ತು.
7) ಅವರು ವಂಶವೃಕ್ಷ ಓದುತ್ತಾ ಇದ್ದಾರೆ.

III. Response Drill :

1) ದಿನಾ ನೀವು ಓದುವ ವರ್ತಮಾನ ಪತ್ರಿಕೆ ಯಾವುದು ?
2) ನಿನ್ನೆ ನೀವು ಕಲಿತ ಪಾಠ ಎಷ್ಟನೆಯದು ?
3) ನಿನ್ನೆ ಸಾಯಂಕಾಲ ನಿಮ್ಮನ್ನು ನೋಡಲು ಬಂದಿದ್ದ ಹುಡುಗಿ ಯಾರು ?
4) ನಿಮ್ಮಲ್ಲಿ ಪರೀಕ್ಷೆಯಲ್ಲಿ ಕಡಿಮೆ ಅಂಕಗಳನ್ನು ಪಡೆದ ವಿದ್ಯಾರ್ಥಿಗಳು ಯಾರು ಯಾರು ?
5) ನಿಮಗೆ ನಿನ್ನೆ ಹೇಳಿಕೊಟ್ಟ ಪಾಠ ಬರುತ್ತದೆಯೆ ?
6) ಇಲ್ಲಿಯವರೆಗೆ ನೀವು ನೋಡಿದ ಒಳ್ಳೆಯ ಕನ್ನಡ ಸಿನಿಮಾ ಯಾವುದು ?

EXERCISES

I Fill in the blanks using the correct relative participle forms of the verbs given in the brackets :

1) ನೀವು ಮುಂದಿನ ವಾರ ನೋಡಲು ——— ಸ್ಥಳ ಯಾವುದು ? (ಹೋಗು)
2) ನಾನು ನಾಲ್ಕು ವರ್ಷಗಳ ಹಿಂದೆ ——— ವ್ಯಕ್ತಿ ಇವರೇ. (ನೋಡು)
3) ಅವನು ——— ಬಸ್ಸಿನಿಂದ ಬಿದ್ದ. (ಓಡುತ್ತಾ ಇರು)
4) ಇದು ರವಿ ——— ತೆಂಗಿನ ಮರ. (ನೆಡು)
5) ಆಟದಲ್ಲಿ ——— ಮಗು ಅತ್ತಿತು. (ಸೋಲು)
6) ಅವಳು ಈಗ ——— ಹಾಡು ಕನ್ನಡ ಹಾಡು. (ಹಾಡುತ್ತಾ ಇರು)

II Combine using relative participle form :

Model : T : ಸುರೇಶ ಹುಡುಗಿಯನ್ನು ಪ್ರೀತಿಸಿದ.
ಅವಳ ಹೆಸರು ಸುಮನ.

S : ಸುರೇಶ ಪ್ರೀತಿಸಿದ ಹುಡುಗಿಯ ಹೆಸರು ಸುಮನ.

1) ಕಾಡಿನಲ್ಲಿ ರಾಕ್ಷಸ ಹೋಗುತ್ತಾ ಇದ್ದ.
ನಾನು ಅವನನ್ನು ಕೊಂದೆ.

2) ಮೈಸೂರಿಗೆ ಮಂತ್ರಿಗಳು ಬರುತ್ತಾರೆ.
[illegible] ತ್ತಾರೆ

3) ನಾನು ಸಿನಿಮಾ ನೋಡಿದೆ.
ಅದು ತುಂಬಾ ಚೆನ್ನಾಗಿತ್ತು.

4) ನಾನು ಬೆಳಿಗ್ಗೆ ತಿಂಡಿ ತಿಂದೆ.
ಅದರಲ್ಲಿ ಉಪ್ಪು ಜಾಸ್ತಿ ಇತ್ತು.

5) ವಿಶ್ವಕಪ್ ಹಾಕಿಯಲ್ಲಿ ಭಾರತ ಗೆದ್ದಿತು.
ಅದು ವಿಶ್ವ ಚಾಂಪಿಯನ್ ಆಯಿತು.

6) ಅಲ್ಲಿ ನಾಯಿ ಹೋಗುತ್ತಾ ಇದೆ.
ಅದು ಆ ಹುಡುಗರನ್ನು ಕಚ್ಚುತ್ತದೆ

III Fill in the blanks using the Kannada equivalents of the English words given in the brackets :

1) ವಿಷ್ಣುವರ್ಧನನ ಕಾಲದಲ್ಲಿ ಕರ್ನಾಟಕ ——— ಕಂಡಿತ್ತು. (golden age)
2) ಶಾಂತಲಾ ನೃತ್ಯಕ್ಕೆ ಸಲ್ಲಿಸಿದ ——— ಅಪಾರ (contribution)
3) ಕೇತಮಲ್ಲ ವಿಷ್ಣುವರ್ಧನನ ——— (army chief)
4) ಬೆಂಗಳೂರು ಕರ್ನಾಟಕದ ——— (capital)
5) ಬೇಲೂರು ದೇವಸ್ಥಾನವನ್ನು ನಿರ್ಮಿಸಿದ ——— ಜಕ್ಕಣ. (architect)
6) ಆ ದೇವಸ್ಥಾನಗಳಲ್ಲಿ ಯಾವುದು ——— ಎಂದು ನಿರ್ಣಯಿಸಬಾರದು. (superior)

IV Write as directed :

1) ನಾನು ತಂದ ಸೀರೆ ಚೆನ್ನಾಗಿತ್ತು. (change into past perfect)
2) ರವಿ ಮಾಡಿದ ಮನೆ ಚೆನ್ನಾಗಿತ್ತು. (non past)
3) ನಾನು ಕೇಳ್ತಾ ಇರುವ ಸುದ್ದಿ ನಿಜಾನಾ ? (into past)
4) ನಾನು ಓದಿದ ಪುಸ್ತಕ ರಮನದು. (change into continuous)
5) ನೀನು ಮಾಡುವ ಕೆಲಸ ನನಗೆ ಮರ್ಯಾದೆ ತರುವದಲ್ಲ. (into past)

V Frame interrogative sentences to the following answers :

1) ಅವನು ಮಾಡುವ ಕೆಲಸಕ್ಕೆ ಸಾವಿರ ರೂಪಾಯಿ ಸಂಬಳ ಕೊಡಬೇಕು.

3) ನಾನು ಸಿನಿಮಾ ನೋಡಿದೆ.
ಅದು ತುಂಬಾ ಚೆನ್ನಾಗಿತ್ತು.

4) ನಾನು ಬೆಳಿಗ್ಗೆ ತಿಂಡಿ ತಿಂದೆ.
ಅದರಲ್ಲಿ ಉಪ್ಪು ಜಾಸ್ತಿ ಇತ್ತು.

5) ವಿಶ್ವಕಪ್ ಹಾಕಿಯಲ್ಲಿ ಭಾರತ ಗೆದ್ದಿತು.
ಅದು ವಿಶ್ವ ಚಾಂಪಿಯನ್ ಆಯಿತು.

6) ಅಲ್ಲಿ ನಾಯಿ ಹೋಗುತ್ತಾ ಇದೆ.
ಅದು ಆ ಹುಡುಗರನ್ನು ಕಚ್ಚುತ್ತದೆ

III Fill in the blanks using the Kannada equivalents of the English words given in the brackets :

1) ವಿಷ್ಣುವರ್ಧನನ ಕಾಲದಲ್ಲಿ ಕರ್ನಾಟಕ ——— ಕಂಡಿತ್ತು. (golden age)
2) ಶಾಂತಲಾ ನೃತ್ಯಕ್ಕೆ ಸಲ್ಲಿಸಿದ ——— ಅಪಾರ (contribution)
3) ಕೇತಮಲ್ಲ ವಿಷ್ಣುವರ್ಧನನ ——— (army chief)
4) ಬೆಂಗಳೂರು ಕರ್ನಾಟಕದ ——— (capital)
5) ಬೇಲೂರು ದೇವಸ್ಥಾನವನ್ನು ನಿರ್ಮಿಸಿದ ——— ಜಕ್ಕಣ. (architect)
6) ಆ ದೇವಸ್ಥಾನಗಳಲ್ಲಿ ಯಾವುದು ——— ಎಂದು ನಿರ್ಣಯಿಸಬಾರದು. (superior)

IV Write as directed :

1) ನಾನು ತಂದ ಸೀರೆ ಚೆನ್ನಾಗಿತ್ತು. (change into past perfect)
2) ರವಿ ಮಾರಿದ ಮನೆ ಚೆನ್ನಾಗಿತ್ತು. (non past)
3) ನಾನು ಕೇಳ್ತಾ ಇರುವ ಸುದ್ದಿ ನಿಜಾನಾ ? (into past)
4) ನಾನು ಓದಿದ ಪುಸ್ತಕ ರಮೇಶನದು. (change into continuous)
5) ನೀನು ಮಾಡುವ ಕೆಲಸ ನನಗೆ ಮರ್ಯಾದೆ ತರುವದಲ್ಲ. (into past)

V Frame interrogative sentences to the following answers :

1) ಅವನು ಮಾಡುವ ಕೆಲಸಕ್ಕೆ ಸಾವಿರ ರೂಪಾಯಿ ಸಂಬಳ ಕೊಡಬೇಕು.

2) ರಮಾ ಸಿನಿಮಾ ನೋಡಿದ್ದು ಅವಳ ತಾಯಿಗೆ ಗೊತ್ತಿಲ್ಲ.

3) ಸ್ಮಿತಾ ಕೊಂಡುಕೊಂಡ ಸೀರೆಯ ಬೆಲೆ ಹತ್ತು ರೂಪಾಯಿ.

4) ಹೌದು, ಈ ಹೋಟೆಲಿನ ಊಟ ತುಂಬ ಚೆನ್ನಾಗಿರುತ್ತೆ.

VI Answer the following questions :

1) ವಿದ್ಯಾರ್ಥಿಗಳು ನೋಡಲು ಹೋಗುವ ಸ್ಥಳಗಳು ಯಾವುವು ?
2) ಮೈಸೂರಿನಿಂದ ಅವರು ಹೋಗುವ ಸ್ಥಳಕ್ಕೆ ಎಷ್ಟು ದೂರ ಆಗುತ್ತದೆ ?
3) ಹಳೇಬೀಡು ಮತ್ತು ಬೇಲೂರಿನಲ್ಲಿರುವ ದೇವಸ್ಥಾನಗಳ ಹೆಸರು ಏನು ?
4) ಈ ದೇವಸ್ಥಾನಗಳನ್ನು ಯಾರು ಕಟ್ಟಿಸಿದರು ?
5) ನಾಟ್ಯರಾಣಿ ಯಾರು ?
6) ಹಳೇಬೀಡು, ಬೇಲೂರು ಎಂಬ ಹೆಸರು ಬರಲು ಕಾರಣವೇನು ?
7) ಮೊಗಲರ ದಾಳಿಯಿಂದ ದೇವಸ್ಥಾನವನ್ನು ಹೇಗೆ ರಕ್ಷಿಸಿದರು ?
8) ಈ ದೇವಸ್ಥಾನಗಳನ್ನು ನಿರ್ಮಿಸಿದ ಶಿಲ್ಪಿಗಳ ಹೆಸರು ಏನು ?

VOCABULARY :

ಅತಿ — much

ಅದ್ಭುತ—marvellous

ಅಪಾರ—too much

ಆಕಾರ—shape

ಆಕ್ರಮಣ—attack

ಆಗಾಗ್ಗೆ—often

ಇಂದು—today

ಕಟ್ಟಡ—building

ಕಲೆ—art

ಕಲಾಸೌಂದರ್ಯ—art beauty

ಕಾಣಿಕೆ—contribution, gift

ಕುಸುರಿ—subtle, skillful

ಕುಸುರಿ ಕೆಲಸ—subtle carving

ಕೆತ್ತು—to carve

ಖುಷಿ—happy, jolly

ಜಗತ್ಪ್ರಸಿದ್ಧ—world famous

ಜಗಲಿ—base

ದಂಡನಾಯಕ—army chief

ದೃಶ್ಯ—scene

ದಾಳಿ—invasion

ನಯ—soft, nice

ನಕ್ಷತ್ರ—star

ನೃತ್ಯ—dance

ನಾಟ್ಯ ರಾಣಿ—dance queen

ನಿರ್ಣಯ—judgement

ನಿರ್ಮಿಸು—to construct

ಬಸವ—bull, nandi

ಬಳಪದ ಕಲ್ಲು—slate stone

ಬಿರುದುಹೊಂದು—to posses the title

ಮರಳು—sand

ಮುಚ್ಚು—to cover, to conceal

ಮೆರೆ—to show, to exhibit

ರಾಜಧಾನಿ—capital

ರಾಜ್ಯಭಾರ—to rule

ವೃತ್ತಾಕಾರದ ಕಲ್ಲು—circular stone

ವಿವಿಧ ಭಂಗಿ—different style

ಶಿಲ್ಪಿ—sculptor

ಶಿಲಾಬಾಲಿಕೆ—stone image of a maid

ಶ್ರೇಷ್ಠ—superior

ಶೈಲಿ—style

ಸುವರ್ಣಯುಗ—golden age

ಸೂಕ್ಷ್ಮ—subtle
ಹಾಳು—ruin
ಹಾಳಾದ ಪ್ರದೇಶ—ruined place
ಹೊರಗೋಡೆ—outer wall

GRAMMAR NOTES :

Relative participle forms of the verb is introduced in this lesson. --a is the relative participle marker. The structure of the relative participle form varies according to the tenses.

1. Non-past :

The structure is,

Verb root + relative participle marker = relative participle construction.

ಮಾಡು + ಅ = ಮಾಡುವ
ಕಡಿ + ಅ = ಕಡಿಯುವ
ಕರೆ + ಅ = ಕರೆಯುವ

1. ಅವನು ಮಾಡುವ ಕೆಲಸ ಇದೊಂದೆ.
2. ಅದು ನಾಯಿ ಕಡಿಯುವ ಮೂಳೆ.
3. ಇದು ಅವಳನ್ನು ಕರೆಯುವ ಹೆಸರು.

Note the increments taken by the verb when – a is added. **–u** ending verbs take –v– straight away, whereas –i and –e ending **verb** take –v– after the addition of –yu– as glide.

2. Past :

The structure is,

Past stem+relative participle marker = relative participle construction.

ಮಾಡಿದ್ + ಅ = ಮಾಡಿದ
ಕೊಟ್ + ಅ = ಕೊಟ್ಟ

1. ಇದು ಅವನು ಮಾಡಿದ ಕೆಲಸ.
2. ಅದು ಅವನು ಕೊಟ್ಟ ಹಣ.

The past tense relative participle construction superficially resembles the third singular masculine past tense form. However as a relative participle it is invariable for person, number and gender.

3. Past perfect :

The structure is,

Perfect stem+relativep articiple marker=relative participle construction.

ಮಾಡಿದ್ + ಅ = ಮಾಡಿದ್ದ

1. ಅವನು ಮಾಡಿದ್ದ ಕೆಟ್ಟ ಕೆಲಸ ನನಗೆ ಈಗ ಗೊತ್ತಾಯ್ತು.
2. ನೀವು ದೆಹಲಿಯಲ್ಲಿ ನೋಡಿದ್ದ ಸಿನಿಮಾ ಚೆನ್ನಾಗಿತ್ತಾ ?

4. Non-past and past continuous

The structure is,

4. a. Continuous participle+non-past relative participle of 'iru' = relative participle construction

ಮಾಡುತ್ತಾ + ಇರುವ = ಮಾಡುತ್ತಾ ಇರುವ

ನೀವು ಮಾಡುತ್ತಾ ಇರುವ ಕೆಲಸ ಏನು ?

4. b. Continuous participle+perfect relative participle of 'iru' = relative participle construction

ಮಾಡುತ್ತಾ + ಇದ್ದ = ಮಾಡುತ್ತಾ ಇದ್ದ

ನೀನು ಮಾಡುತ್ತಾ ಇದ್ದ ಕೆಲಸ ಬಹಳ ಕೆಟ್ಟದು

Note that the relative participle is always followed by a noun

UNIT 13

LESSON 45

LANGUAGE LEARNER'S PROBLEMS

DIALOGUE

ರಣಜಿತ್ ಯಾದವ್ } : ನಮಸ್ಕಾರ ಸಾರ್.	Namaskaara sir.
ಅಧ್ಯಾಪಕ : ನಮಸ್ಕಾರ ಬನ್ನಿ. ಏನು ಸಮಾಚಾರ, ಹೇಗೆ ಓದ್ತಾ ಇದೀರಿ ?	Namaste, please come, What is the news ? How are your studies ?
ರಣಜಿತ್ : ಚೆನ್ನಾಗಿ ಓದ್ತಾ ಇದೀವಿ ಸಾರ್. ಆದರೂ ಹೊಸ ಭಾಷೆ ಕಲಿಯೋದು ಕಷ್ಟ ಆಗ್ತಾ ಇದೆ.	We are studying hard sir. Even so it is a new language. It is difficult to learn.

ಅಧ್ಯಾಪಕ : ಹೌದು. ಆದರೆ ನೀವು ಹೆಚ್ಚಿಗೆ ಗಮನ ಕೊಟ್ಟು ಓದಬೇಕು. ಮಾತನಾಡುವುದನ್ನೂ ಸಹ ಅಭ್ಯಾಸ ಮಾಡಬೇಕು. ಬರೆಯೋದೆಲ್ಲಾ ಚೆನ್ನಾಗಿ ಬರುತ್ತಾ ?	Yes, But you must give more attention to your studies. You have to practice speaking also. Do you know writingwell ?
ಯಾದವ್ : ಓದೋದು ಬರೆಯೋದು ಪರವಾಗಿಲ್ಲ ಸಾರ್. ಆದರೆ ಮಾತನಾಡೋದೆ ಕಷ್ಟ.	(Our) Reading and writing are not bad sir. But speaking is difficult.
ಅಧ್ಯಾಪಕ : ನೋಡಿ. ನೀವು ಮಾತನಾಡೋದನ್ನ ಕಲಿಯೋದೇ ಬಹಳ ಮುಖ್ಯ. ನಿಮ್ಮ ಹಾಸ್ಟೆಲಿನಲ್ಲಿ ಕನ್ನಡ ಮಾತನಾಡುವವರ ಜೊತೆ ಯಾವಾಗಲೂ ಕನ್ನಡದಲ್ಲೇ ಮಾತಾಡಿ. ಅಲ್ಲಿ ಯಾರೂ ಕನ್ನಡದಲ್ಲಿ ಮಾತಾಡೋರು ಇಲ್ಲವಾ ?	Look, learning to speak is very important for you. In your hostel you speak to Kannada speakers always in Kannada only. Are there not any Kannada speakers in the hostel ?
ಯಾದವ್ : ಇದ್ದಾರೆ ಸಾರ್. ಒಂದೈದಾರು ಜನ ಕರ್ನಾಟಕದಿಂದ ಬಂದಿರುವವರು ಇದ್ದಾರೆ. ರೂಂ ಗುಡಿಸುವವಳು ಒಬ್ಬಳು ಹೆಂಗಸು ಇದ್ದಾಳೆ. ಹಾಸ್ಟೆಲ್ ನೋಡಿಕೊಳ್ಳುವವನು ಒಬ್ಬ ಜವಾನ ಇದ್ದಾನೆ.	There are sir. There are five to six persons who have come from Karnataka. There is a lady who sweeps the room. There is a servant who looks after the hostel.
ಅಧ್ಯಾಪಕ : ಹಾಗಾದರೆ ಅವರ ಜೊತೆ ಮಾತಾಡಿ. ಆಮೇಲೆ ಹಾಸ್ಟೆಲಿನ ಹೊರಗೆ ಸಿಟಿಯಲ್ಲಿ ಕನ್ನಡದಲ್ಲೇ ಮಾತಾಡಿ. ಜೊತೆಗೆ ಕನ್ನಡ ಮಾತಾಡುವವರ ಸ್ನೇಹ ಮಾಡಿಕೊಳ್ಳಿ.	Then talk to them. In addition outside the hostel, in the city speak in Kannada only. Also make friendship with Kannada speakers.

ರಣಜಿತ್ : ಅವರೆಲ್ಲಾ ನಾವು ಮಾತಾಡೋದನ್ನ ಕೇಳಿ ನಗ್ತಾರೆ ಸಾರ್.	They all laugh when they hear us speaking.
ಅಧ್ಯಾಪಕ : ನಗುವವರು ನಗಲಿ. ಅವರ ಜೊತೆ ಸೇರಿಕೊಂಡು ನೀವೂ ನಕ್ಕುಬಿಡಿ. ಅದನ್ನೆಲ್ಲಾ ಸೀರಿಯಸ್ಸಾಗಿ ತಗೋಬೇಡಿ. ಆದರೆ ಕನ್ನಡ ಮಾತನಾಡುವವರ ಸ್ನೇಹ ಮಾತ್ರ ಬಿಡಬೇಡಿ. ಜನಗಳ ಜೊತೆ ಮಾತನಾಡದೆ ನೀವು ಕನ್ನಡ ಕಲಿಯೋಕೆ ಆಗಲ್ಲ.	Let those who laugh laugh. You too laugh with them. Don't take all this seriously. But don't give up the friendship of those who speak Kannada. Without speaking to people it is not possible for you to learn Kannada.
ರಣಜಿತ್ : ಇಲ್ಲಿ ಕನ್ನಡ ಕಲಿಯೋಕೆ ಬಂದಿರುವವರು ಎಲ್ಲಾ ಹಾಗೇ ಅಂದ್ಕೊಳ್ತಾರೆ ಸಾರ್.	All those who have come here to learn Kannada also feel the same sir.
ಅಧ್ಯಾಪಕ : ಕನ್ನಡದಲ್ಲಿ 'ನಡೆಯುವವನು ಎಡವ್ತಾನೆ' ಅಂತ ಗಾದೆ ಇದೆ. ಅದು ನೆನಪಿರಲಿ. ನೀವು ಭಾಷೆ ಕಲಿಯುವವರು. ನೀವು ತಪ್ಪು ಮಾಡೇ ಮಾಡ್ತೀರಿ. ಹಿಂದೆ ಇಲ್ಲಿ ಭಾಷೆ ಕಲೀತಾ ಇದ್ದವರೂ ಹೀಗೆ ಹೇಳ್ತಾ ಇದ್ದರು. ಆದರೆ ಕ್ರಮೇಣ ಎಲ್ಲಾ ಸರಿಹೋಯ್ತು ಕಡೆಗೆ ಅವರು ಚೆನ್ನಾಗಿ ಮಾತಾಡೋದನ್ನ ಕಲಿತರು.	There is a proverb in Kannada 'One who walks trips over (Naturally)'. You remember it. You are language learners. You are bound to commit errors. Those who were learning the language earlier were also used to say the same thing. But gradually everything was all right. Finally they learnt to speak well.
ರಣಜಿತ್ : ಆಗಲಿ ಸಾರ್, ನಗನಗ್ತಾನೆ ಅವರ ಜೊತೆಗೆ ಇದ್ದುಕೊಂಡು ಕನ್ನಡ ಕಲೀತೀವಿ.	All right sir, laughing with them, moving with them, we will learn Kannada.
ಅಧ್ಯಾಪಕ : ಹೌದು. ನೀವು ಹಾಗೇ ಇರಬೇಕು. ನಿಮ್ಮ ಮುಂದೆ	Yes. That is how you should be. Those who laughed and laugh in

	ನಕ್ಕವರು ನಗುವವರು ನಿಮ್ಮ ಹಿಂದೆ ನಗಲ್ಲ. ನಾನೂ ನಿಮ್ಮ ಹಾಗೇನೇ ಅಂದ್ಕೊಂಡಿದ್ದೆ. ಆದರೂ ಕಡೆಕಡೆಗೆ ಚೆನ್ನಾಗಿ ತಮಿಳು ಮಾತಾಡೋದನ್ನ ಕಲಿತೆ.	your presence will not laugh behind you. I also felt the same way as you. Even then finally I learnt to speak Tamil well.
ಯಾದವ್ :	ನಿಮಗೆ ತಮಿಳು ಬರುತ್ತಾ ಸಾರ್ ?	Do you know Ta nil sir ?.
ಅಧ್ಯಾಪಕ :	ಹೌದು. ನಾನು ಮಾತಾಡೋದನ್ನ ಕೇಳಿ ಮಾತು ಮಾತಿಗೂ ನಗ್ತಾ ಇದ್ದವನು ನನ್ನ ರೂಂ ಮೇಟ್ ಮನೋಹರ್. ಅವರ ಜೊತೆ ಸೇರಿಕೊಂಡು ನಕ್ಕಿದ್ದವರಲ್ಲಿ ನಾನೂ ಒಬ್ಬ. ಆದರೆ ನಾನು ಅಷ್ಟಕ್ಕೇ ಬಿಡಲಿಲ್ಲ. ನಿಧಾನಕ್ಕೆ ಮಾತಾಡೋದು ಕಲಿತೆ. ಈಗಲೂ ನನ್ನ ತಮಿಳು ಕೇಳಿ ನಗುವವರಲ್ಲಿ ನನ್ನ ಹೆಂಡತಿಯೂ ಒಬ್ಬಳು.	Yes. The person who used to laugh at every word I spoke was my room mate Manohar. I was one of those who laugh when they hear my Tamil. But I didn't leave it at that, Gradually I learnt to speak. Even now my wife is one among those who laugh on listening my Tamil.
ಯಾದವ್ :	ತಪ್ಪು ಮಾಡದೆ ಯಾರೂ ಭಾಷೆ ಕಲಿಯೋದಿಲ್ಲ ಸಾರ್. ನಾವೂ ತಪ್ಪನ್ನ ಸರಿ ಮಾಡಿಕೊಳ್ತೀವಿ. ಜೊತೆಗೆ ತಾವೂ ನಮಗೆ ಸ್ಪೆಷಲ್ ಕ್ಲಾಸ್ ತಗೊಳ್ತೀರಾ ಸಾರ್ ?	Nobody learns a language without committing errors. Sir. we will rectify our mistakes. In. addition to that could you also please take special class for us, sir ?
ಅಧ್ಯಾಪಕ :	ಆಗಲಿ ಸಾಯಂಕಾಲ ಐದು ಗಂಟೆ ಮೇಲೆ ವಾರಕ್ಕೆ ಮೂರು ದಿನ ಬನ್ನಿ. ನಿಮ್ಮ ಹಾಸ್ಟೆಲಿನಲ್ಲಿ ಕನ್ನಡ ಕಲಿಯುತ್ತಾ ಇರುವವರು ಎಷ್ಟು ಜನ ಇದೀರಿ ?	All right. Come after 5 o' clock in the evening three times in a week. How many of you are there in your hostel learning Kannada ?

ಯಾದವ್ : ಅಲ್ಲಿ ಕನ್ನಡ ಕಲಿಯುತ್ತಾ ಇರುವವರು ಹದಿನೈದು ಜನ ಇದಾರೆ ಸಾರ್.	There are fifteen persons who are learning Kannada sir.
ಅಧ್ಯಾಪಕ : ಅವರಲ್ಲಿ ಸ್ಪೆಷಲ್ ಕ್ಲಾಸ್‌ಗೆ ಬರುವವರು ಯಾರು ಯಾರು ಅಂತ ನನಗೆ ಕೇಳಿ ತಿಳಿಸಿ. ಅಷ್ಟರಲ್ಲಿ ನಾನು ಪ್ರಿನ್ಸಿಪಾಲರನ್ನು ಕೇಳಿರ್ತೀನಿ.	Let me know which of them will be coming for the special classes. Meanwhile I will also ask the Principal.
ರಣಜಿತ್ : ಆಗಲಿ ಸಾರ್. ನಾಳೆ ಹೇಳ್ತೀವಿ.	Allright Sir. Tomorrow we will tell you.
ಅಧ್ಯಾಪಕ : ನೋಡಿ, ನೀವೇನೂ ಹೆದರಿಕೊಬೇಡಿ. ಸಂಕೋಚಬಿಡಿ. ಮೊದಮೊದಲು ನೀವೆಲ್ಲಾ ತಪ್ಪು ಮಾಡುವವರೇ. ಅದಕ್ಕೆ ರೆಡಿಯಾಗಿ ಇರಿ. ಜೊತೆಗೆ ನೀವೆಲ್ಲಾ ಹೈಸ್ಕೂಲು ಮೇಷ್ಟರು ಅಂತ ಬಿಗಿಯಾಗಿ ಇರಬೇಡಿ. ನಿಮ್ಮನ್ನು ನೋಡಿ ನಕ್ಕವರೇ ನಿಮ್ಮ ಕಲಿಕೆಯನ್ನು ನೋಡಿ ಹೊಗಳ್ತಾರೆ.	Look, Don't be frightened. Don't feel shy. In the beginning all of you commit errors. Be prepared for that. In addition to that don't be stiff thinking that you are all High School teachers. Those who laughed, will be full of appreciation for you when they see you learning.
ಇಬ್ಬರೂ : ಸರಿ ಸಾರ್. ಮುಂದಿನ ವಾರದಿಂದ ನಾವು ಪಾಠಕ್ಕೆ ಬರ್ತೀವಿ.	Allright sir. We will come for tution from next week.

DRILLS

I Expansion Drill :

Model : ಮಾಡಿದವರು.

ಸಹಾಯ ಮಾಡಿದವರು ನಮ್ಮ ತಂದೆ.

ಓದುವುದಕ್ಕೆ ಸಹಾಯ ಮಾಡಿದವರು ನಮ್ಮ ತಂದೆ.

ಅವರಿಗೆ ಕಾಲೇಜಿನಲ್ಲಿ ಓದುವುದಕ್ಕೆ ಸಹಾಯ ಮಾಡಿದವರು ನಮ್ಮ ತಂದೆ.

Expand the following on the model given above. Make the changes wherever necessary :

1) ಹೇಳಿ ಕೊಡುವವರು
2) ತಂದವಳು
3) ಕೇಳುವವರು
4) ಬರುತ್ತಾ ಇರುವವನು

II Substitution Drill :

1) ಅವನು ಬಟ್ಟೆ ಒಗೆಯುವವನು.
ಅವಳು

....

2) ಅವನು ನಮ್ಮ ಹಾಸ್ಟೆಲಿಗೆ ಹಾಲು ಹಾಕುವವನು.
ಅವರು

....

3) ನೀನು ನನ್ನ ಜೊತೆ ಬರುವವನಾ ?
ನೀವು

....

III Combinatory Drill :

Model : T : ಅವನು ಬಟ್ಟೆ ಹೊಲಿಯುತ್ತಾನೆ.
ಅವನು ದರ್ಜಿ.

S : ಬಟ್ಟೆ ಹೊಲೆಯುವವನು ದರ್ಜಿ.

Combine :

1) ಅವರು ಪಾಠ ಮಾಡುತ್ತಾರೆ.
ಅವರು ಅಧ್ಯಾಪಕರು.

2) ಅವನು ಚಪ್ಪಲಿ ಹೊಲಿಯುತ್ತಾನೆ.
ಅವನು ಚಮ್ಮಾರ.

3) ಅವನು ಚಿನ್ನದ ಕೆಲಸ ಮಾಡುತ್ತಾನೆ.
ಅವನು ಅಕ್ಕಸಾಲಿ.

4) ಅವರು ಮಡಕೆ ಮಾಡುತ್ತಾರೆ.
ಅವರು ಕುಂಬಾರರು.

5) ಅವಳು ಪದ್ಯ ಬರೆಯುತ್ತಾಳೆ.
ಅವಳು ಕವಯಿತ್ರಿ.

6) ಅವರು ಬೇಸಾಯ ಮಾಡುತ್ತಾರೆ.
ಅವರು ವ್ಯವಸಾಯಗಾರರು.

7) ಅವನು ಕಬ್ಬಿಣದ ಕೆಲಸ ಮಾಡ್ತಾನೆ.
ಅವನು ಕಮ್ಮಾರ.

8) ಅವನು ಬಟ್ಟೆ ಒಗೆಯುತ್ತಾನೆ.
ಅವನು ಅಗಸ.

9) ಅವನು ಮರದ ಕೆಲಸ ಮಾಡುತ್ತಾನೆ.
ಅವನು ಬಡಗಿ.

10) ಅವನು ಬಟ್ಟೆ ನೇಯುತ್ತಾನೆ.
ಅವನು ನೇಕಾರ.

IV Response Drill :

1) ನಿಮ್ಮ ಕ್ಲಾಸಿನಲ್ಲಿ ಆಂಧ್ರದಿಂದ ಬಂದಿರುವವರು ಎಷ್ಟು ಜನ ? ಕೇರಳದಿಂದ ಬಂದಿರುವವರು ಎಷ್ಟು ಜನ ?

2) ನಿಮ್ಮಲ್ಲಿ ಕಾಲೇಜಿನಲ್ಲಿ ಕೆಲಸ ಮಾಡುತ್ತಿರುವವರು ಯಾರು ?

3) ನಿಮ್ಮಲ್ಲಿ ನಾಳೆ ಸಿನಿಮಾಕ್ಕೆ ಹೋಗುವವರು ಯಾರು ಯಾರು ?

EXERCISES

I Fill in the blanks using the Kannada equivalents of the English words given in the brackets :

1) ನೀವು ಚೆನ್ನಾಗಿ ಮಾತನಾಡುವುದನ್ನು ——— ಮಾಡಬೇಕು.
(practice)

2) ನಮ್ಮ ಹಾಸ್ಟೆಲಿನಲ್ಲಿ ಒಬ್ಬಳು ರೂಮು ——— ಇದ್ದಾಳೆ.
(one who sweeps)

3) ——— ಎಡವಲೇಬೇಕು. (one who walks)

4) ಅವರು ನಿಮ್ಮ ——— ನೋಡಿ ಹೊಗಳ್ತಾರೆ. (effort)

5) ನೀವೇನು ಯೋಚನೆ ಮಾಡಬೇಡಿ ——— ಎಲ್ಲಾ ಸರಿಹೋಗುತ್ತೆ.
(gradually)

II Combine the following sentences using participle noun :

1) ಅವರು ಕನ್ನಡ ಕಲಿಯುತ್ತಾರೆ.
ಅವರು ಆಂಧ್ರದಿಂದ ಬಂದಿದ್ದಾರೆ.

2) ಅವಳು ಬೆಂಗಳೂರಿನಲ್ಲಿ ಕೂಲಿಮಾಡ್ತಾ ಇದ್ದಳು.
ಅವಳು ಇಲ್ಲಿ ಕ್ಲರ್ಕ್ ಆಗಿದ್ದಾಳೆ.

3) ಅವನು ನಿನ್ನೆ ನಮ್ಮ ಜೊತೆ ಬಂದಿದ್ದ.
ಅವನು ಇವತ್ತು ಸತ್ತು ಹೋಗಿದ್ದಾನೆ.

4) ಅವರು ಕಳೆದ ವರ್ಷ ಕನ್ನಡ ಕಲಿಯುತ್ತಾ ಇದ್ದರು.
ಅವರು ಸಾಯಂಕಾಲ ನಮ್ಮ ಮನೆಗೆ ಬರ್ತಾರೆ.

5) ಅವಳು ಕಸ ಗುಡಿಸುತ್ತಾಳೆ.
ಅವಳು ನಮ್ಮ ಹಾಸ್ಟೆಲಿನಲ್ಲಿದ್ದಾಳೆ.

III Write as directed :

1) ಅವನೇ ನಿಮ್ಮನ್ನು ಆ ಪುಸ್ತಕ ಕೇಳಿದವನು.
(interrogate by using –aa)

2) ಕಿಟಕಿ ತೆಗೆಯುವವನು ಜವಾನ (into past)

3) ಸರಸ್ವತೀಪುರಂನಲ್ಲಿ ಇದ್ದವರು ಇವರೇ (into present)

4) ನಿನ್ನ ಸರ ಕದ್ದವನು ಸಿಕ್ಕಿಬಿದ್ದ. (into past perfect)

5) ನನಗೆ ಕಾಗದ ಬರೆಯುವವಳು ಯಾರು ? (into past)

IV Change the following sentences using the participle noun.

1) ನನ್ನನ್ನು ಚಿಕ್ಕಂದಿನಿಂದಲೂ ನಮ್ಮ ಮಾವ ಬೆಳೆಸಿದರು.

2) ನಮಗೆ ನಮ್ಮ ಅಧ್ಯಾಪಕರು ಕನ್ನಡ ಕಲಿಸುತ್ತಾರೆ.

3) ಅವರ ಮನೆಯಲ್ಲಿ ಕೆಲಸದವಳು ಅಡಿಗೆ ಮಾಡುತ್ತಾಳೆ.

4) ನನ್ನನ್ನು ನನ್ನ ಅಣ್ಣ ಓದಿಸಿದ.

5) ನಾನೇ ಅವರನ್ನು ನಿಮ್ಮ ಮನೆಗೆ ಕಳುಹಿಸಿದ್ದೆ.

Transform the following sentences according to the model :

a) Model : T : ನೀವು ತಪ್ಪು ಮಾಡ್ತೀರಿ.

S : ನೀವು ತಪ್ಪು ಮಾಡೇ ಮಾಡ್ತೀರಿ.

Transform :

1) ಅವರು ತಕ್ಷಣ ಕಾಗದ ಬರೀತಾರೆ.

2) ಅವಳು ಇವತ್ತು ಮೈಸೂರಿಗೆ ಬರ್ತಾಳೆ

3) ನಾನು ಮೈಸೂರು ದಸರಾಕ್ಕೆ ಹೋಗ್ತೀನಿ

4) ನೀವು ಪರೀಕ್ಷೇಲಿ ಪಾಸ್ ಮಾಡ್ತೀರಿ.

b) Model : T : ಈ ಹುಡುಗ ನಾಟಕದಲ್ಲಿ ಪಾರ್ಟು ಮಾಡುತ್ತಾನೆ.

S : 1. ಈ ಹುಡುಗ ನಾಟಕದಲ್ಲಿ ಪಾರ್ಟು ಮಾಡುವವನು.

2. ಈ ಹುಡುಗ ನಾಟಕದಲ್ಲಿ ಪಾರ್ಟು ಮಾಡುತ್ತಾ ಇರುವವನು.

3. ಈ ಹುಡುಗ ನಾಟಕದಲ್ಲಿ ಪಾರ್ಟು ಮಾಡಿದವನು.

4. ಈ ಹುಡುಗ ನಾಟಕದಲ್ಲಿ ಪಾರ್ಟು ಮಾಡುತ್ತಾ ಇದ್ದವನು.

5. ಈ ಹುಡುಗ ನಾಟಕದಲ್ಲಿ ಪಾರ್ಟು ಮಾಡಿದ್ದವನು.

Transform :

1) ಇವರು ನನಗೆ ಕನ್ನಡ ಕಲಿಸುತ್ತಾರೆ.

2) ಅವರು ನಮ್ಮ ಮನೆಗೆ ಬರುತ್ತಾರೆ.

3) ಇಬ್ಬರು ಹುಡುಗರಲ್ಲಿ, ಆ ಹುಡುಗ ಅಳುತ್ತಾನೆ.

VI Read the passage given below and answer the questions

ನಮ್ಮ ಊರು

ನಮ್ಮ ಊರು ಒಂದು ಹಳ್ಳಿ. ಅದರ ಹೆಸರು ಹಾಲುಗೊಣ. ನಮ್ಮ ಊರಿನ ಜನಸಂಖ್ಯೆ ಒಂದು ಸಾವಿರ. ನಮ್ಮ ಊರಿನಲ್ಲಿ ಇರುವವರಲ್ಲಿ ಹೆಚ್ಚಿನ ಜನ ರೈತರು. ನಮ್ಮ ಊರಿನ ಸುತ್ತ ಹೊಲಗಳು, ಗದ್ದೆಗಳು, ತೆಂಗಿನ ತೋಟಗಳು ಇವೆ. ನಮ್ಮ ರೈತರು ಹೆಚ್ಚಿಗೆ ಬೆಳೆಯುವ ಬೆಳೆ ರಾಗಿ, ಭತ್ತ, ಜೋಳ. ನಮ್ಮ ಊರಿನ ಪಕ್ಕದಲ್ಲಿ ಒಂದು ಸಣ್ಣ ನದಿ ಇದೆ. ಅದರಿಂದ ನಮಗೆ ಕುಡಿಯುವ ನೀರು ಸಿಗುತ್ತದೆ.

ನಮ್ಮ ಊರಿನಲ್ಲಿ ರೈತರಲ್ಲದೆ ಬೇರೆ ಬೇರೆ ಕಸಬು ಮಾಡುವವರೂ ಇದ್ದಾರೆ. ಬಟ್ಟೆ ನೇಯುವವರು ಕೆಲವರು ಇದ್ದಾರೆ. ಬಡಗಿಗಳು ಒಂದಿಬ್ಬರು ಇದ್ದಾರೆ. ದರ್ಜಿ, ಮೋಚಿ, ಕಮ್ಮಾರ ಸಹ ಇದ್ದಾರೆ. ನಮ್ಮೂರಿನಲ್ಲಿ ಒಂದು ದೇವಸ್ಥಾನ, ಒಂದು

ಪಂಚಾಯ್ತಿ ಕಛೇರಿ, ಒಂದು ಲೈಬ್ರರಿ, ಒಂದು ಸಹಕಾರ ಸಂಘ ಇದೆ. ನಾವು ವರ್ತಮಾನ ಪತ್ರಿಕೆ, ಪುಸ್ತಕಗಳನ್ನು ಓದುವುದು ಈ ಲೈಬ್ರರೀಲಿ. ನಾವು ಸಕ್ಕರೆ, ಗೊಬ್ಬರ ಮತ್ತು ಬೇರೆ ಬೇರೆ ಸಾಮಾನು ಕೊಳ್ಳುವವರು ಕೊಳ್ಳುವುದು ಈ ಸಹಕಾರ ಸಂಘದಲ್ಲೇ.

ನಮ್ಮ ಊರಿನಲ್ಲಿ ಒಂದು ಪ್ರಾಥಮಿಕ ಶಾಲೆ ಒಂದು ಮಾಧ್ಯಮಿಕ ಶಾಲೆ ಇವೆ. ನಾವೆಲ್ಲ ಇವೇ ಶಾಲೆಗಳಲ್ಲಿ ಓದಿದವರು.

VOCABULARY :

ಕಸುಬು—occupation

ಗದ್ದೆ—paddy field

ಗೊಬ್ಬರ—manure

ಜನಸಂಖ್ಯೆ—population

ಭತ್ತ—paddy

ಮಾಧ್ಯಮಿಕ ಶಾಲೆ—middle school

ರೈತ—peasant, farmer

ಸಹಕಾರ ಸಂಘ—co-operative society

ಹೊಲ—crop field, dry land

ಪ್ರಾಥಮಿಕ ಶಾಲೆ—primary school

Answer the following questions :

1) ನಮ್ಮ ಊರಿನ ಸುತ್ತ ಮುತ್ತ ಏನ   ದೆ ?

2) ನಮ್ಮ ಊರಿನಲ್ಲಿ ಯಾರು ಯಾರು ಇದ್ದಾರೆ ? ಏನೇನು ಇದೆ ?

3) ನಮ್ಮ ಊರಿನ ಮಾದರಿಯಲ್ಲಿ ನಿಮ್ಮ ಊರಿನ ಪರಿಚಯ ಮಾಡಿಕೊಡಿ.

VII Answer the following questions :

1) ರಣಜಿತ್, ಯಾದವ್ ಅವರ ಹಾಸ್ಟೆಲಿನಲ್ಲಿ ಯಾರು ಯಾರು ಕನ್ನಡ ಮಾತನಾಡುವವರು ಇದ್ದಾರೆ ?

2) ಅಧ್ಯಾಪಕರು ರಣಜಿತ್ ಮತ್ತು ಯಾದವ್ ಅವರಿಗೆ ಹೇಗೆ ಮಾತನಾಡೋದು ಕಲಿಯಬೇಕು ಅಂತ ಹೇಳಿದರು ?

3) 'ನಾವು ಮಾತನಾಡೋದನ್ನು ಕೇಳಿ ನಗ್ತಾರೆ' ಅಂದದ್ದಕ್ಕೆ ಅಧ್ಯಾಪಕರು ಏನು ಹೇಳಿದರು ?

4) ಅಧ್ಯಾಪಕರು ಹೇಗೆ ತಮಿಳು ಕಲಿತಿದ್ದರು ?

5) ಅಧ್ಯಾಪಕರು ಯಾವಾಗ ಸ್ಪೆಷಲ್ ಕ್ಲಾಸಿಗೆ ಬನ್ನಿ ಅಂತ ಹೇಳಿದರು ?

6) ಕಡೆಯಲ್ಲಿ ಅಧ್ಯಾಪಕರು ರಣಜಿತ್ ಮತ್ತು ಯಾದವ್ ಅವರಿಗೆ ಏನು ಹೇಳಿದರು ?

VOCABULARY :

ಅಭ್ಯಾಸ—practice, exercise

ಎಡವು—to trip

ಕಲಿಕೆ—learning

ಗಮನ—attention

ಗಾದೆ—proverb

ಗುಡಿಸು—to sweep

ನಡೆ—to walk

ಬಿಗಿ—stiff

ಮುಖ್ಯ—important

ಸಂಕೋಚ—hesitate

Supplementary Vocabulary :

ಅಕ್ಕಸಾಲಿಗ—goldsmith
ಅಗಸ—washerman
ಕಬ್ಬಿಣ—iron
ಕಮ್ಮಾರ—blacksmith
ಕವಯಿತ್ರಿ—poetess
ಕಚೇರಿ—office
ಕುಂಬಾರ—pot maker
ಚಪ್ಪಲಿ—chappals
ಚಮ್ಮಾರ—cobbler
ದರ್ಜಿ—tailor
ನೇಕಾರ—weaver
ನೇಯು—to weave
ಬಡಗಿ—carpenter
ಬೇಸಾಯ—cultivation
ಮಾದರಿ—model, type
ಮಡಕೆ—earthen pot
ಮೋಚಿ—cobbler
ವ್ಯವಸಾಯಗಾರ—farmer
ಹೊಲಿ—to stitch

GRAMMAR NOTES :

Participle nouns are introduced in this lesson, These are obtained by adding third person human pronouns to the relative participle form of the verb. The participle nouns can be inflected for all the tenses.

1. Non-past tense :

Structure is,

Relative participle of the verb + third per. human pronoun = participle noun.

1. ಮಾಡುವ + ಅವನು = ಮಾಡುವವನು
   + ಅವಳು = ಮಾಡುವವಳು
   + ಅವರು = ಮಾಡುವವರು

2. ಬರೆಯುವ + ಅವನು = ಬರೆಯುವವನು
   + ಅವಳು = ಬರೆಯುವವಳು
   + ಅವರು = ಬರೆಯುವವರು

1. ಅವನು ನಮ್ಮ ತೋಟದಲ್ಲಿ ಕೆಲಸ ಮಾಡುವವನು.
2. ಅವಳು ಅಂಗಡಿಯಲ್ಲಿ ಲೆಕ್ಕ ಬರೆಯುವವಳು.
3. ಅವರು ನಮ್ಮ ಅಂಗಡಿಯಲ್ಲಿ ಕೆಲಸ ಮಾಡುವವರು.

2. Past tense :

Structure is,

Past relative participle + third per. human noun + relative participle marker = participle noun

ಮಾಡಿದ + ಅವನು = ಮಾಡಿದವನು

ನಕ್ಕ + ಅವಳು = ನಕ್ಕವಳು

ಕೊಟ್ಟ + ಅವರು = ಕೊಟ್ಟವರು

1. ನಮ್ಮ ತೋಟದಲ್ಲಿ ಕೆಲಸ ಮಾಡಿದವನು ರಾಮು.
2. ನನ್ನ ಜೊತೆ ನಕ್ಕವಳು ಲಕ್ಷ್ಮಿ.
3. ನಮ್ಮ ಅಂಗಡಿಗೆ ಹಣ ಕೊಟ್ಟವರು ಬ್ಯಾಂಕಿನವರು.

3. Perfect tense :

a) Present perfect

Structure is,

Verbal participle of verb + present relative participle of 'iru' + third per. human pronoun = Participle noun.

ಮಾಡಿ + ಇರುವ + ಅವನು = ಮಾಡಿರುವವನು
+ ಅವಳು = ಮಾಡಿರುವವಳು
+ ಅವರು = ಮಾಡಿರುವವರು

1) ಆ ಕೆಲಸ ಮಾಡಿರುವವನು ರಾಮನೇ
2) ಕ್ಲಾಸಿನಲ್ಲಿ ಸಕ್ಕವಳು ಅವಳೇ
3) ಆ ಕೆಲಸ ಮಾಡಿರುವವರು ಆ ಹುಡುಗರೇ

b) Past perfect :

Structure is,

Verbal participle of verb + past relative participle of 'iru' + third per. hum. pronouns = participle noun

ಮಾಡಿ + ಇದ್ದ + ಅವನು = ಮಾಡಿದ್ದವನು
+ ಅವಳು = ಮಾಡಿದ್ದವಳು
+ ಅವರು = ಮಾಡಿದ್ದವರು

1) ಆ ಕೆಲಸ ಅಷ್ಟು ಚೆನ್ನಾಗಿ ಮಾಡಿದ್ದವನು ರವಿ.
2) ಕ್ಲಾಸಿನಲ್ಲಿ ನಕ್ಕಿದ್ದವಳು ಕಮಲ.
3) ಆ ಕೆಲಸ ಅಷ್ಟೊಂದು ಚೆನ್ನಾಗಿ ಮಾಡಿದ್ದವರು ಯಾರು ಗೊತ್ತೆ ?

4. Continuous tense :

a) Present continuous tense :

Structure is,

continuous participle + non-past relative participle of 'iru' + third per. hum. pronoun = participle noun.

ಮಾಡುತ್ತಾ + ಇರುವ + ಅವನು = ಮಾಡುತ್ತಾ ಇರುವವನು

+ ಅವಳು = ಮಾಡುತ್ತಾ ಇರುವವಳು

+ ಅವರು = ಮಾಡುತ್ತಾ ಇರುವವರು

1) ಅಲ್ಲಿ ಕೆಲಸ ಮಾಡುತ್ತಾ ಇರುವವನು ರಾಮು.

2) ಅಲ್ಲಿ ನಗುತ್ತಾ ಇರುವವಳು ಲಕ್ಷ್ಮಿ.

3) ಇಲ್ಲಿ ಕೆಲಸ ಮಾಡುತ್ತಾ ಇರುವವರು ನನ್ನ ಮಕ್ಕಳು.

b) Past continuous tense :

Structure is,

continuous participle + past relative participle of 'iru' + third per. hum. pronoun = participle noun

ಮಾಡುತ್ತಾ + ಇದ್ದ + ಅವನು = ಮಾಡುತ್ತಾ ಇದ್ದವನು

+ ಅವಳು = ಮಾಡುತ್ತಾ ಇದ್ದವಳು

+ ಅವರು = ಮಾಡುತ್ತಾ ಇದ್ದವರು

1) ಅವರ ಮನೆಯಲ್ಲಿ ಕೆಲಸ ಮಾಡುತ್ತಾ ಇದ್ದವನು ಹನುಮ.

2) ನನ್ನ ಕ್ಲಾಸಿನಲ್ಲಿ ನಗುತ್ತಾ ಇದ್ದವಳು ಹನುಮಿ.

3) ಆ ತೋಟದಲ್ಲಿ ಕೆಲಸ ಮಾಡುತ್ತಾ ಇದ್ದವರು ಈ ಆಳುಗಳು.

UNIT 13

LESSON 64

ABOUT MANASAGANGOTRI

DIALOGUE

ಅಧ್ಯಾಪಕ : ಇವತ್ತು ನಿಮಗೆ ನಾನು ಪಾಠ ಮಾಡಲ್ಲ. ನಿಮಗೆ ಮಾನಸ ಗಂಗೋತ್ರಿಯ ಬಗ್ಗೆ ಹೇಳ್ತೀನಿ.	Today I won't teach you the lesson. I will tell you about Manasagangotri.
ಸುರೇಶ : ಆಗಲಿ ಸಾರ್. ನಾವೇ ನಿಮ್ಮನ್ನ ಒಂದು ಸಾರಿ ಇದರ ಬಗ್ಗೆ ಕೇಳಬೇಕೂಂತ ಇದ್ವಿ. ಅದಕ್ಕೆ ಮೊದಲು ನೀವೇ ಹೇಳ್ತಾ ಇದೀರಿ	Fine sir. We ourselves thought of asking you some time about this. Before (we did) you yourself are telling.

ಅಧ್ಯಾಪಕ : ನಿಮಗೆ ಏನನ್ನು ಕೇಳ ಬೇಕೊಂತ ಅನ್ನಿಸುತ್ತೋ ಅದನ್ನು ತಪ್ಪದೆ ಕೇಳಿ. ನೀವು ಕೇಳದ ಹೊರತು ನಾವು ಹೇಳೋದು ಕಡಿಮೆ. ನಿಮಗೆ ಮಾನಸ ಗಂಗೋತ್ರಿಯ ಬಗ್ಗೆ ಸ್ವಲ್ಪ ಸ್ವಲ್ಪ ಏನಾದರೂ ಗೊತ್ತಾ ?	Whatever you feel like asking ask without hesitation. Unless you ask we can hardly tell you. Do you know at least a little about Manasagangotri ?
ರಮೇಶ್ : ನಮಗೆ ಹೆಚ್ಚಿಗೆ ಏನೂ ಗೊತ್ತಿಲ್ಲ ಸಾರ್.	We do not know much about it sir.
ಅಧ್ಯಾಪಕ : ಹಾಗಾದರೆ ಒಂದು ಕೆಲಸ ಮಾಡಿ. ನಾನು ನಿಮಗೆ ಕಥೆ ಹೇಳುವ ಹಾಗೆ ಹೇಳುವುದರ ಬದಲು ನೀವು ಪ್ರಶ್ನೆ ಕೇಳ್ತಾ ಹೋಗಿ. ನಾನು ಉತ್ತರ ಹೇಳ್ತಾ ಹೋಗ್ತೀನಿ.	Then you do one thing. Instead of my telling you a story you go on asking questions I will go on replying to that.
ಸುರೇಶ : ಅದೇ ಸರಿ ಸಾರ್. ಹಾಗೆ ಮಾಡೋದರಿಂದ ನಾವು ಸುಮ್ಮನೆ ಕುಳಿತುಕೊಳ್ಳುವುದರ ಬದಲು ಸಂಭಾಷಣೆಯಲ್ಲಿ ಭಾಗ ವಹಿಸಬಹುದು.	That is right sir. By doing so instead of sitting idly we may also take part in the conversa-tion.?
ಅಧ್ಯಾಪಕ : ಬಹಳ ಒಳ್ಳೆಯದು. ಈಗ ಯಾರು ಸಂಭಾಷಣೆ ಆರಂಭ ಮಾಡ್ತೀರಿ ?	Very good. Now who is going to start the conversationn.
ಮಾಧವ : ಸಾರ್. ಈ ಮಾನಸ ಗಂಗೋತ್ರಿಯನ್ನು ಇಲ್ಲಿ ಯಾವಾಗ ಸ್ಥಾಪಿಸಿದರು ?	Sir, when did they establish Manasagangotri here ?
ಅಧ್ಯಾಪಕ : ಮೈಸೂರು ವಿಶ್ವವಿದ್ಯಾ ನಿಲಯದ ಈ ಸ್ನಾತಕೋತ್ತರ	They started the Postgraduate and Research Centre of Mysore

ಬೋಧನಾ ಮತ್ತು ಸಂಶೋಧನಾ ಕೇಂದ್ರವನ್ನು 1960ನೇ ಇಸವಿ ಏಪ್ರಿಲ್ ತಿಂಗಳಿನಲ್ಲಿ ಆರಂಭಿಸಿದರು.	University in the month of April 1960.
ರಮೇಶ್ : ಇದು ಇಲ್ಲಿ ಆರಂಭವಾಗುವುದಕ್ಕೆ ಮೊದಲು ತರಗತಿಗಳು ಎಲ್ಲಿ ನಡೆಯುತ್ತಾ ಇದ್ದವು ?	Before this centre started here where were the classes held ?
ಅಧ್ಯಾಪಕ : ಈ ಕೇಂದ್ರ ಆರಂಭವಾಗುವುದಕ್ಕೆ ಮೊದಲು ತರಗತಿಗಳು ಮಹಾರಾಜಾ ಕಾಲೇಜಿನಲ್ಲಿ ನಡೆಯುತ್ತಿದ್ದವು.	Before this centre started here the classes were being held in Maharaja's college.
ಶರ್ಮ : ಮಾನಸಗಂಗೋತ್ರಿಯನ್ನು ಇಲ್ಲಿ ಆರಂಭಿಸುವುದಕ್ಕೆ ಮುಖ್ಯ ಕಾರಣ ಯಾರು ಸಾರ್ ?	Who is mainly responsible for starting Manasagangotri here sir ?
ಅಧ್ಯಾಪಕ : ಮಾನಸಗಂಗೋತ್ರಿಯನ್ನು ಇಲ್ಲಿ ಆರಂಭಿಸಿದವರು ಡಾ॥ ಕೆ. ವಿ. ಪುಟ್ಟಪ್ಪನವರು. ಅವರು ಆಗ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದರು. ತಮ್ಮ ಅಧಿಕಾರದ ಸಮಯದಲ್ಲಿ ಈ ಕೇಂದ್ರವನ್ನು ಆರಂಭಿಸಿದರು.	The person who started Manasa gangotri here is Dr. K. V. Puttappa. At that time he was Vice Chancellor of Mysore University. During his tenure he started this centre.
ರಮೇಶ : ಯಾರು ? ರಾಮಾಯಣ ದರ್ಶನಂ ಬರೆದ ಪುಟ್ಟಪ್ಪನವರಾ?	Who ? Is that the Puttappa who wrote 'Ramayana Darshanam' ?
ಅಧ್ಯಾಪಕ : ಹೌದು. ಅವರೇ. ಅವರು ದಕ್ಷ ಆಡಳಿತಗಾರರಷ್ಟೇ ಅಲ್ಲ ಕನ್ನಡದ ಶ್ರೇಷ್ಠ ಕವಿಗಳೂ ಕೂಡ.	Yes. The same person. He is not only an able administrator but also a great Kannada poet.

ಸುರೇಶ್ : ಅವರನ್ನು ಕುರಿತು ನಮಗೆ ಸ್ವಲ್ಪ ಪರಿಚಯ ಮಾಡಿಕೊಡಿ ಸಾರ್.

Tell us something about him sir.

ಅಧ್ಯಾಪಕ : 'ಆಡು ಮುಟ್ಟದ ಸೊಪ್ಪಿಲ್ಲ' ಅಂತ ಕನ್ನಡದಲ್ಲಿ ಒಂದು ಗಾದೆ ಇದೆ. ಹಾಗೆ ಪುಟ್ಟಪ್ಪನವರು ಬರೆಯದ ಸಾಹಿತ್ಯಪ್ರಕಾರವೇ ಇಲ್ಲ. ಕವಿಯಾಗಿ, ಕಾದಂಬರಿಕಾರರಾಗಿ, ವಿಮರ್ಶಕರಾಗಿ, ನಾಟಕಕಾರರಾಗಿ, ಕಥೆಗಾರರಾಗಿ ಅವರು ತುಂಬಾ ಹೆಸರು ಗಳಿಸಿದ್ದಾರೆ. ಅವರ ಪುಸ್ತಕಗಳನ್ನು ಓದದ ಕನ್ನಡಿಗರೇ ಅಪರೂಪ. ಅವರ 'ರಾಮಾಯಣ ದರ್ಶನಂ' ಮಹಾ ಕಾವ್ಯಕ್ಕೆ ಜ್ಞಾನಪೀಠ ಪ್ರಶಸ್ತಿ ದೊರಕಿದೆ. ಅವರ ಕಾವ್ಯನಾಮ 'ಕುವೆಂಪು.' ಅವರು ನಮ್ಮ ರಾಷ್ಟ್ರಕವಿ.

There is a proverb in Kannada that "there is no leaf untouched by the goat". Like that there is no literary form in which Puttappa has not written. As a poet, as a novelist, as a playwright, story writer, he has earned a great name. The Kannadigas who have not read his books are rare. His great epic 'Ramayana Darshanam' got the 'Jnanapeetha award'. His pen name is 'Kuvempu.' He is our national poet.

ಮಾಧವ : ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಅವರ ಪ್ರತಿಮೆ ಇದೆ ಸಾರ್.

There is a statue of his in the Institute of Kannada Studies Sir.

ಅಧ್ಯಾಪಕ : ಹೌದು ಇದೆ. ಅದನ್ನು ನೀವೆಲ್ಲಾ ನೋಡಿದ್ದೀರೋ ಅಥವಾ ನೋಡದವರೂ ಇದ್ದೀರೋ ?

Yes, there is. Have you all seen it or are there some who haven't seen it ?

ಶರ್ಮ : ನಮ್ಮಲ್ಲಿ ಸುಮಾರು ಜನ ನೋಡದವರೂ ಇದೀವಿ ಸಾರ್. ನಮಗೆ ಗಂಗೋತ್ರಿಯಲ್ಲಿ ಏನೇನು ಇದೆ

There are few among us who have not seen it sir. We don't know exactly what all is there in

ಅನ್ನೋದು ಸರಿಯಾಗಿ ಗೊತ್ತಿಲ್ಲ.

Manasagangotri .

ಅಧ್ಯಾಪಕ : ಗಂಗೋತ್ರಿಯಲ್ಲಿ ಕನ್ನಡ ಅಧ್ಯಯನ ಸಂಸ್ಥೆ, ಜಾನಪದ ವಸ್ತು ಸಂಗ್ರಹಾಲಯ, ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ, ಮನೋವಿಜ್ಞಾನ ವಿಭಾಗ, ಭೂಗರ್ಭ ಶಾಸ್ತ್ರ ಸಂಸ್ಥೆ, ಭೌತ ವಿಜ್ಞಾನ ವಿಭಾಗಗಳು, ನೈಸರ್ಗಿಕ ವಿಜ್ಞಾನ ವಿಭಾಗಗಳು, ಮಾನವಿಕ ವಿಭಾಗ, ಭಾರತೀಯ ಭಾಷಾ ಸಂಸ್ಥಾನ, ಲೈಬ್ರರಿ, ಮತ್ತು ಗಾಂಧಿಭವನ ಇವೆ. ಅಲ್ಲದೆ ಒಂದು ಬಯಲು ರಂಗಮಂದಿರವೂ ಸಹ ಇದೆ. ಇದರಲ್ಲಿ ಜಾನಪದ ವಸ್ತು ಸಂಗ್ರಹಾಲಯ, ಕನ್ನಡ ಅಧ್ಯಯನ ಸಂಸ್ಥೆ ಗಾಂಧಿಭವನ ಮತ್ತು ಲೈಬ್ರರಿಯನ್ನು ಅವಶ್ಯವಾಗಿ ನೋಡಲೇಬೇಕು.

In Gangotri Institute of Kannada Studies, Folklore Museum, Institute of Correspondance Course, Psychology Department, Geography Department, Physical Science Departments, Natural Science Departments, Humanities Department, Central Institute of Indian Languages, the Library and Gandhi Bhavan are there. Besides these there is an open-air theatre also. Among these you must see Folklore museum, Institute of Kannada Studies, Gandhi Bhavan and Library.

ಸುರೇಶ್ : ಲೈಬ್ರರಿ ನೋಡಿದ್ದೀವಿ ಸಾರ್. ಬಹಳ ದೊಡ್ಡದು. ಇಷ್ಟು ದಿನ ಇಲ್ಲಿ ಇದ್ದು ಲೈಬ್ರರಿ ನೋಡದೆ ಇರ್ತೀವಾ ?

We have seen the Library sir. It is very big. How could we be here so long without seeing that?

ಅಧ್ಯಾಪಕ : ಹೌದಾ ! ನಿಮ್ಮಲ್ಲಿ ಎಲ್ಲಾ ನೋಡಿದ್ದೀರಾ ?

Really ! You have all seen it ?

ಮಾಧವ : ಸಾರ್. ನಮಗೆಲ್ಲಾ ಜಾನಪದ ವಸ್ತು ಸಂಗ್ರಹಾಲಯ

Sir, we all desire to see the Folklore Museum. Please

ನೋಡಬೇಕೂಂತ ಆಸೆ. ಒಂದು ಸಾರಿ ಕರಕೊಂಡು ಹೋಗಿ.	take us sometime.
ಅಧ್ಯಾಪಕ : ಖಂಡಿತ ಕರಕೊಂಡು ಹೋಗ್ತೀನಿ. ಅದನ್ನ ನೋಡದ ಮೇಲೆ ಇಲ್ಲಿ ಇದ್ದೂ ಪ್ರಯೋಜನವಿಲ್ಲ.	Certainly I will take you. It is of no use if you stay here without seeing that.
ರಮೇಶ್ : ಸಾರ್, ಮಾನಸಗಂಗೋತ್ರಿ ಅಂತ ಇದಕ್ಕೆ ಯಾರು ಹೆಸರಿಟ್ಟರು ?	Sir, who named this as Manasa-gangotri ?
ಅಧ್ಯಾಪಕ : ಕುವೆಂಪು ಅವರೇ ಇಟ್ಟರು. ಮೊದಲು ಈ ಭೂಮಿ ಹಾಳು ಬಿದ್ದಿತ್ತು. ಈಗ ನೋಡಿ, ನೈಸರ್ಗಿಕ ಸೌಂದರ್ಯದ ಮಧ್ಯದಲ್ಲಿ ಈ ಕೇಂದ್ರ ಹೇಗಿದೆ ? ಸುತ್ತಲೂ ಹಸಿರು ಗಿಡಗಳು, ಮರಗಳು, ಮಧ್ಯೆ ಕೆಂಪು, ಬಿಳಿ, ಹಳದಿ ಹೂಗಳು. ಋತುಮಾನಕ್ಕೆ ತಕ್ಕಂತೆ ಚಿಗುರುವ ಹೂಬಿಡುವ ಗಿಡ ಮರಗಳು.	Kuvempu himself. Earlier this. land was barren. Look now, in the midst of natural beauty, how is this centre? Around there are green plants, trees In the centre there are red, white, yellow flowers. Season-wise sprouting, flowering plants and trees.
ಶರ್ಮ : ಹೌದು ಸಾರ್. ತುಂಬಾ ಸುಂದರವಾಗಿದೆ.	Yes sir. It is very beautiful.
ಅಧ್ಯಾಪಕ : ಇನ್ನೂ ಹತ್ತು ನಿಮಿಷ ಟೈಮು ಇದೆ. ಈಗ ನೀವು ಇಲ್ಲಿ ವರೆಗೆ ಮಾತಾಡಿದ್ದನ್ನೇ ಸಂಭಾಷಣೆ ರೂಪದಲ್ಲಿ ಬರೀತೀರಾ. ನೋಡೋಣ.	Still ten minutes more. Now can you write in conversational form whatever we said so far ?

ಎಲ್ಲರೂ : ಆಗಲಿ ಸಾರ್ ಬರೀತೀವಿ. — Yes sir we will write.

ಅಧ್ಯಾಪಕ : ಬರೆಯದ ವಿದ್ಯಾರ್ಥಿಯನ್ನು ನಾನು ಜಾನಪದ ವಸ್ತುಸಂಗ್ರಹಾಲಯಕ್ಕೆ ಕರೆದುಕೊಂಡು ಹೋಗಲ್ಲ — I shall not take any student to the Folklore museum who doesn't write this.

DRILLS

I Build up Drill :

a) Model : ಆಡದ ದಿನ ಇಲ್ಲ
ಜಗಳ ಆಡದ ದಿನ ಇಲ್ಲ
ಮನೆಯಲ್ಲಿ ಜಗಳ ಆಡದ ದಿನ ಇಲ್ಲ
ನನ್ನ ಮನೆಯಲ್ಲಿ ಜಗಳ ಆಡದ ದಿನ ಇಲ್ಲ
ನಾನು ನನ್ನ ಮನೆಯಲ್ಲಿ ಜಗಳ ಆಡದ ದಿನ ಇಲ್ಲ

On the model given above expand the following :

1) ತಿನ್ನದ ಹೋಟೆಲ್ ಇಲ್ಲ
2) ನೋಡದ ಜಾಗ ಇಲ್ಲ
3) ಓದದ ಪುಸ್ತಕ ಇಲ್ಲ

b) Model : ನೋಡದವರು ಇದ್ದಾರೆ
ವಸ್ತುಪ್ರದರ್ಶನ ನೋಡದವರು ಇದ್ದಾರೆ
ದಸರಾ ವಸ್ತುಪ್ರದರ್ಶನ ನೋಡದವರು ಇದ್ದಾರೆ
ಮೈಸೂರು ದಸರಾ ವಸ್ತುಪ್ರದರ್ಶನ ನೋಡದವರು ಇದ್ದಾರೆ
ಕೆಲವರು ಮೈಸೂರು ದಸರಾ ವಸ್ತುಪ್ರದರ್ಶನ ನೋಡದವರು ಇದ್ದಾರೆ
ನಮ್ಮ ಕ್ಲಾಸಿನಲ್ಲಿ ಕೆಲವರು ಮೈಸೂರು ದಸರಾ ವಸ್ತುಪ್ರದರ್ಶನ ನೋಡದವರು ಇದ್ದಾರೆ

On the model given above expand the following making the necessary changes wherever necessary :

1) ತರದವರು ಇದ್ದಾರೆ.
2) ಬರೆಯದವರು ಯಾರು ?

II Transformation Drill :

a) Model : T : ಇವರಲ್ಲಿ ನಗುವ ಹುಡುಗಿ ಯಾರು ?

ಇವರಲ್ಲಿ ನಗದ ಹುಡುಗಿ ಯಾರು ?

Transform :

1) ನೀನು ಓದುವ ಪುಸ್ತಕ ಯಾವುದು ?
2) ಚೆನ್ನಾಗಿ ಕನ್ನಡ ಕಲಿಯುವ ವಿದ್ಯಾರ್ಥಿ ಇವರೇ ?
3) ನಾನು ಮಾಡುವ ಕೆಲಸ ನೀನು ಮಾಡಬೇಕು.
4) ಎರಡು ರೂಮು ಇರುವ ಮನೆಗೆ ಬಾಡಿಗೆ ಎಷ್ಟು ?
5) ಇದು ಅಡುಮುಟ್ಟುವ ಸೊಪ್ಪು

b) Modeal : T : ಇವರಲ್ಲಿ ನಕ್ಕ ಹುಡುಗಿ ಯಾರು ?

S : ಇವರಲ್ಲಿ ನಗದ ಹುಡುಗಿ ಯಾರು ?

Transform :

1) ನನಗೆ ಓದಿದ ಹುಡುಗಿ ಬೇಡ
2) ಕೊಟ್ಟ ಹೆಣ್ಣು ಮನೆಗೆ ಹೇಗೆ ಹೊರಗು ?
3) ಅವನು ಮಾಡಿದ ಕೆಲಸ ಇದೊಂದೆ
4) ನಾನು ಕೇಳಿದ ಹಾಡು ಇದು
5) ಇದು ಅವರು ಒಪ್ಪಿಕೊಂಡ ಸಂಗತಿ

IV Response Drill :

1) ನೀವು ಕೇಳದ ಸಿನಿಮಾ ಹಾಡು ಯಾವುದಾದರೂ ಇದೆಯಾ ?
2) ನಿಮಗೆ ಅರ್ಥವಾಗದ ಪಾಠ ಯಾವುದು ?
3) ನೀವು ಪರೀಕ್ಷೆಯಲ್ಲಿ ಉತ್ತರ ಬರೆಯದ ಪ್ರಶ್ನೆಗೆ ನಾನು ಉತ್ತರ ಹೇಳಬೇಕಾ?
4) ನಿಮ್ಮಲ್ಲಿ ' ಚೋಮನದುಡಿ ' ಎಂಬ ಸಿನಿಮಾ ನೋಡದವರು ಯಾರು ?
5) ಇವತ್ತು ಹೋಂವರ್ಕ್ ಪುಸ್ತಕ ತರದವರು ಕೈ ಎತ್ತಿ.

EXERCISES

I Fill in the blanks using the correct negative relative participle/ negative participle noun forms of the verbs given in the brackets

1) ಅದು———ಕೈ (ಕೊಡು)
2) ಇದು— ——ನಾಯಿ (ಕಚ್ಚು)
3) ಅವನು ಚೆನ್ನಾಗಿ———ಹುಡುಗ (ಹಾಡು)
4) ನಮ್ಮ ಕ್ಲಾಸಿನಲ್ಲಿ ಚೆನ್ನಾಗಿ———ರಮಾ (ಹಾಡು)
5) ಮಹಾದೇವ ಯಾವತ್ತೂ———ಇವತ್ತು ಯಾಕೆ ಬಂದ? (ಬರು)
6) ನಾನು ಸಿನಿಮಾ———ದಿನ ಇಲ್ಲ (ನೋಡು)
7) ನನ್ನನ್ನು ಯಾವತ್ತೂ———ಇವತ್ತು ಮಾತನಾಡಿಸಿದರು (ಮಾತನಾಡಿಸು)

II Give the negative relative participle/negative participle noun forms of the following nouns and use them in your own sentences :

1) ಬರುತ್ತಾ ಇರುವ
2) ಆಡುವವರು
3) ಮಾಡದ
4) ನಂಬುವವಳು

III Change the following sentences into negative relative participle :

1) ನಾನು ಬರೆಯುವ ಪೆನ್ನು ಎಲ್ಲಿ ?
2) ಎದ್ದ ಮಗುವಿಗೆ ಯಾಕೆ ಹೊಡೆದೆ ?
3) ಅದು ಅವರು ಕೇಳಿದ ಸಂಗತಿ.
4) ಹೊಲಿದ ಬಟ್ಟೆಯನ್ನು ಕೊಟ್ಟುಬಿಡು.
5) ಇದು ಕೆಳಗೆ ಬಿದ್ದ ಹೂ.

IV Combine the following sentences according to the given model :

a) Model : T : ಇದು ನಾಯಿ
ಇದು ಕಚ್ಚುತ್ತದೆ.
S : ಇದು ಕಚ್ಚುವ ನಾಯಿ

Combine :

1) ಅವರು ಉಪಾಧ್ಯಾಯರು
   ಅವರು ಹುಡುಗರನ್ನು ಹೊಡೆಯುತ್ತಾರೆ
2) ಇವನು ವಿದ್ಯಾರ್ಥಿ
   ಇವನು ಚೆನ್ನಾಗಿ ಓದುತ್ತಾನೆ
3) ಇವನು ದರ್ಜಿ
   ಇವನು ಚೆನ್ನಾಗಿ ಬಟ್ಟೆ ಹೊಲಿಯುತ್ತಾನೆ
4) ಅವನು ಅಗಸ
   ಅವನು ಚೆನ್ನಾಗಿ ಬಟ್ಟೆ ಒಗೆಯುತ್ತಾನೆ

b) Model : T : ಅವರು ಪಾಠ ಮಾಡುವುದಿಲ್ಲ
ಅವರು ಅಧ್ಯಾಪಕರಲ್ಲ

S : ಪಾಠ ಮಾಡದವರು ಅಧ್ಯಾಪಕರಲ್ಲ

Combine :

1) ಅವನು ಬಟ್ಟೆ ನೇಯುವುದಿಲ್ಲ.
   ಅವನು ನೇಕಾರನಲ್ಲ
2) ಅವರು ಬಟ್ಟೆ ಒಗೆಯುವುದಿಲ್ಲ
   ಅವರು ಅಗಸರಲ್ಲ
3) ಅವನು ಕಬ್ಬಿಣದ ಕೆಲಸ ಮಾಡುವುದಿಲ್ಲ
   ಅವನು ಕಮ್ಮಾರನಲ್ಲ
4) ಅವರು ಬೇಸಾಯ ಮಾಡುವುದಿಲ್ಲ
   ಅವರು ವ್ಯವಸಾಯಗಾರರಲ್ಲ
5) ಅವನು ಚಪ್ಪಲಿ ಹೊಲಿಯುವುದಿಲ್ಲ
   ಅವನು ಚಮ್ಮಾರನಲ್ಲ

V Answer the following questions :

1) ಅಧ್ಯಾಪಕರು ಯಾಕೆ ಪ್ರಶ್ನೆ ಕೇಳ್ತಾ ಹೋಗಿ, ಉತ್ತರ ಹೇಳ್ತಾ ಹೋಗ್ತೀನಿ ಅಂದರು ?
2) ಮಾನಸಗಂಗೋತ್ರಿಯನ್ನು ಯಾವಾಗ ಸ್ಥಾಪಿಸಿದರು ?

3) ಮಾನಸಗಂಗೋತ್ರಿಯನ್ನು ಸ್ಥಾಪಿಸುವುದಕ್ಕೆ ಮುಖ್ಯ ಕಾರಣ ಯಾರು ?

4) ಪುಟ್ಟಪ್ಪನವರ ಪರಿಚಯ ಮಾಡಿಕೊಡಿ

5) ಮಾನಸಗಂಗೋತ್ರಿಯ ಪರಿಚಯ ಮಾಡಿಕೊಡಿ

VOCABULARY

ಅಧಿಕಾರ—power, authority

ಅನ್ನಿಸು—to feel

ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ—Institute of correspondence courses

ಆಡಳಿತಗಾರ—administrator

ಆಡು—goat (N)

ಆರಂಭಮಾಡು—to start

ಇಸವಿ—calendar year

ಋತುಮಾನ—season

ಕನ್ನಡ ಅಧ್ಯಯನ ಸಂಸ್ಥೆ—Institute of Kannada Studies

ಕಾರಣ—reason

ಕಾವ್ಯನಾಮ—pen name

ಕುರಿತು—about

ಕುಲಪತಿ—Vice-Chancellor

ಕೆಲಸಕ್ಕೆ ಬರದ—useless

ಕೇಂದ್ರ—centre

ಚಿಗುರು—to sprout (v)

ಜಾನಪದ ವಸ್ತು ಸಂಗ್ರಹಾಲಯ—Folklore museum

ಜ್ಞಾನಪೀಠ ಪ್ರಶಸ್ತಿ—Jnanapeetha award

ದಕ್ಷ—able

ನೈಸರ್ಗಿಕ ವಿಜ್ಞಾನ—natural science

ನೈಸರ್ಗಿಕ ಸೌಂದರ್ಯ—natural beauty

ಪ್ರತಿಮೆ—statue

ಬದಲು—instead

ಬಯಲು ರಂಗ ಮಂದಿರ—open-air theatre

ಭಾಗವಹಿಸು—to participate

ಬೋಧನೆ—teaching

ಭೂಗರ್ಭಶಾಸ್ತ್ರ—Geology

ಭೌತ ವಿಜ್ಞಾನ—Physical science

ಮನೋವಿಜ್ಞಾನ—Psychology

ಮಹಾಕಾವ್ಯ—epic

ಮಾನವಿಕ ವಿಭಾಗ—humanities department

ರಾಮಾಯಣ ದರ್ಶನಂ—an epic written by Puttappa

ರಾಷ್ಟ್ರಕವಿ—national poet

ವಿಮರ್ಶಕ—critic

ವಿಶ್ವವಿದ್ಯಾನಿಲಯ—university

ಸಂಶೋಧನೆ—research

ಸಾಹಿತ್ಯ ಪ್ರಕಾರ—literary form

ಸ್ನಾತಕೋತ್ತರ—post-graduate

ಸ್ಥಾಪಿಸು—establish

ಹೊರತು—in the sense of ' unless ' instead

GRAMMAR NOTES

Negative relative participle and negative participle nouns are introduced in this lesson.

1. —ada is the negative relative participle marker. By adding —ada to the verb root negative relative participle is obtained. There is no tense distinction in negative relative participle construction Structure is,

verb root+ada=negative relative participie

ಬರು + ಅದ = ಬರದ

ನೀನು ಬರದ ಹೊರತು ನಾನು ಸಿನಿಮಾಕ್ಕೆ ಹೋಗಲ್ಲ

when 'meele' follows negative relative participle it also has the meaning ' unless '

2. By adding third person **human pronouns to the negative** relative participle form negative **participle noun is abtained.**

There is also no tense distinction here.

structure is,

Neg. relative participle + third per. hum. pro

= Neg. participle noun

ಮಾಡದ + ಅವರು = ಮಾಡದವರು

ನಿಮ್ಮಲ್ಲಿ ನಾನು ನಿನ್ನೆ ಹೇಳಿದ ಕೆಲಸ ಮಾಡದವರು ಯಾರು ?

UNIT 13

Review

LESSON 13

IN THE BUS STAND

DIALOGUE

ಭಾಸ್ಕರನ್—ಎಷ್ಟು ಹೊತ್ತಾಯಿತು ರಾಜಣ್ಣ ನೀವು ಬಂದು ?

ರಾಜಣ್ಣ—ಒಂದು ಹತ್ತು ನಿಮಿಷ ಆಗಿರಬೇಕು ಅಷ್ಟೆ.

ಭಾಸ್ಕರನ್—ಇನ್ನೂ ಏಳು ಗಂಟೆ ಆಗಿಲ್ಲ. ಬನ್ನಿ ಕೃಷ್ಣರಾಜಸಾಗರದ ಬಸ್ಸು ನಿಲ್ಲುವ ಜಾಗಕ್ಕೆ ಹೋಗೋಣ.

ರಾಜಣ್ಣ—ಆ ಬಸ್ಸು ನಿಲ್ಲುವ ಪ್ಲಾಟ್ ಫಾರಂ ನಂಬರ್ ನನಗೆ ಗೊತ್ತಿಲ್ಲ. ಇಲ್ಲಿ ಯಾರನ್ನಾದರೂ ಕೇಳೋಣ. ಅಲ್ಲಿ ನಿಂತಿರುವವರನ್ನು ಕೇಳೋಣ.

ಭಾಸ್ಕರನ್—ನೋಡಿ ಅಲ್ಲಿ ಬರ್‍ತಾ ಇರುವವರು ಟಿ. ಸಿ. ಇರಬಹುದು. ಅವರನ್ನೇ ಕೇಳೋಣ.

ರಾಜಣ್ಣ—ಹೌದು, ಬನ್ನಿ (ಹೋಗುವರು)

ಭಾಸ್ಕರನ್—ನೋಡಿ, ಇಲ್ಲಿ ಶ್ರವಣಬೆಳಗೊಳದ ಬಸ್ಸು ನಿಲ್ಲುವ ಪ್ಲಾಟ್‌ಫಾರಂ ನಂಬರ್ ಎಷ್ಟು ?

ಟಿಕೆಟ್ ಕಲೆಕ್ಟರ್—ಎಂಟನೇ ಪ್ಲಾಟ್‌ಫಾರಂ. ನೋಡಿ, ಅಲ್ಲಿ ನಿಂತಿರುವ ಬಸ್ಸು ಶ್ರವಣಬೆಳಗೊಳದ ಕಡೆಗೆ ಹೋಗುತ್ತೆ. ಆದರೆ ಅದು ಮೇಲ್ ಬಸ್ಸು. ಹೋಗುವುದು ತಡ ಆಗುತ್ತೆ.

ಭಾಸ್ಕರನ್—ಎಕ್ಸ್‌ಪ್ರೆಸ್ ಬಸ್ಸು ಎಷ್ಟು ಹೊತ್ತಿಗೆ ಬರುತ್ತೆ ?

ಟಿಕೆಟ್ ಕಲೆಕ್ಟರ್—ಎಕ್ಸ್‌ಪ್ರೆಸ್ ಬಸ್ಸು ಇನ್ನೇನು ಬರಬೇಕು. ಅಗೋ ನೋಡಿ, ಈಗ ಬಂದ ಬಸ್ಸು ಎಕ್ಸ್‌ಪ್ರೆಸ್ ಇರಬೇಕು. ಹೋಗಿ ನೋಡಿ.

ರಾಜಣ್ಣ—ಬನ್ನಿ ಭಾಸ್ಕರನ್ ನೋಡೋಣ, (ಹೊರಡುವರು). ಹೌದು, ಭಾಸ್ಕರನ್ ಇದೇ ಬಸ್ಸು. ಬನ್ನಿ ಒಳಗೆ ಒಂದು ಸೀಟು ನೋಡಿ ಕುಳಿತುಕೊಳ್ಳಿ.

ಭಾಸ್ಕರನ್—ರಾಜಣ್ಣ ಬಸ್ಸು ಹೊರಡುವುದು ಎಷ್ಟು ಹೊತ್ತಿಗೆ ಕೇಳಿ. ಹೋಗಿ ಕಾಫಿ ಕುಡಿದುಕೊಂಡು ಬರೋಣ.

ರಾಜಣ್ಣ—ಇನ್ನೂ ಟೈಮು ಇರಬೇಕು ಬನ್ನಿ ಕಾಫಿಗೆ ಹೋಗೋಣ.

ಸುರೇಶ್—ಹಲೋ ರಾಜಣ್ಣ, ಇದೇನು ಇಲ್ಲಿ ?

ರಾಜಣ್ಣ—ಸುರೇಶ್ ಇದೇನು ಊರಿಗೆ ಹೊರಟಿದ್ದೀಯಾ ?

ಸುರೇಶ್—ಹೌದು.

ರಾಜಣ್ಣ—ಸುರೇಶ್ ಇವರು ನನ್ನ ಸ್ನೇಹಿತರು, ಹೆಸರು ಭಾಸ್ಕರನ್. ಇವರೂ ಶ್ರವಣಬೆಳಗೊಳಕ್ಕೆ ಹೊರಟಿದ್ದಾರೆ. ನೋಡಿ ಭಾಸ್ಕರನ್ ಇವರದು ಶ್ರವಣಬೆಳಗೊಳ. ಇವರು ನಿಮ್ಮ ಜೊತೆ ಅಲ್ಲಿಯವರೆಗೆ ಬರ್‍ತಾರೆ.

ಸುರೇಶ್—ಅಲ್ಲಿಯವರೆಗೆ ಬರೋದು ಅಲ್ಲದೆ ನಿಮಗೆ ಎಲ್ಲಾ ತೋರಿಸ್ತೀನಿ ಬನ್ನಿ.

ಭಾಸ್ಕರನ್—ತುಂಬಾ ಸಂತೋಷ ಸಾರ್.

ರಾಜಣ್ಣ—ನೋಡಿ ನಿಮಗೆ ಒಬ್ಬರು ತೋರಿಸುವವರೂ ಸಿಕ್ಕಿದರು. ಇವರು ನಿಮಗೆ ಅಲ್ಲಿ ತೋರಿಸದ, ವಿವರಿಸದ ವಿಷಯಾನೆ ಇರಲ್ಲ. ನಿಮಗೆ ಒಳ್ಳೆಯ ಜೊತೆ ಸಿಕ್ಕಿದ ಹಾಗಾಯ್ತು.

ಭಾಸ್ಕರನ್—ಬನ್ನಿ, ಬಸ್ಸು ಹೊರಡುವ ಮೊದಲು ಹೋಗಿ ಕಾಫಿ ಕುಡಿದು ಬರೋಣ.

TEST PAPER

I Fill in the blanks using the correct relative participle forms of the verbs given in the brackets:

1) ಭಾಸ್ಕರನ್ ನೋಡಲು——————ಸ್ಥಳ ಜೋಗ್ ಜಲಪಾತ (ಹೋಗು)
2) ಶ್ರವಣಬೆಳಗೊಳದ ಬಸ್ಸು——————ಹೊತ್ತು ಆಯ್ತು (ಹೊರಡು)
3) ನಾನು——————ಕಾಗದ ಅವರಿಗೆ ಸೇರಿದೆ (ಬರೆ)
4) ಅಲ್ಲಿ——————ವಿದ್ಯಾರ್ಥಿಯ ಹೆಸರು ಕಿರಣ್ (ಆಡುತ್ತಾ ಇರು)
5) ಕೆಳಗೆ——————ಮಗು ಅತ್ತಿತು (ಬೀಳು)

II Fill in the blanks using the correct relative participle/negative participle noun form of the verbs given in the brackets :

1) ಅವರು——————ಸಾಹಿತ್ಯ ಪ್ರಕಾರ ಇಲ್ಲ (ಬರೆ)
2) ನಮ್ಮ ಕ್ಲಾಸಿನಲ್ಲಿ ಚೆನ್ನಾಗಿ——————ರಾಜೇಶನ ತಮ್ಮ (ಓದು)
3) ಆ ಗುಂಪಿನಲ್ಲಿ ಊಟ——————ಯಾರು ? (ಮಾಡು)
4) ಅವರು ನಿಮಗೆ——————ಜಾಗ ಇರಲ್ಲ (ತೋರಿಸು)
5) ನೀವು ಮೈಸೂರಿನಲ್ಲಿ——————ಸ್ಥಳ ಯಾವುದು ? (ನೋಡು)

III. Change the following sentences into their respective negative forms :

1. ನಿಮ್ಮಲ್ಲಿ ಕುಮಾರವ್ಯಾಸನ ಭಾರತವನ್ನು ಓದಿರುವವರು ಯಾರು ಯಾರು ?
2. ಹೋದ ವಾರ ನೀವು ನೋಡಿದ ಸಿನಿಮಾ ಯಾವುದು?

3 ತರಗತಿಯಲ್ಲಿ "ಚೋಮನ ದುಡಿ" ಸಿನಿಮಾ ನೋಡಿರುವವರು ಯಾರು ?

4 ನನಗೆ ಓದಿದ ಹುಡುಗಿ ಬೇಕು.

5. ನಾಳೆ ನಮ್ಮ ಜೊತೆ ಸಿಟಿಗೆ ಬರುವವರು ಯಾರು ?

IV. Combine the following sentences using the relative participle forms :

1. ನೀವು ಕವನ ಓದಿದಿರಿ.
   ಅದು ತುಂಬಾ ಚೆನ್ನಾಗಿತ್ತು.
2. ಆಂಧ್ರದಿಂದ ಹುಡುಗರು ಬಂದಿದ್ದಾರೆ.
   ಅವರು ಈಗ ಗಂಗೋತ್ರಿಗೆ ಬಂದಿದ್ದಾರೆ.
3. ರಾಮರಾಯರು ನಿನ್ನೆ ಬಂದಿದ್ದರು.
   ಅವರು ಇವತ್ತು ಸತ್ತು ಹೋಗಿದ್ದಾರೆ.
4. ನಾವು ನಾಳೆ ಪಿಕ್‌ನಿಕ್ ಹೋಗುತ್ತೇವೆ
   ಆ ಸ್ಥಳದ ಹೆಸರು ಬಲಮುರಿ.
5. ನಮ್ಮ ಪಕ್ಕದ ಮನೆಗೆ ದಿನಾ ಒಬ್ಬಳು ಹುಡುಗಿ ಬರುತ್ತಾಳೆ.
   ಅವಳ ಹೆಸರು ವಿಮಲ.

V. Combine the following sentences using participle nouns :

1) ಅವರು ಬಿಹಾರದಿಂದ ಬಂದಿದ್ದಾರೆ.
   ಅವರು ತಮಿಳು ಕಲಿಯುತ್ತಿದ್ದಾರೆ.
2) ಅವನು ಗಲಾಟೆ ಮಾಡುತ್ತಿದ್ದಾನೆ.
   ಅವನು ಆಚೆ ಹೋಗಲಿ.
3) ಅವಳು ನಮ್ಮ ಜೊತೆ ಬಸ್ಸಿನಲ್ಲಿ ಬರ್ತಾ ಇದ್ದಳು.
   ಅವಳು ನಮ್ಮ ಕಾಲೇಜಿಗೆ ಬಂದಿದ್ದಾಳೆ.
4. ಅವನು ಬಟ್ಟೆ ಒಗೆಯುತ್ತಿದ್ದಾನೆ.
   ಅವನು ನಮ್ಮ ಮನೆಯ ಅಗಸ.
5) ಅವರು ಸಿನಿಮಾಕ್ಕೆ ಹೋಗುತ್ತಾರೆ.
   ಅವರಿಗೆ ಊಟ ಇಟ್ಟಿರಿ.

VI. Answer the following questions :

1) ಶ್ರವಣಬೆಳಗೊಳದ ಬಸ್ಸು ನಿಲ್ಲುವ ಪ್ಲಾಟ್‌ಫಾರಂ ನಂಬರ್ ಎಷ್ಟು ?

2) ಭಾಸ್ಕರನ್, ರಾಜಣ್ಣ ಬಸ್ ಬಗ್ಗೆ ಯಾರನ್ನು ಕೇಳಿದರು ?

3) ಸುರೇಶ್ ಎಲ್ಲಿಗೆ ಹೊರಟಿದ್ದಾರೆ ?

4) ಸುರೇಶ್ ಬಗ್ಗೆ ರಾಜಣ್ಣ ಏನು ಹೇಳಿದರು ?

VOCABULARY

ಅಗೋ–there

ಪ್ರಕಾರ–according to

UNIT 14

LESSON 46

IF RAJU GETS THROUGH THE EXAMINATION

DIALOGUE

ರಾಜು—ಬನ್ನಿ ಭಾವ ಕೂತ್ಕೊಳ್ಳಿ. ನೀವು ಒಬ್ಬರೇ ಬಂದಿರಾ ? ರಾಮು ಬರಲಿಲ್ವಾ ?	Come brother-in-law, please sit down. Have you come alone ? Hasn't Ramu come ?
ಭಾವ—ಅವನೂ ಬಂದ. ದಾರೀಲಿ ಬರ್ತಾ ಅವನ ಸ್ನೇಹಿತರು ಸಿಕ್ಕಿದರು. ಅಲ್ಲೇ ಮಾತಾಡ್ತಾ ನಿಂತ್ಕೊಂಡ. ನಾನು ಬಂದೆ. ಹೊರಗೆ ಯಾರೋ	He too came. While coming, on the way he met his friends. He stood there talking to them. I came. It seems somebody

ಮಾತಾಡ್ತೋ ಹಾಗಿದೆ ಅವನು ಬಂದಿದ್ದರೆ ನೋಡು	is talking outside. See if he has come.
ರಾಜು—ಇಲ್ಲ ಅವನಲ್ಲ. ಯಾರೋ ಬೇರೆ.	No. It is not he. Some one else.
ಭಾವ—ರಾಜು ಪರೀಕ್ಷೇಲಿ ಚೆನ್ನಾಗಿ ಬರೆದಿದ್ದೀಯಾ ?	Raju, have you written well in the examination ?
ರಾಜು—ಪರವಾಗಿಲ್ಲ ಭಾವ ಚೆನ್ನಾಗಿ ಬರೆದಿದ್ದೀನಿ.	Not bad brother-in-law. I have written well.
ಭಾವ—ನೀನು ಪರೀಕ್ಷೇಲಿ ಪಾಸಾದರೆ ಏನ್ಮಾಡ್ಬೇಕು ಅಂತ ಇದೀಯಾ ರಾಜು ?	What are you planning to do Raju, if you get through the examination ?
ರಾಜು—ಮನೆಯಲ್ಲಿ ಎಂ. ಎಸ್ಸಿ. ಗೆ ಸೇರ್ತೀನಿ ಅಂದರೆ ಬೇಡ ಅಂತಾರೆ. ನೀನು ಓದ್ತಾ ಇದ್ದರೆ ಇಲ್ಲಿ ಜಮೀನು ನೋಡಿಕೊಳ್ಳೋರು ಯಾರು ಅಂತಾರೆ. ಆದರೂ ಫಸ್ಟ್ ಕ್ಲಾಸಿನಲ್ಲಿ ಪಾಸ್ ಆದರೆ ಏನಾದರೂ ಮಾಡಿ ಸೇರ್ತೀನಿ.	If I say I am going to join the M.Sc. class, at home they say not to They say if you are studying who will look after the land ? Even then if I pass in first class somehow or other I will join.
ಭಾವ—ಮನೆಯವರು ಹೇಳಲಿ ! ಎಷ್ಟು ಪರ್ಸೆಂಟ್ ಬಂದರೆ ಎಂ ಎಸ್ಸಿ. ಗೆ ಸೀಟು ಸಿಗುತ್ತೆ ?	Let them say ! What percentage should one obtain to get a seat in M.Sc.?
ರಾಜು—ಅರವತ್ತೈದು ಪರ್ಸೆಂಟ್ ಮೇಲೆ ಬಂದರೆ ಪ್ರಯತ್ನ ಮಾಡಬಹುದು.	If one gets above sixtyfive per cent, one can try.
ಭಾವ—ನಮ್ಮ ಪಕ್ಕದ ಮನೆ ರಾಜೂನೇ ಫಸ್ಟ್ ಕ್ಲಾಸಿನಲ್ಲಿ ಪಾಸು ಮಾಡಿದಾನೆ ಅಂದರೆ ನಿನ್ನದು ಪಾಸಾಗದೆ ಇರುತ್ತಾ ?	When even our neighbour Raju could pass in first class, wouldn't you pass ?

ರಾಜು—ಹಾಗೆಲ್ಲ ಭಾವ, ಅದು ಹೀಗೇ ಅಂತ ಹೇಳೋಕೆ ಆಗಲ್ಲ ನಾನು ಚೆನ್ನಾಗಿ ಬರೆದಿದ್ದರೆ ಫಸ್ಟ್ ಕ್ಲಾಸ್ ಬರುತ್ತೆ.	It is not like that brother-in-law; it can't be predictad like that. If I have written well, I will get first class.
ಭಾವ—ಅಕಸ್ಮಾತ್ ಎಂ ಎಸ್ಸಿ ಗೆ ಸೀಟು ಸಿಗಲಿಲ್ಲ ಅಂದರೆ ಏನ್ಮಾಡ್ತಿಯಾ ?	By any chancc, if you don't get seat for M Sc., what will you do ?
ರಾಜು—ಸೀಟು ಸಿಗಲಿಲ್ಲ ಅಂದರೆ ಬಿ. ಎಡ್. ಗೆ ಸೇರ್ತೀನಿ	If I don't get a seat I will join B. Ed..
ಭಾವ—ಫಸ್ಟ್ ಕ್ಲಾಸಿನಲ್ಲಿ ಪಾಸಾಗಿ ಸೀಟು ಸಿಕ್ಕಿದರೆ ಹಾಸ್ಟಲಿಗೆ ಸೇರ್ತೀಯಾ ?	If you get through in first class and get the seat, will you join the hostel ?
ರಾಜು—ಯೂನಿವರ್ಸಿಟಿ ಹಾಸ್ಟೆಲಿಗೆ ಸೇರಿ ಕೊಂಡರೆ ತುಂಬಾ ಖರ್ಚು ಆಗುತ್ತೆ. ಅದಕ್ಕೆ ರೂಮು ಮಾಡೋಣ ಅಂತ ಇದೀನಿ.	If I join the University hostel, it will be very expensive. So I am planning to rentout a room.
ಭಾವ—ರೂಮು ಮಾಡಿದರೆ ಊಟ ಎಲ್ಲಿ ಮಾಡ್ತೀಯಾ ? ಅಡಿಗೆ ಮಾಡಿ ಕೊಳ್ತೀಯಾ?	If you rent a room where will you cat ? Will you cook yourself ?
ರಾಜು—ಅಡಿಗೆ ಮಾಡ್ತಾ ಕೂತರೆ ಓದೋದು ಕಷ್ಟ. ಮೆಸ್ಸಿಗೆ ಸೇರ್ತೀನಿ.	It is very difficult to read cooking one's own food. I will join the mess.
ಭಾವ—ಮೆಸ್ಸಿಗೆ ಸೇರಿದರೆ ಹಾಸ್ಟೆಲಿನಷ್ಟು ಖರ್ಚು ಆಗೊಲ್ವಾ?	If you join the mess, it won't that be as expensive as hostel.
ರಾಜು—ಮೆಸ್ಸಿಗೆ ಸೇರಿದರೆ ಹೆಚ್ಚಿಗೆ ಖರ್ಚು ಬರಲ್ಲ. ಕಡಿಮೆ ಬರುತ್ತೆ.	If I join the mess, it won't be too expensive. It will cost less.
ಭಾವ—ರೂಮು ಮಾಡಿದರೆ ದಿವಸಾ ಬಸ್ಸಿನಲ್ಲಿ ಹೋಗಿ ಬರಬೇಕಾ ?	If you rent a room, will you have to go by bus daily ?

ರಾಜು—ಯೂನಿವರ್ಸಿಟಿ ಹತ್ತಿರದಲ್ಲೇ ರೂಮು ಮಾಡಿಕೊಂಡರೆ ನಡದೇ ಹೋಗಬಹುದು. ದೂರ ಆದರೆ ಸೈಕಲ್ ತಗೊಂಡು ಹೋಗ ಬೇಕೂಂತಿದೀನಿ.	If I get a room nearby the University I can walk. If it is far away, I am planning to take a cycle.
ಭಾವ—ಸರಿಯಪ್ಪ. ಚೆನ್ನಾಗಿ ಓದು. ಚೆನ್ನಾಗಿ ಓದಿದರೆ ಎಲ್ಲಾದರೂ ಲೆಕ್ಚರರ್ ಕೆಲಸ ಸಿಗಬಹುದು.	Alright. Study well. If you study well you may get a Lecturer's post somewhere.
ರಾಜು—ಆಗಲಿ ಭಾವ. ಪ್ರಯತ್ನ ಮಾಡ್ತೀನಿ.	Alright brother-in-law. I will try.
ಭಾವ—ಮಾಡು. ಪ್ರಯತ್ನ ಮಾಡಿದರೆ ಫಲ ಸಿಕ್ಕೇ ಸಿಗುತ್ತೆ.	Do. If you make an effort it will prove fruitful.
ರಾಜು—ಭಾವ ಮುಂದಿನವಾರ ನೀವು ಬೆಂಗಳೂರಿಗೆ ಹೋಗ್ತಾ ಇದ್ದರೆ ನನಗೆ ಸ್ವಲ್ಪ ತಿಳಿಸಿ. ನನಗೆ ಕೆಲವು ಪುಸ್ತಕಗಳು ಬೇಕು.	Brother-in-law if you are going to Bangalore next week, let me know. I need some books.
ಭಾವ—ಮುಂದಿನ ಸೋಮವಾರ ಹೋಗ್ತಾ ಇದೀನಿ ರಾಜು. ಯಾವ ಪುಸ್ತಕಗಳು ಬೇಕು ಬರೆದುಕೊಡು. ತರ್ತೀನಿ.	Next Monday I am going Raju. Give me a list of books which you want. I will bring them.

DRILLS

I Expansion Drill :

ಸಿಕ್ಕಿದರೆ ಊರಿಗೆ ಹೋಗ್ತೀನಿ.

ಬಸ್ಸು ಸಿಕ್ಕಿದರೆ ಊರಿಗೆ ಹೋಗ್ತೀನಿ.

ಬೆಳಿಗ್ಗೆ ಬಸ್ಸು ಸಿಕ್ಕಿದರೆ ಊರಿಗೆ ಹೋಗ್ತೀನಿ.

ನಾಳೆ ಬೆಳಿಗ್ಗೆ ಬಸ್ಸು ಸಿಕ್ಕಿದರೆ ಊರಿಗೆ ಹೋಗ್ತೀನಿ.

On the model given above expand the following :

1) ಬಂದರೆ ಹೋಗ್ತೀನಿ.

2) ಹೋಗ್ತಾ ಇದ್ದರೆ ತನ್ನಿ.

3) ಕೇಳಿದರೆ ಸಿಟ್ಟಾಗ್ತಾರೆ.

4) ಓದಿದ್ದರೆ ಪಾಸಾಗ್ತಾಳೆ.

5) ನಕ್ಕರೆ ಬೈತಾರೆ.

II Build up Drill :

Model : ಹೋಗ್ತೀನಿ.

ಸಿಕ್ಕಿದರೆ ಹೋಗ್ತೀನಿ.

ಬಸ್ಸು ಸಿಕ್ಕಿದರೆ ಹೋಗ್ತೀನಿ.

ಊರಿಗೆ ಬಸ್ಸು ಸಿಕ್ಕಿದರೆ ಹೋಗ್ತೀನಿ.

ನಮ್ಮ ಊರಿಗೆ ಬಸ್ಸು ಸಿಕ್ಕಿದರೆ ಹೋಗ್ತೀನಿ.

ನಾನು ನಮ್ಮ ಊರಿಗೆ ಬಸ್ಸು ಸಿಕ್ಕಿದರೆ ಹೋಗ್ತೀನಿ.

ನಾಳೆ ನಾನು ನಮ್ಮ ಊರಿಗೆ ಬಸ್ಸು ಸಿಕ್ಕಿದರೆ ಹೋಗ್ತೀನಿ.

Build up the following making necessary changes wherever necessary :

1) ನೋಡಿದ್ದರೆ ಬರ್ತಾಳೆ.

2) ಕೇಳಿದರೆ ಸಿಟ್ಟಾಗ್ತಾರೆ.

3) ನಗ್ತಾ ಇದ್ದರೆ ಬೈತಾರೆ.

III Response Drill:

1) ಪರೀಕ್ಷೆಯಲ್ಲಿ ಕಡಿಮೆ ನಂಬರ್ ಬಂದಿದ್ದರೆ ಏನು ಮಾಡ್ತೀರಿ ?
2) ರಜಕ್ಕೆ ಊರಿಗೆ ಹೋದರೆ ಯಾವಾಗ ಬರ್ತೀರಿ ?
3) ನಿಮ್ಮ ಸ್ನೇಹಿತರು ಇಲ್ಲಿಗೆ ಬಂದರೆ ಅವರಿಗೆ ಏನೇನು ತೋರಿಸ್ತೀರಿ ?
4) ಆ ಬಾಗಿಲು ಮುಚ್ಚಿದರೆ ಗಾಳಿ ಬರುತ್ತಾ ?
5) ನಿಮಗೆ ಹಾವು ನೋಡ್ತಾ ಇದ್ದರೆ ಭಯ ಆಗುತ್ತಾ ?
6) ಐದು ಗಂಟೆ ಬಸ್ಸು ಬಿಟ್ಟರೆ ಸಿಟಿಗೆ ಹೋಗೋಕೆ ಇನ್ನು ಯಾವ ಬಸ್ಸು ಸಿಗುತ್ತೆ ?
7) ನೀವು ಲೇಟಾಗಿ ಬಂದರೆ ಆಬ್ಸೆಂಟ್ ಬೀಳುತ್ತಾ ?

EXERCISES

I Fill in the blanks using the conditional forms of the verbs given in the brackets according to the direction :

1) ನೀನು ಹತ್ತು ರೂಪಾಯಿ ——— ನಾನು ಒಂದು ಪುಸ್ತಕ ಕೊಂಡುಕೊಳ್ಳುತ್ತೇನೆ. (ಕೊಡು) (past)
2) ಅವಳು ——— ಅಳುವವರು ತಾನೆ ಯಾರಿದ್ದಾರೆ ? (ಸಾಯು) (past)
3) ——— ನಿನ್ನ ಹಲ್ಲು ಕಾಣುತ್ತೆ. (ನಗು) (continuous)
4) ನನ್ನನ್ನು ——— ನಿನಗೆ ಯಾಕೆ ಅಷ್ಟು ಹೆದರಿಕೆ ? (ನೋಡು) (continuous)
5) ನೀನು ——— ನಾನೂ ಬರ್ತೀನಿ. (ಬರು) (past)
6) ಒಳ್ಳೆ ಕತೆ ——— ಬಹುಮಾನ ಸಿಕ್ಕುತ್ತೆ. (ಬರೆ) (past)

II Give the conditional forms of the following verbs and use them in your own sentences :

1) ಕೆಡು 2) ಆಡು 3) ಕೇಳು
4) ಏಳು 5) ನೋಯು

III Combine the following sentences using conditional forms of the verbs :

1) ಅವರು ಮಾರ್ಕೆಟ್ಟಿಗೆ ಹೋಗ್ತಾ ಇದ್ದಾರೆ.
ಅವರು ಬಾಳೇಹಣ್ಣು ತರ್ತಾರೆ.

2) ಇವತ್ತು ಸಂಬಳ ಸಿಗುತ್ತೆ.
ನಾವು ಮಾರ್ಕೆಟ್ಟಿಗೆ ಹೋಗ್ತೀವಿ.

3) ನೀವು ಪುಸ್ತಕ ತಂದಿದ್ದೀರಿ.
ನಾನು ದುಡ್ಡು ಕೊಡ್ತೀನಿ.

4) ಜ್ವರ ಬರುತ್ತದೆ.
ಔಷಧ ಕುಡಿಯಬೇಕು.

5) ಈಗ ಮಳೆ ಬರುತ್ತದೆ.
ನಾನು ಆಫೀಸಿಗೆ ಹೋಗೋಕೆ ಆಗಲ್ಲ.

6) ನಾಯಿ ಬೊಗಳುತ್ತಾ ಇದೆ.
ಕಳ್ಳ ಓಡಿಹೋಗ್ತಾನೆ.

7) ಅವನು ಕಥೆ ಬರೆಯುತ್ತಾನೆ.
ಅವನಿಗೆ ದುಡ್ಡು ಸಿಗುತ್ತದೆ.

8) ಅವನು ಪ್ರಶ್ನೆ ಕೇಳ್ತಾನೆ.
ನಾನು ಉತ್ತರ ಹೇಳಲ್ಲ.

IV Rewrite using conditional forms :

1) ದುಡ್ಡು ಕೊಟ್ಟು ಬರ್ತೀಯಾ ?
2) ಬಾಯಿ ಬಿಟ್ಟು ನಗುತ್ತಾನೆ.
3) ನಾನು ಲೈಬ್ರರಿಯಿಂದ ಪುಸ್ತಕ ತಂದು ಕೊಡ್ತೀನಿ.
4) ಅವಳು ಚೆನ್ನಾಗಿ ಓದಿ ಪಾಸಾಗ್ತಾಳೆ.
5) ಕೆಲಸ ಮಾಡಿ ದುಡ್ಡು ಸಂಪಾದಿಸಬಹುದು.

V Change the following sentences into present perfect:

1) ಅವನು ಬಂದರೆ ಕರೆ.
2) ನೀನು ಪಾಠ ಬರೆದರೆ ತಂದು ತೋರಿಸು.
3) ನನಗೆ ನೀನು ಐದು ರೂಪಾಯಿ ಕೊಟ್ಟರೆ ಎಷ್ಟೋ ವಾಸಿ.
4) ರಗಡಿ ಆದರೆ ಡಾಕ್ಟರ್ ಹತ್ತಿರ ತೋರಿಸು.

VI Answer the following questions :

1) ಪರೀಕ್ಷೆಯಲ್ಲಿ ಪಾಸಾದರೆ ಏನು ಮಾಡಬೇಕಂತ ಇದ್ದಾರೆ ರಾಜು ?
2) ರಾಜುವಿಗೆ ಎಂ. ಎಸ್ಸಿ. ಗೆ ಸೀಟ್ ಸಿಕ್ಕರೆ ಹಾಸ್ಟೆಲಿಗೆ ಸೇರುತ್ತಾರಾ ?
3) ರೂಮು ಮಾಡಿದರೆ ಊಟ ಎಲ್ಲಿ ಮಾಡಬೇಕಾಗುತ್ತದೆ ?
4) ರೂಮು ದೂರ ಆದರೆ ಕಾಲೇಜಿಗೆ ಹೇಗೆ ಹೋಗುತ್ತಾರೆ ?
5) ಫಲ ಹೇಗೆ ಸಿಗುತ್ತದೆ ?

VOCABULARY :

ಅಕಸ್ಮಾತ್—by chance
ಅಡಿಗೆ—cooking
ಖರ್ಚು—expenditure
ನಡೆ—to walk
ನೋಯು— pain
ಪ್ರಯತ್ನ—effort

GRAMMAR NOTES :

There are different kinds of conditional forms used in Kannada. In this lesson the simple conditional form, -are as well as the conditional form used with quotative 'ennu' namely 'endare' are used. The simple conditional form is attached to the stem in the past tense, continuous tense and in the perfect tense.

1. Non Past :

Structure is,

Past stem + conditional suffix

ಬರೆದ್ + ಅರೆ = ಬರೆದರೆ

ಅವನು ಚೆನ್ನಾಗಿ ಬರೆದರೆ ಫೇಲಾಗಲ್ಲ.

2. *Continuous tense :*

Structure is,

Continuous participle + conditional suffix

ಬರ್ತಾ ಇದ್ + ಅರೆ = ಬರ್ತಾ ಇದ್ದರೆ

ಅವನು ಬರ್ತಾ ಇದರೆ ನಾಯಿ ಬೊಗಳುತ್ತೆ

3. *Perfect tense :*

Structure is,

Verbal participle of verb + conditional of 'iru'

ಬಂದು + ಇದ್ದರೆ = ಬಂದಿದರೆ.

ರಾಜು ಬಂದಿದ್ದರೆ ಕರಿ

In the use of the quotative word with the conditional form 'are' the quoted sentence may be used with a finite verb in any tense as in the following examples :

1. ಎಂ. ಎಸ್ಸಿ.ಗೆ ಸೇರ್ತೀನಿ ಅಂದರೆ ಬೇಡ ಅಂತಾರೆ.
2. ಎಂ.ಎಸ್ಸಿ.ಗೆ ಸೇರಿದೆ ಅಂದರೆ ಹೆಚ್ಚಿಗೆ ಖರ್ಚು ಆಗುತ್ತೆ.
3. ನಾನು ಎಂ.ಎಸ್ಸಿ.ಗೆ ಸೇರ್ತಾ ಇದೀನಿ ಅಂದರೆ ಯಾರು ನಂಬ್ತಾರೆ ?

UNIT-14

LESSON 47

INVITATION TO A FEAST

DIALOGUE

ವಿದ್ಯಾರ್ಥಿಗಳು : ನಾವ್ರ ಒಳಗೆ ಬರಬಹುದಾ ಸಾರ್ ?	May we come in sir ?
ಮಾಧು : ಬನ್ನಿ, ಬನ್ನಿ. ಏನು ಮೂರು ನಾಲ್ಕು ಜನ ಒಟ್ಟಿಗೇ ಬಂದು ಬಿಟ್ಟಿರಿ. ಏನು ಸಮಾಚಾರ? ಹೇಗೆ ಓದ್ತಾ ಇದೀರಿ ?	Come in. What is this, three or four of you have come together ? What is the news ? How are your studies ?
ಮೂರ್ತಿ : ಚೆನ್ನಾಗಿ ಓದ್ತಾ ಇದೀವಿ ಸಾರ್.	We are studying well sir.

ಮಾಘು : ನಾಡಿದ್ದು ಉಗಾದಿ ಹಬ್ಬ. ಊರಿಗೇನಾದರೂ ಹೋಗ್ತಾ ಇದೀರಾ ?

Day after tomorrow is Ugadi festival. Are you going home?

ರಾಜು : ಇಲ್ಲಾ ಸಾರ್, ಹಾಸ್ಟೆಲಿನಲ್ಲಿ ಇರೋರು ಯಾರೂ ಊರಿಗೆ ಹೋಗ್ತಾ ಇಲ್ಲ. ಹಾಸ್ಟೆಲಿನಲ್ಲಿ ಇರೋರೆಲ್ಲಾ ಸೇರಿ ಜೋರಾಗಿ ಹಬ್ಬ ಮಾಡಬೇಕು ಅಂತ ಇದೀವಿ. ನಮಗೆ ಇದೇ ಕಡೇ ಅವಕಾಶ.

No, sir. None of those who are staying in the hostel is going home All the inmates of the hostel joining together plan to celebrate the feast in grand manner. This is the last chance for us (in the hostel) that we all could do it together.

ಮೂರ್ತಿ : ಅದಕ್ಕೆ ನಾವು ಎಲ್ಲಾ ಅಧ್ಯಾಪಕರನ್ನೂ ಹಬ್ಬದ ದಿನ ಮಧ್ಯಾಹ್ನ ನಮ್ಮ ಹಾಸ್ಟೆಲಿಗೆ ಕರೆದಿದ್ದೇವೆ. ಅವತ್ತು ನೀವು ನಮ್ಮ ಹಾಸ್ಟೆಲಿಗೆ ಬರಬೇಕು ಸಾರ್. ಎಲ್ಲಾ ಅಧ್ಯಾಪಕರೂ ಬರೋದಕ್ಕೆ ಒಪ್ಪಿದ್ದಾರೆ. ಬರ್ತಾ ಜೊತೆಯಲ್ಲಿ ನಿಮ್ಮ ಮನೆಯವರನ್ನೂ ಕರೆದು ಕೊಂಡು ಬನ್ನಿ.

That is why we have invited all of our lecturers to the hostel on the noon of festival day. You too have to come on that day sir. All the lecturers have agreed to come. While coming please bring your family with you.

ಮಾಘು : ನೀವು ನನ್ನನ್ನು ಹಬ್ಬಕ್ಕೋಸ್ಕರ ಕರೀತಾ ಇದೀರಿ. ತುಂಬಾ ಸಂತೋಷ. ಆದರೆ ತಪ್ಪು ತಿಳಿದುಕೋಬೇಡಿ. ನನಗೆ ಅವತ್ತು ಬರೋಕೆ ಆಗಲ್ಲ. ನಾನು ನಾಡಿದ್ದು ಹೆಗ್ಗಡದೇವನ ಕೋಟೆಗೆ ಹೋಗಬೇಕು ಅಂತ ಇದೀನಿ.

You are inviting me to the festival. I am very glad. But please don't misunderstand me. I am unable to come on that day. I am planning to go to Heggadadevanakote the day after tomorrow.

ರಾಜು : ಎಲ್ಲಾ ಲೆಕ್ಚರರ್‌ಗಳೂ ಬರ್ತಾರೆ ಸಾರ್. ನೀವು ಒಬ್ಬರು ಬರದೆ

All lecturers will come sir. How is that if you alone don't

ಇದ್ದರೆ ಹೇಗೆ ? ಎಲ್ಲಾ ಒಂದು ಕಡೆ ಸೇರೋಕೆ ಇದೇ ನಮಗೆ ಕಡೇ ಅವಕಾಶ.	come? This is our last chance to gather all in one place.
ಮಾಧು : ನೀವು ಹೇಳೋದೇನೋ ಸರಿ. ಎಲ್ಲಾ ಬಂದು ನಾನೊಬ್ಬ ಬರದೇ ಇದ್ದರೆ ಚೆನ್ನಾಗಿಲ್ಲ. ಆದರೆ ನಾಡಿದ್ದು ಅಲ್ಲಿಗೆ ಬರ್ತೀನಿ ಅಂತ ಕಾಗದ ಹಾಕಿಬಿಟ್ಟಿದೀನಿ. ಹೋಗದೆ ಇದ್ದರೆ ಚೆನ್ನಾಗಿರಲ್ಲ ಬೇಕಾದರೆ ನಮ್ಮ ಮನೆಯವರನ್ನು ಕಳಿಸಿಕೊಡ್ತೀನಿ.	What you say is true. It won't be nice if all of them come and I alone don't come But I have sent a letter saying that I will go the day after tomorrow there. It won't be nice if I don't go. If you want I will send my wife.
ರಾಜು : ನೀವು ಬರದೇ ಇದ್ದರೆ ಅವರು ಬರಲ್ಲ ಸಾರ್. ಹೆಗ್ಗಡದೇವನ ಕೋಟೆಯಲ್ಲಿ ಹೋಗಲೇಬೇಕಾದ ತುರ್ತು ಕೆಲಸ ಇದೆಯಾ ಸಾರ್? ಹೀಗೆ ಕೇಳಿದೆ ಅಂತ ಬೇಜಾರು ಮಾಡಿಕೋಬೇಡಿ	If you don't come, she also won't come sir. Is there any urgent work in H. D. Kote that you must go sir? please don't be offended that I asked like this.
ಮಾಧು : ಅಂಥಾ ತುರ್ತೇನೂ ಇಲ್ಲ ಅಲ್ಲಿ ಸ್ವಲ್ಪ ಗುಡ್ಡಗಾಡು ಜನ ಇದಾರೆ. ಅವರ ಸಂಸ್ಕೃತಿ, ಭಾಷೆ ಬಗ್ಗೆ ಸ್ವಲ್ಪ ಮಾಹಿತಿ ಸಂಗ್ರಹಿಸೋಣ ಅಂತ . ಅದಕ್ಕೋಸ್ಕರ ನನ್ನ ಸ್ನೇಹಿತನಿಗೆ ಕಾಗದ ಬರೆದಿದ್ದೆ. ಅವನು ಹಬ್ಬದ ದಿನಾನೇ ಬನ್ನಿ ಅಂತ ಕಾಗದ ಬರೆದಿದ್ದಾನೆ.	Not that urgent work. There are some tribal people there. I am thinking of collecting a little information on their culture and language. That is why I had written a letter to my friend. He has written that I should go on that festival day only.
ಮೂರ್ತಿ : ನಿಮ್ಮಿಷ್ಟ ಸಾರ್. ನಿಮಗೆ ತೊಂದರ ಆಗದೆ ಇದ್ದರೆ ದಯ ವಿಟ್ಟು ಬನ್ನಿ.	Your will and wish sir. If you don't find it difficult please come.
ಮಾಧು : ನೀವು ಎಷ್ಟು ಹೊತ್ತಿಗೆ ಊಟ ಇಟ್ಟು ಕೊಂಡಿದ್ದೀರಿ ?	What time you have planned to have meals ?

ಮೂರ್ತಿ : ಹನ್ನೊಂದು ಗಂಟೆಗೆಲ್ಲಾ ನಿಮ್ಮನ್ನ ಕಳಿಸಿಬಿಡ್ತೀವಿ ಸಾರ್. ಅಷ್ಟರೊಳಗೆ ಊಟ ತಯಾರಾಗಿರುತ್ತೆ.

We will send you by 11 o'clock sir. Meals will be ready by that time.

ಮಾಧು : ಹಾಗಾದರೆ ಒಂದು ಕೆಲಸ ಮಾಡೋಣ ನಾನು ಹಬ್ಬದ ದಿನ ಬೆಳಿಗ್ಗೆ ಹೊರಡದೆ ಇದ್ದರೂ ನಡೆಯುತ್ತೆ. ಹನ್ನೊಂದೂವರೆ ಗಂಟೆಗೆ ಒಂದು ಬಸ್ಸು ಇದೆ ಹಾಸ್ಟೆಲಿನಲ್ಲಿ ಲೇಟಾಗದೆ ಇದ್ದರೆ ಅದಕ್ಕೆ ಹೋಗಬಹುದು

If that is the case, let us do one thing. Even it would be alright if I don't start on the morning of the festival day. There is a bus at 11-30. If I am not delayed in the hostel I can go by that.

ಮೂರ್ತಿ : ಹಾಸ್ಟೆಲಿನಲ್ಲಿ ಲೇಟಾಗದ ಹಾಗೆ ನಾನು ನೋಡ್ಕೋತೀನಿ. ನೀವು ದಯವಿಟ್ಟು ಬನ್ನಿ ಸಾರ್.

I will see that you won't be delayed in the hostel. Please do come sir.

ಮಾಧು : ನೀವು ಇಷ್ಟು ಪ್ರೀತಿಯಿಂದ ಕರೀತಾ ಇದೀರಿ ನಾನು ಬಂದೆ ಇದ್ದರೆ ಹೇಗೆ ? ಬರ್ತೀನಿ ಬಿಡಿ ಹಬ್ಬಕ್ಕೆ ಏನು ಏರ್ಪಾಟು ಮಾಡಿದ್ದೀರಿ ?

You are inviting me with so much affection. If I don't come? It won't be nice. Don't worry, I will come. What arrangements you have made for the festival?

ರಾಜು : ಅಧ್ಯಾಪಕರೆಲ್ಲಾ ಬಂದ ತಕ್ಷಣ ಅವರಿಗೆ ಬೇವು ಬೆಲ್ಲ ಹಂಚಿ ಹೊಸ ವರ್ಷದ ಶುಭಾಶಯಗಳನ್ನು ಕೋರ್ತೀವಿ ಸಾರ್. ಅನಂತರ ನಮ್ಮ ಹಾಸ್ಟೆಲಿನಲ್ಲಿ ಕೆಲವರು ತುಂಬಾ ಚೆನ್ನಾಗಿ ಹಾಡ್ತಾರೆ. ಅವರಿಂದ ಹಾಡು ಆದ ಮೇಲೆ ನೇರವಾಗಿ ಊಟದ ಮನೆ.

Sir, as soon as the lecturers arrive, we will distribute *beevu-bella* to them and greet them with best wishes. Afterwards some of the hostel inmates sing well. After they have finished singing, straight to the dining hall.

ಮಾಧು : ಬಹಳ ಸಿಂಪಲ್ಲಾಗಿದೆ. ಹಾಗೆ ಇರಬೇಕು. ಈಗಿನ ಕಾಲದಲ್ಲಿ

It is very simple. It should be like that only. Nowadays

ಹುಡುಗರು ಹಾಸ್ಟೆಲಿನಲ್ಲಿ ದುಬಾ ದುಬಿ ಮಾಡದೆ ಇದ್ದರೆ ಸಮಾಧಾನಾನೇ ಇರಲ್ಲ. ಅವರೆಲ್ಲಾ ನಿಮ್ಮನ್ನ ನೋಡಿ ಪಾಠ ಕಲಿತುಕೋಬೇಕು.

students in the hostel won't be content unless they spend lavishly. They should learn a lesson from seeing you.

ಮೂರ್ತಿ : ಏನೋ ಸಾರ್. ಎಲ್ಲಾ ಚೆನ್ನಾಗಿ ಆದರೆ ಅಷ್ಟೇ ಸಾಕು. ನಾವು ಬರ್ತೀವಿ. ಹತ್ತು ಗಂಟೆಗೆ ನಿಮ್ಮನ್ನ ನಿಮ್ಮ ಮನೆಯವರನ್ನೂ ಎದುರು ನೋಡ್ತಾ ಇರ್ತೀವಿ.

It will be enough, if everything goes well. We will take leave of you. We will be expecting you and your wife at ten o' clock.

DRILLS

Expansion Drill :

a) Model : ಬರದೆ ಇದ್ದರೆ ತಡ ಆಗುತ್ತೆ.
ಬರದೆ ಇದ್ದರೆ ಹೋಗೋದು ತಡ ಆಗುತ್ತೆ.
ಬರದೆ ಇದ್ದರೆ ಶಾಲೆಗೆ ಹೋಗೋದು ತಡ ಆಗುತ್ತೆ
ಬಸ್ಸು ಬರದೆ ಇದ್ದರೆ ಶಾಲೆಗೆ ಹೋಗೋದು ತಡ ಆಗುತ್ತೆ.
ಹತ್ತು ಗಂಟೆ ಬಸ್ಸು ಬರದೆ ಇದ್ದರೆ ಶಾಲೆಗೆ ಹೋಗೋದು ತಡ ಆಗುತ್ತೆ

Expand the following as per the model making the necessary changes wherever necessary :

1) ಹೋಗದೆ ಇದ್ದರೆ ಬನ್ನಿ
2) ನೋಡದೆ ಇದ್ದರೆ ಬಿಡು
3) ಬರೆಯದೆ ಇದ್ದರೆ ಫೇಲಾಗುತ್ತೆ.

b) Model : ಬರದೆ ಇದ್ದರೆ ಹೋಗಲ್ಲ.
ನೀನು ಬರದೆ ಇದ್ದರೆ ಹೋಗಲ್ಲ
ನೀನು ಬರದೆ ಇದ್ದರೆ ನಾನು ಹೋಗಲ್ಲ.
ನೀನು ಬರದೆ ಇದ್ದರೆ ನಾನು ಸಿನಿಮಕ್ಕೆ ಹೋಗಲ್ಲ.

Expand the following as per th: model making the necessary changes wherever neces ary :

1) ಕೊಡದೆ ಇದ್ದರೆ ಬಿಡಲ್ಲ.

2) ಸಿಗದೆ ಇದ್ದರೆ ಸುಮ್ಮನಿರಲ್ಲ.
3) ಹೋಗದೆ ಇದ್ದರೆ ಬರಲ್ಲ.

II Transformation Drill :

a) Model ; T : ನಕ್ಕರೆ ಹೇಳ್ತೀನಿ
S : ನಗದೆ ಇದ್ದರೆ ಹೇಳ್ತೀನಿ.

Transform :

1) ಅವರು ಬಂದರೆ ನಾನು ಹೋಗ್ತೀನಿ.
2) ಅವಳು ಓದಿದರೆ ಏನು ಮಾಡಲಿ ?
3) ಹಣ್ಣು ತಿಂದರೆ ಬೈಯ್ಯುತ್ತಾರೆ.
4) ಮಳೆ ಬಂದರೆ ಬೆಳೆ ಹಾಳಾಗುತ್ತೆ.
5) ನೀನು ಅತ್ತರೆ ನನಗೆ ದುಃಖ ಆಗುತ್ತೆ

b) Model : T : ನೀನು ಬಂದರೆ ಕೊಡ್ತೀನಿ.
S : ನೀನು ಬರದೆ ಇದ್ದರೆ ಕೊಡಲ್ಲ

Transform :

1) ನೀರು ಹಾಕಿದರೆ ಗಿಡ ಬೆಳೆಯುತ್ತೆ.
2) ಔಷಧಿ ಕುಡಿದರೆ ಖಾಯಿಲೆ ವಾಸಿಯಾಗುತ್ತೆ
3) ಕೆಲಸ ಮಾಡಿದರೆ ಹಣ ಸಿಗುತ್ತೆ
4) ಪ್ರಯತ್ನ ಪಟ್ಟರೆ ಫಲ ಸಿಗುತ್ತೆ.
5) ಕಲ್ಲು ಹೊಡೆದರೆ ಮಾವಿನಕಾಯಿ ಬೀಳುತ್ತೆ

III Response Drill :

a) Model : T : ನೀವು ಓದದೆ ಇದ್ದರೆ ಪರೀಕ್ಷೆಯಲ್ಲಿ ಪಾಸಾಗ್ತೀರಾ ?
S : ಇಲ್ಲ. ನಾನು ಓದದೆ ಇದ್ದರೆ ಪರೀಕ್ಷೆಯಲ್ಲಿ ಪಾಸಾಗಲ್ಲ.

Respond :

1) ನೀವು ಪುಸ್ತಕ ಓದದೆ ವಿಮರ್ಶೆ ಮಾಡ್ತೀರಾ ?
2) ನೀವು ಪ್ರತಿ ಭಾನುವಾರ ಸಿನಿಮಾ ನೋಡದೆ ಇದ್ದರೆ ಬೇಜಾರು ಮಾಡಿಕೊಳ್ತೀರಾ ?

3) ಸಮಯಕ್ಕೆ ಸರಿಯಾಗಿ ಕ್ಲಾಸಿಗೆ ಹೋಗದೆ ಇದ್ದರೆ ನಿಮಗೆ ಅಟೆಂಡೆನ್ಸ್ ಸಿಗುತ್ತಾ ?

4) ನಿಮ್ಮ ಊರಿಂದ ನಿಮಗೆ ಕಾಗದ ಬರದೆ ಇದ್ದರೆ ನೀವು ಅಳ್ತೀರಾ ?

5) ನೀವು ಇಲ್ಲಿ ಚೆನ್ನಾಗಿ ಕನ್ನಡ ಕಲಿಯದೆ ಇದ್ದರೆ ನಿಮ್ಮ ಊರಲ್ಲಿ ಹುಡುಗರಿಗೆ ಚೆನ್ನಾಗಿ ಕಲಿಸ್ತೀರಾ ?

b) Model : T : ನೀವು ಹೋಂವರ್ಕ್ ತರದೆ ಇದ್ದರೆ ಮೇಷ್ಟ್ರು ಬಯ್ತಾರಾ ?

S : ಹೌದು. ನಾವು ಹೋಂವರ್ಕ್ ತರದೆ ಇದ್ದರೆ ಮೇಷ್ಟ್ರು ಬಯ್ತಾರೆ.

Respond :

1) ನಿಮಗೆ ಒಂದನೇ ತಾರೀಕು ಸಂಬಳ ಕೊಡದೆ ಇದ್ದರೆ ಬೇಜಾರಾಗುತ್ತಾ?

2) ನಿಮಗೆ ಮಧ್ಯಾಹ್ನ ಕಾಫಿ ಕುಡಿಯದೆ ಇದ್ದರೆ ತಲೆ ನೋವು ಬರುತ್ತಾ ?

3) ನೀವು ರಜಕ್ಕೆ ಊರಿಗೆ ಹೋಗದಿದ್ದರೆ ನಿಮ್ಮ ಮನೆಯವರು ಇಲ್ಲಿಗೆ ಬರ್ತಾರಾ ?

EXERCISES

I Fill in the blanks using the conditional negative forms of the verbs given in the brackets :

1) ಈ ಬಸ್ಸು————ಯಾವ ಬಸ್ಸಲ್ಲಿ ಹೋಗೋದು ? (ಹೊರಡು)

2) ನೀನು ಆ ನಾಯಿಯನ್ನು————ಅದು ನಿನ್ನನ್ನು ಕಚ್ಚುತ್ತದೆ. (ಬಿಡು)

3) ಬೆಳಗ್ಗೇನೇ ಬಟ್ಟೆ————ಒಣಗಲ್ಲ (ಒಗೆ)

4) ನಿನ್ನ ಹತ್ತಿರ ದುಡ್ಡು————ನನ್ನನ್ನು ಕೇಳು. (ಇರು)

5) ಇಷ್ಟು ದಿನ ಆದರೂ ಆ ಸಂಗತಿಯನ್ನು————ಹೇಗೆ ? (ಮರೆ)

II Give the conditional negative forms of the following verbs and use them in your sentences :

1) ನೆಡು
2) ಬೀಳು
3) ಉಳು
4) ನೋಯು
5) ಬರೆ

III Rewrite the following sentences in negative construction without changing the meaning :

1) ದುಡ್ಡು ಕೊಟ್ಟರೆ ಪುಸ್ತಕ ತರ್ತೀನಿ.
2) ಅವಳಿಗೆ ಮದುವೆ ಆದರೆ ಬುದ್ಧಿ ಬರುತ್ತೆ.
3) ರಜ ಸಿಕ್ಕರೆ ಬೆಂಗಳೂರಿಗೆ ಹೋಗ್ತೀನಿ.
4) ನೀನು ನಕ್ಕರೆ ನಾನೂ ನಗ್ತೀನಿ.
5) ಹಣ ಕೊಟ್ಟರೆ ಸಾಮಾನು ಬೇಗ ಸಿಗುತ್ತದೆ.

IV Tran'slate the following sentences into English :

1) ನಮ್ಮ ಊರಿನ ಹೆಸರು ತಿಪಟೂರು.
2) ಅದು ತುಂಬಾ ಒಳ್ಳೆಯ ಪುಸ್ತಕ.
3) ಸೀತಾ ನಾಳೆ ಊರಿಗೆ ಬರಬಹುದು.
4) ನನಗಿಂತ ನೀನು ಸ್ವಲ್ಪ ಎತ್ತರ.
5) ನಮ್ಮ ಹಾಸ್ಟೆಲಿನಿಂದ ಕಾಲೇಜಿಗೆ ಒಂದು ಮೈಲಿ.
6) ನಾಳೆ ನಮ್ಮ ಊರಿನಿಂದ ನಮ್ಮ ಅಣ್ಣ ಬರ್ತಾರೆ.
7) ಈ ತಿಂಗಳು ನಾನು ಬೆಂಗಳೂರಿಗೆ ಹೋಗಲ್ಲ.
8) ಅಲ್ಲಿ ನೋಡು, ಆ ಹಾವು ಹೇಗೆ ಹೋಗ್ತಾ ಇದೆ !
9) ನಮ್ಮ ಮಾವ ನಿನ್ನೆ ಊರಿಂದ ಬಂದರು.
10) ನಾನು ಇನ್ನೂ ಊಟ ಮಾಡಿಲ್ಲ. ಸ್ವಲ್ಪ ಕುಳಿತುಕೊ.

V Answer the following questions :

1) ಮೂರ್ತಿ ಮಾಧುವನ್ನು ಹಾಸ್ಟೆಲಿಗೆ ಏಕೆ ಕರೆದರು?
2) ಮಾಧು ಏಕೆ ಬರೋಕೆ ಆಗಲ್ಲ ಅಂದರು ?
3) ಮಾಧು ಹಾಸ್ಟೆಲಿಗೆ ಬರಲು ಒಪ್ಪಿದ್ದರಾ, ಹೇಗೆ ?

VOCABULARY :

ಅವಕಾಶ–opportunity
ಆಹ್ವಾನ–invitation
ಎದುರು ನೋಡು–to expect, to look forward

ಗುಡ್ಡಗಾಡು ಜನ–tribal people

ತುರ್ತು–urgent, emergency

ದುಬಾದುಬಿ–lavishly, harshly

ಸಮಾಧಾನ–content

ಬೇವು ಬೆಲ್ಲ–neem and jaggery mixed together and distributed on Ugadi festival marking the sorrowness and sweetness of the life.

ಹಂಚು–to distribute

Grammar Notes :

The conditional negative form of the verb is introduced in this lesson. This can be obtained by combining verbal participle negation 'ade' with the conditional form of verb 'iru'.

ಮಾಡದೆ + ಇದ್ದರೆ = ಮಾಡದೆಇದ್ದರೆ

ನೀನು ಆ ಕೆಲಸ ಮಾಡದೆ ಇದ್ದರೆ ಒಳ್ಳೆಯದು.

'ಮಾಡದೆ ಇದ್ದರೆ' becomes 'ಮಾಡದಿದ್ದರೆ' due to regular Sandhi.

UNIT 14

LESSON 48

I CANNOT FORGET YOU

DIALOGUE

(ನಟರಾಜ, ಮೋಹನ, ಕೃಷ್ಣ ಮೂವರೂ ಬಸ್ ಸ್ಟ್ಯಾಂಡಿನಲ್ಲಿ ನಿಂತಿದ್ದಾರೆ. ನಟರಾಜ ವಾಚು ನೋಡಿಕೊಳ್ಳುತ್ತಾನೆ. ಮೋಹನ, ಕೃಷ್ಣ ಇಬ್ಬರೂ ಬಲಗಡೆ ದಾರಿ ಕಡೆ ನೋಡುತ್ತಾರೆ). (Nataraj, Mohan, Krishna all three of them are in Bus stand. Nataraj looks at his watch. Mohan and Krishna both of them look towards road on their right.)

ನಟರಾಜ : ಈ ದರಿದ್ರದವನು ಹೀಗೆ ಮಾಡ್ತಾನೆ ಅಂತ ಗೊತ್ತಿತ್ತು.	I knew that this beggar would do like this.

ಮೋಹನ : ಯಾವತ್ತು ತಾನೇ ಅವನು ಐದು ನಿಮಿಷ ಮುಂಚೆ ಬಂದಿದ್ದಾನೆ ಹೇಳು. ನಾವು ಸುಮ್ಮ ಸುಮ್ಮನೆ ಈ ಕೊರೆಯೋ ಚಳೀಲಿ ಅಷ್ಟು ಹೊತ್ತಿಗೆ ಎದ್ದು ಸ್ನಾನ ಮಾಡಿಕೊಂಡು ಓಡೋಡಿ ಬಂದೆವು.	Tell me a day when he came five minutes early. We simply woke up and bathed in this cold early morning and came running.
ಕೃಷ್ಣ : ನೋಡು ಬಸ್ ಹೊರಟುಬಿಡ್ತು. ನಾವು ಅವನಿಗ್ಯಾಕೆ ಕಾಯ ಬೇಕು ? ಬನ್ನಿ ನಮ್ಮಷ್ಟಕ್ಕೆ ನಾವು ಹೋಗೋಣ. ನಿನ್ನೆ ಅವನಿಗೆ ಸಾರಿ ಸಾರಿ ಹೇಳಿದ್ದಿವಿ. ಆದರೂ ಅದು ನಾಯಿ ಬಾಲ ಡೊಂಕೆ.	Look, the Bus started ! Why should we wait for him? Come, let us go ourselves. Yesterday we have told him repeatedly. Even so he is like a dog's tail.
ಮೋಹನ : ನೋಡಿ, ಅವನ್ನ ಬಿಟ್ಟು ಹೋದರೆ ಚೆನ್ನಾಗಿರಲ್ಲ. ಆದರೆ ಈಗ ಹೋಗದೆ ಇದ್ದರೆ ಒಂದೇ ದಿನದಲ್ಲಿ ಸೋಮನಾಥಪುರ, ತಲಕಾಡು, ಶಿವನಸಮುದ್ರ ನೋಡೋಕೆ ಆಗಲ್ಲ. ಏನು ಮಾಡೋದು !	See, it is not fair to go leaving him behind. But if we don't go now, it is not possible to see Somanathapura, Talakadu, Shivanasamudra in one day. What to do !
ನಟರಾಜ : ನೋಡು ಬಸ್ ಹೋಗೇಬಿಡ್ತು !	See the Bus has gone !
ಮೋಹನ : ಅಲ್ಲಿ ಬಸ್ ಹೋಯ್ತು. ಇಲ್ಲಿ ನೋಡು, ನಮ್ಮ ರಾಜ ಕುಮಾರ ಹೇಗೆ ಬೀಗಿಕೊಂಡು ಬರ್ತಾ ಇದಾನೆ ?	There the bus went. Look here, how our prince is coming majestically ?
(ವಿಶ್ವನಾಥ ಜೋರಾಗಿ ಬರ್ತಾನೆ.)	(Viswanath comes fast.)
ಕೃಷ್ಣ : ಯಾಕೋ ಲೋ ಇಷ್ಟು ತಡ ಮಾಡಿದೆ. ನೀನು ಇನ್ನೊಂದೈದು ನಿಮಿಷ ಬೇಗ ಬಂದಿದ್ದರೆ	Why did you delay so much, I say ? Had you come five minutes earlier we could

ಎಂಟು ಗಂಟೆ ಬಸ್ಸಿಗೆ ಹೋಗ ಬಹುದಿತ್ತು. ಎಂಥ ಕೆಲಸ ಮಾಡಿದೆ!

have gone in 8 o'clock bus. What a thing you have done!

ನಟರಾಜ : ಅವನು ಪ್ರತಿ ದಿನಾ ಐದೈದು ನಿಮಿಷ ಬೇಗ ಕ್ಲಾಸಿಗೆ ಬಂದಿದ್ದರೆ ದಿನಾನೂ ಅಟೆಂಡೆನ್ಸ್ ಸಿಗುತ್ತಾ ಇತ್ತು.

Had he come everyday five minutes earlier to the class he could have got attendance daily.

ವಿಶ್ವನಾಥ : ನಟರಾಜ ತಾಂಡವ ನೃತ್ಯ ಮಾಡ್ತಾ ಇರೋ ಹಾಗಿದೆ. ಸಾರಿ, ಮರಿ. ಎಷ್ಟು ಹೊತ್ತಾಯ್ತು ಬಸ್ಸು ಹೋಗಿ?

It seems Nataraj is performing Tandava Nritya. Sorry, mate. How much time is it since the bus left?

ಮೋಹನ : ಒಂದು ಹತ್ತು ನಿಮಿಷ ಆಗಿರಬೇಕು. ನೀನು ಬೇಗ ಬಂದಿದ್ದರೆ ಇಷ್ಟು ಹೊತ್ತಿಗೆ ಮೈಸೂರು ಬಿಟ್ಟಿರುತ್ತಿದ್ದೆವು. .

Maybe ten mnutes. Had you come earlier we could have left Mysore by this time.

ವಿಶ್ವನಾಥ : ಬೇಗ ಬಂದಿದ್ದರೆ, ಬೇಗ ಬಂದಿದ್ದರೆ . ? ಸುಮ್ಮನೆ ಯಾಕೋ ನನ್ನ ಬೈತೀರಾ? ನಾನೇನು ಪಿಕ್‌ನಿಕ್‌ಗೆ ಹೋಗ ಬಾರದು ಅಂತ ನಿಧಾನಕ್ಕೆ ಬಂದೆನಾ? ಬೇಗ ಬರಬೇಕು ಅಂತ ಪ್ರಯತ್ನ ಮಾಡಿದೆ. ಸಿಟಿ ಬಸ್ಸು ಸಿಕ್ಕಲಿಲ್ಲ. ಒಂದು ಆಟೋ ನಾದರೂ ಸಿಕ್ಕಿದ್ದರೆ ಬೇಗ ಬರ್ತಾ ಇದ್ದೆ. ಆದರೆ ಆಟೋನೂ ಸಿಕ್ಕಲಿಲ್ಲ.

Come earlier, come earlier...? Why do you simply scold me? Did I deliberately come late as if not to go on a picnic? I tried to come early. I couldn't get the city bus. Had I got an auto at least I could have come early. But even auto was not available.

ನಟರಾಜ : ನಾವು ಎಂಟು ಗಂಟೆ ಬಸ್ಸಿಗೆ ಹೋಗಿದ್ದರೆ ಒಂದೇ ದಿನದಲ್ಲಿ ಎಲ್ಲಾ ಸ್ಥಳಗಳನ್ನು ನೋಡಿ ಕೊಂಡು ವಾಪಸ್ ಬರಬಹುದಿತ್ತು.

Had we gone by 8 o'clock bus we could have seen all the places and return in one day.

ವಿಶ್ವನಾಥ : ಈಗೇನಂತೆ, ಬೇರೆ ಬಸ್ಸಿಗೆ ಹೋದರಾಯ್ತು. ಮತ್ತೆ ಎಷ್ಟು ಹೊತ್ತಿಗೆ ಇದೆ ಬಸ್ಸು ? ಬನ್ನಿ ವಿಚಾರಿಸೋಣ.	What does it matter now ! Let us go by another bus. At what time is the next bus ? Come on let us enquire.
ನಟರಾಜ : ಮತ್ತೆ ಹನ್ನೆರಡು ಗಂಟೆಗೇನೆ ಬಸ್ ಇರೋದು. ಅದರಲ್ಲಿ ಹೋದರೂ ನಾವು ಎಲ್ಲಾ ಸ್ಥಳಗಳನ್ನೂ ನೋಡಿಕೊಂಡು ಬರಲಾರೆವು.	There is a bus again at 12 o'clock. Even if we go by that we can't see all the places and return.
ವಿಶ್ವನಾಥ : ಇಲ್ಲಿಂದ ಒಂಭತ್ತು ಗಂಟೆಗೆ ಪ್ರತಿದಿನಾ ಒಂದು ಟೂರಿಸ್ಟ್ ಬಸ್ ಹೋಗುತ್ತೆ. ಬನ್ನಿ ಅಲ್ಲಿ ವಿಚಾರಿಸೋಣ.	From here at 9 o' clock every day a tourist bus goes. Come, let us enquire there.
ನಟರಾಜ : ಅಲ್ಲಿಯೂ ವಿಚಾರಿಸಿದೆವು. ನಿನ್ನೇನೆ ಬುಕ್ ಮಾಡಿಸಿದ್ದರೆ ಸೀಟು ಸಿಕ್ತಾ ಇತ್ತು. 'ಟಿಕೆಟ್ ಇಲ್ಲ' ಅಂದರು.	We enquired there also. Had we booked tickets yesterday itself we could have got the seats. They said tickets are not available'.
ವಿಶ್ವನಾಥ : ಛೇ! ಎಂಥಾ ಕೆಲಸ ಆಯ್ತು! ನನ್ನೊಬ್ಬನಿಂದ ನಿಮಗೆಲ್ಲಾ ತೊಂದರೆ.	Che ! What a damn thing ! I alone have caused you all trouble.
ನಟರಾಜ : ಆಹಹಾ ! ಮೊಸಳೆ ಕಣ್ಣೀರು ಸುರಿಸ್ತಿದೀಯೊ ಅಥವಾ ನಿಜವಾಗಿ ಹೇಳ್ತಾ ಇದೀಯೋ ?	Ahaha ! Are you shedding crocodile tears or are you really sorry ?
ಮೋಹನ : ಏಯ್, ಅವನನ್ಯಾಕೆ ಗೋಳು ಹುಯ್ಕೊಳ್ತಾ ಇದೀರಿ ? ನಾವು ಇವತ್ತು ಹೋದರೂ ಎಲ್ಲಾ ಸ್ಥಳಗಳನ್ನು ನೋಡೋಕೆ	Hey, why do you go on nagging him ? Though we go today it may not be possible to see all the places. Why don't we go

ಆಗಲ್ಲ. ಮುಂದಿನ ಭಾನುವಾರ ಯಾಕೆ ಹೋಗಬಾರದು ?	next Sunday ?
ನಟರಾಜ : ಅವನು ಬೇರೆ ದಿನ ಬಂದಿದ್ದರೆ ನನಗೆ ಇಷ್ಟು ಸಿಟ್ಟು ಬರ್ತಾ ಇರಲಿಲ್ಲ. ಆದರೆ ಇವತ್ತು ಹೀಗೆ ಮಾಡಿದನಲ್ಲಾ ಅಂತ.	Had he come (like this) on some other day I wouldn't be so angry. But he did it today, that is why.
ಕೃಷ್ಣ : ನಾವು ನಮ್ಮ ಸ್ನೇಹಿತರಿಗೆ ಇವತ್ತು ಬರ್ತೀವಿ ಅಂತ ಕಾಗದ ಬರ್ದಿದ್ದೀವಿ. ಬರೆಯದೆ ಇದ್ದಿದ್ದರೆ ಹಾಗೆ ಮಾಡಬಹುದಿತ್ತು.	We have written to our friends that we are coming today. Had we not written we could have done like that. (going next Sunday).
ಮೋಹನ : ಬಸ್ಸು ನೋಡಿ ವಾಪಸ್ ಹೋಗ್ತಾರೆ. ಮುಂದಿನ ಭಾನುವಾರ ಹೋಗೋಣ. ಬರೋದಿಕ್ಕೆ ಆಗಲಿಲ್ಲ ಅಂತ ನಾಳೆ ಒಂದು ಕಾಗದ ಹಾಕೋಣ.	Seeing the bus (without us) they will go back. Let us go next Sunday. Let us drop a letter tomorrow, stating that we could not come.
ವಿಶ್ವನಾಥ : ಹೇಗೋ ಬಂದಿದೀವಿ. 'ನಾ ನಿನ್ನ ಮರೆಯಲಾರೆ' ಮಾರ್ನಿಂಗ್ ಷೋ ನೋಡಿಕೊಂಡು ಹೋಗೋಣ.	Any how we have come. Let us see the morning show 'Na ninna mareyalaare' and then go (home).
ಕೃಷ್ಣ, ನಟರಾಜ : ಹೌದಪ್ಪ ಹೌದು. ನಾವು ನಿನ್ನನ್ನು ಖಂಡಿತ ಮರೆಯಲಾರೆವು. ಬಾ ಅಷ್ಟಾದರೂ ಮಾಡೋಣ. ಆದರೆ ನಾವು ಸಿನಿಮಾಕ್ಕೆ ಬಂದರೆ ನೀನು ದುಡ್ಡು ಕೊಡಬೇಕು.	Yes, yes. We certainly can't forget you. Come at least let us do that But if we go to the cinema you have to pay the money.
ವಿಶ್ವನಾಥ : ಬಿಡರೋ, ಮಾತುಮಾತಿಗೂ ಅದ್ಯಾಕೆ ಹಂಗಿಸ್ತೀರಿ? ಇವತ್ತು ಬೆಳಗ್ಗೆ ನಿಧಾನಕ್ಕೆ ಏಳದೆ ಇದ್ದಿ	Stop it I say, why do you tease me all time. Had I not got up late today morning I wouldn't have

	ದ್ದರೆ ಲೇಟಾಗಿ ಬರ್ತಾ ಇರಲಿಲ್ಲ. ಹಾಗೇನಾದರೂ ನಾನು ಬೇಗ ಬಂದಿದ್ದರೆ ನೀವು ಸ್ವೀಟ್ಸ್ ಕೊಡಿಸಬೇಕಾಗಿತ್ತು.	come late. If by any chance had I come earlier you should have offered me sweets.
ಮೋಹನ :	ಹಾಗೆ ಹೇಳು. ಸುಮ್ಮನೆ ಆಟೋ ಸಿಕ್ಕಲಿಲ್ಲ, ಬಸ್ಸು ಸಿಕ್ಕಲಿಲ್ಲ ಅಂತ ಸಬೂಬು ಹೇಳಬೇಡ.	Say like that. Don't just give reasons like I couldn't get an auto, I couldn't catch a bus.
ನಟರಾಜ :	ಸಿನಿಮಾಕ್ಕೆ ತುಂಬಾ ನೂಕು ನುಗ್ಗಲು ಇರುತ್ತೆ. ನಾವು ಬೇಗ ಹೋದರೆ ಟಿಕೆಟ್ ಸಿಕ್ಕಬಹುದು. ಇಲ್ಲಡೆ ಇದ್ದರೆ ವಾಪಸ್ ಹೋಗಬೇಕಾಗುತ್ತೆ. ಬನ್ನಿ ಹೋಗೋಣ.	There will be heavy rush for the movie. If we go early we may get tickets. Otherwise we will have to go back. Come on let us go.
ಕೃಷ್ಣ :	ಟಿಕೆಟ್ ಸಿಕ್ಕಿದರೆ ಹೋಗೋಣ. ಇಲ್ಲದಿದ್ದರೆ ಇದೆಯಲ್ಲ ಮನೆ ದಾರಿ.	If we get tickets, let us go. Otherwise there is always the way home.
	(ಎಲ್ಲರೂ ಹೋಗುವರು)	(All exit)

DRILLS

I Build up Drill :

a) Model : ಸಿಕ್ತಾ ಇದ್ದರು.
ತಂದೆ ಸಿಕ್ತಾ ಇದ್ದರು.
ರಾಮನ ತಂದೆ ಸಿಕ್ತಾ ಇದ್ದರು.
ಬಂದಿದ್ದರೆ ರಾಮನ ತಂದೆ ಸಿಕ್ತಾ ಇದ್ದರು.
ಎಂಟು ಗಂಟೆಗೆ ಬಂದಿದ್ದರೆ ರಾಮನ ತಂದೆ ಸಿಕ್ತಾ ಇದ್ದರು.
ಬೆಳಿಗ್ಗೆ ಎಂಟು ಗಂಟೆಗೆ ಬಂದಿದ್ದರೆ ರಾಮನ ತಂದೆ ಸಿಕ್ತಾ ಇದ್ದರು.
ನೀವು ಬೆಳಿಗ್ಗೆ ಎಂಟು ಗಂಟೆಗೆ ಬಂದಿದ್ದರೆ ರಾಮನ ತಂದೆ ಸಿಕ್ತಾ ಇದ್ದರು.

On the model given above build up the following making the changes wherever necessary :

1) ಕೊಡ್ತಾ ಇದ್ದರು.
2) ಮಾಡಿಸಿಕೊಡ್ತಾ ಇದ್ದೆ.
3) ಅಡಿಗೆ ಮಾಡ್ತಾ ಇದ್ದಳು.
4) ಕೊಡಿಸ್ತಾ ಇದ್ದೆ.
5) ಹೋಗ್ತಾ ಇದ್ದ.

b) Model : ಕಳಿಸ್ತಾ ಇರಲಿಲ್ಲ.
ಹಣ ಕಳಿಸ್ತಾ ಇರಲಿಲ್ಲ.
ಮನೆಯವರು ಹಣ ಕಳಿಸ್ತಾ ಇರಲಿಲ್ಲ.
ಬರೆಯದೆ ಇದ್ದರೆ ಮನೆಯವರು ಹಣ ಕಳಿಸ್ತಾ ಇರಲಿಲ್ಲ.
ಕಾಗದ ಬರೆಯದೆ ಇದ್ದರೆ ಮನೆಯವರು ಹಣ ಕಳಿಸ್ತಾ ಇರಲಿಲ್ಲ.
ಹಾಗೆ ಕಾಗದ ಬರೆಯದೆ ಇದ್ದರೆ ಮನೆಯವರು ಹಣ ಕಳಿಸ್ತಾ ಇರಲಿಲ್ಲ.
ಅವನು ಹಾಗೆ ಕಾಗದ ಬರೆಯದೆ ಇದ್ದರೆ ಮನೆಯವರು ಹಣ ಕಳಿಸ್ತಾ ಇರಲಿಲ್ಲ.

On the model given above build up the following making the changes wherever necessary :

1) ಕಷ್ಟಪಡುತ್ತಾ ಇರಲಿಲ್ಲ.
2) ಬರುತ್ತಾ ಇರಲಿಲ್ಲ.
3) ಆಗ್ತಾ ಇರಲಿಲ್ಲ.

II Transformation Drill :

a) Model : T : ಎಂಟು ಗಂಟೆಗೆ ಬಂದರೆ ಕೊಡುತ್ತೇನೆ.
S : ಎಂಟು ಗಂಟೆಗೆ ಬಂದಿದ್ದರೆ ಕೊಡ್ತಾ ಇದ್ದೆ.

Transform :

1) ಅವನಿಗೆ ತಿಳಿದರೆ ಬರ್ತಾನೆ.
2) ಕಾಗದವನ್ನು ಕೊಟ್ಟರೆ ಪೋಸ್ಟ್ ಮಾಡ್ತೀನಿ.
3) ನೀನು ಇನ್ನೂ ಒಂದು ದಿನ ಇದ್ದರೆ ಕನ್ನಂಬಾಡಿಗೆ ಕರೆದುಕೊಂಡು ಹೋಗ್ತೀನಿ.

4) ಬೇಗ ಹೊರಟರೆ ಬಸ್ಸು ಸಿಗುತ್ತೆ.
5) ನೀವು ಹೇಳಿಕಳಿಸಿದರೆ ಬರ್ತೀನಿ.

b) Model : T : ಕ್ಯಾಂಟೀನಿಗೆ ಹೋದರೆ ಕಾಫಿ ಕುಡಿಯಬಹುದು.
S : ಕ್ಯಾಂಟೀನಿಗೆ ಹೋಗಿದ್ದರೆ ಕಾಫಿ ಕುಡಿಯಬಹುದಿತ್ತು.

Transform :

1) ನೀನು ಬೇಗ ಬಂದರೆ ಸಿನಿಮಾಕ್ಕೆ ಹೋಗಬಹುದು.
2) ನಾನು ನಿಮ್ಮ ಮನೆಗೆ ಬಂದರೆ ಕಾಫಿ ಕೊಡಬೇಕು.
3) ಊರಿಂದ ದುಡ್ಡು ಬಂದರೆ ನಿನಗೆ ಕೊಡಬಹುದು.
4) ಮೊದಲೇ ಹೋದರೆ ಟಿಕೆಟ್ ಸಿಕ್ಕಬಹುದು.

c) Model : T : ಅವನು ಓದದೆ ಇದ್ದರೆ ಪಾಸಾಗಲ್ಲ.
S : ಅವನು ಓದದೆ ಇದ್ದಿದ್ದರೆ ಪಾಸಾಗ್ತಾ ಇರಲಿಲ್ಲ.

Transform :

1) ಹುಡುಗರು ಗಲಾಟೆ ಮಾಡದೆ ಇದ್ದರೆ ಕತೆ ಹೇಳಲ್ಲ.
2) ನೀನು ಕೊಡದೆ ಇದ್ದರೆ ನಾನು ಹೋಗಲ್ಲ.
3) ನೀನು ಹೇಳದೆ ಇದ್ದರೆ ಮಾಡಲ್ಲ.

IV Response Drill :

1) ನಿಮಗೆ ಹತ್ತು ದಿವಸ ರಜಾ ಕೊಟ್ಟಿದ್ದರೆ ಏನು ಮಾಡ್ತಾ ಇದ್ದಿರಿ?
2) ನಿಮ್ಮ ಸ್ನೇಹಿತರು ನಿಮ್ಮೂರಿಗೆ ಬಂದಿದ್ದರೆ ಅವರಿಗೆ ಏನೇನು ತೋರಿಸ್ತಾ ಇದ್ದಿರಿ?
3) ನಿಮ್ಮ ಮನೆಯವರು ಮನೆಗೆ ಕಾಗದ ಬರೆಯದೆ ಇದ್ದರೆ ನೀವು ಬರೆಯಲ್ವಾ?
4) ನೀವು ಊರಿಗೆ ಹೋಗದೆ ಇದ್ದಿದ್ದರೆ ಕ್ಲಾಸಿಗೆ ಬರ್ತಾ ಇದ್ದಿರಾ?

V Translate the following sentences into Kannada :

1. Please give me your note book after the class.
2. That is my maternal uncle's house.
3. Today all of us are going to see a Kannada movie.
4. Let us wander here and there till 5 o' clock.
5. Our cow comes back to the house in the evening.
6. We will teach Kannada after going to our places

7. Shall I write this passage at home sir ?
8. In which month did you come to Mysore ?
9. Do you worship God every morning ?
10. Having taken dinner she goes for a walk with her husband.

EXERCISES

I If 'ಹೋಗು' becomes ಹೋಗಿದ್ದರೆ, ಹೋಗದೆ ಇದ್ದರೆ, What will be the corresponding forms :

1. ಕರೆ
2. ಕೊಲ್ಲು
3. ಕೆಡು
4. ತಿನ್ನು
5. ಬರೆ

II Change the following sentences as per given model :

a) Model : T : ಅವನು ಬೇಗ ಬಂದರೆ ಅಟೆಂಡೆನ್ಸ್ ಸಿಗುತ್ತೆ.
S : ಅವನು ಬೇಗ ಬಂದಿದ್ದರೆ ಅಟೆಂಡೆನ್ಸ್ ಸಿಗುತ್ತಾ ಇತ್ತು.

1) ನೀನು ಬೇಗ ಹೋದರೆ ಬಸ್ ಸಿಗುತ್ತೆ.
2) ಪರೀಕ್ಷೆಯಲ್ಲಿ ಚೆನ್ನಾಗಿ ಬರೆದರೆ ಪಾಸಾಗಬಹುದು.
3) ನೀನು ಸ್ವಲ್ಪ ನಕ್ಕರೆ ಹಲ್ಲು ಕಾಣಿಸುತ್ತೆ.
4) ಅವನಿಗೆ ಕೋಪ ಬಂದರೆ ಮುಖ ಕೆಂಪಗೆ ಆಗುತ್ತೆ.
5) ನೀನು ದೂರ ಹೋದರೆ ನನಗೆ ಶಾಂತಿ ಸಿಗುತ್ತೆ.
6) ನಾನು ನಿಮ್ಮ ಮನೆಗೆ ಬಂದರೆ ಆ ಪುಸ್ತಕ ಕೊಡಬೇಕು.

b) Model : T : ನೀನು ನಮ್ಮ ರೂಮಿಗೆ ಬಂದಿದ್ದರೆ ದುಡ್ಡು ಕೊಡ್ತಾ ಇದ್ದೆ.
S : ನೀನು ನಮ್ಮ ರೂಮಿಗೆ ಬರದೆ ಇದ್ದಿದ್ದರೆ ದುಡ್ಡು ಕೊಡ್ತಾ ಇರಲಿಲ್ಲ.

1) ನೀವು ಕಾಗದ ಕೊಟ್ಟು ಕಳಿಸಿದ್ದರೆ ಕೊಡ್ತಾ ಇದ್ದೆ.
2) ಅವನು ಲೇಟಾಗಿ ಬಂದಿದ್ದರೆ ಸಿಟ್ಟು ಬರ್ತಾ ಇತ್ತು.
3) ಅವಳು ನನಗೆ ಕಾಗದ ಬರೆದಿದ್ದರೆ ಹೋಗ್ತಾ ಇದ್ದೆ.
4) ಕಾಲೇಜಿಗೆ ರಜಾ ಅಪ್ಲಿಕೇಷನ್ ಕಳಿಸಿದ್ದರೆ ರಜಾ ಕೊಡ್ತಾ ಇದ್ದರು.

5) ಮಾರ್ಕೆಟ್ಟಿನಿಂದ ತರಕಾರಿ ತಂದಿದ್ದರೆ ಚೆನ್ನಾಗಿ ಅಡಿಗೆ ಮಾಡ್ತಾ ಇದ್ದೆ
6) ಫ್ಯಾನ್ ಹಾಕಿದ್ದರೆ ಗಾಳಿ ಬರ್ತಾ ಇತ್ತು.
7) ಅಷ್ಟು ದೂರ ನಡೆದಿದ್ದರೆ ಕಾಲು ನೋಯ್ತಾ ಇತ್ತು.

III Translate the following passage into English :

ನಾನು ನಿನ್ನೆ ಕಾಲೇಜಿಗೆ ಹೋಗಿರಲಿಲ್ಲ. ಮನೆಯಲ್ಲೇ ಇದ್ದೆ. ಆದರೆ ಮನೆಯಲ್ಲೂ ಏನೂ ಕೆಲಸ ಮಾಡಲಿಲ್ಲ. ಬೆಳಿಗ್ಗೆ ತಿಂಡಿ ತಿಂದು ಪೇಪರ್ ಓದ್ತಾ ಕೂತೆ. ಆಗ ನನ್ನ ಸ್ನೇಹಿತ ಶ್ಯಾಮ ಬಂದ. ಇಬ್ಬರೂ ಸೇರಿ ಹತ್ತೂಕಾಲು ಗಂಟೆಗೆ ಕ್ರಿಕೆಟ್ ಕಾಮೆಂಟರಿ ಕೇಳಲು ಆರಂಭಿಸಿದೆವು. ಶ್ಯಾಮೂ ಸಹ ಕಾಲೇಜಿಗೆ ಹೋಗಲಿಲ್ಲ. ಅವನಿಗೆ ಕ್ರಿಕೆಟ್ ಅಂದರೆ ತುಂಬಾ ಆಸೆ. ಮಧ್ಯಾಹ್ನ ಹನ್ನೆರಡೂವರೆ ತನಕ ಇಬ್ಬರೂ ಕಾಮೆಂಟರಿ ಕೇಳಿದೆವು. ಆಮೇಲೆ ಶಾಮು ಮನೆಗೆ ಹೋದ. ಒಂದು ಗಂಟೆಗೆ ನಮ್ಮ ತಂದೆ ಮನೆಗೆ ಬಂದರು. ನಾನು ಕಾಲೇಜಿಗೆ ಹೋಗದೆ ಇದ್ದುದಕ್ಕೆ ಬೈದರು. ಅವರೂ ಕಾಮೆಂಟರಿ ಕೇಳುವ ಆಸೆಯಿಂದ ಮಧ್ಯಾಹ್ನವೂ ಕಾಲೇಜಿಗೆ ಹೋಗಲಿಲ್ಲ. ನಮ್ಮ ತಂದೆ ಆಫೀಸಿಗೆ ಹೋದ ಮೇಲೆ ಮತ್ತೆ ಸಾಯಂಕಾಲದವರೆಗೆ ಕಾಮೆಂಟರಿ ಕೇಳಿದೆವು.

IV Answer the following questions :

1) ನಟರಾಜ, ಮೋಹನ, ಕೃಷ್ಣ ಎಲ್ಲಿಗೆ ಹೋಗೋಕೆ ಕಾಯ್ತಾ ಇದ್ದರು ? ಯಾರಿಗೋಸ್ಕರ ಕಾಯ್ತಾ ಇದ್ದರು ?
2) ಅವರು ಎಂಟು ಗಂಟೆ ಬಸ್ಸಿಗೆ ಹೋಗಿದ್ದರೆ ಏನು ಅನುಕೂಲ ಆಗ್ತಿತ್ತು ?
3) ವಿಶ್ವನಾಥನನ್ನು ಅವನ ಸ್ನೇಹಿತರು ಏನೆಂದು ಬೈದರು ?
4) ಅವರೆಲ್ಲಾ ಅವತ್ತೇ ಯಾಕೆ ಹೋಗಬೇಕು ಅಂತ ಇದ್ದರು ? ಅವರು ಅವತ್ತು ಹೋದರಾ ?
5) ಕಡೆಗೆ ಅವರು ಯಾವ ಸಿನಿಮಾಕ್ಕೆ ಹೋದರು ? ಯಾರು ಸಿನಿಮಾಕ್ಕೆ ಹೋಗೋಣ ಅಂತ ಹೇಳಿದರು ?
6) ವಿಶ್ವನಾಥ ಬರದೆ ಇದ್ದುದಕ್ಕೆ ನಿಜವಾದ ಕಾರಣ ಏನು ?

VOCABULARY :

ಕೊರೆಯೋ ಚಳಿ—severe cold

ಗೋಳು ಹುಯ್ಯು—to annoy, to nag

ಡೊಂಕು–curve

ತಾಂಡವ ನೃತ್ಯ—dance with violent gestures (a variety of Indian Dance)

ದರಿದ್ರದವನು—'pauper, destitute' in scolding term

ನಾಯಿ ಬಾಲ—dogs tail

ನೂಕು ನುಗ್ಗಲು—heavy rush

ಬೀಗು— behave proudly, to be elated

ಮೊಸಳೆ ಕಣ್ಣೀರು—croccdile tears

ರಾಜಕುಮಾರ—prince

ಸಾರಿ ಸಾರಿ— again and again

ಹಂಗಿಸು—tease a person under obligation

Grammar Notes :

A conditional sentence of the type introduced in this lesson is different from the simple conditional sentence introduced in lesson 47. In that sentence type (lesson 47) conditional suffix will be added either to the verb root or to the verbstem, thus giving the simple conditional form.

ನೀನು ಬಂದರೆ ಪುಸ್ತಕ ಕೊಡ್ತೀನಿ.

'If you come I will give book'

Note in the above example the condition may or may not be fulfilled The other type of conditional sentence is used when the conditional has not been fulfilled. Thus it is known as the condition contrary to the fact. Such conditional sentences are introduced in this lesson.

ನೀನು ಮನೆಗೆ ಬಂದಿದ್ದರೆ ಹಣ ಕೊಡ್ತಾ ಇದ್ದೆ.

Had you come home I would have given money

Note the above sentence consists of two clauses, a conditional clause and a main clause. The verb in the conditional clause is of the conditional type and verb in the main clause may be a finite or model verb. The speciality of the condition contrary to fact type of sentence is that the verb in the conditional clause will always be in the past perfect conditional form and the verb in the clause will always be in the past continuous form.

UNIT 14

Review
LESSON 14

THANKING A FRIEND

DIALOGUE

ಭಾಸ್ಕರನ್ : ರಾಜಣ್ಣ, ನಮ್ಮ ತರಬೇತಿಯ ಅವಧಿ ಮುಗಿಯುತ್ತಾ ಬಂತು. ಇನ್ನು ನಾಲ್ಕು ದಿನ ಇದೆ. ನಾಡಿದ್ದು ನಮ್ಮ ಘಟಕೋತ್ಸವ. ಅದರ ಮಾರನೆ ದಿನ ನಾನು ಹೊರಡ್ತೀನಿ.

ರಾಜಣ್ಣ : ಹೌದು ಭಾಸ್ಕರನ್, ಎಷ್ಟು ಬೇಗ ಹತ್ತು ತಿಂಗಳು ಮುಗಿದು ಹೋಯಿತು. ನೀವು ಇನ್ನೂ ಮೊನ್ನೆ ಮೊನ್ನೆ ತಾನೆ ಬಂದ ಹಾಗೆ ಕಾಣಿಸುತ್ತೆ.

ಭಾಸ್ಕರನ್ : ನಿಜ ರಾಜಣ್ಣ. ಅದಕ್ಕೆ ನಾನು ನಿಮಗೆ ತುಂಬಾ ಕೃತಜ್ಞನಾಗಿರಬೇಕು.

ರಾಜಣ್ಣ : ಯಾಕೆ ನಾನೇನು ಮಹಾ ಮಾಡಿದೆ.

ಭಾಸ್ಕರನ್ : ಹಾಗಲ್ಲ ರಾಜಣ್ಣ. ನೀವು ಇಲ್ಲಿಯವರೆಗೆ ನನಗೆ ಸಿಕ್ಕದೆ ಇದ್ದರೆ ನನಗೆ ತುಂಬಾ ತೊಂದರೆ ಆಗ್ತಾ ಇತ್ತು.

ರಾಜಣ್ಣ : ಅಯ್ಯೋ ಈಗ ಅದೆಲ್ಲಾ ಈಗ ಮಾತಾಡಬೇಡಿ. ನೀವು ನಾಡಿದ್ದು ಇಲ್ಲಿಂದ ಹೋದರೆ ನಮ್ಮ ನಿಮ್ಮ ಭೇಟಿ ಮತ್ತೆ ಯಾವಾಗ?

ಭಾಸ್ಕರನ್ : ನಾನು ಹೋದರೆ, ಇನ್ನು ಮೇಲೆ ನಾವು ಭೇಟಿಯಾಗೋದು ತುಂಬಾ ಅಪರೂಪ.

ರಾಜಣ್ಣ : ಹೌದು. ಆದರೆ ಮುಂದಿನ ಬೇಸಿಗೆ ರಜಕ್ಕೆ ಸಾಧ್ಯವಾದರೆ ನಾನು ನಿಮ್ಮ ಊರಿಗೆ ಖಂಡಿತ ಬರ್ತೀನಿ. ಕೇರಳ ನೋಡಬೇಕು ಅಂತ ತುಂಬಾ ಆಸೆ ಇದೆ.

ಭಾಸ್ಕರನ್ : ಖಂಡಿತ ಬನ್ನಿ. ಬರದೆ ಇದ್ದರೆ ನನ್ನಾಣೆ. ನೀವು ನನ್ನನ್ನು ಇಲ್ಲಿ ಬಹಳ ಚೆನ್ನಾಗಿ ನೋಡಿಕೊಂಡಿದ್ದೀರಿ.

ರಾಜಣ್ಣ : ಖಂಡಿತ ಬರ್ತೀನಿ. ಆಗ ನೀವು ಅದನ್ನು ಬಡ್ಡಿ ಸಮೇತ ಹಿಂದಿರುಗಿಸಿ.

ಭಾಸ್ಕರನ್ : ನಿಮ್ಮ ಮನೆಯವರನ್ನು ನಿಮ್ಮ ಮಕ್ಕಳನ್ನು ಕರೆದುಕೊಂಡು ಬನ್ನಿ.

ರಾಜಣ್ಣ : ನಮಗೆ ಮಾತ್ರ ಹೇಳ್ತೀರಿ. ಆದರೆ ನೀವು ಮಾತ್ರ ನಿಮ್ಮ ಮಕ್ಕಳನ್ನು ಮನೆಯವರನ್ನು ಕರೆದುಕೊಂಡು ಬರಲಿಲ್ಲ.

ಭಾಸ್ಕರನ್ : ಯಾವಾಗ ಕರೆದುಕೊಂಡು ಬರೋಕೆ ಸಮಯ ಇತ್ತು ಹೇಳಿ.

ರಾಜಣ್ಣ : ರಜದಲ್ಲಿ ಕರೆದುಕೊಂಡು ಬರಬಹುದಿತ್ತು.

ಭಾಸ್ಕರನ್ : ಕರೆದುಕೊಂಡು ಬಂದಿದ್ದರೆ ಮೈಸೂರು ತೋರಿಸಬಹುದಿತ್ತು.

ರಾಜಣ್ಣ : ಮುಂದೆ ಬಂದರೆ ಖಂಡಿತ ಕರೆದುಕೊಂಡು ಬನ್ನಿ.

ಭಾಸ್ಕರನ್ : ಆಗಲಿ ಕರೆದುಕೊಂಡು ಬರ್ತೀನಿ. ನಾನು ಹೋಗುವುದಕ್ಕೆ ಮೊದಲು ನಿಮ್ಮ ತಂದೆಯವರನ್ನು ನೋಡಬೇಕು.

ರಾಜಣ್ಣ : ನಾಳೆ ಸಾಯಂಕಾಲ ಮನೆಗೆ ಬನ್ನಿ. ಆರೂವರೆ ಗಂಟೆ ಸುಮಾರಿಗೆ ಅವರು ಮನೆಯಲ್ಲೇ ಇರ್ತಾರೆ.

ಭಾಸ್ಕರನ್ : ನಾನು ನಾಳೆ ಸಾಯಂಕಾಲ ಸಿಟಿಗೆ ಹೋಗಬೇಕು. ಹೋಗ್ತಾ ಬರ್ತೀನಿ.

ರಾಜಣ್ಣ : ಸಾಧ್ಯವಾದರೆ ಬನ್ನಿ. ಇಲ್ಲದೆ ಇದ್ದರೆ ಇನ್ನೂ ನಾಲ್ಕು ದಿನ ಇದೆಯಲ್ಲ ನೀವು ಹೋಗುವುದಕ್ಕೆ. ಸಿಧಾನಕ್ಕೆ ನೋಡಬಹುದು.

TEST PAPER

I Give the meaning of the following words :–

1. ಬಡ್ಡಿ
2. ಘಟಿಕೋತ್ಸವ
3. ಅವಧಿ
4. ಕೃತಜ್ಞ
5. ಬೇಸಿಗೆ

II. Combine the following sentences using the conditional form :

1. ಅವನು ಪರೀಕ್ಷೇಲಿ ಚೆನ್ನಾಗಿ ಬರೆದಿದ್ದಾನೆ.
   ಅವನು ಪಾಸಾಗ್ತಾನೆ.

2. ಇವತ್ತು ಲೈಬ್ರರಿಯಲ್ಲಿ ಪುಸ್ತಕ ಕೊಡ್ತಾರೆ.
   ನಾನು ಆ ಪುಸ್ತಕ ಓದ್ತೀನಿ.

3. ನೀವು ಪ್ರಶ್ನೆ ಕೇಳ್ತಾ ಇರ್ತೀರಿ.
   ನನಗೆ ನಿದ್ರೆ ಬರ್ತಾ ಇರುತ್ತೆ.

4. ಅವರು ಊರಿಗೆ ಹೋಗ್ತಾರೆ.
   ಅವರು ಮಾವಿನಹಣ್ಣು ತರ್ತಾರೆ.

5. ನಾನು ಕ್ಯಾಂಟೀನಿನಲ್ಲಿ ಊಟ ಮಾಡ್ತೀನಿ.
   ನನಗೆ ಖರ್ಚು ಕಡಿಮೆ ಬರುತ್ತೆ.

III. Transform the following sentences into negative conditional form :

1. ನಿಮಗೆ ತೊಂದರೆ ಆದರೆ ದಯವಿಟ್ಟು ಹೋಗಿ.
2. ಅವರು ಒಬ್ಬರು ಬಂದರೆ ಹೇಗೆ ?
3. ನೀವು ಸುಮ್ಮಸುಮ್ಮನೆ ನಕ್ಕರೆ ಹೇಳ್ತೀನಿ.
4. ನನ್ನ ಹೆಂಡತಿ ಕಾಗದ ಬರೆದರೆ ನಾನು ಊರಿಗೆ ಹೋಗ್ತೀನಿ.
5. ಮಗು ಹಾಲು ಕುಡಿದರೆ ಅಳುತ್ತೆ.

IV. Transform the following sentences into negative construction without changing the meaning :

1. ಅವನು ಮನೆಗೆ ಬಂದರೆ ಹಣ ಕೊಡ್ತೀನಿ.
2. ನೀವು ಪುಸ್ತಕ ಕೊಟ್ಟು ಕಳಿಸಿದ್ದರೆ ಹಣ ಕೊಡ್ತಾ ಇದ್ದೆ.
3. ಶಶಿಕಲಾ ಬೇಗ ಬಂದಿದ್ದರೆ ಕಾಫಿ ಸಿಗ್ತಾ ಇತ್ತು.
4. ನಮ್ಮ ಮೇಷ್ಟ್ರು ಚೆನ್ನಾಗಿ ಪಾಠ ಮಾಡಿದರೆ ನಾವು ಸುಮ್ಮನಿರ್ತೀವಿ
5. ನನ್ನ ಸ್ನೇಹಿತರು ಬಂದರೆ ಸಿನಿಮಾಕ್ಕೆ ಹೋಗ್ತೀನಿ.

V. Transform the following sentences according to the model .

Model : T : ಕ್ಲಾಸಿಗೆ ಬೇಗ ಬಂದರೆ ಅಟೆಂಡೆನ್ಸ್ ಸಿಗುತ್ತೆ.

S : ಕ್ಲಾಸಿಗೆ ಬೇಗ ಬಂದಿದ್ದರೆ ಅಟೆಂಡೆನ್ಸ್ ಸಿಗ್ತಾ ಇತ್ತು.

Transform :

1. ಕಮಲನಿಗೆ ಹೇಳಿದರೆ ಹಾಡ್ತಾಳೆ.
2. ನಾವು ಬೇಗ ಹೋದರೆ ಬಸ್ ಸಿಗುತ್ತೆ.
3. ನಾನು ಕ್ಯಾಂಟೀನಿನಲ್ಲಿ ಊಟ ಮಾಡಿದರೆ ಖಾಯಿಲೆ ಬರುತ್ತೆ.

Model : T : ನಾನು ನಿಮ್ಮ ಮನೆಗೆ ಬಂದರೆ ಕಾಫಿ ಕೊಡಬೇಕು.

S : ನಾನು ನಿಮ್ಮ ಮನೆಗೆ ಬಂದಿದ್ದರೆ ಕಾಫಿ ಕೊಡಬೇಕಾಗಿತ್ತು.

Transform :

1. ಅವನು ಆಟದಲ್ಲಿ ಗೆದ್ದರೆ ಸ್ವೀಟ್ಸ್ ಕೊಡಿಸಬೇಕು.
2. ಅವರು ಹಣ ಕೇಳಿದರೆ ಕೊಡಬೇಕು
3. ಹುಡುಗರು ರಜಾ ಕೇಳಿದರೆ ಕೊಡಬೇಕು

VI. Translate the following sentences into Kannada :

1. I saw him in the theatre with Rajaram.
2. There are few mistakes in this book.
3. If he had run fast he would have won.
4. He went out of the class without taking the permission of the teacher.
5. The boy who is going there had come to our hostel yesterday.

VII. Answer the following questions :

1. ಭಾಸ್ಕರನ್ ರಾಜಣ್ಣನಿಗೆ ಏಕೆ ಕೃತಜ್ಞ ಎಂದು ಹೇಳಿದರು ?
2. ರಾಜಣ್ಣ ಯಾವಾಗ ಕೇರಳಕ್ಕೆ ಬರ್ತೀನಿ ಎಂದರು ?
3. ಭಾಸ್ಕರನ್ ತನ್ನ ಹೆಂಡತಿ ಮಕ್ಕಳನ್ನು ಯಾಕೆ ಮೈಸೂರಿಗೆ ಕರೆದುಕೊಂಡು ಬರಲಿಲ್ಲ ?
4. ಭಾಸ್ಕರನ್ ರಾಜಣ್ಣನ ಮನೆಗೆ ಯಾವಾಗ ಬರ್ತೀನಿ ಎಂದರು ?

VOCABULARY :

ಅವಧಿ—period

ಕೃತಜ್ಞ—sincere

ಬಡ್ಡಿ ಸಮೇತ—with interest

UNIT 15

LESSON 49

IMFORMATION ABOUT PROF. SRINIVASA

DIALOGUE

ಮಾಧು : ಹಲೋ ರವಿ, ನಿನ್ನನ್ನ ನೋಡ್ಕೋಣ ಅಂತ ನಾನು ನಿಮ್ಮ ಮನೆಗೆ ಎರಡು ಸಾರಿ ಬಂದಿದ್ದೆ. ಆರು ಗಂಟೆಗೆ ಬಂದಿದ್ದಾಗ ಈಗ ತಾನೆ ಆಚೆ ಹೋದ ಅಂತ ನಿಮ್ಮ ತಾಯಿ ಹೇಳಿದರು. ಮತ್ತೆ ಎಂಟು ಗಂಟೆಗೆ ಬಂದೆ. ಆಗಲೂ ನೀನು ಬಂದಿರಲಿಲ್ಲ	Hello Ravi, I had come to your house twice to see you. When I had come at 6 o'clock your mother told me that just you had gone out. Again I came at eight o'clock. At that time also you had not returned.

ರವಿ : ಮಾಧು, ನಿನ್ನೆ ನಾನು ಐದೂವರೆಗೆ ಸಿಟಿಗೆ ಹೋಗಿದ್ದೆ. ಮಾರ್ಕೆಟ್ಟನಲ್ಲಿ ತರಕಾರಿ ಕೊಂಡುಕೊಳ್ತಾ ಇದ್ದಾಗ ನನ್ನ ಸೋದರ ಮಾವ, ಅತ್ತೆ ಸಿಕ್ಕಿದರು. ತುಂಬಾ ಒತ್ತಾಯ ಮಾಡಿ ಅವರ ಮನೆಗೆ ಕರೆದು ಕೊಂಡು ಹೋದರು. ಬರುವಾಗ ತುಂಬಾ ತಡ ಆಯ್ತು. ಏನಾದರೂ ವಿಶೇಷ ಇತ್ತಾ ?	Madhu, yesterday at 5-30 I had been to city. While I was buying vegetables in the market I met my uncle and aunt. They forced me to go with them to their house. It was very late when I returned. Was there anything special ?
ಮಾಧು : ಅಂಥಾ ವಿಶೇಷ ಏನು ಇರಲಿಲ್ಲ. ನೀನು ಅಣ್ಣಾಮಲೈ ಯೂನಿವರ್ಸಿಟೀಲಿ ಓದುತ್ತಾ ಇದ್ದಾಗ ಅಲ್ಲಿ ಸಮಾಜಶಾಸ್ತ್ರದ ಪ್ರೊಫೆಸರ್ ಶ್ರೀನಿವಾಸ್ ಅಂತ ಇದ್ದರು ಅವರು ನಿನಗೆ ಗೊತ್ತಾ ?	There was nothing special of that sort. When you were studying in Annamalai University there was one Sociology Professor named Srinivas. Do you know him ?
ರವಿ : ಚೆನ್ನಾಗಿ ಗೊತ್ತು ಮಾಧು. ನಾನು ಮೊದಲ ಸಾರಿ ಅಣ್ಣಾಮಲೈಗೆ ಹೋದಾಗ ಅಲ್ಲಿ ಕನ್ನಡದವರು ಒಬ್ಬರು ಇದ್ದಾರೆ ಅಂತ ಗೊತ್ತಾಯ್ತು. ನಾನೇ ಹೋಗಿ ಅವರನ್ನು ಭೇಟಿಯಾಗಿದ್ದೆ. ತುಂಬಾ ಒಳ್ಳೆಯವರು ಅವರ ಮನೆಯವರೆಲ್ಲಾ ನನಗೆ ಚೆನ್ನಾಗಿ ಗೊತ್ತು. ಅದೆಲ್ಲಾ ಹೋಗಲಿ, ಅವರು ನಿನಗೆ ಹೇಗೆ ಪರಿಚಯ ?	I know him very well Madhu. When I went first time to Annamalai I came to know that there was one Kannadiga. I myself went and met him. He is a very good man. I know all his family well. Alright let it be. How do you know him ?
ಮಾಧು : ಅವರು ಈಗ ರಿಟೈರ್ಡ್ ಆಗಿ	He has now retired and is liv-

	ಇಲ್ಲೇ ಮೈಸೂರಿನಲ್ಲೇ ಇದ್ದಾರೆ. ನಾನು ಮೊನ್ನೆ ಕೃಷ್ಣಮೂರ್ತಿಪುರಂನಲ್ಲಿ ನಮ್ಮ ಭಾವನ ಮನೆಗೆ ಹೋಗಿದ್ದಾಗ ಸಿಕ್ಕಿದ್ದರು. ನಮ್ಮ ಭಾವನೇ ಅವರನ್ನು ಪರಿಚಯ ಮಾಡಿಕೊಟ್ಟರು. ಆಗ ಗೊತ್ತಾಯ್ತು ನಿನ್ನ ಪರಿಚಯ ಇದೆ ಅಂತ.	ing in Mysore. I met him when I had been to my uncle's house in Krishnamurthipuram day before yesterday. My uncle only introduced him. Then I came to know that he knows you.
ರವಿ :	ಅವರಿಗೆ ಹೇಗೆ ಗೊತ್ತಾಯ್ತು ? ನೀನು ಹೇಳಿದೆಯಾ ?	How did he come to know ? Did you tell him ?
ಮಾಧು :	ನಿಮ್ಮ ಕನ್ನಡ ಫ್ಯಾಕಲ್ಟೀಲಿ ಯಾರ್‍ಯಾರು ಇದಾರೆ ಅಂತ ಕೇಳಿದರು. ನಿನ್ನ ಹೆಸರು ಹೇಳಿದಾಗ ಅಣ್ಣಾಮಲೈನಲ್ಲಿ ಎಂ.ಎ. ಮಾಡಿದವರಾ ಅಂತ ಕೇಳಿದರು. ಹೂಂ ಅಂದೆ.	He asked me who are all the people in your Kannada faculty. When I mentioned your name is he the one who did M.A , in Annamalai, he asked. I said yes.
ರವಿ :	ನಾನು ಅಣ್ಣಾಮಲೈನಲ್ಲಿದ್ದಾಗ ಆಗಾಗ್ಗೆ ಅವರ ಮನೆಗೆ ಹೋಗಿ ಬರ್‍ತಾ ಇದ್ದೆ. ಈಗ ಅವರ ಮನೆ ಕೃಷ್ಣಮೂರ್ತಿಪುರಂನಲ್ಲಿ ಎಲ್ಲಿ ಇದೆ ? ನಾನು ಒಂದು ಸಾರಿ ಅವರನ್ನು ನೋಡಿಕೊಂಡು ಬರ ಬರಬೇಕಲ್ಲಾ.	When I was in Annamalai often I was going to his house. Now where is his house in Krishnamurthipuram ? I must go and see him sometime.
ಮಾಧು :	ಅಯ್ಯೋ ರುಸ್ತುಮ್, ನೀನು ಹೇಳೋದಕ್ಕೆ ಮೊದಲೆ ಇನ್ನೊಂದು ಸಾರಿ ಬರುವಾಗ ನಿನ್ನನ್ನು ಕರೆದುಕೊಂಡು ಬರೋಕೆ ಹೇಳಿದಾರೆ. ಅವರ ಮನೆ ನಮ್ಮ ಭಾವನ ಮನೆ ಪಕ್ಕದಲ್ಲೇ ಇದೆ. ಸಾಯಂಕಾಲ ಬರ್‍ತೀಯಾ ? ಹೋಗೋಣ	You rustum, before you asked he asked me to take you when I go next time His house is besides my uncle's house. Wil you come in the evening ? Let us go.

ರವಿ : ಅವರು ಇಲ್ಲೇ ಇದಾರೆ ಅನ್ನೋದು ಗೊತ್ತಿರುವಾಗ ನೋಡದೆ ಬಿಡ್ತೀನಾ ? ಬಂದೇ ಬರ್ತೀನಿ. ಇವತ್ತು ಸಾಯಂಕಾಲ ಸಿಟೀಲಿ ಸ್ವಲ್ಪ ಕೆಲಸ ಇದೆ. ಸಿಟಿ ಕಡೆ ಹೋಗುವಾಗ ಅವರನ್ನು ನೋಡಿಕೊಂಡೇ ಹೋಗ್ತೀನಿ. ನೀನು ಜೊತೆಯಲ್ಲಿ ಬರ್ತೀಯಲ್ಲ ?

Now I know he is here, do you think that I would remain without seeing him ? Certainly I will come. I have some work in the city today evening. While going towards city, I will see him and go. You are also coming with me, aren't you ?

ಮಾಧು : ಖಂಡಿತ ಬರ್ತೀನಿ. ನಿನಗೆ ಮನೆ ತೋರಿಸುವ ಕೆಲಸ ಇದೆಯಲ್ಲ !

Certainly I will come. I have the duty of showing the house to you!

ರವಿ : ನೋಡು ಮಾತಾಡ್ತಾ ಮಾತಾಡ್ತಾ ಮರೆತು ಬಿಟ್ಟಿದ್ದೆ. ನನ್ನಿಂದ 'ಗಾಂಧಿ ಸ್ಮರಣೆ' ಪುಸ್ತಕ ತಗೊಂಡು ಹೋಗಿದ್ದೆಯಲ್ಲಾ ತಂದೆಯಾ ?

Look, chatting away with you, forgot. You had borrowed 'Gandhi smarane' book from me. Have you brought it ?

ಮಾಧು : ಐ ಯಾಮ್ ವೆರಿ ಸಾರಿ. ಇವತ್ತು ಮಧ್ಯಾಹ್ನ ಊಟಕ್ಕೆ ಹೋದಾಗ ಖಂಡಿತ ತರ್ತೀನಿ.

I am very sorry. When I go for lunch today noon certainly I will bring it.

ರವಿ : ಮರೆಯಬೇಡ. ಹಾಗೆ ಮಧ್ಯಾಹ್ನ ನೀನು ಊಟ ಮಾಡಿಕೊಂಡು ಬರುವಾಗ ಮರೆಯದೆ ನನಗೆ ಪೋಸ್ಟಾಫೀಸಿನಿಂದ ಎರಡು ಏರೋಗ್ರಾಂ ತರ್ತೀಯಾ ?

Don't forget. On your way back from lunch could you please bring me without forgetting two aerogrames from the post office ?

ಮಾಧು : ಆಗಲಿ ಬರುವಾಗ ತರ್ತೀನಿ. ಆದರೆ ಅಪ್ಪಿ ತಪ್ಪಿ ಮರೆತರೆ ಬಯ್ಯೋದಿಲ್ಲ ಅಂತ ಪ್ರಾಮಿಸ್ ಮಾಡಬೇಕು.

Allright, I will pick them up on my way. But promise me that you won't scold me if by any chance I forget.

ರವಿ	: ಅದು ನೀನು ಮರೆತು ಬಂದಾಗ ತಾನೆ! ನೋಡಿಕೊಳ್ಳೋಣ. ತಗೋ ಹಣ.	That is only when you forget Isn't it! Let us see. Take money.

DRILLS

I Build up Drill :

a) Model : ನೋಡಿದ್ದೆ

ನಿಮ್ಮನ್ನು ನೋಡಿದ್ದೆ

ನಾನು ನಿಮ್ಮನ್ನು ನೋಡಿದ್ದೆ

ಬಂದಿದ್ದಾಗ ನಾನು ನಿಮ್ಮನ್ನು ನೋಡಿದ್ದೆ

ಬೆಂಗಳೂರಿಗೆ ಬಂದಿದ್ದಾಗ ನಾನು ನಿಮ್ಮನ್ನು ನೋಡಿದ್ದೆ

ಮೊನ್ನೆ ಬೆಂಗಳೂರಿಗೆ ಬಂದಿದ್ದಾಗ ನಾನು ನಿಮ್ಮನ್ನು ನೋಡಿದ್ದೆ

Build up the following making the appropriate changes wherever necessary :

1) ತಂದಿದ್ದಾಗ

2) ಕಡಿದಿದ್ದಾಗ

3) ಬಿಟ್ಟಿದ್ದಾಗ

b) Model : ಬರ್ತೀನಿ

ಮನೆಗೆ ಬರ್ತೀನಿ.

ನಿಮ್ಮ ಮನೆಗೆ ಬರ್ತೀನಿ

ಬಂದಾಗ ನಿಮ್ಮ ಮನೆಗೆ ಬರ್ತೀನಿ

ಬೆಂಗಳೂರಿಗೆ ಬಂದಾಗ ನಿಮ್ಮ ಮನೆಗೆ ಬರ್ತೀನಿ

ಮುಂದಿನ ಸಲ ಬೆಂಗಳೂರಿಗ ಬಂದಾಗ ನಿಮ್ಮ ಮನೆಗೆ ಬರ್ತೀನಿ

ನಾನು ಮುಂದಿನ ಸಲ ಬೆಂಗಳೂರಿಗೆ ಬಂದಾಗ ನಿಮ್ಮ ಮನೆಗೆ ಬರ್ತೀನಿ

Build up the following making the appropriate changes wherever necessary.

1) ಕೇಳಿದಾಗ

2) ಮುಟ್ಟಿದಾಗ

3) ನೋಡಿದಾಗ

c) Model: ತರ್ತೀನಿ

ಬರುವಾಗ ತರ್ತೀನಿ

ಊರಿಗೆ ಬರುವಾಗ ತರ್ತೀನಿ

ನಿಮ್ಮ ಊರಿಗೆ ಬರುವಾಗ ತರ್ತೀನಿ

ಹೂ ನಿಮ್ಮ ಊರಿಗೆ ಬರುವಾಗ ತರ್ತೀನಿ

ಮಲ್ಲಿಗೆ ಹೂ ನಿಮ್ಮ ಊರಿಗೆ ಬರುವಾಗ ತರ್ತೀನಿ

ಮೈಸೂರು ಮಲ್ಲಿಗೆ ಹೂ ನಿಮ್ಮ ಊರಿಗೆ ಬರುವಾಗ ತರ್ತೀನಿ.

Build up the following making the changes wherever necessary.

1) ತೆಗೆಯುವಾಗ

2) ಮಾಡುವಾಗ

3) ತೊಳೆಯುವಾಗ

d) Model: ನೋಡ್ತೀನಿ

ಅವಳನ್ನು ನೋಡ್ತೀನಿ

ಬರುತ್ತಾ ಇರುವಾಗ ಅವಳನ್ನು ನೋಡ್ತೀನಿ

ಮನೆಗೆ ಬರುತ್ತಾ ಇರುವಾಗ ಅವಳನ್ನು ನೋಡ್ತೀನಿ

ಕಾಲೇಜಿನಿಂದ ಮನೆಗೆ ಬರುತ್ತಾ ಇರುವಾಗ ಅವಳನ್ನು ನೋಡ್ತೀನಿ

ನಾನು ಕಾಲೇಜಿನಿಂದ ಮನೆಗೆ ಬರುತ್ತಾ ಇರುವಾಗ ಅವಳನ್ನು ನೋಡ್ತೀನಿ

Build up the following making the changes wherever necessary :

1) ಹೋಗುತ್ತಾ ಇರುವಾಗ

2) ತಿನ್ನುತ್ತಾ ಇರುವಾಗ

3) ಓದುತ್ತಾ ಇರುವಾಗ

e) Model : ಬಿದ್ದೆ

ಬರ್ತಾ ಇದ್ದಾಗ ಬಿದ್ದೆ

ಮನೆಗೆ ಬರ್ತಾ ಇದ್ದಾಗ ಬಿದ್ದೆ

ಸಾಯಂಕಾಲ ಮನೆಗೆ ಬರ್ತಾ ಇದ್ದಾಗ ಬಿದ್ದೆ

ನಿನ್ನೆ ಸಾಯಂಕಾಲ ಮನೆಗೆ ಬರ್ತಾ ಇದ್ದಾಗ ಬಿದ್ದೆ

ನಾನು ನಿನ್ನೆ ಸಾಯಂಕಾಲ ಮನೆಗೆ ಬರ್ತಾ ಇದ್ದಾಗ ಬಿದ್ದೆ

Build up the following making the changes wherever necessary.

1) ಓಡ್ತಾ ಇದ್ದಾಗ

2) ಕದೀತಾ ಇದ್ದಾಗ

3) ಕೇಳ್ತಾ ಇದ್ದಾಗ

II Transformation Drill :

a) Model : T : ಆ ಪುಸ್ತಕ ಬೆಂಗಳೂರಿಗೆ ಹೋದಾಗ ತರ್ತೀನಿ

S : ಆ ಪುಸ್ತಕ ಬೆಂಗಳೂರಿಗೆ ಹೋಗಿದ್ದಾಗ ತಂದೆ

Transform :

1) ನೋಡಿದಾಗ ನಗುತ್ತಾನೆ ಅಷ್ಟೆ.

2) ಅವನನ್ನು ಬೈದಾಗ ಹೆದರ್ತಾನೆ

3) ಅವಳು ಬಾವಿಗೆ ಬಿದ್ದರೆ ಎತ್ತುತ್ತಾರೆ

4) ತೌರು ಮನೆಯವರು ಕೊಟ್ಟಾಗ ಖರ್ಚು ಮಾಡ್ತೀನಿ

b) Model : T : ನಾನು ಕೆಲಸ ಮಾಡುತ್ತಾ ಇರುವಾಗ ಬರುತ್ತಾಳೆ

S : ನಾನು ಕೆಲಸ ಮಾಡುತ್ತಾ ಇರುವಾಗ ಬಂದಳು.

Transform :

1) ಅವಳು ನಗುತ್ತಾ ಇರುವಾಗ ನಾನು ಅವಳನ್ನು ನೋಡುತ್ತೇನೆ
2) ಮಾವಿನ ಕಾಯಿಗೆ ಕಲ್ಲು ಹೊಡೆಯುತ್ತಾ ಇರುವಾಗ ಬಯ್ಯುತ್ತೇನೆ
3) ಅವಳು ಈ ದಾರಿಯಲ್ಲಿ ಬರ್ತಾ ಇರುವಾಗ ಮಾತಾಡಿಸ್ತೀನಿ

IV Expand the following sentences following the model :

Model : T : ನಾನು————————ನೋಡಿದ್ದೆ.

(ಕುತುಬ್‌ಮಿನಾರ್, ನಾಲ್ಕುವರ್ಷ, ದೆಹಲಿ, ಹಿಂದೆ, ಹೋಗು)

S : ನಾಲ್ಕು ವರ್ಷದ ಹಿಂದೆ ದೆಹಲಿಗೆ ಹೋಗಿದ್ದಾಗ ಕುತುಬ್ ಮಿನಾರ್ ನೋಡಿದ್ದೆ.

Expand :

1) ನೀವು————————ನಗ್ತೀರಾ ?

(ನೋಡು, ಯಾಕೆ, ನಮ್ಮ)

2) ಕಳ್ಳ————————ಸಿಕ್ಕಿಬಿದ್ದ.

(ತಪ್ಪಿಸಿಕೊಂಡು, ಪೋಲೀಸ್, ಓಡು, ಕೈ,)

3) ನೀವು————————ನೋಡಿ

(ಆ ಕಡೆ, ಈ ಕಡೆ, ರಸ್ತೆ, ದಾಟು)

V. Combination Drill :

Model : T : ನಾನು ಅಣ್ಣಾಮಲೈ ಯೂನಿವರ್ಸಿಟಿಯಲ್ಲಿ ಓದುತ್ತಿದ್ದೆ.

ಪ್ರೊ ಶ್ರೀನಿವಾಸ ಅಲ್ಲಿ ಇದ್ದರು.

S : ನಾನು ಅಣ್ಣಾಮಲೈ ಯೂನಿವರ್ಸಿಟಿಯಲ್ಲಿ ಓದುತ್ತಿದ್ದಾಗ ಪ್ರೊ. ಶ್ರೀನಿವಾಸ ಅಲ್ಲಿದ್ದರು.

Combine :

1) ನೀವು ನಮ್ಮೂರಿಗೆ ಬನ್ನಿ.

ಜೊತೆಯಲ್ಲಿ ಶೀಲಳನ್ನು ಕರಕೊಂಡು ಬನ್ನಿ

2) ಆನಂದ ಪಾಠ ಓದ್ತಾ ಇದ್ದ.
ಹೊರಗಡೆ ಏನೋ ಶಬ್ದ ಆಯ್ತು.

3) ಹಸು ಕಾಡಿಗೆ ಹೋಗಿತ್ತು.
ಅಲ್ಲಿ ಹುಲಿ ಅದನ್ನು ತಿಂದುಹಾಕಿತು.

4) ಅವರು ತರಗತಿಗೆ ಬರ್ತಾರೆ.
ಅವರು ಮರೆಯದೆ ನೋಟ್ಸ್ ತರ್ತಾರೆ.

5) ನಾನು ಬೇಲೂರಿಗೆ ಹೋಗಿದ್ದೆ.
ನಾನು ಶಿಲಾಬಾಲಿಕೆಯರನ್ನು ನೋಡಿದ್ದೆ.

VI. Response Drill :

1) ನೀವು ಊಟ ಮಾಡುವಾಗ ನೀರು ಕುಡಿತೀರಾ ?
2) ನೀವು ಕೆಲಸಕ್ಕೆ ಸೇರಿದಾಗ ನಿಮ್ಮ ಸಂಬಳ ಎಷ್ಟು ?
3) ನೀವು ವಿದ್ಯಾರ್ಥಿಯಾಗಿದ್ದಾಗ ಎಷ್ಟು ಸಾರಿ ಫೇಲಾಗಿದ್ದರಿ?
4) ನೀವು ಮದುವೆಯಾದಾಗ ನಿಮ್ಮ ವಯಸ್ಸು ಎಷ್ಟು ?

EXERCISES

I. Fill in the blanks by using Kannada equivalents of the English sequence given in the brackets :

1) ನೀವು ನಮ್ಮೂರಿಗೆ———ಅವರು ಹುಷಾರಾಗಿದ್ದರು. (had come)
2) ರಾಮು ಕಾಡಿಗೆ———ದಶರಥನಿಗೆ ಅಳುಬಂತು. (when (he) started)
3) ಜಯಪ್ರಕಾಶ್ ನಮ್ಮ ಮನೆಗೆ———ನಾನು ಇರಲಿಲ್ಲ.
(when (he) came)
4) ಶಾಲಿನಿ ನಂದಿನಿಯ ಜೊತೆ———ನಾನು ಅಲ್ಲಿಗೆ ಹೋದೆ.
(when (she) was quarelling)
5) ನನಗೆ———ಇಪ್ಪತ್ತೈದು ವರ್ಷ. (when (I) got married)

II Combine the following sentences using the adverbial clause 'aaga'

1) ನಾನು ಸೆಂಟ್ರಲ್ ಕಾಲೇಜಿನಲ್ಲಿ ಓದುತ್ತಿದ್ದೆ.
   ಅಲ್ಲಿ ಪ್ರೊ. ಶ್ರೀನಿವಾಸರಾವ್ ಇದ್ದರು.
2) ಅವರು ನಮ್ಮ ಊರಿಗೆ ಬಂದಿದ್ದರು.
   ಜೊತೆಯಲ್ಲಿ ಕಮಲಳನ್ನೂ ಕರೆತಂದಿದ್ದರು.
3) ರಮೇಶ ಮನೆಯಲ್ಲಿ ಊಟ ಮಾಡತ್ತಾ ಇದ್ದ.
   ಸುರೇಶ್ ಅಲ್ಲಿಗೆ ಬಂದ.
4) ನಾನು ಶಿವನಸಮುದ್ರಕ್ಕೆ ಹೋಗ್ತೀನಿ.
   ನಾನು ಕಾವೇರಿ ನದಿ ನೋಡ್ತೀನಿ.
5) ಅವರು ರಸ್ತೆ ದಾಟ್ತಾ ಇದ್ದರು.
   ಆಕ್ಸಿಡೆಂಟ್ ಆಯ್ತು

III Write a passage in 25 sentences about an incident that happened in your life.

iV Answer the following questions :

1) ಪ್ರೊ. ಶ್ರೀನಿವಾಸ್ ಯಾರು ? ಅವರು ರವಿಗೆ ಹೇಗೆ ಗೊತ್ತು ?
2) ಮಾಘುವಿಗೆ ಪ್ರೊಫೆಸರ್ ಎಲ್ಲಿ ಸಿಕ್ಕಿದ್ದರು ?
3) ರವಿ, ಮಾಘು ಪ್ರೊಫೆಸರ್ ಮನೆಗೆ ಯಾವಾಗ ಹೋಗೋಣ ಅಂತ ಮಾತಾಡಿಕೊಂಡರು ?
4) ರವಿ ಮಾಘೂಗೆ 'ಗಾಂಧಿ ಸ್ಮರಣೆ' ಯಾವಾಗ ತಂದು ಕೊಡು ಅಂತ ಕೇಳಿದರು? ಜೊತೆಗೆ ಬರುವಾಗ ಏನನ್ನು ತಗೊಂಡು ಬಾ ಅಂತ ಹೇಳಿದರು ?

VOCABULARY

ಅಪ್ಪಿತಪ್ಪಿ—by chance, some how or other

ಒತ್ತಾಯ—compulsion

ಗಾಂಧಿ ಸ್ಮರಣೆ—'Remembrance of Gandhi' collection of poems written by Chandra Shekhar Patil.

ರುಸ್ತುಮು—an addressive term after Rustum, 'great fellow'
ಸಮಾಜಶಾಸ್ತ್ರ—sociology
ಸೋದರಮಾವ—maternal uncle

GRAMMAR NOTES :

! Adverbial time clauses using verbs with the suffix-'aaga' are introduced is this lesson. 'aaga' may be added to the verb root or to the past stems. Continuous construction may be obtained by adding-'aaga' to the continuous participle plus ' iru '. The adverbial time clause used in the sense of when/ while . . . . !

ತಿನ್ನು + ಆಗ = ತಿನ್ನುವಾಗ
ತಿಂದು + ಆಗ = ತಿಂದಾಗ

Examples may be seen from the following sentences :

1) ನಾನು ಬರುವಾಗ ಪುಸ್ತಕ ತರ್ತೀನಿ.
ನಾನು ತಿಂಡಿ ತಿನ್ನುವಾಗ ನೀರು ಕುಡಿಯಲ್ಲ.

2) ನಾನು ಬರ್ತಾ ಇರುವಾಗ ದಾರಿಯಲ್ಲಿ ಐದು ಪೈಸೆ ಸಿಕ್ತು.
ನಾನು ಕಾಫಿ ಕುಡಿಯುತ್ತಾ ಇರುವಾಗ ಹಾಡು ಹೇಳ್ತೀನಿ

3) ನಾನು ನಿಮ್ಮ ಮನೆಗೆ ಬಂದಾಗ ನೀವು ಇರಲಿಲ್ಲ.
ಮಗು ಅತ್ತಾಗ ಹಾಲುಕೊಡು.

4) ನಾನು ಬೆಂಗಳೂರಿಗೆ ಬಂದಿದ್ದಾಗ ಲಾಲ್‌ಬಾಗ್ ನೋಡಿದ್ದೆ.
ಅವರು ಬೆಂಗಳೂರಿಗೆ ಕರೆದಿದ್ದಾಗ ಹೋಗಿದ್ದೆ.

5) ನಾನು ನಿನ್ನೆ ಸಿಟಿಯಿಂದ ಬರ್ತಾ ಇದ್ದಾಗ ರಾಜೂನ ನೋಡಿದೆ.
ನಾವು ಕನ್ನಡ ಕಲಿಯುತ್ತಾ ಇದ್ದಾಗ ಅವರನ್ನು ನೋಡಿದ್ದೆವು.

Note the increments employed to join the stems with the suffix are the same as those for the relative participle.

2) Note that whichever tense is employed in the adverbia clause, the tense of the entire sentence is governed by the tense of the verb in the main clause. Therefore in the following sentences the ultimate meaning is virtually the same.

1) ನಾನು ಬೆಂಗಳೂರಿಗೆ ಹೋಗ್ತಾ ಇರುವಾಗ ಸುರೇಶ್ ಸಿಕ್ಕಿದ್ದರು.

2) ನಾನು ಬೆಂಗಳೂರಿಗೆ ಹೋಗ್ತಾ ಇದ್ದಾಗ ಸುರೇಶ್ ಸಿಕ್ಕಿದ್ದರು.

UNIT 15

LESSON 50

PREPARATION TO GO TO A FAIR

DIALOGUE

ಸದಾನಂದ : ಎಲ್ಲರೂ ಹೊರಡಿ ಬೇಗ. ಈಗಾಗಲೇ ಎರಡು ಗಂಟೆ ಆಗ್ತಾ ಬಂತು. ನಾವು ಜಾತ್ರೆಗೆ ಹೋಗೋ ಹೊತ್ತಿಗೆ ತುಂಬಾ ತಡ ಆಗುತ್ತೆ.	Everybody hurry up and start. It is already nearing 2 O'clock. It will be too late by the time we reach the fair.
ಅತ್ತಿಗೆ : ಸದಾನಂದ, ಒಂದೂವರೆ ಗಂಟೆಗೆ ಮೈಸೂರಿನಿಂದ ನಿಮ್ಮ ಅಣ್ಣ ಬರ್ತೀನಿ ಅಂದಿದ್ದರು. ಬಸ್ಸಿನ	Sadananda, your elder brother had told that he would come from Mysore by 1–30.

ಹತ್ತಿರ ಯಾರಾದರೂ ಹೋಗಿದ್ದರಾ ?	Did any one go to meet him near the bus ?
ಸದಾನಂದ : ಹೌದು ಅತ್ತಿಗೆ. ಅಣ್ಣ ಬಂದರೂ ಬರಬಹುದೂಂತ ನಾನೇ ಹೋಗಿದ್ದೆ. ಆದರೆ ಅವನು ಬರಲಿಲ್ಲ. ಎಲ್ಲೋ ಮರೆತು ಕೂತಿದ್ದಾನು ? ಅವನು ಇನ್ನು ಬರೋದಿಲ್ಲ. ಬರೋಕೆ ಯಾವ ಬಸ್ಸೂ ಇಲ್ಲ.	Yes sister-in-law. Thinking that he might come I had been (there). But he didn't come Perhaps he has forgotten and is sitting around somewhere. He will not come now. There are no buses to come.
ಅತ್ತಿಗೆ : ನಾನು ಅಷ್ಟೊಂದು ಸಾರಿ ಹೇಳಿ ಬಂದಿದ್ದೆ. ಅಷ್ಟು ಹೇಳಿದ್ದರೂ ಬರಲಿಲ್ಲ ಅಂದರೆ	When I have told him so many times and still he didn't come, it means...
ಸದಾನಂದ : ಹೊರಡಿ ಅತ್ತಿಗೆ. ಬಸವ ಇನ್ನೇನು ಗಾಡಿ ಹೊಡಕೊಂಡು ಬರ್ತಾನೆ. ನಿಮ್ಮನ್ನೆಲ್ಲಾ ಕರಕೊಂಡು ಹೋಗಿ ತೋರಿಸಿಕೊಂಡು ಬರ್ತಾನೆ.	Start sister-in-law. Basava will bring the cart shortly. He will take you all and show you the fair and bring you back.
ಅತ್ತಿಗೆ : ಯಾಕೆ ನೀನು ಬರಲ್ಲವಾ ?	Why, aren't you coming ?
ಸದಾನಂದ : ನನ್ನ ಸ್ನೇಹಿತರು ಕೆಲವರು ಬಂದಿದ್ದಾರೆ. ನಾನು ಅವರ ಜೊತೆ ಮೊದಲೇ ಹೋಗ್ತೀನಿ. ನಾನು ಮೊದಲೇ ಹೋದರೂ ನೀವು ಹಣ್ಣು ಕಾಯಿ ಮಾಡಿಸುವ ಹೊತ್ತಿಗೆ ಗಾಡಿ ಹತ್ತಿರ ಬರ್ತೀನಿ.	Some of my friends have come. I will go with them in advance. Even if I go early I will come to thecart by the time you go to offer the fruit and coconut (to the deity).

ಅತ್ತಿಗೆ : ಬಸವನಿಗೆ ಎಲ್ಲಾ ಸರಿಯಾಗಿ ತೋರಿಸೋಕೆ ಹೇಳೋ.

Tell Basava to show everything properly.

ಸದಾನಂದ : ಜೊತೆಗೆ ಅಮ್ಮ ಸರಳ ಇರ್ತಾರೆ. ರಥೋತ್ಸವದ ಹೊತ್ತಿಗೆ ನಾನು ಬರ್ತೀನಿ. ಈಗ ನನ್ನ ಜೊತೆ ಶಶಿಧರನ್ನ ಕರ ಕೊಂಡು ಹೋಗ್ತೀನಿ. ಅಲ್ಲಿ ನೀವು ಬಂದಾಗ ಬೇಕಾದರೆ ನಿಮ್ಮ ಹತ್ತಿರ ಬರ್ತಾನೆ.

Mother and Sarala will pe there with you. I will come there at the time of Rathotsava. Now I will take Shashidhara with me. When you come there, if he wants he will come to you.

ಅತ್ತಿಗೆ : ಬೇಡ ಸದೂ, ಅವನು ಬಲು ತುಂಟ. ಸುಮ್ಮನೆ ಇರಲ್ಲ ನಿನಗೇನಾದರೂ ತೊಂದರೆ ಗಿಂದರೆ ಕೊಟ್ಟಾನು ?

Don't Saduu, he is very naughty. He won't keep quiet. He may trouble you.

ಸದಾನಂದ : ಹೌದು. ಕೊಟ್ಟರೂ ಕೊಟ್ಟಾನು. ಚಿಕ್ಕಹುಡುಗ ಅಲ್ವಾ ? ಹಾಗೆ ಆಡ್ತಾನೆ. ಜಾತ್ರೆಗ ಕರಕೊಂಡು ಹೋದರೆ ಬಣ್ಣ ಬಣ್ಣದ ಸಾಮಾನು, ಉತ್ಸವ ಎಲ್ಲಾ ನೋಡಿ ಸುಮ್ಮನಾದಾನು.

Yes. Perhaps he will. Isn't he a kid ? He plays like that. If I take him to fair, by seeing colourful articles and procession he may keep quiet.

ಅತ್ತಿಗೆ : ಅದು ಸರೀನಪ್ಪ, ಆದರೆ ಅವನೊಬ್ಬನೇ ನಿನ್ನ ಜೊತೆ ಬರಬೇಕಲ್ಲ. ಕೆಲವು ಸಾರಿ ರಚ್ಚೆ ಹಿಡಿದರೆ ಬಿಡಲ್ಲ.

That is right. But he has to come alone with you. Some times if he starts making fuss he won't stop.

ಸದಾನಂದ : ನನ್ನ ಜೊತೆ ಚೆನ್ನಾಗಿ ಹೊಂದಿಕೊಂಡು ಬಿಟ್ಟಿದಾನೆ

He has adjusted nicely with me sister-in-law. He is always-

ಅತ್ತಿಗೆ. ಚಿಕ್ಕಪ್ಪ ಚಿಕ್ಕಪ್ಪ ಅಂತ ಹಿಂದೇನೇ ಸುತ್ತುತ್ತಾ ಇರ್ತಾನೆ.	wandering behind me saying Uncle, Uncle.
ಅತ್ತಿಗೆ : ಸರೀನಪ್ಪ ಕರಕೊಂಡು ಹೋಗು. ಆದರೆ ಜೋಪಾನ ಎಲ್ಲಾದರೂ ಜನಸಂದಣೀಲಿ ತಪ್ಪಿಸಿಕೊಂಡು ಬಿಟ್ಟಾನು. ಏಯ್! ಶಶಿ ನಿಮ್ಮ ಚಿಕ್ಕಪ್ಪನ್ನ ಬಿಟ್ಟುಗಿಟ್ಟು ಎಲ್ಲಾದರೂ ಹೋದುಗೀದೀಯೆ ?	Allright take him. But be care- ful. He may get lost some where in the crowd. Ye! Shashi don't go anywhere leaving your uncle.
ಸದಾನಂದ : ಎಷ್ಟೊಂದು ಎಚ್ಚರಿಕೆ ಕೊಡ್ತೀಯಾ ಅತ್ತಿಗೆ. ಅವನು ತಪ್ಪಿಸಿಕೊಳ್ಳೋಕೆ ಬಿಟ್ಟೇನು ಅಂತ ಹೆದರಿಕೊಬೇಡ.	How much caution are you giv- ing sister-in-law ? Don't be afraid that I may allow him to get lost.
ಅತ್ತಿಗೆ : ಎಣ್ಣೇಲಿ ಕರಿದ ತಿಂಡಿ ಹೆಚ್ಚಾಗಿ ತಿಂದು ಆರೋಗ್ಯ ಕೆಡಿಸಿಕೊಂಡಾನು. ಆಮೇಲೆ ಸುಧಾರಿಸೋದು ಕಷ್ಟ.	He may spoil his health by eat- ing oily substances. It is diffi- cult to take care of him after- wards.
ಸದಾನಂದ : ನಿನ್ನ ಮಗನಿಗೆ ಏನೂ ಆಗದ ಹಾಗೆ ನೋಡಿ ಕೊಳ್ಳೋದು ನನ್ನ ಜವಾಬ್ದಾರಿ. ಹೀಗೇ ಮಾತಾಡ್ತಾ ಇರ್ತೀಯೋ ಹೋಗು ಅಂತ ಹೇಳ್ತೀಯೋ ?	It is my responsibility to see that nothing would happen to your son. Do you keep on talking like this or you would permit me to go ?
ಅತ್ತಿಗೆ : ಸರೀನಪ್ಪಾ ಹೋಗು, ಅವನ ಮೇಲೆ ನಿಗಾ ಇರಲಿ.	Allright go. Keep an eye on him.
ಸದಾನಂದ : ಈಗ ನೀವು ಆದಷ್ಟು ಬೇಗ ಹೊರಟು ಬನ್ನಿ. ಜನ ಜಾಸ್ತಿ	Now, you start as soon as possible. It is difficult to go

	ಬಂದರೆ ದೇವಸ್ಥಾನದ ಒಳಗೆ ಹೋಗೋದು ಕಷ್ಟ.	into the temple, if there is rush of people.
ಅತ್ತಿಗೆ :	ಸರಿ ನಾವು ಬೇಗ ಬರ್ತೀವಿ. ನೀನು ಹೊರಡು.	O. K. We will come soon. You start.

DRILLS

I Build up Drill :

a) Model : ಬಂದರೂ ಬರಬಹುದು.
ಅಣ್ಣ ಬಂದರೂ ಬರಬಹುದು.
ಬೆಂಗಳೂರಿನಿಂದ ಅಣ್ಣ ಬಂದರೂ ಬರಬಹುದು.
ನಾಳೆ ಬೆಳಿಗ್ಗೆ ಬೆಂಗಳೂರಿನಿಂದ ಅಣ್ಣ ಬಂದರೂ ಬರಬಹುದು.

Build up the following making the necessary changes wherever necessary :

1) ಪಾಸಾದರೂ ಪಾಸಾಗಬಹುದು.
2) ನೋಡಿದರೂ ನೋಡಬಹುದು.
3) ಹೋಗದೆ ಇದ್ದರೂ ಇರಬಹುದು

b) Model : ಬಂದು ಗಿಂದೀತು.
ಹೊರಗೆ ಬಂದು ಗಿಂದೀತು.
ಮನೆ ಹೊರಗೆ ಬಂದು ಗಿಂದೀತು.
ಮಗು ಮನೆ ಹೊರಗೆ ಬಂದು ಗಿಂದೀತು.

Build up the following making the necessary changes wherever necessary :

1) ಬಂದರೂ ಬಂದೇನು.
2) ಆಟ ಆಡಿಯಾರು.
3) ಕೊಟ್ಟಾಳು.

II Transformation Drill :

Model : T : ಅವನು ನನಗೆ ಹತ್ತು ರೂಪಾಯಿ ಕಳಿಸುತ್ತಾನೆ.

S : ಅವನು ನನಗೆ ಹತ್ತು ರೂಪಾಯಿ ಕಳಿಸಿಯಾನು.

Transform :

1) ಅವಳು ನನಗೆ ಕಾಗದ ಬರೆಯುತ್ತಾಳೆ.
2) ನಾಯಿ ಅವರನ್ನು ನೋಡಿ ಬೊಗಳುತ್ತದೆ.
3) ಅವರು ಸುಮ್ಮನೆ ಜಗಳ ಆಡುತ್ತಾರೆ.
4) ಅವನು ಬೆಂಗಳೂರಿನಲ್ಲಿ ನಿಮ್ಮನ್ನು ನೋಡಿದರೂ ನೋಡ್ತಾನೆ.
5) ನಾನು ಚೆನ್ನಾಗಿ ಪಾಠ ಮಾಡ್ತೀನಿ.

III Response Drill :

a) Model : T : ನೀವು ಹಬ್ಬಕ್ಕೆ ಊರಿಗೆ ಹೋಗ್ತೀರಾ ?

S : ನಾವು ಹಬ್ಬಕ್ಕೆ ಹೋದರೂ ಹೋಗ್ತೀವಿ.

Respond :

1) ನೀವು ನಾಳೆ ಹತ್ತು ಪಾಠ ಬರೀತೀರಾ ?
2) ನೀವೆಲ್ಲಾ ಇವತ್ತು ಸಾಯಂಕಾಲ ನಮ್ಮ ಮನೆಗೆ ಬರ್ತೀರಾ ?
3) ಅವರು ಕನ್ನಡ ಸಿನಿಮಾ ನೋಡ್ತಾರಾ ?

b) Model : T : ಅವನು ಜಗಳ ಆಡೋಕೆ ಹೋಗ್ತಾನಾ ?

S : ಅವನು ಜಗಳ ಆಡೋಕೆ ಹೋದಾನು

Respond :

1) ಅವಳು ಸಿನಿಮಾ ನೋಡೋಕೆ ಹೋಗ್ತಾಳೆ.
2) ನೀನು ತಪ್ಪು ತಪ್ಪು ಉತ್ತರ ಬರೀತೀಯೆ.

3) ನಾಯಿ ಇಲ್ಲಿಗೆ ಬಂದವರನ್ನು ಕಚ್ಚುತ್ತದೆ.

4) ನೀವು ಸುಮ್ಮಸುಮ್ಮನೆ ಗಲಾಟೆ ಮಾಡ್ತೀರಿ.

5) ಅವರು ನಾಳೆ ನೂರು ರೂಪಾಯಿ ಕೊಡುತ್ತಾರೆ.

EXERCISES

I Transform the following sentences into their respective probability constructions :

1) ಶೀಲ ಮದ್ರಾಸಿಗೆ ಹೋಗ್ತಾಳೆ.

2) ಮಾಧು ಈ ವರ್ಷ ಬಿ.ಎ. ಪಾಸು ಮಾಡ್ತಾನೆ.

3) ಈ ಬೆಕ್ಕು ಇಲಿ ಹಿಡಿಯುತ್ತದೆ.

4) ನಾವು ನಾಲ್ಕು ನಾಲ್ಕು ಚಪಾತಿ ತಿನ್ನುತ್ತೇವೆ.

5) ನಾನು ಆ ಪುಸ್ತಕ ನಾಲ್ಕು ದಿನದಲ್ಲಿ ಓದುತ್ತೇನೆ.

II Write the following verbs in probability construction and use them in your own sentences :

1) ಅಳು

2) ಸಿಗು

3) ಬರೆ

III Transform the following sentences into interrogative sentences by using –aa interrogative marker :

1) ನಾನು ಕಥೆ ಬರೆಯೋದು ನಿಲ್ಲಿಸಿಯೇನು.

2) ಅವನಿಂದ ಆ ಕೆಲಸ ಆದೀತು.

3) ಆ ಎತ್ತುಗಳು ಬೇಸಾಯ ಮಾಡಿಯಾವು.

4) ಅವಳು ಪರೀಕ್ಷೇಲಿ ಪಾಸಾದಾಳು.

5) ನಮ್ಮವರು ಕ್ರಿಕೆಟ್ಟಿನಲ್ಲಿ ಗೆದ್ದಾರು.

IV Translate the following letter into Kannada :

Southern Regional Language Centre
Manasagangotri,
Mysore-570 006
7-3-1977

Dear Michael,

Thank you for your interesting letter. I have read your letter again and again. It is a very long letter, with a great deal of information about your new job.

You asked me to give my house address. As you guessed I am in a new house now. Yes, I purchased a new flat in Saraswathipuram. I am very lucky. It is a small flat but very comfortable. It has two bed rooms and a hall, a small kitchen and a bath room. There isn't a dining hall.

Incidentaly yesterday was my birth day. I am twenty-eight years old today. I forgot to write to you about this in my previous letter.

Yesterday I had applied for one day leave and stayed at home to celebrate my birth day. I received many friends at my house from morning till evening. All of them greeted me with warm wishes. In the evening I had arranged a small party, inviting few of my close friends. My parents remembered you and your wife twice. Our party ended by about 11-30 p.m.

I forgot to mention that my marriage has been arranged. The marriage may be held in June. The girl is from Mysore. She is working in a college here. I will write in detail in the next letter. That is all my news. Please write again.

Convey my sincere regards to your family.

With Best wishes, yours sincerely

MADHAVA

V Answer the following questions :

1) ಸದಾನಂದ ಯಾರು ಬಂದರೂ ಬರಬಹುದು ಅಂತ ಬಸ್ಸು ಹತ್ತಿರ ಹೋಗಿದ್ದ ?
2) ಸದಾನಂದ ಯಾಕೆ ಮೊದಲೇ ಜಾತ್ರೆಗೆ ಹೊರಟ ?
3) ಶಶಿಧರನ್ನ ಕರಕೊಂಡು ಹೋಗ್ತೀನಿ ಅಂದದ್ದಕ್ಕೆ ಅತ್ತಿಗೆ ಏನು ಹೇಳಿದರು ?
4) ಜಾತ್ರೇಲಿ ಏನೇನು ನೋಡಿ ಶಶಿಧರ ಸುಮ್ಮನಾದಾನು ಅಂತ ಸದಾನಂದ ಹೇಳಿದ ?
5) ಅತ್ತಿಗೆ ಸದಾನಂದನಿಗೆ ಏನೆಂದು ಎಚ್ಚರಿಕೆ ಕೊಟ್ಟಳು ?

VOCABULARY :

ಎಚ್ಚರಿಕೆ—Caution
ಎಣ್ಣೆ—oil
ಕರಿ—to fry
ಗಾಡಿ—cart
ಜನಸಂದಣಿ—crowd
ಜಾತ್ರೆ—fair
ಜೋಪಾನ—careful
ತಪ್ಪಿಸಿಕೊಳ್ಳು—to be missing
ತುಂಟ—naughty
ನಿಗಾ—care, caution
ರಚ್ಚೆ—weeping, troubling (children)
ರಥೋತ್ಸವ—temple car festival
ಸುಧಾರಿಸು—to console, to take care of
ಹಣ್ಣುಕಾಯಿ ಮಾಡಿಸು—offer fruits and coconuts to God

GRAMMAR NOTES :

Concessive and Probability constructions are introduced in this lesson.

1. Concessive marker is –ruu. By adding –uu to the conditional form of verb concessive form can be obtained.

Ex : 1. ಅವನು ಬಂದರೂ ಬರಬಹುದು. ' he may come '

2. ಅವನು ಆಫೀಸಿನಲ್ಲಿ ಇದ್ದರೂ ಕೆಲಸ ಮಾಡಲ್ಲ.

' even though he is in the office, he will not work '

3. ಅವನು ಬಂದರೂ ಬರ್ತಾನೆ. ' he may come '

Note in sentence 1 and 3 the same verb is employed in the concessive and main clause resulting in the idiomatic meaning ' he may come. '

2. Probability construction has its own paradigm. By lengthening the vowel of the past pronominal termination the probable construction is obtained.

The structure is,

Verbal participle of verb+Probability termination

ಬಂದು + ಆನು = ಬಂದಾನು ' he may come '

ನಂಬಿ + ಏನು = ನಂಬಿಯೇನು ' I may believe '

ಅವನು ನಾಳೆ ಊರಿಂದ ಬಂದಾನು

ನಾನು ಅವನನ್ನು ನಂಬಿಯೇನು

Probability construction also gives a meaning of caution against the accomplishment of the action indicated by the verb.

ex. : ಮಗು ಬೀದಿಗೆ ಹೋದೀತು.

here the implied meaning is 'take care of the baby that it may go to street'.

Note the meaning is almost identical to the ' bahudu ' construction.

The paradigm is given below :

Person		Singular	Example	Plural	Example
I		ಏನು	ಬಂದೇನು	ಏವು	ಬಂದೇವು
II		ಈಯೆ	ಬಂದೀಯೆ	ಈರಿ	ಬಂದೀರಿ
III	mas. fem.	ಆನು ಆಳು	ಬಂದಾನು ಬಂದಾಳು	ಆರು	ಬಂದಾರು
	neut.	ಈತು	ಬಂದೀತು	ಆವು	ಬಂದಾವು

UNIT 15

Review

LESSON 15

UNIFICATION OF KARNATAKA AND ALUR VENKATARAO

NARRATION

ನಾವು ಆಡುವ ಮಾತು ಕನ್ನಡ. ಕನ್ನಡವನ್ನು ಮಾತನಾಡುವವರು ಕನ್ನಡಿಗರು. ಕನ್ನಡಿಗರ ನಾಡು ಕನ್ನಡನಾಡು.

ಕನ್ನಡ ನಾಡಿಗೆ ಬಹಳ ಹಿಂದಿನ ಕಾಲದಿಂದಲೂ ಕರ್ಣಾಟಕ ಎಂಬ ಹೆಸರಿದೆ. ಕರ್ಣಾಟಕವು ಉತ್ತರದಲ್ಲಿ ಗೋದಾವರಿ ನದಿಯಿಂದ ದಕ್ಷಿಣದಲ್ಲಿ ಕಾವೇರಿ ನದಿಯವರೆಗೆ ಹಬ್ಬಿತ್ತು. ನೃಪತುಂಗ, ಪುಲಿಕೇಶಿ, ವಿಷ್ಣುವರ್ಧನ, ಕೃಷ್ಣದೇವರಾಯ ಮುಂತಾದ ಚಕ್ರವರ್ತಿಗಳು ಈ ನಾಡನ್ನು ಆಳಿದರು. ಪಂಪ, ರನ್ನ, ಕುಮಾರವ್ಯಾಸರಂತಹ ಕವಿಗಳು ಕನ್ನಡದಲ್ಲಿ ಕಾವ್ಯ ರಚಿಸಿದರು. ಮಹಾಶಿಲ್ಪಿಗಳು ಅತ್ಯಂತ ಸುಂದರವಾದ

ದೇವಾಲಯಗಳನ್ನು ಕಟ್ಟಿಸಿದರು. ಈ ರೀತಿ ನಮ್ಮ ಕರ್ಣಾಟಕ ದೇಶವು ವೈಭವದಿಂದ ಮೆರೆಯುತ್ತಿತ್ತು.

ಈಗ್ಗೆ ಸುಮಾರು ನೂರೈವತ್ತು ವರ್ಷಗಳ ಹಿಂದೆ ಕನ್ನಡನಾಡು ಒಡೆದು ಚೂರಾಯಿತು. ಮದರಾಸಿನಲ್ಲಿ ಆಳುತ್ತಿದ್ದ ಇಂಗ್ಲೀಷರು ಹೈದರಾಬಾದಿನ ನಿಜಾಮನನ್ನು ಮಹಾರಾಷ್ಟ್ರದ ಪೇಶ್ವೆಯನ್ನೂ ಕೂಡಿಕೊಂಡು ಕನ್ನಡನಾಡನ್ನು ಆಳುತ್ತಿದ್ದ ಟಿಪ್ಪೂಸುಲ್ತಾನನನ್ನು ಕ್ರಿ.ಶ. 1799ರಲ್ಲಿ ಸೋಲಿಸಿದರು. ಅದರಿಂದ ನಮ್ಮ ನಾಡು ಒಡೆದು ಕೆಲವು ಭಾಗ ಮದ್ರಾಸ್ ಪ್ರಾಂತ್ಯಕ್ಕೂ, ಕೆಲವು ಭಾಗ ಹೈದರಾಬಾದಿನ ಅಧೀನಕ್ಕೂ ಒಳಪಟ್ಟಿತು. ಸ್ವಲ್ಪ ಭಾಗ ಮಾತ್ರ "ಮೈಸೂರು" ಎಂಬ ಹೆಸರಿನಿಂದ ಉಳಿಯಿತು. ಕನ್ನಡದ ಮಕ್ಕಳೆಲ್ಲ **ಚದುರಿ** ಹೋದರು. ಬೇರೆ ಬೇರೆ ಆಡಳಿತಕ್ಕೆ ಒಳಪಟ್ಟು ಕನ್ನಡವನ್ನು ಮರೆತರು.

ಇದಾದ ಒಂದು ನೂರು ವರ್ಷಗಳ ನಂತರ ಅಂದರೆ ಸುಮಾರು ಕ್ರಿ.ಶ. 1900ರ ವೇಳೆಗೆ ಮತ್ತೊಮ್ಮೆ ಕನ್ನಡನಾಡನ್ನು ಒಂದುಗೂಡಿಸಬೇಕು ಎಂಬ ಭಾವನೆ ಕನ್ನಡಿಗರಲ್ಲಿ ಹುಟ್ಟಿತು. ಸರ್ವಶ್ರೀ ಆಲೂರು ವೆಂಕಟರಾಯರು, ಮುದವೀಡು ಕೃಷ್ಣರಾಯರು, ಕಡಪಾ ರಾಘವೇಂದ್ರರಾಯರು, ಕಾರ್ನಾಡ ಸದಾಶಿವರಾಯರು, ಬಿ. ಎಂ. ಶ್ರೀಕಂಠಯ್ಯನವರು ಮುಂತಾದ ಮಹನೀಯರು ಈ ಕಾರ್ಯಕ್ಕಾಗಿ ಟೊಂಕಕಟ್ಟಿ ನಿಂತರು. ಅಲ್ಲಿಂದ ಸುಮಾರು ಐವತ್ತು ವರ್ಷಗಳ ಕಾಲ ಸತತವಾಗಿ ಚಳುವಳಿ ನಡೆಯಿತು. ಆದರ ಫಲವಾಗಿ ಕ್ರಿ.ಶ. 1956ರ ನವಂಬರ್ 1 ರಂದು "ಕರ್ಣಾಟಕ" ಮತ್ತೊಮ್ಮೆ ಜನ್ಮ ತಾಳಿತು.

ಈ ರೀತಿ ಒಡೆದು ಚೂರಾಗಿದ್ದ ನಾಡನ್ನು ಒಂದು ಮಾಡಲು ದುಡಿದ ಮಹನೀಯರಲ್ಲಿ ಶ್ರೀ ಆಲೂರು ವೆಂಕಟರಾಯರು ಹಿರಿಯರು ಮತ್ತು ಮೊದಲಿಗರು. ಅವರನ್ನು ಕನ್ನಡಿಗರು ಪ್ರೀತಿಯಿಂದ "ಕರ್ಣಾಟಕ ಕುಲಪುರೋಹಿತ" ಎಂದು ಕರೆದಿರುವರು.

ಆಲೂರು ವೆಂಕಟರಾಯರು ನಮ್ಮನ್ನು ಅಗಲಿ ಹೋದರೂ ಅವರ ಚೈತನ್ಯ ಎಲ್ಲ ಕನ್ನಡದ ಮಕ್ಕಳಲ್ಲಿಯೂ ತುಂಬಿ ತುಳುಕಾಡುತ್ತಿದೆ. ಮಕ್ಕಳೆಲ್ಲರೂ, ಕನ್ನಡ ಭಾಷೆಯನ್ನು ಓದಿ ಬರೆದು ಆ ಮೂಲಕ ಕನ್ನಡ ನಾಡುನುಡಿಗೆ ಸೇವೆ ಸಲ್ಲಿಸಬೇಕು. ಆಲೂರು ವೆಂಕಟರಾಯರಂತೆ ಕನ್ನಡದ ತಪಸ್ಸನ್ನು ನಡೆಸಬೇಕು. ಅವರು ಹೊತ್ತಿಸಿದ "ಕನ್ನಡ ಜ್ಯೋತಿಯನ್ನು" ಆರದಂತೆ ಕಾಪಾಡಿಕೊಂಡು, ಅದು ಜಗತ್ತಿಗೆ ಬೆಳಕು ಕೊಡುವಂತೆ ಮಾಡಬೇಕು. ಇದೇ ನಾವು ಆಲೂರರಿಗೆ ಸಲ್ಲಿಸುವ ಭಕ್ತಿಯ ಕಾಣಿಕೆ. ಇದೇ ನಾವು "ಕರ್ಣಾಟಕ ಕುಲಪುರೋಹಿತರಿಗೆ" ಸಲ್ಲಿಸುವ ಸ್ಮಾರಕ.

VOCABULARY :

ಅಗಲು—to depart

ಆಡಳಿತ—administration

ಅಧೀನ—subjuct (under the controle of)

ಒಡೆ—to break

ಒಂದುಗೂಡಿಸು—to unite

ಏಕೀಕರಣ—unification

ಕುಲಪುರೋಹಿತ—family priest

ಕಾವ್ಯ—poetry, epic

ಕಾವ್ಯ ರಚಿಸು—compose poetry

ಚದುರು—to scatter

ಚಳುವಳಿ—agitation

ಚಕ್ರವರ್ತಿ—emperor

ಚೈತನ್ಯ—zeal

ಟೊಂಕ—waist

ತುಳುಕಾಡು—to overflow

ದುಡಿ—to work

ನದಿ—river

ಭಾವನೆ—feeling

ಮಹನೀಯರು—gentlemen

ಮುಂತಾದ—and the like, et cerital

ಸತತವಾಗಿ—continuously

ಸ್ಮಾರಕ—memorial

ಸೇವೆ ಸಲ್ಲಿಸು—to render service

ಹಬ್ಬು—to range, to expand

ಹಿಂದಿನ ಕಾಲ—ancient time

TEST PAPER

Answer the following questions by ticking the correct answer from among the given choices :

1. ಕನ್ನಡಿಗರ ದೇಶದ ಹೆಸರು

   ಅ) ಉತ್ತರ ಕರ್ನಾಟಕ
   ಇ) ಮೈಸೂರು
   ಉ) ಕರ್ನಾಟಕ
   ಎ) ಹೈದರಾಬಾದು ಕರ್ನಾಟಕ.

2. ಕನ್ನಡಿಗರು ಕನ್ನಡವನ್ನು ಮರೆತದ್ದು ಏಕೆಂದರೆ :

   ಅ) ಕನ್ನಡನಾಡಿನ ಕೆಲಭಾಗ ಹೈದರಾಬಾದಿಗೆ ಹೋದದ್ದರಿಂದ
   ಇ) ಕೆಲಭಾಗ ಮದ್ರಾಸಿಗೆ ಹೋದದ್ದರಿಂದ
   ಉ) ಕೆಲಭಾಗ ಮೈಸೂರಿಗೆ ಉಳಿದಿದ್ದರಿಂದ
   ಎ) ಕನ್ನಡದ ಮಕ್ಕಳೆಲ್ಲ ಚದುರಿಹೋದದ್ದರಿಂದ.

3. ಕರ್ನಾಟಕ ಜನ್ಮ ತಾಳಿದ್ದು :

   ಅ) 1956ರಲ್ಲಿ
   ಇ) 1900ರಲ್ಲಿ
   ಉ) 1799ರಲ್ಲಿ
   ಎ) 1957ರಲ್ಲಿ

4. ಕೆಳಗಿನವರುಗಳಲ್ಲಿ ಯಾರು ಚಕ್ರವರ್ತಿಗಳಲ್ಲ :

   ಅ) ನೃಪತುಂಗ
   ಇ) ಪುಲಿಕೇಶಿ
   ಉ) ರನ್ನ
   ಎ) ವಿಷ್ಣುವರ್ಧನ.

5. ಕೆಳಗಿನವರುಗಳಲ್ಲಿ ಯಾರು ಕವಿಗಳಲ್ಲ :

ಅ) ಪಂಪ

ಇ) ರನ್ನ

ಉ) ಕುಮಾರವ್ಯಾಸ

ಎ) ಪುಲಿಕೇಶಿ.

6. ಕನ್ನಡ ನಾಡಿನ ಏಕೀಕರಣ ಸಂಬಂಧವಲ್ಲಿ ಕೆಳಗಿನ ಘಟನೆಳಲ್ಲಿ ಮೊದಲು ನಡೆದದ್ದು .

ಅ) ಏಕೀಕರಣ ಚಳುವಳಿ

ಅ) ಟಿಪ್ಪುವಿನ ಸೋಲು

ಉ) ಆಲೂರು ವೆಂಕಟರಾಯರ ಪ್ರಯತ್ನ

ಎ) ಬಿ. ಎಂ. ಶ್ರೀಕಂಠಯ್ಯನವರ ಪ್ರಯತ್ನ

7. ಕರ್ಣಾಟಕವು ಕಾವೇರಿಯಿಂದ ಗೋದಾವರಿಯವರೆಗೆ :

ಅ) ಈಗಲೂ ಇದೆ

ಇ) ಹಿಂದೆ ಇತ್ತು

ಉ) ಎಂದೂ ಇದ್ದಿಲ್ಲ

ಎ) ಎಂದೂ ಆಗಲ್ಲ

8. ಟಿಪ್ಪುವು ಸೋತದ್ದು :

ಅ) ಫ್ರೆಂಚರಿಂದ

ಇ) ಪೇಶ್ವೆಯಿಂದ

ಉ) ನಿಜಾಮನಿಂದ

ಎ) ಇಂಗ್ಲೀಷರು ನಿಜಾಮನನ್ನು ಪೇಶ್ವೆಯವರನ್ನು ಕೂಡಿದ್ದರಿಂದ

9. ಆಲೂರು ವೆಂಕಟರಾಯರ ಹೆಸರಿಗೆ ತಕ್ಕ ಸ್ಮಾರಕ :

ಅ) ಒಂದು ದೇವಸ್ಥಾನ ಕಟ್ಟಿಸುವುದು

ಇ) ಅವರ ಬಗ್ಗೆ ಕಾವ್ಯರಚನೆ

ಉ) ಭಾಷಣ ಮಾಲೆಯ ಏರ್ಪಾಡು

ಎ) ಕನ್ನಡಕ್ಕಾಗಿ ತಪಸ್ಸು ಮಾಡುವುದು

10. ಆಲೂರು ವೆಂಕಟರಾಯರು ನಮ್ಮನ್ನಗಲಿ ಹೋದದ್ದರಿಂದ

ಅ) ಕನ್ನಡ ಜ್ಯೋತಿ ನಂದಿಲ್ಲ

ಇ) ಎಲ್ಲ ಕನ್ನಡ ಕಾರ್ಯ ನಿಂತಿದೆ

ಉ) ಕನ್ನಡ ಮಕ್ಕಳಲ್ಲಿ ಚೈತನ್ಯ ಉಳಿದಿದೆ

ಎ) ಬರೀ ಭಾಷಣಗಳು ನಡೆದಿವೆ

11. " ಟೊಂಕ ಕಟ್ಟುವುದು " ಎಂದರೆ :

ಅ) ಟೊಂಕಕ್ಕೆ ಹಗ್ಗ ಕಟ್ಟುವುದು

ಇ) ಮುಲಾಮು ಹಚ್ಚುವುದು

ಉ) ಕೆಲಸಕ್ಕೆ ಸಿದ್ಧವಾಗುವುದು

ಎ) ಮಲಗಿಕೊಳ್ಳುವುದು

12. " ಕರ್ನಾಟಕ ಕುಲಪುರೋಹಿತರು " ಎಂದರೆ

ಅ) ಕನ್ನಡ ನಾಡಿನಲ್ಲಿ ಮದುವೆ ಮಾಡಿಸುವವ

ಇ) ಕನ್ನಡ ನಾಡಿನ ಜನರಿಗೆ ಹಿತಬಯಸುವವ

ಉ) ಕನಡ ನಾಡಿನ ದೇವಾಯಲಗಳ ವ್ಯವಸ್ಥಾಪಕ

ಎ) ಕನ್ನಡ ನಾಡಿನ ಪ್ರಸಿದ್ಧ ಪುರೋಹಿತ

13. "ಕರ್ನಾಟಕ ಕುಲಪುರೋಹಿತ" ಎಂದು ಯಾರಿಗೆ ಹೆಸರು ?

ಅ) ಮುದವೀಡು ಕೃಷ್ಣರಾಯರು

ಇ) ಆಲೂರು ವೆಂಕಟರಾಯರು

ಉ) ಬಿ. ಎಂ. ಶ್ರೀಕಂಠಯ್ಯನವರು

ಎ) ಕಾರ್ನಾಡು ಸದಾಶಿವರಾಯರು

OBJECTIVE TEST PAPER

Max. Marks : 100
Time : 1-30 hrs.

I Encircle the word which does not belong to the group :

1) ಸೊಪ್ಪು
ಹುರುಳಿ ಕಾಯಿ
ಇರುವಂತಿಗೆ
ಕೋಸು
ಬದನೆಕಾಯಿ

2) ಕಪ್ಪು
ಹಳದಿ
ಹಸಿರು
ಬೆಳಕು
ಕೆಂಪು

3) ಕೆಟ್ಟ
ದೊಡ್ಡ
ಜೋರು
ಚಿಕ್ಕ
ಸಣ್ಣ

4) ಕೆಳಗೆ
ಅಡಿಗೆ
ಮೇಲೆ
ಒಳಗೆ
ಹೊರಗೆ

5) ಅವನು
ನಾವು
ಅವಳು
ಅವು
ಅವರು

5

II. Encircle the correct plural form :

1) ಸ್ತ್ರೀಯರು, ಸ್ತ್ರೀಗಳು
2) ತಮ್ಮರು, ತಮ್ಮಂದಿರು
3) ವಿದ್ಯಾರ್ಥಿಗಳು, ವಿದ್ಯಾರ್ಥಿಯರು
4) ಮಕ್ಕಳುಗಳು, ಮಕ್ಕಳು
5) ಸೊಸೆಯಂದಿರು, ಸೊಸೆಗಳು.

5

III. Give one word for each of the following :

1) ಅಕ್ಕನ ಗಂಡ ....
2) ತಂದೆಯ ತಮ್ಮ ....
3) ಮಗಳ ಗಂಡ ....

4) ಮಗನ ಹೆಂಡತಿ ....

5) ತಂದೆಯ ಅಣ್ಣ ....

6) ಮಗನ ಮಗ ....

7) ಹೆಂಡತಿಯ ತಾಯಿ ....

8) ಗಂಡನ ತಮ್ಮ ....

9) ತಾಯಿಯ ತಮ್ಮ ....

10) ಅಳಿಯನ ತಂದೆ ತಾಯಿಗಳು 10

IV. Encircle the correct numeral given in the right hand side :

1. ಒಂಭೈನೂರಾ ತೊಂಭತ್ತೊಂಭತ್ತು	990, 909, 999, 99	
2. ನಾಲ್ಕು ಸಾವಿರದ ಇನ್ನೂರೆಂಟು	4108, 4008, 4708, 4208	
3. ನಲವತ್ನಾಲ್ಕು	44, 404, 444, 4444	
4. ಮೂನ್ನೂರಾಮೂವತ್ತೇಳು	307, 337, 3037, 37	
5. ಮುಕ್ಕಾಲು	$\frac{1}{2}$, $\frac{1}{4}$, $\frac{3}{4}$, $1\frac{3}{4}$	5

V. Tick the appropriate answer from among the given forms, to fill the gap.

1) ರಾಮು ಸೀತೆ ಬೇಕು ಎಂದು .... ಕೇಳಿದ

ಅ) ರಾವಣನಿಗೆ

ಇ) ರಾವಣನನ್ನು

ಉ) ರಾವಣನ

2) ಲೀಲಾ .... ಒಂದು ಪೆನ್ನು ತಂದಿದ್ದಾಳೆ

ಅ) ನನಗೆ

ಇ) ನನ್ನ

ಉ) ನನ್ನನ್ನು

3) ಈ ತರಕಾರಿಯನ್ನು .... ತಂದೆ

ಅ) ಅಂಗಡಿಯಲ್ಲಿ

ಇ) ಅಂಗಡಿಗೆ

ಉ) ಅಂಗಡಿಯಿಂದ

4) .... ಮಗ ಸಂಜಯಗಾಂಧಿ

ಅ) ಇಂದಿರಾಗಾಂಧಿಗೆ

ಇ) ಇಂದಿರಾಗಾಂಧಿಯ

ಉ) ಇಂದಿರಾಗಾಂಧಿಯು

5) ನಮ್ಮ .... ಇಬ್ಬರು ಆಳುಗಳಿದ್ದಾರೆ

ಅ) ಮನೆಗೆ

ಇ) ಮನೆಯು

ಉ) ಮನೆಯಲ್ಲಿ

6) .... ಈಗ ಮನೆಗೆ ಹೋಗಬೇಕು

ಅ) ನನಗೆ

ಇ) ನಾನು

ಉ) ನನ್ನ

7) ಬಸ್ಸು [illegible] .... [illegible] ಇದೆ

ಅ) [illegible]

ಇ) ಕೆಳಗೆ

ಉ) [illegible]

8) ಅವರ ಹೆಸರು .... ?

ಅ) ಯಾರು

ಇ) ಏನು

ಉ) ಯಾವುದು

9) ಮಲ್ಲಿಕಾರ್ಜುನನದು .... ಮನೆ ?

ಅ) ಎಂತಹ

ಇ) ಏನು

ಉ) ಏಕೆ

10) ನಾವು ಮನೆಗೆ ಹೋಗುವುದು ಇನ್ನೂ ತಡ ....

ಅ) ಆಗಲಿ

ಇ) ಆಗುತ್ತದೆ

ಉ) ಆಗುವುದೇ

11) ತಾವು ಇಷ್ಟ ಬಂದಾಗ ಮನೆಗೆ ....

ಅ) ಬರಬೇಕು

ಇ) ಬರಲಾ

ಉ) ಬರಲಿ

12) ಕೃಷ್ಣಮೂರ್ತಿಯ ಮನೆಯಲ್ಲಿ .... ಜವಾನರಿದ್ದಾರೆ.

ಅ) ಇಬ್ಬರು

ಇ) ಎರಡು

ಉ) ಎರಡೇ

★

13) ಇಲ್ಲಿ ಬರುವುದಕ್ಕಿಂತ .... ನಾನು ಬೆಂಗಳೂರಿನಲ್ಲಿದ್ದೆ

ಅ) ಮುಂಚೆ

ಇ) ಮುಂದೆ

ಉ) ಅನಂತರ

14) ಕಮಲ ನಿನ್ನೆ ಚೆನ್ನಾಗಿ ....

ಅ) ಹಾಡುತ್ತಾಳೆ

ಇ) ಹಾಡುವಳು

ಉ) ಹಾಡಿದಳು

15) ನಾನು ಬರುವವರೆಗೂ ನೀನು ಏಕೆ .... ?

ಅ) ಕಾದಿದ್ದೆ

ಇ) ಕಾದಿರುವೆಯಾ

ಉ) ಕಾದಿರು

16) ಅವರು .... ಕಥೆ ಚೆನ್ನಾಗಿರಲ್ಲ

ಅ) ಹೇಳಿದ

ಇ) ಹೇಳುವ

ಉ) ಹೇಳದ

17) ರಾಮು .... ಹಣ ಕೊಡುತ್ತೇನೆ

ಅ) ಬರಲಿ

ಇ) ಬಂದು

ಉ) ಬಂದರೆ

18) ಗೋಪಾಲ ಇನ್ನೂ ತನ್ನ ಹೆಂಡತಿಗೆ ಪತ್ರ ....

ಅ) ಬ ದಿಲ್ಲ

ಇ) ಬರೆಯಲಿಲ್ಲ

ಉ) ಬರೆಯಲ್ಲ

19) ಶಶಿಧರ ತನ್ನ ಬಟ್ಟೆ ಆಳಿನ ಕೈಲಿ ....

ಅ) ಒಗೆದುಕೊಳ್ತಾನೆ

ಇ) ಒಗೆಸಿಕೊಳ್ತಾನೆ

ಉ) ಒಗೆಯುತ್ತಾನೆ

20) ಶ್ರೀನಿವಾಸ .... ಭಾಷೆ ಯಾವುದೂ ಇಲ್ಲ

ಅ) ಮಾತನಾಡದ

ಇ) ಮಾತನಾಡುವ

ಉ) ಮಾತನಾಡುತ್ತ ಇರುವ

21) ನಾವು ಮೋಹನನ ಮನೆಗೆ ಹೋದಾಗ ಲೇಟಾಗಿತ್ತು ಆದ್ದರಿಂದ ಅವನನ್ನು.........
....

ಅ) ನೋಡೋಕೆ ಆಗಿಲ್ಲ

ಇ) ನೋಡೋಕೆ ಆಗಲಿಲ್ಲ

ಉ) ನೋಡೋಕೆ ಆಗಿರಲಿಲ್ಲ

22) ನಾವು ಸಿನಿಮಾಕ್ಕೆ ಹೋದಾಗ ನನ್ನ ತಮ್ಮ ಇದೇ ಮೊದಲು ನಾವು ಇಲ್ಲಿಗೆ ......
.... ಅಂತ

ಅ) ಹೋಗ್ತಾ ಇರೋದು

ಇ) ನೋಡ್ತಾ ಇರೋದು

ಉ) ಬರ್ತಾ ಇರೋದು

23) ಪಾಪ ರಾಮಜ್ಜ ಸತ್ತುಹೋದರಂತೆ. ಅವರು ನಮ್ಮನ್ನು ನೋಡೋಕೆ ಬರು ವಾಗಲೆಲ್ಲಾ ಏನಾದರೂ ....

ಅ) ತರ್ತಿದ್ದರು

ಇ) ತಂದಿದ್ದರು

ಉ) ತರ್ತಿದ್ದಾರೆ

24) ಅವಳಿಗೆ ಏನು ಬೇಕಿತ್ತು ? ಅವಳಿಗೆ ಏನು ....

ಅ) ಬೇಕು ಗೊತ್ತಿಲ್ಲ

ಇ) ಬೇಕಿತ್ತು ಗೊತ್ತಿಲ್ಲ

ಉ) ಬೇಕಾಗಿದೆ ಗೊತ್ತಿಲ್ಲ

25) ಇವತ್ತೆಲ್ಲಾ .... ಕ್ರಿಕೆಟ್ ಆಟ ನಡೆಯುತ್ತೆ

ಅ) ಮಳೆ ಬಿದ್ದರೆ

ಇ) ಮಳೆ ಬೀಳ್ತಾ ಇದ್ದರೆ

ಉ) ಮಳೆ ಬೀಳದೆ ಇದ್ದರೆ

26) ನೀವು ಈ ಪುಸ್ತಕ ಓದಿ ನಿಜವಾಗಿಯೂ ಖುಷಿ ....

ಅ) ಕೊಡ್ತೀರಿ

ಇ) ಪಡ್ತೀರಿ

ಉ) ಬಿಡ್ತೀರಿ

27) ಶೀಲಾ ನಾಳಿದ್ದು ಬಂದೇ ....

ಅ) ಬರ್ತಾಳೆ

ಇ) ಬಂದಳು

ಉ) ಬರ್ತಿದಾಳೆ

28) ಅವಳು ತನ್ನ ತಲೆಯನ್ನು ....

ಅ) ಬಾಚಿದಳು

ಇ) ಬಾಚಿಕೊಂಡಳು

ಉ) ಬಾಚಿಸಿದಳು

29) ಇಂಥ ಕೆಲಸ ನಿಮ್ಮಂತಹವರು .... ?

ಅ) ಮಾಡುವುದಿಲ್ಲ

ಇ) ಮಾಡುವುದಲ್ಲ

ಉ) ಮಾಡುವುದೇ

30) ಆ ತರಗತಿಗೆ ಹೋಗದಿದ್ದರೆ .... ?

ಅ) ಎಂಬಂತೆ

ಇ) ಎಂದಂತೆ

ಉ) ಏನಂತೆ 30

VI. Tick the correct item from among the given pair of words, so that it will make a full sentence.

1. ಇವನು ಅಗಸ ಏಕೆಂದರೆ ಇವನು ....

ಅ) ಬಟ್ಟೆ ಮಾರುತ್ತಾನೆ

ಇ) ಬಟ್ಟೆ ಹೊಲಿಯುತ್ತಾನೆ

ಉ) ಬಟ್ಟೆ ಒಗೆಯುತ್ತಾನೆ

2. ಇವರು ವೈದ್ಯರು. ಏಕೆಂದರೆ ಇವರು........

ಅ) ಔಷಧಿ ಕುಡಿಯುತ್ತಾರೆ

ಇ) ಔಷಧಿ ಕೊಡುತ್ತಾರೆ

ಉ) ಔಷಧಿ ಮಾಡುತ್ತಾರೆ

3. ಅವನು ಹಣ್ಣಿನ ವ್ಯಾಪಾರಿ. ಏಕೆಂದರೆ ಅವನು....................

ಅ) ಹಣ್ಣು ತಿನ್ನುತ್ತಾನೆ.

ಇ) ಹಣ್ಣು ಕೊಳ್ಳುತ್ತಾನೆ

ಉ) ಹಣ್ಣು ಮಾರುತ್ತಾನೆ.

4. ಇವರು ಉಪಾಧ್ಯಾಯರು. ಏಕೆಂದರೆ ಇವರು ....

ಅ) ಪಾಠ ಕಲಿಸುತ್ತಾರೆ.

ಆ) ಪಾಠ ಕಲಿಯುತ್ತಾರೆ.

ಉ) ಪಾಠ ಬರೆಯುತ್ತಾರೆ.

5. ಅವನು ದರ್ಜಿ. ಏಕೆಂದರೆ ಅವನು ....

ಅ) ಬಟ್ಟೆ ನೇಯುತ್ತಾನೆ.

ಇ) ಬಟ್ಟೆ ಹೊಲಿಯುತ್ತಾನೆ.

ಉ) ಬಟ್ಟೆ ಒಗೆಯುತ್ತಾನೆ.

6. ಇವನು ಬೇಸಾಯ ಮಾಡುತ್ತಾನೆ. ಆದ್ದರಿಂದ ಅವನು ....

ಅ) ಬೇಹುಗಾರ

ಇ) ಬೇಸಾಯಗಾರ

ಉ) ಬೇಟೆಗಾರ

7. ಇವನು ಚಪ್ಪಲಿ ಹೊಲಿಯುತ್ತಾನೆ. ಆದ್ದರಿಂದ ಇವನು ....

ಅ) ಚಮ್ಮಾರ

ಇ) ಕಮ್ಮಾರ

ಉ) ಹಮ್ಮೀರ

8. ಅವರು ಮಡಕೆ ಮಾಡುತ್ತಾರೆ. ಆದ್ದರಿಂದ ಅವರು ....

ಅ) ಕಂಬಾರರು

ಇ) ಕುಂಬಾರರು

ಉ) ಕಮ್ಮಾರರು

9. ಅವನು ಚಿನ್ನದ ಕೆಲಸ ಮಾಡುತ್ತಾನೆ. ಆದ್ದರಿಂದ ಅವನು...........

ಅ) ಟಂಕಸಾಲೆ

ಇ) ಧರ್ಮಸಾಳಿ

ಉ) ಅಕ್ಕಸಾಲಿ

10. ಅವನು ಮರದ ಕೆಲಸ ಮಾಡುತ್ತಾನೆ. ಆದ್ದರಿಂದ ಅವನು ....

ಅ) ಅಗಸ

ಇ) ಬಡಗಿ

ಉ) ನೇಕಾರ

VI Tick the item among the given choices which correctly explains the test sentence :

1. ನಾನು ದುಡ್ಡು ಕೊಡದೆ ಟಿಕೆಟ್ ತೆಗೆದುಕೊಳ್ಳಲಿಲ್ಲ.

ಅ) ದುಡ್ಡು ಕೊಟ್ಟು ಟಿಕೆಟ್ ತೆಗೆದುಕೊಂಡೆ.

ಇ) ದುಡ್ಡು ಕೊಡದೆ ಟಿಕೆಟ್ ತೆಗೆದುಕೊಂಡೆ.

ಉ) ದುಡ್ಡು ಕೊಟ್ಟೆ ಟಿಕೆಟ್ ತೆಗೆದುಕೊಳ್ಳಲಿಲ್ಲ.

2. ನಾವು ಇಲ್ಲಿ ವರ್ಷಗಟ್ಟಲೆ ಕನ್ನಡ ಕಲಿಯಲ್ಲ.

ಅ) ವರ್ಷವೆಲ್ಲ ಕಲಿಯಲ್ಲ

ಇ) ಹಲವಾರು ವರ್ಷ ಕಲಿಯಲ್ಲ

ಉ) ಒಂದು ವರ್ಷ ಕಲಿಯಲ್ಲ

3. ನೀನು ಅವನನ್ನು ಮನೆಯಿಂದ ಆಚೆ ಬಿಟ್ಟೀಯೇ !

ಅ) ಅವನನ್ನು ಆಚೆ ಬಿಡಬೇಡ

ಇ) ಅವನನ್ನು ಆಚೆ ಬಿಡ್ತೀಯೆ

ಉ) ಅವನನ್ನು ಆಚೆ ಬಿಟ್ಟಿ

4. ಸಿಗರೇಟ್ ಸೇದೋದು ನನಗೆ ಚಟ ಅಲ್ಲ. ಖುಷಿ ಅಷ್ಟೆ.

ಅ) ನನಗೆ ಅಭ್ಯಾಸ

ಇ) ನನಗೆ ಬೇಸರ

ಉ) ನನಗೆ ಸಂತೋಷ

5. ನಮಗೆ ನಿಮ್ಮ ಪಾಠ ಕೇಳುವುದು ಸುತರಾಂ ಇಷ್ಟ ಇಲ್ಲ.

ಅ) ಸ್ವಲ್ಪ ಇಷ್ಟ ಇಲ್ಲ.

ಇ) ಸ್ವಲ್ಪಾನೂ ಇಷ್ಟ ಇಲ್ಲ.

ಉ) ಇಷ್ಟ ಇಲ್ಲ.

6. ಅವರು ಪ್ರತಿದಿನಾ ಸಾಯಂಕಾಲ ಏಳುಗಂಟೆಗೇ ಊಟದ ಶಾಸ್ತ್ರ ಮಾಡ್ತಾರೆ.

ಅ) ಊಟಕ್ಕೆ ಶಾಸ್ತ್ರ ಮಾಡ್ತಾರೆ.

ಇ) ಊಟದಿಂದ ಶಾಸ್ತ್ರ ಮಾಡ್ತಾರೆ.

ಉ) ಊಟ ಮಾಡ್ತಾರೆ.

7 ಹೊಸ ಭಾಷೆ ಕಲಿಯುವವರು ಯಾರೂ ತಪ್ಪು ಮಾಡದೆ ಇರಲ್ಲ.

ಅ) ತಪ್ಪು ಮಾಡೇ ಮಾಡ್ತಾರೆ

ಇ) ತಪ್ಪು ಮಾಡಲ್ಲ

ಉ) ತಪ್ಪು ಮಾಡಲಾರರು

8 ಅವನು ನನಗಿಂತ ದಡ್ಡ

ಅ) ಅವನು ನನಗಿಂತ ಬುದ್ಧಿವಂತ

ಇ) ನಾನು ಅವನಿಗಿಂತ ಬುದ್ಧಿಶಾಲಿ

ಉ) ಇಬ್ಬರೂ ದಡ್ಡರು

9. ಅವರ ಕೈಲಿ ಆದಷ್ಟು ಕನ್ನಡ ಕಲಿತರು.

ಅ) ಕೈಗೆ ಸಿಕ್ಕಿದಷ್ಟನ್ನು

ಇ) ಇಷ್ಟ ಬಂದಷ್ಟನ್ನು

ಉ) ಸಾಧ್ಯವಾದಷ್ಟನ್ನು

10. ನೀನು ಕರೆದ ಎಂದ ಮೇಲೆ ಅವನು ಬರದೆ ಇರಲಾರ.

ಅ) ಬರಲಾರ

ಇ) ಬಂದೇ ಬರುತ್ತಾನೆ.

ಉ) ಬಂದ

11. ಈ ಸಾರಿ ಕ್ರಿಕೆಟ್ ಆಟದಲ್ಲಿ ಇಂಗ್ಲೆಂಡಿನವರು ಗೆದ್ದಂತೆಯೇ ಸರಿ.

ಅ) ಅವರು ಆಟದಲ್ಲಿ ಗೆದ್ದರು

ಇ) ಅವರು ಆಟದಲ್ಲಿ ಗೆಲ್ಲಲೇಬೇಕು

ಉ) ಅವರು ಗೆಲ್ಲುವುದು ಖಚಿತ

12. ನಮ್ಮಮ್ಮನ ಕೈ ರುಚೀನೇ ಹಾಗೆ, ಎಲ್ಲರಿಗೂ ಇಷ್ಟ

ಅ) ನಮ್ಮಮ್ಮನ ಕೈ ರುಚಿಯಾಗಿರುತ್ತೆ

ಇ) ನಮ್ಮಮ್ಮನ ಕೈ ಸಿಹಿಯಾಗಿರುತ್ತೆ

ಉ) ನಮ್ಮಮ್ಮನ ಕೈ ಅಡಿಗೆ ಚೆನ್ನಾಗಿರುತ್ತೆ

13. ಆಡು ಮುಟ್ಟದ ಸೊಪ್ಪು ಇಲ್ಲ ಅನ್ನುವ ಹಾಗೆ ಅವನು ಮಾಡದ ಕೆಲಸ ಇಲ್ಲ.

ಅ) ಅವನು ಕೆಲಸಾನೇ ಮಾಡೋದಿಲ್ಲ

ಇ) ಅವನು ಯಾವ ಕೆಲಸಾನೂ ಬಿಡೋದಿಲ್ಲ

ಉ) ಅವನಿಂದ ಕೆಲಸ ಮಾಡೋಕೆ ಆಗಲ್ಲ.

14. ಬ್ಯಾಂಕಿನಲ್ಲಿ ಹಣ ಕಟ್ಟಿದರೆ ಡ್ರಾಫ್ಟ್ ಕೊಡ್ತಾರೆ.

ಅ) ಬ್ಯಾಂಕಿಗೆ ಹಣ ಕಟ್ಟಬೇಕು ಆಗ ಹಣ ಕೊಡ್ತಾರೆ

ಇ) ಬ್ಯಾಂಕಿನಲ್ಲಿ ಡ್ರಾಫ್ಟ್ ಕೊಟ್ಟರೆ ಹಣ ಕೊಡ್ತಾರೆ

ಉ) ಬ್ಯಾಂಕಿನಲ್ಲಿ ಹಣ ಕೊಟ್ಟರೆ ಡ್ರಾಫ್ಟ್ ಕೊಡ್ತಾರೆ

15. ಮಕ್ಕಳು ಅಳದೆ ಇದ್ದರೆ ಹಾಲು ಕೊಡಬಾರದು

ಅ) ಮಕ್ಕಳು ಅತ್ತರೆ ಹಾಲು ಕೊಡಬಾರದು

ಇ) ಮಕ್ಕಳು ಅತ್ತರೆ ಹಾಲು ಕೊಡಬೇಕು

ಉ) ಮಕ್ಕಳು ಅಳದೆ ಇದ್ದರೂ ಹಾಲು ಕೊಡಬೇಕು.

VII Tick the correct opposite form :

1. ಹೋಗು × ....

ಅ) ನಿಲ್ಲು

ಇ) ಬಾ

ಉ) ನಡಿ

2 ಕಪ್ಪು × ....

ಅ) ಹಳದಿ

ಇ) ಬಿಳುಪು

ಉ) ಹಸಿರು

3. ಇದೆ × ....

ಅ) ಇವೆ

ಇ) ಇರುತ್ತೆ

ಉ) ಇಲ್ಲ

4. ಪೂರ್ವ × ....

ಅ) ಉತ್ತರ

ಇ) ದಕ್ಷಿಣ

ಉ) ಪಶ್ಚಿಮ

5. ಹಗಲು × ....

ಅ) ರಾತ್ರಿ

ಇ) ಮಧ್ಯಾಹ್ನ

ಉ) ಸಾಯಂಕಾಲ

6. ಸುಖ × ....

ಅ) ಸಂತೋಷ

ಇ) ದುಃಖ

ಉ) ಅನುಭವ

7. ನಗು × ....

ಅ) ಅನ್ನ

ಇ) ಅಳು

ಉ) ಆಡು

8) ಪಾಪ × ....

ಅ) ಸುಖ

ಇ) ಪುಣ್ಯ

ಉ) ಭಕ್ತಿ

9. ಅಗ್ಗ × ....

ಅ) ದುಬಾರಿ

ಇ) ಬೆಲೆ

ಉ) ಖರ್ಚು

10. ಹಲವು × ....

ಅ) ಹೆಚ್ಚು

ಇ) ತುಂಬಾ

ಉ) ಕೆಲವು

11. ಬಡವ × ....

ಅ) ಹಳ್ಳಿಯವ

ಈ) ಧನಿಕ

ಪೊ) ಸುಸಂಸ್ಕೃತ

12. ತುಂಬಾ × ....

ಅ) ತೀರಾ

ಇ) ಸ್ವಲ್ಪ

ಉ) ಬಹಳ

13. [illegible] × ....

ಅ) [illegible]

ಇ) [illegible]

[illegible]

14. ಜೋರಾಗಿ × ....

ಅ) ಸಿಧಾನವಾಗಿ

ಇ) ಚೆನ್ನಾಗಿ

ಉ) ಒರಟೊರಟಾಗಿ

15. ಒಳ್ಳೆಯ × ....

ಅ) ಸಾಧು

ಇ) ಕೆಟ್ಟ

ಉ) ಕ್ರೂರ

15

IX. Match the following. Write appropriate number in the given bracket :

1. ಅಡಿಗೆ	(	)	1. ಬರೆಯುತ್ತೇನೆ
2. ಬಟ್ಟೆ	(	)	2. ಹೇಳುತ್ತೇನೆ
3. ಕಾಫಿ	(	)	3. ಒಗೆಯುತ್ತೇನೆ
4. ಉತ್ತರ	(	)	4. ಮಾಡುತ್ತೇನೆ
5. ಕುಡಿಯುತ್ತೇನೆ	(	)	5. ಕಾಗದ

STRUCTURE-TEST PAPER

Time : 3 hrs. *Max Marks 100*

I. Fill in the blanks using the appropriate adverbs :

1. ನೀವು .... ಊಟಮಾಡಿ
2. ನೀವು ಬಸ್‌ಸ್ಟ್ಯಾಂಡಿಗೆ .... ಹೋಗಿ
3. ಅವರು .... ಓದುತ್ತಾರೆ
4. ನಾನು .... ನಡೀತೀನಿ
5. ನೀನು ಅಕ್ಷರ .... ಬರೆಯುತ್ತೀಯೆ 5

II. Complete the sentences with **imperative**, permissive and hortative forms of the verbs given in the **brackets** :

1. ರಾಮು ನೀವು ಹಣ್ಣು .... (ತಿನ್ನು)
2. ಅವಳು ಈಗ ಒಳಗೆ .... (ಬಾ)
3. ನಾಯಿ ಹಾಲು .... (ಕುಡಿ)
4. ನಾವು ಆ ಕೆಲಸ .... (ಮಾಡು)
5. ನಾನು ಇವತ್ತು ಊರಿಗೆ .... (ಹೋಗು) 5

III. a) Write as directed :

1. ಮೈಸೂರು ಪಟ್ಟಣ ಚಿಕ್ಕದು
   ಬೆಂಗಳೂರು ಪಟ್ಟಣ ದೊಡ್ಡದು. (Combine using comparative degree)
2. ಅವರು ಉತ್ತರ ಪ್ರದೇಶದಿಂದ ಬಂದಿದ್ದಾರೆ
   ಅವರು ಜೋಗಜಲಪಾತ ನೋಡಲು ಹೋಗುತ್ತಾರೆ.
   (Combine using Participle noun)
3. ನಾನು ನಿಮ್ಮ ಮನೆಗೆ ಹೋಗಿದ್ದೆ
   ನಿಮ್ಮ ಅಮ್ಮ ಮನೆಯಲ್ಲಿ ಇರಲಿಲ್ಲ. (Combine using 'aaga')

4. ನೀನು ದೋಸೆ ತಿನ್ನುತ್ತೀಯ
ಅದು ನನಗೆ ಇಷ್ಟ ಇಲ್ಲ (Combine using verbal noun)

5. ನಾನು ಬೆಂಗಳೂರಿಗೆ ಹೋಗುತ್ತೇನೆ.
ನಾನು ನಿನಗೆ ಸೀರೆ ತರುತ್ತೇನೆ. (Combine using conditional form)

6. ನೀವು ಊರಿಗೆ ಹೋಗುತ್ತೀರಿ.
ನಾನು ನಿಮ್ಮ ಮನೆಗೆ ಬರುತ್ತೇನೆ.
(Combine using negative conditional form)

7. ನಾವು ಒಂದು ಡಜನ್ ಕಿತ್ತಳೆ ಹಣ್ಣು ತೆಗೆದುಕೊಳ್ಳೋಣ
ನಾವು ರಾತ್ರಿ ತಿನ್ನೋಣ. (Combine using verbal participle)

8. ಅವನು ನಾಳೆ ಮೈಸೂರಿಗೆ ಬರ್ತಾನೆ.
ಅವನು ನಾಳಿದ್ದು ಮಂಗಳೂರಿಗೆ ಹೋಗ್ತಾನೆ.
(Combine using verbal participle)

9. ಅವರು ನನಗೆ ಏನೂ ತಿಳಿಸಲಿಲ್ಲ
ಅವರು ಊರಿಗೆ ಹೋದರು. (Combine using the negative verbal participle)

10. ನಾವು ಸಿಟಿಗೆ ಹೋಗಬೇಕು
ಒಂದು ರಿಕ್ಷಾ ತೆಗೆದುಕೊಂಡು ಬನ್ನಿ (Combine using purposive infinitive) 10

b) Write as directed :

1. ನಮ್ಮ ಅಧ್ಯಾಪಕರು ನಮ್ಮ ಹಾಸ್ಟೆಲಿಗೆ ಬರುತ್ತಾರೆ.
(Convert into past perfect)

2. ಅವರು ಬೆಂಗಳೂರಿನಲ್ಲಿ ಓದ್ತಾ ಇದ್ದಾರೆ. (Convert into past continuous)

3. ಅವಳು ಶರ್ಟು ಹೊಲೆದಳು. (Convert into reflexive)

4. ಅವರು ಆ ಫುಟ್‌ಬಾಲ್ ಆಟದಲ್ಲಿ ಗೆಲ್ಲುತ್ತಾರೆ. (Convert into past)

5. ಅವನಿಗೆ ಆ ಪುಸ್ತಕ ಕೊಡಬಹುದು. (Convert into prohibitive)

6. ಚಿತ್ರದುರ್ಗ ಚಂದ್ರವಳ್ಳಿ ಎಂಬ ಹೆಸರಿನಿಂದ ಪ್ರಖ್ಯಾತವಾಗಿದೆ.
(Convert into past)

7. ನಾವು ನಿನ್ನೆ ಈ ಊರಿನಲ್ಲಿ ನಾಯಿಗಳನ್ನು ನೋಡಿದೆವು
(Convert into Singular)

8. ಅದು ನನ್ನ ಹೊಸ ಮನೆ, (Convert into pronominal Predicate)

9. ದಿವಾಕರ ಹೋದ ವರ್ಷ ಬೊಂಬಾಯಿಗೆ ಹೋಗಿರಲಿಲ್ಲ.
(Convert into affirmative)

10. [illegible] ಕಾಲೇಜಿಗೆ ಬರ್ತಾಳೆ. (Convert into premissive)

11. ನೀವು ನಿನ್ನೆ ಶಾಲಿನಿಯವರ್ ಆಫೀಸಿನಲ್ಲಿ ಇದ್ದಿರಾ ?
(Convert into Negative sentence)

12. ನಿನ್ನೆ ಬಸ್ಸು [illegible] ಸರಿಯಾಗಿ ಬಂದಿತ್ತು. (Convert into negative)

13. ಈ ಜನರು ಕನ್ನಡ ಕಲಿಯೋಕೆ ಮೈಸೂರಿಗೆ ಬಂದಿದ್ದಾರೆ.
(Convert into negative)

14. <u>ನಾಲ್ಕು ದಿನಗಳಿಂದ</u> ಭಾರತಿಯು ಊಟ ಮಾಡಿಲ್ಲ.
(Interrogate the underlined word)

15. ಅವರು ನಿನ್ನೆ <u>ಮದರಾಸಿನಿಂದ ಮೈಸೂರಿಗೆ</u> ಬಂದರು.
(Interrogate the underlined word)

16. ಸೀತಾಗೆ ಐದು ಚಪಾತಿ ಸಾಕು. (Convert into negative)

17. [illegible] ದಿನಾ ಪ್ರಾರ್ಥನೆಗೆ ಬರ್ತಿದ್ದರು. (Convert into negative)

18. [illegible] (Convert into adjectival predicate)

19. [illegible] (Convert into definitive imperative)

20. [illegible] (Convert into negative) 20

IV. a) Combine the following items and write the resultant forms :

1. ಮನೆ + ಇಂದ = ...
2. ಮರ + ಅನ್ನು = ...
3. ಊರು + ಅಲ್ಲಿ = ...
4. ಮರ + ಇಂದ = ...
5. ಗುರು + ಇಂದ = ...
6. ಕಾಡು + ಅನ್ನು = ...
7. ಗಿಡ + ಅಲ್ಲಿ = ...
8. ನಾವು + ಇಂದ = ...
9. ಅವನು + ಅನ್ನು = ...
10. ನೀವು + ಅ = ... 10

a) Combine the following items and write the resultant forms :

1. ನಾನು + Dative case = ...
2. ಜನ ,, ,, = ...
3. ಎಲ್ಲಿ ,, ,, = ...
4. ನಾರಾಯಣ ,, ,, = ...
5. ಊರು ,, ,, = ...
6. ಮೂರು ,, ,, = ...
7. ಅದು ,, ,, = ...
8. ಮನೆ ,, ,, = ...
9. ಹೊಸದು ,, ,, = ...
10. ಮಕ್ಕಳು ,, ,, = ...

V. Decline the following nouns with all the case makers :

1. ಅಪ್ಪ
2. ಉಂಗುರ
3. ನೀವು
4. ಎಂಟು
5. ಚಿಕ್ಕದು

VI. Conjngate the following verbs in past tense :

1. ತಾ
2. ಕೇಳು
3. ಸಿಗು
4. ಇಡು
5. ಬೀಳು

VII. Rewrite the sentences substituting the Kannada translation of English items :

1. ಕಾಫಿ ಕುಡಿಯುವುದು ಆರೋಗ್ಯಕ್ಕೆ ಒಳ್ಳೆಯದಲ್ಲ
   smoking
2. ಬೆಳಿಗ್ಗೆ 10 ಗಂಟೆಯಿಂದ ನೀವು ಕನ್ನಡ ಕಲಿಯುತ್ತೀರಿ
   till evening 5 o'clock
3. ಸಿನಿಮಾ ನೋಡಿದರೆ ತಲೆನೋವು
   having heard the story
4. ಹೆಚ್ಚು ಮಾತನಾಡುವುದು ಒಳ್ಳೆಯ ಅಭ್ಯಾಸವಲ್ಲ
   eating more
5. ನೀವು ಬಾರದೇ ಇರುವುದಕ್ಕೆ ಕಾರಣವು ನನಗೆ ಗೊತ್ತು
   not passing the examination
6. ನೀನು ಸಂಗೀತವನ್ನು ಕಲಿಯಲಿಲ್ಲವಷ್ಟೆ ?
   have you not learnt
7. ರಾಜುವಿಗೆ ತೆಲಗು ಕಲಿಸಿದ ಅಧ್ಯಾಪಕರು ಯಾರು ?
   one who is teaching
8. ನಾನು ಮಾರ್ಕೆಟ್ಟಿಗೆ ಹೋಗಲಿಲ್ಲ
   had not gone
9. ನೀವು ಬಂದರೆ ನಾನು ಸಿಟಿಗೆ ಹೋಗ್ತೀನಿ
   if you dont come
10. ಕಮಲ ಅಳ್ತಾ ಇದ್ದಾಳೆ
   was weeping

WORD INDEX

S.V. = Supplementary Vocabulary
R = Review Lesson

* Comprehension Passage